ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಐಎಎಸ್ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಬೇಕಾದರೆ ಕೋಚಿಂಗ್ ತೆಗೆದುಕೊಳ್ಳಬೇಕೇ, ಯಾವ ರೀತಿಯ ಕೋಚಿಂಗ್ ಸೂಕ್ತ ಎಂಬ ಪ್ರಶ್ನೆಗಳು ಸಾಮಾನ್ಯ. ಈ ನಿಟ್ಟಿನಲ್ಲಿ ಆನ್‌ಲೈನ್ ಕೋಚಿಂಗ್ ಎಷ್ಟು ಉತ್ತಮ?



ಅನುಭವ ಮಂಟಪ
ಆರೋಗ್ಯ ಅನುತ್ಪಾದಕವಾಯಿತೇ?

ವಾಯುಮಾಲಿನ್ಯ: ಜನರ ಆಯುಷ್ಯ ಮೊಟಕು 10

ಬಡತನ, ಬರಗಾಲದ ಹೊಸ ಯುಗ 7

ಸೆನ್ಸೆಕ್ಸ್	ನಿಫ್ಟಿ	₹/$
57,419 ▼	17,076 ▼	73.08 ▼



ರಾಜ್ಯ ಕೋವಿಡ್ ಅಂಕಿ–ಅಂಶ

29,50,604 ▲ ಒಟ್ಟು ಸೋಂಕಿತರು
(29,49,445 ನಿನ್ನೆಯ ವಿವರ)

18,412 ▲ ಸಕ್ರಿಯ ಪ್ರಕರಣಗಳು

28,94,827 ▲ ಗುಣಮುಖರಾದವರು

37,339 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,159	▼
ಗುಣಮುಖ	1,112	▼
ಸಾವು	21	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ



10 ಕಾರ್ಯಕ್ರಮಗಳಿಗೆ ಬಿಡಿಗಾಸೂ ಇಲ್ಲ • ಹಿಂದಿನ ವರ್ಷದ ಅನುದಾನ ಬಳಸಿದ ಕೆಲ ಇಲಾಖೆಗಳು

ಕೈಕೊಟ್ಟ ಕೇಂದ್ರ: ಯೋಜನೆ ಸ್ಥಗಿತ

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸ್ವಚ್ಛ ಭಾರತ, ಪ್ರಧಾನ ಮಂತ್ರಿ ಆವಾಸ್, ಪ್ರಧಾನ ಮಂತ್ರಿ ಗ್ರಾಮ ಸಡಕ್ ಸೇರಿದಂತೆ ಹತ್ತು ಪ್ರಮುಖ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರ ಸರ್ಕಾರ ಪ್ರಸಕ್ತ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಬಿಡಿಗಾಸು ಕೂಡ ನೀಡಿಲ್ಲ. ರಾಜ್ಯ ಸರ್ಕಾರ ಕೂಡ ಹೊಂದಾಣಿಕೆ ಅನುದಾನ ಬಿಡುಗಡೆ ಮಾಡದೇ ಇರುವುದರಿಂದ ಬಹುತೇಕ ಯೋಜನೆಗಳ ಅನುಷ್ಠಾನ ಕುಂಠಿತಗೊಂಡಿದೆ.

ಗ್ರಾಮೀಣಾಭಿವೃದ್ಧಿ, ವಸತಿ, ಕೃಷಿ, ತೋಟಗಾರಿಕೆ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಕೇಂದ್ರ ಮತ್ತು ರಾಜ್ಯದ ಪಾಲುದಾರಿಕೆಯ ಹತ್ತು ಯೋಜನೆಗಳಿಗೆ ಜುಲೈ ಅಂತ್ಯದವರೆಗೂ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ.

ಗ್ರಾಮ ಸಡಕ್, ಸ್ವಚ್ಛ ಭಾರತ, ಪ್ರಧಾನ ಮಂತ್ರಿ ಆವಾಜ್, ಕೃಷಿ ಯಾಂತ್ರಿಕತೆಯ ಮೇಲಿನ ಉಪ ಅಭಿಯಾನ, ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ, ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ನೀಡುವ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಸಂವಿಧಾನದ 275(1) ನೇ ವಿಧಿಯಡಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಕೈಗೊಂಡಿರುವ ಯೋಜನೆ ಮತ್ತು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಯೋಜನೆಗಳಿಗೆ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಅನುದಾನವೇ ಬಿಡುಗಡೆಯಾಗಿಲ್ಲ.

ಈ ಮಾಹಿತಿಯನ್ನು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಂಡಿಸಿದ ಅಂಕಿಅಂಶಗಳೇ ಬಹಿರಂಗಪಡಿಸಿವೆ.


ಏಳು ಯೋಜನೆ–ಶೂನ್ಯ ಸಾಧನೆ: ಹತ್ತು ಯೋಜನೆಗಳ ಪೈಕಿ ಏಳು ಯೋಜನೆಗಳು ಮುಂದಡಿಯನ್ನೇ ಇಟ್ಟಿಲ್ಲ. ಆದರೆ, ಪಂಚಾಯತ್ ರಾಜ್ ಇಲಾಖೆ ಮತ್ತು ವಸತಿ ಇಲಾಖೆಗಳು ಹಿಂದಿನ ವರ್ಷದ ಅನುದಾನವನ್ನೇ ಸಮರ್ಪಕವಾಗಿ ಬಳಸಿಕೊಂಡು ಕಾಮಗಾರಿ ಆರಂಭಿಸಿವೆ.

ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ಹಿಂದಿನ ವರ್ಷದ ಅನುದಾನದಲ್ಲಿ ₹334.64 ಕೋಟಿಯನ್ನು ಬಳಕೆ ಮಾಡಲು ಕ್ರಿಯಾಯೋಜನೆ ರೂಪಿಸಿದ್ದಾರೆ.

6ನೇ ಪುಟ ನೋಡಿ

ಪುಸ್ತಕದಲ್ಲೇ ಉಳಿದ 151 ಯೋಜನೆ

ಬಜೆಟ್ ಮತ್ತು ನಂತರದ ದಿನಗಳಲ್ಲಿ ಘೋಷಿಸಿದ 306 ಯೋಜನೆಗಳ ಪೈಕಿ 155 ಕಾರ್ಯಕ್ರಮಗಳ ಅನುಷ್ಠಾನಕ್ಕೆ ಆದೇಶ ಹೊರಡಿಸಲಾಗಿದೆ. 151 ಪುಸ್ತಕದಲ್ಲೇ ಇವೆ.



₹ 3,890.59 ಕೋಟಿ ಯೋಜನೆಗಳ ಒಟ್ಟು ವೆಚ್ಚ

₹ 2,410.81 ಕೋಟಿ ಕೇಂದ್ರ ನೀಡಬೇಕಾದ ಅನುದಾನ

₹ 1,479.78 ಕೋಟಿ, ರಾಜ್ಯದ ಹೊಂದಾಣಿಕೆ ಅನುದಾನ

₹ 100 ಕೋಟಿಗೂ ಹೆಚ್ಚು ಅನುದಾನದ ಯೋಜನೆಗಳಲ್ಲಿ ಶೂನ್ಯ ಸಾಧನೆ

ಇಲಾಖೆ	ಯೋಜನೆ	ಒಟ್ಟು ಅನುದಾನ (₹ಕೋಟಿಗಳಲ್ಲಿ)
ಹಿಂದುಳಿದ ವರ್ಗಗಳ ಅಭಿವೃದ್ಧಿ	ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ	400
ಹಿಂದುಳಿದ ವರ್ಗಗಳ ಅಭಿವೃದ್ಧಿ	ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ	120
ಗೃಹ	ನಿರ್ಭಯಾ ಯೋಜನೆಯ ಕಾರ್ಯಕ್ರಮ	297.47
ಮೂಲಸೌಕರ್ಯ ಅಭಿವೃದ್ಧಿ	ರೈಲ್ವೆ ಯೋಜನೆ	370
ಗ್ರಾಮೀಣಾಭಿವೃದ್ಧಿ	ಸ್ವಚ್ಛ ಭಾರತ (ಗ್ರಾಮೀಣ)	1,096.23
ಸಮಾಜ ಕಲ್ಯಾಣ	ಪರಿಶಿಷ್ಟ ಜಾತಿಯವರ ಅಭಿವೃದ್ಧಿ ಯೋಜನೆ	600
ಸಮಾಜ ಕಲ್ಯಾಣ	ಮೊರಾರ್ಜಿ ಶಾಲಾ ಕಟ್ಟಡಗಳ ನಿರ್ವಹಣೆ	515
ಸಮಾಜ ಕಲ್ಯಾಣ	ವಿದ್ಯಾರ್ಥಿ ನಿಲಯ ಮತ್ತು ವಸತಿ ಶಾಲೆಗಳ ಕಟ್ಟಡ ನಿರ್ಮಾಣ	300
ಸಮಾಜ ಕಲ್ಯಾಣ	ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ	230
ಸಮಾಜ ಕಲ್ಯಾಣ	ಮೆಟ್ರಿಕ್ ಪೂರ್ವ ಶಿಷ್ಯವೇತನ	113.13
ಸಮಾಜ ಕಲ್ಯಾಣ	ಎಸ್‌ಸಿಎಸ್‌ಪಿ ಯೋಜನೆಗೆ ಕೇಂದ್ರ ವಿಶೇಷ ನೆರವು	100

ಎಲ್‌ಪಿಜಿ ದರ ₹25 ಹೆಚ್ಚಳ

ನವದೆಹಲಿ (ಪಿಟಿಐ): ಸಬ್ಸಿಡಿ ಇರುವ ಮತ್ತು ಸಬ್ಸಿಡಿ ಇಲ್ಲದ ಅಡುಗೆ ಅನಿಲ (ಎಲ್‌ಪಿಜಿ) ದರವನ್ನು 14.2 ಕೆ.ಜಿ.ಯ ಸಿಲಿಂಡರ್‌ಗೆ ₹ 25ರಂತೆ ಹೆಚ್ಚಿಸಲಾಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆ ₹ 887ಕ್ಕೆ ತಲುಪಿದೆ.

ಬುಧವಾರದ ದರ ಏರಿಕೆಯನ್ನೂ ಒಳಗೊಂಡರೆ ಎರಡು ತಿಂಗಳಲ್ಲಿ ಒಟ್ಟಾರೆ ಮೂರು ಬಾರಿ ಎಲ್‌ಪಿಜಿ ಬೆಲೆ ಹೆಚ್ಚಳ ಮಾಡಿದಂತಾಗಿದೆ. ಈ ಹಿಂದೆ ಜುಲೈ 1 ಮತ್ತು ಆಗಸ್ಟ್ 18ರಂದು ಎಲ್‌ಪಿಜಿ ಬೆಲೆ ಹೆಚ್ಚಿಸಲಾಗಿತ್ತು. ಜನವರಿ 1ರಿಂದ ಸೆಪ್ಟೆಂಬರ್ 1ರವರೆಗಿನ ಅವಧಿಯಲ್ಲಿ ಒಟ್ಟು ಬೆಲೆ ಏರಿಕೆಯು ಪ್ರತಿ ಸಿಲಿಂಡರ್‌ಗೆ ₹ 190ರಷ್ಟಾಗಿದೆ.

ಏಳು ವರ್ಷಗಳ ಅವಧಿಯಲ್ಲಿ ಎಲ್‌ಪಿಜಿ ಸಿಲಿಂಡರ್ ಬೆಲೆಯು ಎರಡು ಪಟ್ಟಿಗಿಂತ ಹೆಚ್ಚಾಗಿದೆ. 2014ರ ಮಾರ್ಚ್ 1ರಂದು 14.2 ಕೆ.ಜಿ. ಸಿಲಿಂಡರ್ ಬೆಲೆಯು ₹ 410.5ರಷ್ಟು ಇತ್ತು.

ಬೆಲೆ ಏರಿಕೆಯಿಂದ ₹23 ಲಕ್ಷ ಕೋಟಿ ಸಂಗ್ರಹ: ರಾಹುಲ್ ಗಾಂಧಿ ಕಿಡಿ

ನವದೆಹಲಿ(ಪಿಟಿಐ): 'ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸುವ ಮೂಲಕ ಕೇಂದ್ರ ಸರ್ಕಾರ ಕಳೆದ ಏಳು ವರ್ಷಗಳಲ್ಲಿ ₹23 ಲಕ್ಷ ಕೋಟಿ ಆದಾಯ ಸಂಗ್ರಹಿಸಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

10ನೇ ಪುಟ ನೋಡಿ

	2014	2021 (₹ಗಳಲ್ಲಿ)	ಶೇಕಡವಾರು ಏರಿಕೆ
ಅಡುಗೆ ಅನಿಲ ಸಿಲಿಂಡರ್	410	885	116
ಪೆಟ್ರೋಲ್	71.51	101.34	42
ಡೀಸೆಲ್	57.28	88.77	55
ಕಚ್ಚಾ ತೈಲ	105 ಡಾಲರ್	71 ಡಾಲರ್	-32
ಅನಿಲ ಅಂತರರಾಷ್ಟ್ರೀಯ ದರ	880 ಡಾಲರ್	653 ಡಾಲರ್ (ಪ್ರತಿ ಮೆಟ್ರಿಕ್ ಟನ್)	-26

ಷರತ್ತು ಪಾಲನೆ ಖಾತರಿಪಡಿಸಿಕೊಂಡ ಬಳಿಕವೇ ಸ್ಪರ್ಧೆಗೆ ಅನುಮತಿ ನೀಡಲು ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

ಎತ್ತಿನ ಬಂಡಿ ಓಟ: 'ಸುಪ್ರೀಂ' ಆದೇಶ ಪಾಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂಕೋರ್ಟ್ ವಿಧಿಸಿರುವ ಷರತ್ತುಗಳ ಪಾಲನೆಯನ್ನು ಖಾತರಿಪಡಿಸಿಕೊಂಡ ಬಳಿಕವೇ ಎತ್ತಿನ ಬಂಡಿಗಳ ಓಟದ ಸ್ಪರ್ಧೆಗೆ ಅನುಮತಿ ನೀಡುವಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಮೈಸೂರಿನ ಪೀಪಲ್ ಫಾರ್ ಅನಿಮಲ್ ಎಂಬ ಸರ್ಕಾರೇತರ ಸಂಸ್ಥೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಇತ್ಯರ್ಥಗೊಳಿಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, 'ಪ್ರಾಣಿಗಳ ಹಿಂಸೆ ತಡೆ ಕಾಯ್ದೆ-2017 (ಎರಡನೇ ತಿದ್ದುಪಡಿ ಕಾಯ್ದೆ)ಯ ಪ್ರಕಾರ, ಎತ್ತಿನ ಬಂಡಿ ಓಟದ ಸ್ಪರ್ಧೆಗೆ ಅನುಮತಿ ನೀಡಲು ರಾಜ್ಯ ಸರ್ಕಾರಕ್ಕೆ ಅವಕಾಶವಿದೆ' ಎಂದು ಹೇಳಿದೆ.

2021ರ ಮಾರ್ಚ್‌ನಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕರೆಕುರ ಗ್ರಾಮದಲ್ಲಿ ನಡೆದಿದ್ದ ಎತ್ತಿನ ಬಂಡಿ ಓಟದ ಸ್ಪರ್ಧೆಗೆ ಅನುಮತಿ ನೀಡಿದ್ದನ್ನು ಅರ್ಜಿದಾರರು ಪ್ರಶ್ನಿಸಿದ್ದರು. ಇಂತಹ ಎಲ್ಲ ಪ್ರಕರಣಗಳ ಮೇಲುಸ್ತುವಾರಿ ನಡೆಸುವಂತೆ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಗೆ ನಿರ್ದೇಶನ ನೀಡುವಂತೆಯೂ ಕೋರಿದ್ದರು.

ಯುಗಾದಿ, ಸಂಕ್ರಾಂತಿ ಸೇರಿದಂತೆ ವಿವಿಧ ಹಬ್ಬಗಳ ಸಂದರ್ಭಗಳು ಹಾಗೂ ಪ್ರಾದೇಶಿಕ ಮಟ್ಟದ ಚುನಾವಣೆಗಳ ಸಂದರ್ಭದಲ್ಲೂ ಎತ್ತಿನ ಬಂಡಿಗಳ ಓಟದ ಸ್ಪರ್ಧೆ ಆಯೋಜಿಸಲಾಗುತ್ತಿದೆ. ಸ್ಪರ್ಧಿಗಳಿಂದ ತಲಾ ₹ 2,500ದಷ್ಟು ಪ್ರವೇಶ ಶುಲ್ಕ ಪಡೆಯುತ್ತಿದ್ದು, ₹ 60,000ದಿಂದ ಲಕ್ಷಗಳವರೆಗೂ ಬಹುಮಾನ ನೀಡಲಾಗುತ್ತಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು.

ಎತ್ತಿನ ಬಂಡಿ ಓಟದ ಸ್ಪರ್ಧೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಬಾಜಿ ರಾವ್ ಪಾಟೀಲ್ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್, ಜಲ್ಲಿಕಟ್ಟು ಪ್ರಕರಣದ ಜತೆಯಲ್ಲೇ ವಿಚಾರಣೆ ನಡೆಸಿತ್ತು. 'ಎತ್ತಿನ ಬಂಡಿಗಳ ಓಟದ ಸ್ಪರ್ಧೆಯಲ್ಲಿ ಪ್ರತಿ ಎತ್ತಿನ ಬಂಡಿಗೂ ಪ್ರತ್ಯೇಕವಾದ ಪಥ ಒದಗಿಸಬೇಕು' ಎಂಬ ಸುಪ್ರೀಂಕೋರ್ಟ್ ನಿರ್ದೇಶನವನ್ನು ಪಾಲಿಸುವಂತೆ ವಿಭಾಗೀಯ ಪೀಠ ತಿಳಿಸಿತು.

'ಸ್ಪರ್ಧೆಯ ಆಯೋಜಕರು ಜಿಲ್ಲಾ ಪಶುಸಂಗೋಪನಾ ಇಲಾಖೆ ಮತ್ತು ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಪಶು ವೈದ್ಯರು, ಪ್ರಾಣಿಗಳ ಹಿತರಕ್ಷಣೆಗಾಗಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಹೈಕೋರ್ಟ್‌ನಿಂದ ನೇಮಕಗೊಂಡಿರುವ ಸಮಿತಿಯ ಸದಸ್ಯರು ಸ್ಪರ್ಧೆಯ ವಿಡಿಯೊ ಚಿತ್ರೀಕರಣ ಮಾಡಲು ಅವಕಾಶ ಕಲ್ಪಿಸಬೇಕು. ಎತ್ತುಗಳ ಮೂಗುದಾರ ಎಳೆಯುವುದು ಅಥವಾ ಹೊಡೆದು ಹಿಂಸಿಸುವಂತಿಲ್ಲ' ಎಂದು ಸುಪ್ರೀಂಕೋರ್ಟ್ ಷರತ್ತು ವಿಧಿಸಿತ್ತು.

'ಪ್ರಾಣಿಗಳ ಹಿಂಸೆ ತಡೆ ಕಾಯ್ದೆ-2017 (ಎರಡನೇ ತಿದ್ದುಪಡಿ ಕಾಯ್ದೆ) ಯ ಸೆಕ್ಷನ್ 28-ಎ ಪ್ರಕಾರ, ಎತ್ತಿನ ಬಂಡಿ ಓಟದ ಸ್ಪರ್ಧೆಗೆ ಅನುಮತಿ ನೀಡಲು ರಾಜ್ಯ ಸರ್ಕಾರಕ್ಕೆ ಅವಕಾಶವಿದೆ. ಆದರೆ, ಸುಪ್ರೀಂಕೋರ್ಟ್ ವಿಧಿಸಿರುವ ಎಲ್ಲ ಷರತ್ತುಗಳ ಪಾಲನೆಯನ್ನು ರಾಜ್ಯ ಸರ್ಕಾರ ಖಾತರಿಪಡಿಸಬೇಕು' ಎಂದು ಹೈಕೋರ್ಟ್ ವಿಭಾಗೀಯ ಪೀಠ ತಿಳಿಸಿದೆ.



ಎತ್ತಿನ ಬಂಡಿ (ಸಾಂದರ್ಭಿಕ ಚಿತ್ರ)

30 ಲಕ್ಷಕ್ಕೂ ಅಧಿಕ ವಾಟ್ಸ್‌ಆ್ಯಪ್ ಖಾತೆ ನಿಷೇಧ

ನವದೆಹಲಿ: ಜೂನ್ 16ರಿಂದ ಜುಲೈ 31ರವರೆಗಿನ ಅವಧಿಯಲ್ಲಿ ದೇಶದಲ್ಲಿ 3,027,000 ಖಾತೆಗಳನ್ನು ನಿಷೇಧಿಸಲಾಗಿದ್ದು, 594 ದೂರುಗಳು ದಾಖಲಾಗಿವೆ ಎಂದು ವಾಟ್ಸ್‌ಆ್ಯಪ್ ಹೇಳಿದೆ. ಬಳಕೆದಾರರ ದೂರಿನ ಜೊತೆಗೆ ತನ್ನ ವೇದಿಕೆಯ ದುರುಪಯೋಗದ ನಿಯಂತ್ರಣಕ್ಕೆ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಸಿ.ಎ. ನಿವೇಶನ ಹಂಚಿಕೆ: ಬಿಡಿಎಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ನಾಗರಿಕ ಮೂಲ ಸೌಕರ್ಯ ಬಳಕೆಗೆ ಮೀಸಲಿರಿಸಿದ್ದ (ಸಿ.ಎ) ನಿವೇಶನವನ್ನು ಬಡಾವಣೆಯ ಎಂಟನೇ ಬ್ಲಾಕ್ ನಿವಾಸಿಗಳ ಹಿತರಕ್ಷಣಾ ಸಂಘಕ್ಕೆ ಹಂಚಿಕೆ ಮಾಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ತೀರ್ಮಾನವನ್ನು ಅನೂರ್ಜಿತಗೊಳಿಸಿರುವ ಹೈಕೋರ್ಟ್, ಪ್ರಾಧಿಕಾರಕ್ಕೆ ₹ 25 ಸಾವಿರ ದಂಡ ವಿಧಿಸಿದೆ.

ವಿಶ್ವೇಶ್ವರಯ್ಯ ಬಡಾವಣೆಯ ಎರಡನೇ ಬ್ಲಾಕ್‌ನಲ್ಲಿ 10-ಎ ಸಿ.ಎ ನಿವೇಶನವನ್ನು ಬಡಾವಣೆಯ ಎಂಟನೇ ಬ್ಲಾಕ್ ನಿವಾಸಿಗಳ ಹಿತರಕ್ಷಣಾ ಸಂಘಕ್ಕೆ ಹಂಚಿಕೆ ಮಾಡಿದ್ದನ್ನು ಪ್ರಶ್ನಿಸಿ ಅದೇ ಬಡಾವಣೆಯ ಮೂರನೇ ಬ್ಲಾಕ್ ನಿವಾಸಿಗಳ ಹಿತರಕ್ಷಣಾ ಸಂಘ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ನೇತೃತ್ವದ ಏಕಸದಸ್ಯ ಪೀಠ, ಸಿ.ಎ ನಿವೇಶನ ಹಂಚಿಕೆ ಮಾಡಿದ್ದ ಬಿಡಿಎ ನಿರ್ಣಯವನ್ನು ರದ್ದುಗೊಳಿಸಿ ಆದೇಶ ಹೊರಡಿಸಿದೆ.

ಎರಡನೇ ಬ್ಲಾಕ್‌ನಲ್ಲಿರುವ 10-ಎ ಸಿ.ಎ ನಿವೇಶನ ಹಂಚಿಕೆಗೆ 2017ರಲ್ಲಿ ಬಿಡಿಎ ಅರ್ಜಿ ಆಹ್ವಾನಿಸಿತ್ತು. ಆಗ, ಎಂಟನೇ ಬ್ಲಾಕ್ ನಿವಾಸಿಗಳ ಹಿತರಕ್ಷಣಾ ಸಂಘಕ್ಕೆ ಈ ನಿವೇಶನ ಹಂಚಿಕೆ ಮಾಡಲಾಗಿತ್ತು. ಅದನ್ನು ಪ್ರಶ್ನಿಸಿ ಮೂರನೇ ಬ್ಲಾಕ್ ನಿವಾಸಿಗಳ ಹಿತರಕ್ಷಣಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. 2018ರ ಡಿಸೆಂಬರ್ 6ಕ್ಕೆ ಬಾಕಿ ಇರುವ ಎಲ್ಲ ಅರ್ಜಿಗಳನ್ನೂ ಪಟ್ಟಿಮಾಡಿ ನಿಯಮ 7ರಡಿ ಇರುವ ಅವಕಾಶದಂತೆ ಹೊಸದಾಗಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವಂತೆ ಹೈಕೋರ್ಟ್ ಆದೇಶಿಸಿತ್ತು.

2018ರ ಡಿಸೆಂಬರ್ 15ರಂದು ಸಭೆ ನಡೆಸಿದ್ದ ಬಿಡಿಎ ಆಡಳಿತ ಮಂಡಳಿ, 6,007.73 ಚದರ ಅಡಿ ವಿಸ್ತೀರ್ಣದ ನಿವೇಶನವನ್ನು ಪುನಃ ಎಂಟನೇ ಬ್ಲಾಕ್ ನಿವಾಸಿಗಳ ಹಿತರಕ್ಷಣಾ ಸಂಘಕ್ಕೆ ಹಂಚಿಕೆ ಮಾಡುವ ತೀರ್ಮಾನ ಕೈಗೊಂಡಿತ್ತು. ಅದನ್ನು ಪ್ರಶ್ನಿಸಿ ಮೂರನೇ ಬ್ಲಾಕ್ ನಿವಾಸಿಗಳ ಹಿತರಕ್ಷಣಾ ಸಂಘ ಹೈಕೋರ್ಟ್‌ಗೆ ಮತ್ತೆ ಅರ್ಜಿ ಸಲ್ಲಿಸಿತ್ತು.

'ಹೈಕೋರ್ಟ್ ಆದೇಶವನ್ನು ಬಿಡಿಎ ಆಡಳಿತ ಮಂಡಳಿ ಸರಿಯಾಗಿ ಪಾಲಿಸಿಲ್ಲ. ಬಾಕಿ ಇರುವ ಎಲ್ಲ ಅರ್ಜಿಗಳನ್ನು ಪರಿಶೀಲಿಸಲಾಗಿದೆ ಎಂಬ ಸಮಜಾಯಿಷಿ ನೀಡಿ ತೀರ್ಮಾನ ಕೈಗೊಳ್ಳಲಾಗಿದೆ. ಬಿಡಿಎ ಕಾಯ್ದೆಯ ಸೆಕ್ಷನ್ 7ಕ್ಕೆ ವಿರುದ್ಧವಾಗಿ ನಿರ್ಣಯ ಕೈಗೊಳ್ಳಲಾಗಿದೆ. ಯಾವುದೇ ದೃಷ್ಟಿಕೋನದಿಂದಲೂ ಈ ತೀರ್ಮಾನ ಸಿಂಧುವಾಗುವುದಿಲ್ಲ' ಎಂದು ಏಕಸದಸ್ಯ ಪೀಠ ಹೇಳಿದೆ.

ಬಹುಮಹಡಿ ಕಟ್ಟಡ: ರಸ್ತೆ ಬಂದ್‌ಗೆ ನೌಕರರ ಆಗ್ರಹ

ಬೆಂಗಳೂರು: ವಿಧಾನಸೌಧದ ಪಕ್ಕದಲ್ಲಿರುವ ಬಹುಮಡಿ ಕಟ್ಟಡದ (ಎಂ.ಎಸ್. ಬಿಲ್ಡಿಂಗ್) ನಡುವೆ ಹಾದು ಹೋಗಿರುವ ಡಿ.ದೇವರಾಜ ಅರಸು ರಸ್ತೆಯಲ್ಲಿ ಅಪಘಾತಗಳು ಸಂಭವಿಸಿ, ಈ ವರ್ಷದಲ್ಲೇ ಮೂವರು ನೌಕರರು ಮೃತಪಟ್ಟಿರುವ ಕಾರಣದಿಂದ ಅಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ನಿಷೇಧಿಸಬೇಕು ಎಂದು ಸಚಿವಾಲಯ ನೌಕರರ ಸಂಘ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಡಿ. ದೇವರಾಜ ಅರಸು ರಸ್ತೆಯು ಚಾಲುಕ್ಯ ವೃತ್ತ (ಬಸವೇಶ್ವರ ವೃತ್ತ) ಮತ್ತು ಡಾ.ಬಿ.ಆರ್. ಅಂಬೇಡ್ಕರ್ ರಸ್ತೆಯನ್ನು ಸಂಪರ್ಕಿಸುವ ಮಾರ್ಗವಾಗಿದೆ. ಶಿವಾನಂದ ವೃತ್ತ ಮತ್ತು ಸ್ಯಾಂಕಿ ರಸ್ತೆಯ ಮೂಲಕ ವಿಧಾನಸೌಧ, ಹೈಕೋರ್ಟ್ ಮತ್ತು ಕೆ.ಆರ್. ವೃತ್ತಕ್ಕೆ ಇದೇ ಮಾರ್ಗವಾಗಿ ಸಾಗಬೇಕಿದೆ.

ಬುಧವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಸರ್ಕಾರದ ಸಚಿವಾಲಯ ನೌಕರರ ಸಂಘದ ಪದಾಧಿಕಾರಿಗಳು, 'ಇತ್ತೀಚಿನ ವರ್ಷಗಳಲ್ಲಿ ದೇವರಾಜ ಅರಸು ರಸ್ತೆಯಲ್ಲಿ ಸಂಚರಿಸುವ ವಾಹನಗಳ ಸಂಖ್ಯೆ ಹಲವು ಪಟ್ಟು ಹೆಚ್ಚಾಗಿದೆ. ಅಪಘಾತಗಳ ಸಂಖ್ಯೆಯೂ ಏರಿದೆ. ಈ ವರ್ಷದಲ್ಲೇ ಸಚಿವಾಲಯದ ಮೂವರು ನೌಕರರು ಅಪಘಾತಗಳಲ್ಲಿ ಮೃತಪಟ್ಟಿದ್ದಾರೆ. ಈ ರಸ್ತೆಯಲ್ಲಿ ನಡೆದಾಡುವುದೂ ಕಷ್ಟವಾಗಿದೆ' ಎಂದರು.

'ವಿಧಾನಸೌಧ ಮತ್ತು ವಿಕಾಸೌಧದ ಹೊರತಾಗಿ ಎಂ.ಎಸ್. ಬಿಲ್ಡಿಂಗ್‌ನಲ್ಲೂ ಸಚಿವಾಲಯ ಇದೆ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. 2001ರಲ್ಲಿ ವಿಧಾನಸೌಧ ಮತ್ತು ವಿಕಾಸಸೌಧಗಳ ನಡುವೆ ಹಾದುಹೋಗಿದ್ದ ರಸ್ತೆಯನ್ನು ಮುಚ್ಚಿದ ಬಳಿಕ ತಾತ್ಕಾಲಿಕವಾಗಿ ಅರಸು ರಸ್ತೆಯನ್ನು ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಲಾಗಿತ್ತು. ಬಳಿಕ, ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಪರ್ಯಾಯ ಮಾರ್ಗ ಒದಗಿಸುವುದನ್ನು ಮರೆತಿರುವ ಸರ್ಕಾರ, ಸಚಿವಾಲಯ ನೌಕರರ ಮೇಲೆ ಒತ್ತಡ ಸೃಷ್ಟಿಸಿದೆ' ಎಂದು ಸಂಘದ ಜಂಟಿ ಕಾರ್ಯದರ್ಶಿ ಶಾಂತಾರಾಂ ದೂರಿದರು.


ಹುದ್ದೆಗಳ ರದ್ಧತಿಗೆ ವಿರೋಧ: ಅರಸು ರಸ್ತೆಯಲ್ಲಿ ಸಾರ್ವಜನಿಕ ವಾಹನಗಳ ಸಂಚಾರ ನಿಷೇಧ, ಸಚಿವಾಲಯದಲ್ಲಿನ 542 ಕಿರಿಯ ಸಹಾಯಕರ ಹುದ್ದೆ ರದ್ದತಿ ಕೈಬಿಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಚಿವಾಲಯ ನೌಕರರ ಸಂಘದ ನೇತೃತ್ವದಲ್ಲಿ ಗುರುವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಪ್ರತಿಭಟನೆ ನಡೆಸಲಿದ್ದಾರೆ.

ಹಲವೆಡೆ ಜೋರು ಮಳೆ

ಬೆಂಗಳೂರು: ನಗರದಲ್ಲಿ ಬುಧವಾರ ಸಂಜೆಯಿಂದ ರಾತ್ರಿಯವರೆಗೂ ಮಳೆ ಆಗಿದ್ದು, ಹಲವೆಡೆ ಕಾಲುವೆಗಳು ತುಂಬಿ ರಸ್ತೆ ಮೇಲೆ ಧಾರಾಕಾರವಾಗಿ ನೀರು ಹರಿಯಿತು. ಮಧ್ಯಾಹ್ನ ಕೆಲವೆಡೆ ತುಂತುರು ಮಳೆಯಾಯಿತು. ಸಂಜೆ ನಂತರ ಹಲವೆಡೆ ಜೋರು ಮಳೆ ಸುರಿಯಿತು.

ಯಶವಂತಪುರ, ಮಹಾಲಕ್ಷ್ಮಿಲೇಔಟ್, ಬಸವೇಶ್ವರನಗರ, ರಾಜಾಜಿನಗರ, ವಿಜಯನಗರ, ಮಲ್ಲೇಶ್ವರ, ಆರ್.ಟಿ.ನಗರ, ಪೀಣ್ಯ, ಹೆಬ್ಬಾಳ, ಬಸವನಗುಡಿ, ಎಂ.ಜಿ.ರಸ್ತೆ, ಶಿವಾಜಿನಗರ, ಅಶೋಕನಗರ, ಎಚ್‌ಎಎಲ್ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮಳೆಯಾಗಿದೆ.

ಮೆಜೆಸ್ಟಿಕ್, ಶಿವಾನಂದ ವೃತ್ತದ ಕೆಳಸೇತುವೆಯಲ್ಲಿ ಮಳೆ ನೀರು ಹರಿಯಿತು. ಅಂಥ ನೀರಿನಲ್ಲೇ ಚಾಲಕರು ವಾಹನಗಳನ್ನು ಚಲಾಯಿಸಿಕೊಂಡು ಹೋದರು. ಕೆಲ ವಾಹನಗಳು ಕೆಟ್ಟು ನಿಂತಿದ್ದರಿಂದ, ದಟ್ಟಣೆಯೂ ಉಂಟಾಯಿತು. 'ನಗರದಲ್ಲಿ ಉತ್ತಮ ಮಳೆಯಾಗಿದೆ. ಹೆಚ್ಚು ಹಾನಿ ಯಾದ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿ ದರು.



ಮೈಸೂರು ರಸ್ತೆಯಲ್ಲಿ ಬುಧವಾರ ಮಹಿಳೆಯೊಬ್ಬರು ಸುರಿವ ಮಳೆಯಲ್ಲಿ ಕೊಡೆ ಹಿಡಿದು ಸಾಗಿದರು ಪ್ರಜಾವಾಣಿ ಚಿತ್ರ/ ಅನೂಪ್ ರಾಘ ಟಿ.

ಜೀವಿಸುವ ಹಕ್ಕು ಕೊಲ್ಲುವ ಹಕ್ಕನ್ನು ಮೀರಿದ್ದು: ಅಲಹಾಬಾದ್ ಹೈಕೋರ್ಟ್

ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಿ

ಅಲಹಾಬಾದ್ (ಪಿಟಿಐ): ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವ ಹಾಗೂ ಗೋ ಹತ್ಯೆ ಮಾಡುವವರನ್ನು ಶಿಕ್ಷಿಸುವ ನಿಟ್ಟಿನಲ್ಲಿ ಸಂಸತ್ತು ಕಾನೂನು ರೂಪಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್ ಬುಧವಾರ ಸೂಚಿಸಿದೆ.

ಗೋವು ಭಾರತೀಯ ಸಂಸ್ಕೃತಿಯ ಪ್ರಮುಖ ಭಾಗವಾಗಿದೆ ಎಂದು ಹೇಳಿರುವ ಹೈಕೋರ್ಟ್, ಮೂಲಭೂತ ಹಕ್ಕು ಗೋಮಾಂಸ ತಿನ್ನುವವರಿಗಷ್ಟೇ ಅಲ್ಲದೆ, ಗೋವುಗಳನ್ನು ಪೂಜಿಸುವ ಮತ್ತು ಅದರ ಮೇಲೆಯೇ ಆರ್ಥಿಕವಾಗಿ ಅವಲಂಬಿಸಿರುವವರಿಗೂ ಇದೆ ಎಂದು ತಿಳಿಸಿದೆ.

'ಜೀವಿಸುವ ಹಕ್ಕು ಕೊಲ್ಲುವ ಹಕ್ಕನ್ನು ಮೀರಿದ್ದು ಮತ್ತು ಗೋಮಾಂಸ ತಿನ್ನುವ ಹಕ್ಕನ್ನು ಎಂದಿಗೂ ಮೂಲಭೂತ ಹಕ್ಕಾಗಿ ಪರಿಗಣಿಸಲಾಗದು' ಎಂದು ಕೋರ್ಟ್ ಹೇಳಿದೆ. ಈ ಮೂಲಕ ನ್ಯಾಯಾಲಯವು ಸಾಂಬಲ್ ಜಿಲ್ಲೆಯ ಜಾವೇದ್‌ಗೆ ಜಾಮೀನು ನಿರಾಕರಿಸಿದೆ. ಗೋವನ್ನು ಕದ್ದು, ಕೊಂದ ಆರೋಪ ಜಾವೇದ್ ಮೇಲಿದೆ.

'ಇದು ಅರ್ಜಿದಾರರ ಮೊದಲ ಅಪರಾಧವಲ್ಲ. ಈ ಅಪರಾಧಕ್ಕೂ ಮುನ್ನ, ಅವರು ಗೋ ಹತ್ಯೆಯನ್ನು ಮಾಡಿದ್ದಾರೆ. ಇದು ಸಮಾಜದಲ್ಲಿ ಸಾಮರಸ್ಯವನ್ನು ಕದಡಿದೆ' ಎಂದು ನ್ಯಾಯಾಲಯ ಹೇಳಿದೆ.

ಆರೋಪಿ ಜಾಮೀನಿನ ಮೇಲೆ ಬಿಡುಗಡೆಯಾದರೆ ಮತ್ತೆ ಅದೇ ಅಪರಾಧ ಎಸಗುತ್ತಾರೆ ಎಂದೂ ಅದು ತಿಳಿಸಿದೆ.

ಗೋವಿನ ಮಹತ್ವವನ್ನು ಹಿಂದೂಗಳಂತೆಯೇ ಮುಸ್ಲಿಂ ಆಡಳಿತಗಾರರು ಅರ್ಥ ಮಾಡಿಕೊಂಡಿದ್ದರು. ಗೋವನ್ನು ಭಾರತೀಯ ಸಂಸ್ಕೃತಿಯ ಪ್ರಮುಖ ಭಾಗ ಎಂದು ಅವರೂ ಪರಿಗಣಿಸಿದ್ದರು. ಉದಾಹರಣೆಗೆ ಬಾಬರ್, ಹುಮಾಯೂನ್ ಮತ್ತು ಅಕ್ಬರ್ ತಮ್ಮ ಧಾರ್ಮಿಕ ಹಬ್ಬಗಳಲ್ಲಿ ಗೋವುಗಳ ಬಲಿ ನಿಷೇಧಿಸಿದ್ದರು ಎಂದು ನ್ಯಾಯಾಲಯ ಉಲ್ಲೇಖಿಸಿದೆ.

ಮೈಸೂರಿನ ಆಡಳಿತಗಾರ ಹೈದರ್ ಅಲಿ ಆಡಳಿತಾವಧಿಯಲ್ಲಿ ಕೂಡ ಗೋಹತ್ಯೆ ಶಿಕ್ಷಾರ್ಹ ಅಪರಾಧವಾಗಿತ್ತು ಎಂದು ಹೈಕೋರ್ಟ್ ಹೇಳಿದೆ.

ಒಂದು ದೇಶದ ಸಂಸ್ಕೃತಿ ಮತ್ತು ನಂಬಿಕೆಗೆ ಧಕ್ಕೆಯುಂಟಾದರೆ ದೇಶವು ದುರ್ಬಲವಾಗುತ್ತದೆ. ಆದ್ದರಿಂದ ಗೋವನ್ನು ರಾಷ್ಟ್ರೀಯ ಪ್ರಾಣಿಯಾಗಿ ಘೋಷಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಗೋ ರಕ್ಷಣೆಯ ಹೆಸರಿನಲ್ಲಿ ಗೋವುಗಳಿಗೆ ಆಶ್ರಯ ಕಲ್ಪಿಸಿ ಹಣಗಳಿಕೆಯಲ್ಲಿ ತೊಡಗಿರುವವರ ವಿರುದ್ಧವೂ ಕ್ರಮ ತೆಗೆದುಕೊಳ್ಳಲು ಸರ್ಕಾರ ಕಾನೂನುಗಳನ್ನು ತರಬೇಕು ಎಂದು ನ್ಯಾಯಾಲಯ ಸೂಚಿಸಿದೆ.

ಮನು ಬಳಿಗಾರ್ ನೇತೃತ್ವದ ಕಾರ್ಯಕಾರಿ ಸಮಿತಿ ಅಧಿಕಾರದ ಅವಧಿ ಇಂದು ಅಂತ್ಯ

'ಕಸಾಪ: ಕೋವಿಡ್ ಮಧ್ಯೆಯೂ ಸಾಹಿತ್ಯ ಚಟುವಟಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐದೂವರೆ ವರ್ಷಗಳ ಅವಧಿಯಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳಿಗೆ ಸರ್ಕಾರ ನೀಡಿದ ಅನುದಾನದಲ್ಲಿ ₹ 42.67 ಕೋಟಿ ಬಳಕೆ ಮಾಡಲಾಗಿದೆ. ಕೋವಿಡ್ ಕಾಣಿಸಿಕೊಂಡ ಬಳಿಕವೂ ನಿರಂತರ ಸಾಹಿತ್ಯಿಕ ಚಟುವಟಿಕೆಗಳನ್ನು ನಡೆಸಲಾಗಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮನು ಬಳಿಗಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಐದೂವರೆ ವರ್ಷಗಳ ಸಾಧನೆಯನ್ನು ವಿವರಿಸಿದರು.

ಅವರ ನೇತೃತ್ವದ ಕಾರ್ಯಕಾರಿ ಸಮಿತಿಯ ಅಧಿಕಾರದ ಅವಧಿ ಗುರುವಾರ ಅಂತ್ಯವಾಗಲಿದ್ದು, ಆಡಳಿತಾಧಿಕಾರಿಯಾಗಿ ನೇಮಕಗೊಂಡಿರುವ ಎಸ್. ರಂಗಪ್ಪ ಅವರು ಶುಕ್ರವಾರ ಅಧಿಕಾರ ವಹಿಸಿಕೊಳ್ಳಲಿದ್ದಾರೆ.



ನಡುಗನ್ನಡ ಸಾಹಿತ್ಯ ಸಮ್ಮೇಳನ ಮಾಡಬೇಕೆಂಬ ಯೋಚನೆಯಿತ್ತು. ಕೋವಿಡ್‌ನಿಂದಾಗಿ ಅದು ಸಾಧ್ಯವಾಗಲಿಲ್ಲ. ಉಳಿದ ಎಲ್ಲ ಕೆಲಸಗಳನ್ನು ಪೂರ್ಣಗೊಳಿಸಿದ್ದೇನೆ

ಮನು ಬಳಿಗಾರ್, ಕಸಾಪ ಅಧ್ಯಕ್ಷ

'ಐದೂವರೆ ವರ್ಷಗಳ ಅವಧಿ ಯಲ್ಲಿ ಸರ್ಕಾರವು ₹ 39.47 ಕೋಟಿ ಅನುದಾನವನ್ನು ಪರಿಷತ್ತಿಗೆ ನೀಡಿದೆ. ಅಧಿಕಾರ ವಹಿಸಿಕೊಳ್ಳುವ ಮೊದಲು ₹ 4.45 ಕೋಟಿ ಮೊತ್ತ ಪರಿಷತ್ತಿನಲ್ಲಿತ್ತು. ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಹಾಗೂ ಕನ್ನಡ ಸಮಾವೇಶಗಳ ಆಯೋಜನೆ, ಕನ್ನಡ ಭವನಗಳ ನಿರ್ಮಾಣ, ಸಿಬ್ಬಂದಿ ವೇತನ, ಜಿಲ್ಲಾ ಕಸಾಪ ನಿರ್ವಹಣೆ ಮತ್ತಿತರ ಚಟುವಟಿಕೆಗಳಿಗೆ ಹಣವನ್ನು ಖರ್ಚು ಮಾಡಲಾಗಿದೆ. ₹ 1.25 ಕೋಟಿ ಹಣ ಬಾಕಿ ಉಳಿದಿದೆ' ಎಂದು ಮಾಹಿತಿ ನೀಡಿದರು.

'ಪರಿಷತ್ತಿನ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನ ನಡೆಸಲಾಯಿತು. ಹೊರನಾಡ ಕನ್ನಡಿಗರ ರಾಷ್ಟ್ರೀಯ ಸಮಾವೇಶ ಸೇರಿದಂತೆ ವಿವಿಧ ಕಾರ್ಯ ಯೋಜನೆಗಳ ಮೂಲಕ ಹೊರ ರಾಷ್ಟ್ರಗಳಲ್ಲಿಯೂ ಕನ್ನಡದ ಕಂಪನ್ನು ಸಾರಲಾಯಿತು. ಪರಿಷತ್ತಿನ ಚುನಾವಣೆಯಲ್ಲಿ ಸುಧಾರಣೆ ತರುವುದು ಸೇರಿದಂತೆ ಹಲವು ಕೆಲಸಗಳನ್ನು ಯಶಸ್ವಿಯಾಗಿ ನಿಭಾಯಿಸಲಾಗಿದೆ' ಎಂದರು.

215 ದತ್ತಿ ಸ್ಥಾಪನೆ: 'ನಮ್ಮ ಅವಧಿಯಲ್ಲಿ 215 ದತ್ತಿ ಪ್ರಶಸ್ತಿಗಳನ್ನು ಹೊಸದಾಗಿ ಸ್ಥಾಪಿಸಲಾಗಿದೆ. ಪರಿಷತ್ತಿನಲ್ಲಿ ಒಟ್ಟು ದತ್ತಿ ಪ್ರಶಸ್ತಿಗಳ ಸಂಖ್ಯೆ 2001ಕ್ಕೆ ಏರಿಕೆಯಾಗಿದೆ. ₹ 1.18 ಕೋಟಿಗೂ ಹೆಚ್ಚು ದತ್ತಿ ಹಣ ಸಂಗ್ರಹವಾಗಿದೆ. ಪರಿಷತ್ತಿನ ಆಜೀವ ಸದಸ್ಯರ ಸಂಖ್ಯೆಯನ್ನು 3,36,900ಕ್ಕೆ ಏರಿಕೆ ಮಾಡಲಾಗಿದೆ' ಎಂದು ತಿಳಿಸಿದರು.

'ಸಾಹಿತಿಗಳು, ಕಲಾವಿದರ ಹೆಸರಿನಲ್ಲಿ ಈಗಾಗಲೇ 22 ಕಡೆ ಕನ್ನಡ ಸಾಹಿತ್ಯ-ಸಾಂಸ್ಕೃತಿಕ ಭವನಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ನನ್ನ ಗೌರವ ಧನ ₹ 13.50 ಲಕ್ಷವನ್ನು ಪರಿಷತ್ತಿನಲ್ಲೇ ಠೇವಣಿಯಾಗಿರಿಸಿ, 60 ವರ್ಷ ಮೇಲ್ಪಟ್ಟ ಇಬ್ಬರು ಸಾಹಿತಿಗಳಿಗೆ 'ಕಸಾಪ ಗೌರವ ಪ್ರಶಸ್ತಿ' ನೀಡಲಾಗುತ್ತಿದೆ' ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

ಗಣೇಶೋತ್ಸವ: ಸರ್ಕಾರದ ಹಸ್ತಕ್ಷೇಪ ಬೇಡ

ಬೆಂಗಳೂರು: ಗಣೇಶ ಮೂರ್ತಿಯ ಎತ್ತರ, ಆಕಾರ ನಿಗದಿ ಮತ್ತು ಆಚರಣೆಗೆ ದಿನಗಳ ನಿರ್ಬಂಧ ಹೇರುವ ಮೂಲಕ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು ಎಂದು ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿ ಆಗ್ರಹಿಸಿದೆ.

ಭಕ್ತರ ಅಭಿಲಾಷೆಯಂತೆ ಮೂರ್ತಿಗಳನ್ನು ಇಟ್ಟು ಪೂಜಿಸಲು ಅವಕಾಶ ಇರಬೇಕು. ಅತ್ಯಂತ ಸೂಕ್ಷ್ಮ ವಿಷಯ ಆಗಿರುವುದರಿಂದ ಗಣೇಶೋತ್ಸವ ಸಮಿತಿಗಳನ್ನು ವಿಶ್ವಾಸಕ್ಕೆ ಪಡೆದು ಸಹಮತದ ನಿಯಮಗಳನ್ನು ರೂಪಿಸಬೇಕು ಎಂದು ಕೋರಿದೆ.

ಗಣಪತಿ ಮೂರ್ತಿ ತಯಾರಿಸುವ ಮತ್ತು ಮಾರಾಟ ಮಾಡುವ ಕಲಾವಿದರು ಮತ್ತು ವ್ಯಾಪಾರಿಗಳು ನಿರ್ಭೀತಿಯಿಂದ ವಹಿವಾಟು ನಡೆಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದೆ.



545 ಪಿಎಸ್‌ಐ ನೇಮಕಾತಿ ಅ. 3ರಂದು ಲಿಖಿತ ಪರೀಕ್ಷೆ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭವಾಗಿದ್ದು, ಅಕ್ಟೋಬರ್ 3ರಂದು ಲಿಖಿತ ಪರೀಕ್ಷೆ ನಡೆಸಲು ನೇಮಕಾತಿ ವಿಭಾಗ ತೀರ್ಮಾನಿಸಿದೆ.

ಈ ಬಗ್ಗೆ ರಾಜ್ಯದ ಎಲ್ಲ ಕಮಿಷನರ್‌ಗಳು ಹಾಗೂ ಜಿಲ್ಲಾ ಎಸ್ಪಿಗಳಿಗೆ ಪತ್ರ ಬರೆದಿರುವ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪಾಲ್, ಪರೀಕ್ಷೆಗೆ ತಯಾರಿ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ.

'ಪಿಎಸ್‌ಐ ನೇಮಕಾತಿಗಾಗಿ ಈಗಾಗಲೇ ರಾಜ್ಯದಾದ್ಯಂತ ದೈಹಿಕ ಸಾಮರ್ಥ್ಯ ಪರೀಕ್ಷೆ ಆರಂಭವಾಗಿದ್ದು, ಅದು ಪೂರ್ಣಗೊಳ್ಳಲು ಮತ್ತಷ್ಟು ದಿನಗಳು ಬೇಕಿದೆ. ನಿಗದಿಯಂತೆ ಸೆ. 26ರಂದು ಪರೀಕ್ಷೆ ನಡೆಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಅಕ್ಟೋಬರ್ 3ರಂದು ಲಿಖಿತ ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ' ಎಂದು ಪತ್ರದಲ್ಲಿ ಹೇಳಲಾಗಿದೆ.

'ಅಂದು ಬೆಳಿಗ್ಗೆ 10.30ರಿಂದ ಮಧ್ಯಾಹ್ನ 12 ಗಂಟೆವರೆಗೆ ಪತ್ರಿಕೆ -1 ಹಾಗೂ ಮಧ್ಯಾಹ್ನ 1.30ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಪತ್ರಿಕೆ -2 ಪರೀಕ್ಷೆ ನಡೆಸಲಾಗುವುದು. ಈಗಾಗಲೇ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಗಳಲ್ಲೇ ಈ ಪರೀಕ್ಷೆಗಳು ನಡೆಸಲು ಸಕಲ ಸಿದ್ಧತೆ ಮಾಡಿಕೊಂಡು ಸೆ. 4ರೊಳಗಾಗಿ ಕಚೇರಿಗೆ ವರದಿ ನೀಡಬೇಕು' ಎಂದೂ ಪತ್ರದಲ್ಲಿ ತಿಳಿಸಲಾಗಿದೆ.

ಇಂದಿರಾ ಗಾಂಧಿ ಆರೋಗ್ಯ ಸಂಸ್ಥೆಯಲ್ಲಿ ಅಂಗಾಂಗ ಕಸಿಯ ಅತ್ಯಾಧುನಿಕ ಕೇಂದ್ರ

ಸರ್ಕಾರಿ ವೆಚ್ಚ: ಬಡ ಮಕ್ಕಳಿಗೆ ದುಬಾರಿ 'ಕಸಿ'

• ವರುಣ ಹೆಗಡೆ

ಬೆಂಗಳೂರು: ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಖಾಸಗಿ ಆಸ್ಪತ್ರೆಗಳು ನಡೆಸುತ್ತಿರುವ ಅಂಗಾಂಗ ಕಸಿಗಳು ಶೀಘ್ರದಲ್ಲಿಯೇ ಸರ್ಕಾರಿ ವೆಚ್ಚದಲ್ಲಿ ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬಗಳ ಮಕ್ಕಳಿಗೆ ದೊರೆಯಲಿವೆ. ಈ ಸಂಬಂಧ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ (ಐಜಿಐಸಿಎಚ್) ಅತ್ಯಾಧುನಿಕ ಕಸಿ ಕೇಂದ್ರವನ್ನು ತೆರೆಯಲಾಗುತ್ತಿದೆ.

ಅಸ್ಥಿಮಜ್ಜೆ, ಯಕೃತ್ತು, ಮೂತ್ರಪಿಂಡ, ರಕ್ತದ ಆಕರಕೋಶ ಸೇರಿದಂತೆ ವಿವಿಧ ಕಸಿ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ ₹ 20 ಲಕ್ಷದಿಂದ ₹ 30 ಲಕ್ಷ ಖರ್ಚು ಮಾಡುವ ಪರಿಸ್ಥಿತಿಯಿದೆ. ರಾಜ್ಯದಲ್ಲಿ ಸರ್ಕಾರಿ ವ್ಯವಸ್ಥೆಯಡಿ ಮಕ್ಕಳಿಗೆ ಕಸಿ ನಡೆಸಲು ಪ್ರತ್ಯೇಕ ಕೇಂದ್ರ ಇಲ್ಲ. ಇದರಿಂದಾಗಿ ಈ ಕಸಿಗಳನ್ನು ಮಕ್ಕಳಿಗೆ ಮಾಡಿಸಲು ಬಹುತೇಕ ಕುಟುಂಬಗಳಿಗೆ ಸಾಧ್ಯವಾಗುತ್ತಿರಲಿಲ್ಲ.



ಎಲ್ಲರಿಗೂ ಖಾಸಗಿ ಆಸ್ಪತ್ರೆಗಳಿಗೆ ತೆರಳಿ, ಚಿಕಿತ್ಸೆ ಕೊಡಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ, ಪ್ರತ್ಯೇಕ ಸೂಪರ್ ಸ್ಪೆಷಾಲಿಟಿ ಕಸಿ ಕೇಂದ್ರವನ್ನು ತೆರೆಯಲಾಗುತ್ತಿದೆ
ಡಾ. ಸಂಜಯ್ ಕೆ.ಎಸ್.
ಐಜಿಐಸಿಎಚ್ ನಿರ್ದೇಶಕ

500 ಹಾಸಿಗೆಗಳ ಕೇಂದ್ರ

ಮಕ್ಕಳ ಕಸಿ ಕೇಂದ್ರವನ್ನು ₹ 135 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. 11 ಮಹಡಿಯ ಕಟ್ಟಡವು 500 ಹಾಸಿಗೆಗಳನ್ನು ಒಳಗೊಂಡಿರಲಿದೆ. ಇದನ್ನು 18 ತಿಂಗಳಲ್ಲಿ ನಿರ್ಮಾಣ ಮಾಡುವ ಗುರಿಯನ್ನು ಹಾಕಿಕೊಳ್ಳಲಾಗಿದ್ದು, ಈಗಾಗಲೇ ಕಟ್ಟಡ ನಿರ್ಮಾಣ ಕಾಮಗಾರಿ ಆರಂಭವಾಗಿದೆ. ಕಸಿ ನಡೆಸಲು ಬೇಕಾದ ವೈದ್ಯಕೀಯ ಉಪಕರಣಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳಲಾಗುತ್ತದೆ.

ಪ್ರಜಾವಾಣಿ ವಿಶೇಷ

ರಾಜ್ಯ ಸರ್ಕಾರ 2018ರಲ್ಲಿ ಬಿಪಿಎಲ್ ಕುಟುಂಬಗಳಿಗಾಗಿ 'ರಾಜ್ಯ ಅಂಗಾಂಗ ಕಸಿ ಯೋಜನೆ' ಆರಂಭಿಸಿದೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಈ ಯೋಜನೆಯನ್ನು ನಿರ್ವಹಣೆ ಮಾಡುತ್ತಿದೆ. ಯೋಜನೆಯಡಿ ಹೃದಯ ಕಸಿಗೆ ಪ್ರತಿ ರೋಗಿಗೆ ₹ 11 ಲಕ್ಷ, ಮೂತ್ರಪಿಂಡ ಕಸಿಗೆ ₹ 3 ಲಕ್ಷ, ಯಕೃತ್ ಕಸಿಗೆ ₹ 12 ಲಕ್ಷ ಧನಸಹಾಯ ನೀಡಲು ಅವಕಾಶವಿದೆ. 2019ರಲ್ಲಿ ಅಸ್ಥಿಮಜ್ಜೆ ಕಸಿಯನ್ನೂ ಸೇರ್ಪಡೆ ಮಾಡಲಾಗಿದ್ದು, ₹ 21 ಲಕ್ಷದವರೆಗೂ ಉಚಿತವಾಗಿ ಚಿಕಿತ್ಸೆ ದೊರೆಯಲಿದೆ. ಆದರೆ, ಮಕ್ಕಳಿಗಾಗಿಯೇ ಪ್ರತ್ಯೇಕ ಕಸಿ ಕೇಂದ್ರ ಹಾಗೂ ತಜ್ಞ ವೈದ್ಯರು ಇಲ್ಲದಿರುವುದರಿಂದ ಅಂಗಾಗ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದ ಬಹುತೇಕ ಮಕ್ಕಳಿಗೆ ಇದರ ಲಾಭ ಪಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

1.33 ಎಕರೆ ಪ್ರದೇಶ: ರಾಜ್ಯ ಅಂಗಾಂಶ ಕಸಿ ಸಂಸ್ಥೆ (ಸೊಟೊ) ಅಡಿ ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವ 3 ಸಾವಿರಕ್ಕೂ ಅಧಿಕ ಮಂದಿ ಹೆಸರು ನೋಂದಾಯಿಸಿಕೊಂಡಿದ್ದು, ಇವರಲ್ಲಿ ಮಕ್ಕಳು ಕೂಡ ಸೇರಿದ್ದಾರೆ. ಅನುವಂಶಿಕವಾಗಿ ಹರಡುವ ಅಸ್ಥಿಮಜ್ಜೆ ಸಂಬಂಧಿ ರಕ್ತದ ಕಾಯಿಲೆಯಾಗಿರುವ ಥಲಸೇಮಿಯಾಕ್ಕೆ ರಾಜ್ಯದಲ್ಲಿ 5.5 ಸಾವಿರ ಮಂದಿ ಬಳಲುತ್ತಿದ್ದಾರೆ. ದೋಷಪೂರಿತ ವಂಶವಾಹಿಗಳ ಕಾರಣದಿಂದಾಗಿ ಈ ಕಾಯಿಲೆ ತಂದೆ–ತಾಯಿಗಳಿಂದ ಮಕ್ಕಳಿಗೆ ಬರುತ್ತಿದೆ. ಇದಕ್ಕೆ ಅಸ್ಥಿಮಜ್ಜೆ ಕಸಿ ಪರಿಹಾರವಾಗಿದೆ. ಹಾಗಾಗಿ, ಇಂದಿರಾ ಗಾಂಧಿ ಆರೋಗ್ಯ ಸಂಸ್ಥೆಯು 1.33 ಎಕರೆ ಪ್ರದೇಶವನ್ನು ತನ್ನ ಆವರಣದಲ್ಲಿ ಗುರುತಿಸಿ, ಪ್ರತ್ಯೇಕ ಕೇಂದ್ರವನ್ನು ರೂಪಿಸುತ್ತಿದೆ.

'ರಾಜ್ಯದಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕ ಕಸಿ ಕೇಂದ್ರ ಇರಲಿಲ್ಲ. ಇದರಿಂದಾಗಿ ಹಲವಾರು ಮಕ್ಕಳು ಕಸಿಗಾಗಿ ಎದುರು ನೋಡುತ್ತಿದ್ದಾರೆ. ಮಕ್ಕಳ ಸಮಸ್ಯೆಗೆ ಕೇಂದ್ರವು ಪರಿಹಾರ ಒದಗಿಸಲಿದೆ. ಅತ್ಯಾಧುನಿಕ ಉಪಕರಣಗಳನ್ನು ಈ ಕೇಂದ್ರ ಹೊಂದಲಿದೆ. ತಜ್ಞ ವೈದ್ಯರನ್ನು ಕೂಡ ಸರ್ಕಾರ ನೇಮಕ ಮಾಡಲಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.88 ಕೋಟಿ ▲	3.28 ಕೋಟಿ
ಸಕ್ರಿಯ ಪ್ರಕರಣ	1.86 ಕೋಟಿ ▲	3.83 ಲಕ್ಷ ▲
ಗುಣಮುಖ	19.57 ಕೋಟಿ ▲	3.20 ಕೋಟಿ ▲
ಸಾವು	45.39 ಲಕ್ಷ ▲	4.39 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.09 ಲಕ್ಷ ▲	40,807 ▼
ಗುಣಮುಖ	5.97 ಲಕ್ಷ ▲	29,526 ▼
ಸಾವು	9,010 ▲	310 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
1.56 ಲಕ್ಷ ▲ ಅಮೆರಿಕ | 32,114 ▼ ಬ್ರಿಟನ್ | 31,319 ಇರಾನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
84.35 ▲ ಅಮೆರಿಕ | 11.90 ▼ ಬ್ರಿಟನ್ | 6.78 ಇರಾನ್

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)
1.37 ಲಕ್ಷ ▼ ಮಹಾರಾಷ್ಟ್ರ
34,941 ▲ ತಮಿಳುನಾಡು
25,082 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
64.64 ಮಹಾರಾಷ್ಟ್ರ
40.90 ಕೇರಳ ▲
26.16 ತಮಿಳುನಾಡು ▼

ಪ್ರಜಾವಾಣಿ ಗ್ರಾಫಿಕ್ಸ್



ಲಸಿಕಾ ಅಭಿಯಾನ ಲಸಿಕಾ ಅಭಿಯಾನದಲ್ಲಿ ಕೋವಿಡ್ ಲಸಿಕೆ ಪಡೆಯಲು ಬುಧವಾರ ಶಿವಾಜಿನಗರದಲ್ಲಿ ಸಾಲುಗಟ್ಟಿ ನಿಂತಿದ್ದ ಜನ –ಪ್ರಜಾವಾಣಿ ಚಿತ್ರ

ಕೇರಳ ವಾಪಸಿಗರ 'ಕ್ವಾರಂಟೈನ್' ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದಿಂದ ನಿತ್ಯ ಸರಾಸರಿ 10 ವಿಮಾನಗಳು ಮತ್ತು ಆರು ರೈಲುಗಳಲ್ಲಿ ನಗರಕ್ಕೆ ಪ್ರಯಾಣಿಕರು ಬರುತ್ತಿದ್ದು, ಕೋವಿಡ್ ಕಾರಣದಿಂದ ಈ ಎಲ್ಲ ಪ್ರಯಾಣಿಕರ ತಪಾಸಣೆ ಮತ್ತು ಕ್ವಾರಂಟೈನ್ ಪ್ರಕ್ರಿಯೆ ಅಧಿಕಾರಿಗಳಿಗೆ ತಲೆನೋವು ತಂದಿಟ್ಟಿದೆ.

ಅತೀ ಹೆಚ್ಚು ಕೋವಿಡ್ ಸೋಂಕು ದೃಢಪಡುತ್ತಿರುವ ಕೇರಳ ರಾಜ್ಯದಿಂದ ಬರುವವರಿಗೆ ಏಳು ದಿನಗಳ ಕ್ವಾರಂಟೈನ್ ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಆ. 30ರಂದು ಆದೇಶ ಹೊರಡಿಸಿದೆ. ಕೇರಳಕ್ಕೆ ಹೋಗಿ ವಾಪಸಾಗುವವರು ರಾಜ್ಯದ ಗಡಿ ಪ್ರವೇಶಿಸಲು 72 ಗಂಟೆ ಮೊದಲು ಪಡೆದ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕಡ್ಡಾಯವಾಗಿ ತರಬೇಕು.

ಆದರೆ, ಕೇರಳದಿಂದ ಬುಧವಾರ ನೂರಾರು ಮಂದಿ ವಿಮಾನ ಮತ್ತು ರೈಲುಗಳು ಮೂಲಕ ರಾಜ್ಯಕ್ಕೆ ಬಂದಿದ್ದು, ಈ ಪೈಕಿ ಕೆಲವರಷ್ಟೆ ಕ್ವಾರಂಟೈನ್‌ಗೆ ಒಳಗಾಗಿದ್ದಾರೆ.

'ಪ್ರಯಾಣಿಕರ ತಪಾಸಣೆ ಮತ್ತು ಕ್ವಾರಂಟೈನ್ ಸಂಬಂಧಿಸಿದಂತೆ ಸರ್ಕಾರದಿಂದ ಯಾವುದೇ ಆದೇಶ ಬಂದಿಲ್ಲ. ಪ್ರಯಾಣಿಕರು ಆರ್‌ಟಿಪಿಸಿಆರ್ ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ಹೊಂದಿರಬೇಕು ಅಷ್ಟೆ' ಎಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಯೊಬ್ಬರು ತಿಳಿಸಿದರು.

'ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಇಲ್ಲದಿರುವ ಪ್ರಯಾಣಿಕರನ್ನು ಮಾತ್ರ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಯಾರನ್ನೂ ಕ್ವಾರಂಟೈನ್‌ಗೆ ಒಳಪಡಿಸುತ್ತಿಲ್ಲ' ಎಂದು ರೈಲು ನಿಲ್ದಾಣದ ಮೂಲಗಳು ತಿಳಿಸಿವೆ.

ಈ ಮಧ್ಯೆ, ಬೆಂಗಳೂರು ಮಲಯಾಳಿ ಫೇಸ್‌ಬುಕ್ ಗ್ರೂಪ್ ಖಾತೆಯಲ್ಲಿ 'ರೈಲುಗಳ ಮೂಲಕ ಬರುವವರಿಗೆ ಯಾವುದೇ ಕ್ವಾರಂಟೈನ್ ಇಲ್ಲ. ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಇದ್ದರೆ ಸಾಕು' ಎಂದು ಪ್ರಚಾರ ಮಾಡಲಾಗುತ್ತಿದೆ ಎಂದು ಖಾತೆಯ ಸದಸ್ಯರೊಬ್ಬರು ಹೇಳಿದರು.

ವಿನಾಯಿತಿಗೆ ಮನವಿ: ಪರೀಕ್ಷೆಗಳಿಗೆ ಕೇರಳದಿಂದ ಬರುವ ವಿದ್ಯಾರ್ಥಿಗಳಿಗೆ 7 ದಿನಗಳ ಕ್ವಾರಂಟೈನ್ ನಿಯಮದಿಂದ ವಿನಾಯಿತಿ ನೀಡಬೇಕು ಎಂದು ಕೇರಳದ ಮುಖ್ಯ ಕಾರ್ಯದರ್ಶಿ ಪಿ.ವಿ. ಜಾಯ್ ಅವರು ಕರ್ನಾಟಕದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಕ್ವಾರಂಟೈನ್ ಕಡ್ಡಾಯ: ಸುಧಾಕರ್

'ಕೆಲವೇ ದಿನಗಳಿಗೆ ರಾಜ್ಯಕ್ಕೆ ಬರುವವರೂ ಸೇರಿದಂತೆ ಎಲ್ಲರಿಗೂ ಎಲ್ಲರಿಗೂ ಕ್ವಾರಂಟೈನ್ ಕಡ್ಡಾಯ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು. 'ಕೇರಳದಿಂದ ಬರುವ ಪ್ರಯಾಣಿಕರು ನಿಗದಿಪಡಿಸಿದ ಹೋಟೆಲ್ ಅಥವಾ ಕೋವಿಡ್ ಆರೈಕೆ ಕೇಂದ್ರದಲ್ಲಿ ಕಡ್ಡಾಯವಾಗಿ ಏಳು ದಿನ ಕ್ವಾರಂಟೈನ್‌ನಲ್ಲಿ ಇರಬೇಕು. ಅಂಥ ಹೋಟೆಲ್‌ಗಳು ಮತ್ತು ಕೇಂದ್ರಗಳ ಪಟ್ಟಿಯನ್ನು ಒಂದೆರಡು ದಿನಗಳಲ್ಲಿ ಸಾರ್ವಜನಿಕವಾಗಿ ಪ್ರಕಟಿಸಲಾಗುವುದು' ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,38,196 ಒಟ್ಟು ಪ್ರಕರಣಗಳು ▲
(12,37,837 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,558 ▲	12,14,637 ▲	16,000 ▲

ದಿನದ ಏರಿಕೆ

ಹೊಸ ಪ್ರಕರಣ	359 ▲
ಗುಣಮುಖ	232 ▲
ಸಾವು	07

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವಿದೇಶಿ ಪ್ರಯಾಣಿಕರಿಗೆ ಆರ್‌ಟಿಪಿಸಿಆರ್ ಪರೀಕ್ಷಾ ವರದಿ ಕಡ್ಡಾಯ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಾಗಿಲ್ಲ ಎಂದು ದೃಢಪಡಿಸುವ ಆರ್‌ಟಿಪಿಸಿಆರ್ ಪರೀಕ್ಷಾ ವರದಿಯನ್ನು ಕೆಲವು ದೇಶಗಳಿಂದ ಬರುವ ಪ್ರಯಾಣಿಕರು ಕಡ್ಡಾಯವಾಗಿ ತರಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಇಂಗ್ಲೆಂಡ್, ಯುರೋಪ್, ಮಧ್ಯಪ್ರಾಚ್ಯ, ದಕ್ಷಿಣ ಆಫ್ರಿಕಾ, ಬ್ರೆಜಿಲ್, ಬಾಂಗ್ಲಾದೇಶ, ಬೋಟ್ಸವಾನಾ, ಚೀನಾ, ಮಾರಿಷಸ್, ನ್ಯೂಜಿಲೆಂಡ್, ಜಿಂಬಾಬ್ವೆ ದೇಶಗಳಿಂದ ಬರುವ ಬರುವವರಿಗೆ ಆರ್‌ಟಿಪಿಸಿಆರ್ ಪರೀಕ್ಷಾ ವರದಿ (ನೆಗೆಟಿವ್) ಕಡ್ಡಾಯಗೊಳಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಪ್ರಯಾಣ ಹೊರಡುವುದಕ್ಕಿಂತ 72 ಗಂಟೆ ಮೊದಲು ಪಡೆದ ವರದಿಯನ್ನು ತರುವ ಜೊತೆಗೆ, ಗಂಟಲು ದ್ರವ ಮಾದರಿಯನ್ನು ರಾಜ್ಯದ ಎಲ್ಲ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರವೇಶದ್ವಾರದ ಬಳಿ ನೀಡಬೇಕು ಎಂದು ಇಲಾಖೆ ತಿಳಿಸಿದೆ.

ಅಲ್ಲದೆ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾದಿಂದ ಬರುವ ಪ್ರಯಾಣಿಕರು ಗಂಟಲು ದ್ರವ ಮಾದರಿಯ ಪರೀಕ್ಷಾ ವರದಿ ನೆಗೆಟಿವ್ ಎಂದು ದೃಢಪಟ್ಟ ಬಳಿಕವಷ್ಟೆ ವಿಮಾನ ನಿಲ್ದಾಣದಿಂದ ಹೊರಗೆ ಹೋಗಬೇಕು. ವಿದೇಶಗಳಿಂದ ಬರುವ ಪ್ರಯಾಣಿಕರ ಮೇಲೆ ಕೋವಿಡ್ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣಾ ವಿಧಾನ) ಪ್ರಕಾರ ನಿಗಾ ಇಡಲಾಗುವುದು ಎಂದೂ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸಕ್ರಿಯ ಪ್ರಕರಣ ಇಳಿಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, ಸದ್ಯ 18,412 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.


ಹೊಸದಾಗಿ 1,159 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.50 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.75 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.66 ರಷ್ಟು ವರದಿಯಾಗಿದೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿಯಲ್ಲಿದೆ. ಬೀದರ್, ಹಾವೇರಿ, ರಾಯಚೂರು ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 191, ಕೊಡಗಿನಲ್ಲಿ 95 ಹಾಗೂ ಮೈಸೂರಿನಲ್ಲಿ 91 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 359 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 1,112 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.94 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 21 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 8 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 7, ದಕ್ಷಿಣ ಕನ್ನಡದಲ್ಲಿ 5, ಉಡುಪಿಯಲ್ಲಿ 3, ಹಾಸನದಲ್ಲಿ 2 ಮಂದಿ ಮೃತಪಟ್ಟಿದ್ದಾರೆ. ತುಮಕೂರು ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.81 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,339 ಕ್ಕೆ ತಲುಪಿದೆ.

11.02 ಲಕ್ಷ ಮಂದಿಗೆ ಲಸಿಕೆ



ರಾಜ್ಯದಲ್ಲಿ ಬುಧವಾರ ಹಮ್ಮಿಕೊಳ್ಳಲಾದ ಲಸಿಕಾ ಮೇಳದಲ್ಲಿ 11.02 ಲಕ್ಷ ಮಂದಿಗೆ ಕೋವಿಡ್ ಲಸಿಕೆ ವಿತರಿಸಲಾಗಿದೆ. ರಾಜ್ಯದಲ್ಲಿ ಈವರೆಗೆ ವಿತರಿಸಲಾದ ಲಸಿಕೆಯ ಒಟ್ಟು ಡೋಸ್‌ಗಳು 4.34 ಕೋಟಿಗೆ ಏರಿಕೆಕಂಡಿದೆ. ಈವರೆಗೆ 3.28 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.06 ಕೋಟಿ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 6,965 ಸರ್ಕಾರಿ ಆಸ್ಪತ್ರೆಗಳು ಸೇರಿದಂತೆ 7,400 ಕೇಂದ್ರಗಳಲ್ಲಿ ಬುಧವಾರ ಲಸಿಕೆ ವಿತರಿಸಲಾಗಿದೆ.

ಬಾರ್‌ನಲ್ಲಿ ಮದ್ಯ ಖರೀದಿ; ಕಾರಿನಲ್ಲೇ ಪಾರ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ 80 ಅಡಿ ರಸ್ತೆಯಲ್ಲಿ ಔಡಿ ಕ್ಯೂ3 ಕಾರು ಅಪಘಾತ ಸಂಭವಿಸಿ ಏಳು ಮಂದಿ ಮೃತಪಟ್ಟ ಪ್ರಕರಣದ ಕುರಿತು ಆಗ್ನೇಯ ವಿಭಾಗದ (ಸಂಚಾರ) ಎಸಿಪಿ ನೇತೃತ್ವದ ತಂಡ ತನಿಖೆ ಚುರುಕುಗೊಳಿಸಿದೆ. ಮೃತರು ಓಡಾಡಿದ್ದ ಸ್ಥಳಗಳ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸುತ್ತಿದೆ.

'ಕಾರು ಚಾಲಕನ ಅತಿವೇಗದ ಚಾಲನೆ ಹಾಗೂ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಚಾಲಕನ ವಿರುದ್ಧವೇ ಪ್ರಕರಣ ದಾಖಲಾಗಿದೆ. ಕಾರಿನಲ್ಲಿದ್ದ ಏಳು ಮಂದಿಯೂ ಮೃತಪಟ್ಟಿದ್ದಾರೆ. ಹೀಗಾಗಿ, ಅಪಘಾತ ಹೇಗಾಯಿತು ಎಂಬುದನ್ನು ಸದ್ಯಕ್ಕೆ ಹೇಳಲಾಗದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಹೊಸೂರು ಕ್ಷೇತ್ರದ ಡಿಎಂಕೆ ಶಾಸಕ ವೈ. ಪ್ರಕಾಶ್ ಅವರ ಮಗ ಕರುಣಾಸಾಗರ್, ಅವರ ಸಂಬಂಧಿ ಬಿಂದು, ಸ್ನೇಹಿತರಾದ ಇಶಿತಾ ಬಿಸ್ವಾಸ್, ಎಂ.ಧನುಷಾ, ಅಕ್ಷಯ್ ಗೋಯೆಲ್, ಉತ್ಸವ್ ಹಾಗೂ ರೋಹಿತ್ ಮೃತಪಟ್ಟಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ ಅವರೆಲ್ಲರ ಮೃತದೇಹಗಳನ್ನು ಹಸ್ತಾಂತರಿಸಲಾಗಿದೆ. ವೈದ್ಯರ ವರದಿಗಾಗಿ ಕಾಯುತ್ತಿದ್ದೇವೆ' ಎಂದೂ ತಿಳಿಸಿದರು.

'ಇಬ್ಬರು ಯುವತಿಯರು, ಸೋಮವಾರ ರಾತ್ರಿ ಕೋರಮಂಗಲದ ಬಾರೊಂದಕ್ಕೆ ಹೋಗಿ ಮದ್ಯ ಖರೀದಿಸಿದ್ದರು. ಬಾರ್‌ನಿಂದ ಹೊರಬಂದ ಅವರನ್ನು ಕರುಣಾಸಾಗರ್ ತಮ್ಮ ಕಾರಿನಲ್ಲಿ ಹತ್ತಿಸಿಕೊಂಡು ಸ್ಥಳದಿಂದ ಹೊರಟು ಹೋಗಿದ್ದರು. ಇದಕ್ಕೆ ಸಂಬಂಧಪಟ್ಟ ದೃಶ್ಯಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದೂ ಹೇಳಿದರು.

'ಕರ್ಫ್ಯೂ ಇದ್ದಿದ್ದರಿಂದ ಬಾರ್‌ನಲ್ಲಿ ಕುಳಿತು ಮದ್ಯ ಕುಡಿಯಲು ಅವಕಾಶವಿರಲಿಲ್ಲ. ಹೀಗಾಗಿ, ತಾವು ತಂದಿದ್ದ ಮದ್ಯವನ್ನು ಏಳು ಮಂದಿಯೂ ಕಾರಿನಲ್ಲೇ ಕುಡಿದು ಪಾರ್ಟಿ ಮಾಡಿದ್ದಾರೆ. ಅದಾದ ನಂತರ, ಕಾರಿನಲ್ಲಿ ನಗರದ ಹಲವೆಡೆ ಸುತ್ತಾಡಿದ್ದರು. ಅವಾಗಲೂ ಕಾರನ್ನು ಅತಿವೇಗದಲ್ಲಿ ಚಲಾಯಿಸಿದ್ದರು. ಹೊಸೂರು ರಸ್ತೆಯ ಚೆಕ್‌ಪೋಸ್ಟ್‌ನಲ್ಲಿದ್ದ ಆಡುಗೋಡಿ ಠಾಣೆ ಸಿಬ್ಬಂದಿ, ಕಾರು ತಡೆದು ಪರಿಶೀಲಿಸಿದ್ದರು. ಶಾಸಕನ ಮಗನೆಂದು ಹೇಳಿ ಕರುಣಾಸಾಗರ್ ಕಾರು ಬಿಡಿಸಿಕೊಂಡು ಹೋಗಿದ್ದರು. ಅತಿವೇಗದಲ್ಲಿ ಕಾರು ಚಲಾಯಿಸದಂತೆ ಬುದ್ಧಿವಾದ ಹೇಳಿ ಪೊಲೀಸರು ಎಚ್ಚರಿಕೆ ಕೊಟ್ಟು ಕಳುಹಿಸಿದ್ದರು. ಇದಾದ ನಂತರ ಅಪಘಾತ ಸಂಭವಿಸಿದೆ' ಎಂದೂ ತಿಳಿಸಿದರು.

'ಕೋರಮಂಗಲ ರಸ್ತೆಯಲ್ಲಿ ಹೊರಟಿದ್ದ ಆಹಾರ ಡೆಲಿವರಿ ಬಾಯ್ ಸಹ ಕಾರಿನ ಅತಿವೇಗದ ಬಗ್ಗೆ ಹೇಳಿಕೆ ನೀಡಿದ್ದಾರೆ. ತಮ್ಮ ದ್ವಿಚಕ್ರ ವಾಹನದ ಬಳಿಯೇ ಕಾರು ಅತಿವೇಗವಾಗಿ ಹೋಗಿತ್ತು. ಅದನ್ನು ನೋಡಿ ತಮಗೂ ಭಯವಾಗಿತ್ತೆಂದೂ ಅವರು ತಿಳಿಸಿದ್ದಾರೆ' ಎಂದೂ ಮಾಹಿತಿ ನೀಡಿದರು.

ಜಂಟಿ ಸಮಿತಿ ಸದಸ್ಯರ ಭೇಟಿ: ಲೋಕೋಪಯೋಗಿ, ಪೊಲೀಸ್ ಹಾಗೂ ಸಾರಿಗೆ ಇಲಾಖೆಯ ಜಂಟಿ ಸಮಿತಿ ಸದಸ್ಯರು ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದಾರೆ.

'ಅಪಘಾತಕ್ಕೆ ಅತಿವೇಗ ಕಾರಣವೆಂಬುದು ಮೇಲ್ನೋಟಕ್ಕಷ್ಟೇ ಹೇಳಲಾಗುತ್ತದೆ. ಆದರೆ, ಘಟನೆಗೆ ನಿಖರ ಕಾರಣವೇನು ಎಂಬುದನ್ನು ತಿಳಿಯಬೇಕಿದೆ. ಹೀಗಾಗಿ, ಸ್ಥಳಕ್ಕೆ ಭೇಟಿ ನೀಡಿ ಪುರಾವೆಗಳನ್ನು ಸಂಗ್ರಹಿಸಲಾಗಿದೆ. ವೈಜ್ಞಾನಿಕವಾಗಿ ತನಿಖೆ ಮಾಡಿ ವರದಿ ಸಲ್ಲಿಸಲಾಗುವುದು' ಎಂದೂ ಸಮಿತಿ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಡ್ರಗ್ಸ್: ಮ್ಯಾಶಿ ಬಂಧನ

ಬೆಂಗಳೂರು: ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಪಡೆದು ಬಚಾವಾಗಿದ್ದ ಆರೋಪಿ ಭಟ್ಕಳದ ಶರೀಫ್ ಹಸನ್ ಮಸೂರಿ ಅಲಿಯಾಸ್ ಮ್ಯಾಶಿಯನ್ನು, ಮತ್ತೊಂದು ಪ್ರಕರಣದಲ್ಲಿ ಸಿಸಿಬಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ಡ್ರಗ್ಸ್ ಪ್ರಕರಣದಲ್ಲಿ 19ನೇ ಆರೋಪಿ ಆಗಿದ್ದ ಮ್ಯಾಶಿ, ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ. ನಿರೀಕ್ಷಣಾ ಜಾಮೀನು ಪಡೆದು ಬಂಧನದಿಂದ ತಪ್ಪಿಸಿಕೊಂಡಿದ್ದ. ಆದರೆ, ಆತನ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಆರೋಪಿ ತಲೆಮರೆಸಿಕೊಂಡಿದ್ದ' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮಂಗಳವಾರ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ 14 ದಿನ ಆತನನ್ನು ಕಸ್ಟಡಿಗೆ ಪಡೆಯಲಾಗಿದೆ' ಎಂದೂ ಅಧಿಕಾರಿಯೊಬ್ಬರು ಹೇಳಿದರು.

'ಆರೋಪಿ ಆದಿತ್ಯ ಆಳ್ವ ಸ್ನೇಹಿತನಾಗಿದ್ದ ಮ್ಯಾಶಿ, 2016ರಿಂದಲೇ ಪಾರ್ಟಿಗಳಲ್ಲಿ ಡ್ರಗ್ಸ್ ಮಾರುತ್ತಿದ್ದ. ಶಿವಪ್ರಕಾಶ್, ರವಿಶಂಕರ್, ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ, ವೈಭವ್‌ಕುಮಾರ್ ಜೈನ್ ಹಾಗೂ ಇತರೆ ಆರೋಪಿಗಳ ಜೊತೆ ಒಡನಾಟವಿಟ್ಟುಕೊಂಡಿದ್ದ. ಅವರಿಗೆಲ್ಲ ಈತ ಡ್ರಗ್ಸ್ ಸರಬರಾಜು ಮಾಡಿದ್ದನೆಂಬುದು ತನಿಖೆಯಿಂದ ಗೊತ್ತಾಗಿತ್ತು' ಎಂದೂ ತಿಳಿಸಿದರು.



ಸಂಚಾರ ದಟ್ಟಣೆ ನಗರದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಹೆಬ್ಬಾಳ ಮೇಲ್ಸೇತುವೆ ಬಳಿ ಬುಧವಾರ ಸಂಚಾರ ದಟ್ಟಣೆ ಉಂಟಾಗಿತ್ತು – ಪ್ರಜಾವಾಣಿ ಚಿತ್ರ

ನಿಮ್ಹಾನ್ಸ್: ಸಿಬ್ಬಂದಿ ವಜಾ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಸಾರಿಗೆ ವ್ಯವಸ್ಥೆ ಕೇಳಿದ್ದಕ್ಕೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) 19 ಮಂದಿಯನ್ನು ಕೆಲಸದಿಂದ ವಜಾಗೊಳಿಸಿದೆ' ಎಂದು ನಿಮ್ಹಾನ್ಸ್ ಪ್ರಗತಿಪರ ವರ್ಕರ್ಸ್ ಯೂನಿಯನ್ (ಎನ್‌ಪಿಡಬ್ಲ್ಯುಯು) ಆರೋಪಿಸಿದೆ.

19 ಜನ ಕಾರ್ಮಿಕರಲ್ಲಿ 15 ಮಂದಿ ಮಹಿಳೆಯರು. ಇವರನ್ನು ಕಳೆದ ಜು.9ರಂದು ಕೆಲಸದಿಂದ ವಜಾಗೊಳಿಸಲಾಗಿದ್ದು, ಸಂಸ್ಥೆಯ ಆವರಣದಲ್ಲಿಯೇ ಅವರು ಪ್ರತಿಭಟನೆ ನಡೆಸುತ್ತಿದ್ದಾರೆ.

'ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರವು ರಾತ್ರಿ ಕರ್ಫ್ಯೂ ವಿಧಿಸಿದೆ. ಹೀಗಿರುವಾಗ ರಾತ್ರಿ 9.30ರವರೆಗೂ ಕೆಲಸ ಮಾಡಲು ಸೂಚಿಸಿದ ಆಡಳಿತ ಮಂಡಳಿ, ಸಾರಿಗೆ ವ್ಯವಸ್ಥೆ ಕಲ್ಪಿಸಲು ನಿರಾಕರಿಸಿದೆ. ಅವಾಚ್ಯ ಶಬ್ದಗಳಿಂದಲೂ ಕಾರ್ಮಿಕರನ್ನು ನಿಂದಿಸಲಾಗಿದೆ. ರಾಜ್ಯ ಸರ್ಕಾರವು 2019ರಲ್ಲಿ ಹೊರಡಿಸಿದ ಅಧಿಸೂಚನೆಯಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸಾರಿಗೆ ವ್ಯವಸ್ಥೆ ಒದಗಿಸುವ ಜೊತೆಗೆ ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕು ಎಂದು ತಿಳಿಸಲಾಗಿದೆ. ಆದರೆ, ವಿನಾಕಾರಣ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲಾಗಿದೆ' ಎಂದು ಯೂನಿಯನ್ ತಿಳಿಸಿದೆ.

'ವಜಾಗೊಂಡಿರುವ ಎಲ್ಲ ಕಾರ್ಮಿಕರು ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡವರು. ಶ್ರೀ ವಿನಾಯಕ ಎಂಟರ್‌ಪ್ರೈಸಸ್‌ಗೆ ಅವರು ಸೇರಿದ್ದು, ಸಂಸ್ಥೆಗೆ ಯಾವುದೇ ಸಂಬಂಧವಿಲ್ಲ' ಎಂದು ನಿಮ್ಹಾನ್ಸ್ ರಿಜಿಸ್ಟ್ರಾರ್ ಹೇಳಿದ್ದಾರೆ.

ಕೆಲಸಕ್ಕಿದ್ದ ಮನೆಯಲ್ಲಿ ಕಳವು; ಮಹಿಳೆ ಬಂಧನ

ಬೆಂಗಳೂರು: ಕೆಲಸಕ್ಕಿದ್ದ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮಹಿಳೆಯೊಬ್ಬರನ್ನು ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜೋಗಿಪಾಳ್ಯ ನಿವಾಸಿಯಾಗಿದ್ದ ಮಹಿಳೆ, ವೈದ್ಯರೊಬ್ಬರ ಮನೆಯಲ್ಲಿ ಕೆಲಸಕ್ಕಿದ್ದರು. ಅದೇ ಮನೆಯಲ್ಲೇ ಕಳ್ಳತನ ಮಾಡಿದ್ದರು ಎನ್ನಲಾಗಿದೆ. ವೈದ್ಯ ನೀಡಿದ್ದ ದೂರು ಆಧರಿಸಿ ಮಹಿಳೆಯನ್ನು ಬಂಧಿಸಲಾಗಿದೆ. ₹ 12 ಲಕ್ಷ ಮೌಲ್ಯದ ವಜ್ರ ಹಾಗೂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಮಹಿಳೆ, ಒಂದೊಂದೇ ಆಭರಣಗಳನ್ನು ಕದ್ದಿದ್ದರು. ಇತ್ತೀಚೆಗೆ ಮನೆ ಮಾಲೀಕರು ಆಭರಣಗಳ ಪರಿಶೀಲನೆ ನಡೆಸಿದ್ದಾಗ, ಕೃತ್ಯ ಗಮನಕ್ಕೆ ಬಂದಿತ್ತು. ಆಗಸ್ಟ್ 23ರಂದು ಠಾಣೆಗೆ ದೂರು ನೀಡಿದ್ದರು' ಎಂದೂ ತಿಳಿಸಿದರು.

ಮನಪರಿವರ್ತನೆಗೆ 'ನವಚೇತನ'



ಬೆಂಗಳೂರು: ಮಾದಕ ವಸ್ತು (ಡ್ರಗ್ಸ್) ಸಾಗಣೆ ಹಾಗೂ ಮಾರಾಟ ತಡೆಗೆ ಕಠಿಣ ಕ್ರಮ ಕೈಗೊಳ್ಳುತ್ತಿರುವ ಪಶ್ಚಿಮ ವಿಭಾಗದ ಪೊಲೀಸರು, ಮಾದಕ ವ್ಯಸನಿಗಳ ಮನಪರಿವರ್ತನೆಗಾಗಿ 'ನವಚೇತನ' ಎಂಬ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ. ಮಾದಕ ವ್ಯಸನಕ್ಕೆ ಒಳಗಾಗಿ ಮಾನಸಿಕ ಕಾಯಿಲೆಗೆ ತುತ್ತಾಗುತ್ತಿರುವ ಯುವಕರನ್ನು ಗುರುತಿಸಿರುವ ಪೊಲೀಸರು, ಅವರೆಲ್ಲರಿಗೆ ಮನೋವೈದ್ಯರಿಂದ ಪಾಠ ಮಾಡಿಸುತ್ತಿದ್ದಾರೆ. ವಾರಕ್ಕೊಮ್ಮೆ ವೈದ್ಯಕೀಯ ತಪಾಸಣೆ ನಡೆಸಿ, ಯುವಕರ ವರ್ತನೆಗಳ ಮೇಲೆ ಕಣ್ಣಿಡುತ್ತಿದ್ದಾರೆ.

ಬ್ಯಾಡರಹಳ್ಳಿ ಠಾಣೆಯಲ್ಲಿ ಸೋಮವಾರ ಮೊದಲ ಬಾರಿಗೆ ಆಯೋಜಿಸಿದ್ದ 'ನವಚೇತನ' ಕಾರ್ಯಕ್ರಮದಲ್ಲಿ 83 ಯುವಕರು ಪಾಲ್ಗೊಂಡಿದ್ದರು. ಡ್ರಗ್ಸ್‌ನಿಂದ ಆರೋಗ್ಯ ಮೇಲಾಗುವ ಪರಿಣಾಮಗಳೇನು ? ಡ್ರಗ್ಸ್ ವ್ಯಸನದಿಂದ ಹೊರಬರುವುದು ಹೇಗೆ? ಉತ್ತಮ ಆರೋಗ್ಯ ಹೊಂದುವುದು ಹೇಗೆ? ಎಂಬ ವಿಷಯಗಳ ಬಗ್ಗೆ ಮನೋವೈದ್ಯರಾದ ಡಾ. ಜಿ.ಎನ್. ದಿವ್ಯಾ, ಡಾ. ವಿಕ್ರಮ್ ಅರುಣಾಚಲಂ, ಐ.ಕೆ. ಸಚಿನ್ ಹಾಗೂ ಕೆ. ರಾಘವ್ ಮಾತನಾಡಿದರು. ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾನಸಿಕ ಆರೋಗ್ಯ ವಿಭಾಗದ ಉಪನಿರ್ದೇಶಕರಾದ ಡಾ. ರಜನಿ, ಬಿಬಿಎಂಪಿ ಆರೋಗ್ಯ ಅಧಿಕಾರಿ ಡಾ. ಮನೋರಂಜನ್ ಹೆಗ್ಡೆ ಭಾಗವಹಿಸಿದ್ದರು.

ನಗರದ 111ನೇ ಕಾನೂನು ಸುವ್ಯವಸ್ಥೆ ಠಾಣೆ

ಹೊಸ ಪೊಲೀಸ್ ಠಾಣೆ 'ಗೋವಿಂದರಾಜನಗರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಪೊಲೀಸ್ ಠಾಣೆಗಳ ಪಟ್ಟಿಗೆ 'ಗೋವಿಂದರಾಜನಗರ' ಠಾಣೆ ಸೇರ್ಪಡೆಗೊಂಡಿದೆ. ಹೊಸ ಠಾಣೆ ಆರಂಭಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿದ್ದು, ಇದೇ 12ರಂದು ಠಾಣೆಯ ಕಟ್ಟಡ ಉದ್ಘಾಟನೆ ಆಗಲಿದೆ. ಇದು ನಗರದ 111ನೇ ಕಾನೂನು ಸುವ್ಯವಸ್ಥೆ ಪೊಲೀಸ್ ಠಾಣೆ.

ಪಶ್ಚಿಮ ವಿಭಾಗದ ವಿಜಯನಗರ ಠಾಣೆ ವ್ಯಾಪ್ತಿಯಲ್ಲಿದ್ದ ಗೋವಿಂದರಾಜನಗರಕ್ಕೆ ಪ್ರತ್ಯೇಕ ಠಾಣೆ ಅಗತ್ಯವಿರುವುದಾಗಿ ವಸತಿ ಸಚಿವ ವಿ. ಸೋಮಣ್ಣ ಮನವಿ ಸಲ್ಲಿಸಿದ್ದರು. ಅದನ್ನು ಪರಿಗಣಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು ಸರ್ಕಾರಕ್ಕೆ ಇತ್ತೀಚೆಗೆ ಪ್ರಸ್ತಾವ ಸಲ್ಲಿಸಿದರು. ಇದನ್ನು ಪರಿಶೀಲಿಸಿರುವ ಸರ್ಕಾರ, ಹೊಸ ಠಾಣೆ ತೆರೆಯಲು ಅನುಮತಿ ನೀಡಿ ಮಂಗಳವಾರ ಆದೇಶ ಹೊರಡಿಸಿದೆ.

ವಿಜಯನಗರ ಠಾಣೆಯಲ್ಲಿ ದಾಖಲಾದ ಪ್ರಕರಣ ವಿವರ

ವರ್ಷ	ಪ್ರಕರಣಗಳ ಸಂಖ್ಯೆ
2015	721
2016	691
2017	722
2018	668
2019	409
2020	298
2021 (ಫೆಬ್ರುವರಿ)	55

'ಗೋವಿಂದರಾಜನಗರ ಕ್ಷೇತ್ರದ ಸರಸ್ವತಿನಗರದಲ್ಲಿರುವ ಬಿಬಿಎಂಪಿ ಹೊಸ ಕಟ್ಟಡದಲ್ಲಿ ಠಾಣೆ ಆರಂಭವಾಗಲಿದೆ. ಮುಖ್ಯಮಂತ್ರಿ ಬೊಮ್ಮಾಯಿ ಅಥವಾ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಕಟ್ಟಡ ಉದ್ಘಾಟಿಸುವ ಸಾಧ್ಯತೆ ಇದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ನಗರದ ಠಾಣೆಗಳ ವಿವರ

- 166 ನಗರದಲ್ಲಿರುವ ಒಟ್ಟು ಠಾಣೆಗಳು
- 44 ಸಂಚಾರ ಠಾಣೆಗಳು
- 8 ಸೆನ್ ಠಾಣೆಗಳು
- 1 ಸೈಬರ್ ಮುಖ್ಯ ಠಾಣೆ
- 2 ಮಹಿಳಾ ಠಾಣೆಗಳು

₹ 5.58 ಕೋಟಿ ಅಂದಾಜು ವೆಚ್ಚ: 'ವಿಜಯನಗರ ಠಾಣೆಯನ್ನು ವಿಭಜಿಸಿ ಗೋವಿಂದರಾಜನಗರ ಠಾಣೆ ತೆರೆದು ಕಾರ್ಯನಿರ್ವಹಿಸಲು ವಾರ್ಷಿಕ ₹ 5.58 ಕೋಟಿ ವೆಚ್ಚ ಆಗಲಿದೆ' ಎಂದು ಪ್ರವೀಣ್ ಸೂದ್ ಪ್ರಸ್ತಾವದಲ್ಲಿ ತಿಳಿಸಿದ್ದರು.

'ವಿಜಯನಗರ ಠಾಣೆಯು 7 ಕಿ.ಮೀ ಸುತ್ತಳತೆ ಪ್ರದೇಶಗಳ ವ್ಯಾಪ್ತಿ ಹೊಂದಿದೆ. ವಿಜಯನಗರ, ಹೊಸಹಳ್ಳಿ, ಹಂಪಿನಗರ, ಅತ್ತಿಗುಪ್ಪೆ, ಕಾವೇರಿಪುರ, ಗೋವಿಂದರಾಜನಗರ, ಅಗ್ರಹಾರ ದಾಸರಹಳ್ಳಿ, ಮಾರೇನಹಳ್ಳಿ, ಮಾರುತಿ ಮಂದಿರ ಹಾಗೂ ಮೂಡಲಪಾಳ್ಯ ಪ್ರದೇಶಗಳು ಈ ಠಾಣೆ ವ್ಯಾಪ್ತಿಯಲ್ಲಿವೆ. ಸರ ಕಳವು, ಸುಲಿಗೆ, ಮನೆಗಳಲ್ಲಿ ಕಳ್ಳತನ, ವಾಹನ ಕಳವು ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ'.

'ಠಾಣೆ ರೌಡಿ ಪಟ್ಟಿಯಲ್ಲಿ 93 ಮಂದಿ ಹೆಸರಿದೆ. ಕಾವೇರಿ ನದಿ ನೀರು ಹಂಚಿಕೆ ವಿಚಾರವಾಗಿ ಪಟ್ಟೆಗಾರಪಾಳ್ಯದಲ್ಲಿ ಹೆಚ್ಚು ಗಲಾಟೆ ಆಗಿತ್ತು. ಈ ಎಲ್ಲ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ವಿಜಯನಗರ ಠಾಣೆ ವಿಭಜಿಸಿ ಗೋವಿಂದರಾಜನಗರ ಹೊಸ ಠಾಣೆ ತೆರೆಯುವ ಅಗತ್ಯವಿದೆ. ಇದಕ್ಕೆ ಅನುಮತಿ ನೀಡಿ, ಇನ್‌ಸ್ಪೆಕ್ಟರ್, 8 ಪಿಎಸ್‌ಐ, 15 ಎಎಸ್‌ಐ, 30 ಹೆಡ್ ಕಾನ್‌ಸ್ಟೆಬಲ್, 60 ಕಾನ್‌ಸ್ಟೆಬಲ್ ಹುದ್ದೆಗಳನ್ನು ಮಂಜೂರು ಮಾಡಬೇಕು' ಎಂದೂ ಪ್ರಸ್ತಾವದಲ್ಲಿ ಕೋರಿದ್ದರು.

'ಮೂತ್ರ ನೆಕ್ಕಿಸಿದ್ದ' ಪಿಎಸ್‌ಐ ಅರ್ಜುನ್ ಬಂಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪರಿಶಿಷ್ಟ ಸಮುದಾಯದ ಯುವಕರೊಬ್ಬರಿಗೆ ಮೂತ್ರ ನೆಕ್ಕಿಸಿದ್ದ ಪ್ರಕರಣದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಗೋಣಿಬೀಡು ಠಾಣೆ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಅರ್ಜುನ್ ಅವರನ್ನು ಸಿಐಡಿ ಪೊಲೀಸರು ಬೆಂಗಳೂರಿನಲ್ಲಿ ಬುಧವಾರ ರಾತ್ರಿ ಬಂಧಿಸಿದ್ದಾರೆ.

'ಮಹಿಳೆಗೆ ಕರೆ ಮಾಡಿದ್ದ ವಿಚಾರಕ್ಕಾಗಿ ಅರ್ಜುನ್, ನನ್ನನ್ನು ಠಾಣೆಗೆ ಕರೆದೊಯ್ದು ಥಳಿಸಿದ್ದರು. ಕುಡಿಯಲು ನೀರು ಕೇಳಿದಾಗ, ವ್ಯಕ್ತಿಯೊಬ್ಬರಿಂದ ನನ್ನ ಬಾಯಿಗೆ ಮೂತ್ರ ಹೊಯ್ಯಿಸಿದ್ದರು. ನೆಲದ ಮೇಲೆ ಬಿದ್ದಿದ್ದ ಮೂತ್ರವನ್ನೂ ನೆಕ್ಕಿಸಿದ್ದರು' ಎಂದು ಆರೋಪಿಸಿ ಮೂಡಿಗೆರೆ ತಾಲ್ಲೂಕಿನ ಕಿರಗುಂದದ ಯುವಕ ಕೆ.ಎಲ್. ಪುನೀತ್, ಗೋಣಿಬೀಡು ಠಾಣೆಗೆ ದೂರು ನೀಡಿದ್ದರು. ಅರ್ಜುನ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. ಡಿಜಿಪಿ ಬಿ.ಎಸ್. ಸಂಧು ಮಾರ್ಗದರ್ಶನದಲ್ಲಿ ತನಿಖೆ ಆರಂಭಿಸಿದ್ದ ಎಸ್ಪಿ ರವಿ ಚನ್ನಣ್ಣನವರ ನೇತೃತ್ವದ ತಂಡ, ಆರೋಪಿಯನ್ನು ಬಂಧಿಸಿದೆ.

ಮೇ 10 ರಂದು ಈ ಪ್ರಕರಣ ನಡೆದಿದ್ದು, ಪಿಎಸ್‌ಐ ವಿರುದ್ಧ ಮೇ 22ರಂದು ದೂರು ದಾಖಲಾಗಿತ್ತು. ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಅರ್ಜುನ್, ನಿರೀಕ್ಷಣಾ ಜಾಮೀನು ಕೋರಿ ಚಿಕ್ಕಮಗಳೂರಿನ ಒಂದನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ನ್ಯಾಯಾಧೀಶ ಕೆ.ಎಲ್. ಅಶೋಕ್ ವಜಾಗೊಳಿಸಿದ್ದರು.



ಪೀಣ್ಯ ದಾಸರಹಳ್ಳಿ ಸಮೀಪದ ಪ್ರಶಾಂತನಗರದಲ್ಲಿ ಕೇರಳ ಸಮಾಜಂ ಬೆಂಗಳೂರು ನಾರ್ತ್ ವೆಸ್ಟ್ ವತಿಯಿಂದ ಸಾರ್ವಜನಿಕರಿಗೆ ಸಾವಿರ ಲಸಿಕೆಗಳನ್ನು ಹಾಕಲಾಯಿತು. ಸಂಘದ ಅಧ್ಯಕ್ಷ ಗೋಪಾಲಕೃಷ್ಣ, ಕಾರ್ಯದರ್ಶಿ ಚಿತ್ತರಂಜನ್, ಖಜಾಂಚಿ ಸುಖದ ಕುಮಾರ್ ನಾಯರ್, ಪದಾಧಿಕಾರಿಗಳಾದ ಬಾಲಚಂದ್ರನ್, ರಾಮಚಂದ್ರನ್, ಸುಕೇಶ್, ಹರಿಕೃಷ್ಣ, ರಾಕೇಶ್ ಇದ್ದರು.

ಚಾಕು ಹಿಡಿದು ಹಗಲಿನಲ್ಲೇ ಸುಲಿಗೆ

ಬೆಂಗಳೂರು: ಯುವಕನೊಬ್ಬ ಚಾಕು ಹಿಡಿದುಕೊಂಡು ಹಗಲಿನಲ್ಲೇ ಸುಲಿಗೆಗೆ ಯತ್ನಿಸಿರುವ ಘಟನೆ ರಿಚ್ಮಂಡ್ ವೃತ್ತದಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ.


ಆರೋಪಿ ಯುವಕನ ಕೃತ್ಯವನ್ನು ಸ್ಥಳೀಯರೊಬ್ಬರು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿಬಿಟ್ಟಿದ್ದಾರೆ. ತನ್ನನ್ನು ಹಿಡಿಯಲು ಬಂದ ಸಾರ್ವಜನಿಕರಿಗೂ ಚಾಕು ತೋರಿಸಿ ಬೆದರಿಸಿ ಆರೋಪಿ ಪರಾರಿಯಾಗಿದ್ದಾನೆ.

ರಸ್ತೆಯಲ್ಲಿ ಹೊರಟಿದ್ದ ಕಾರು ಅಡ್ಡಗಟ್ಟಿದ್ದ ಆರೋಪಿ, ಚಾಕು ತೋರಿಸಿ ಮೊಬೈಲ್ ಹಾಗೂ ಹಣ ಕಿತ್ತುಕೊಳ್ಳಲು ಯತ್ನಿಸಿದ್ದ. ಗಾಬರಿಗೊಂಡ ಚಾಲಕ, ಸಹಾಯಕ್ಕಾಗಿ ಕೂಗಾಡಿದ್ದರು. ಸ್ಥಳದಲ್ಲಿದ್ದ ಕೆಲವರು, ಯುವಕನನ್ನು ಹಿಡಿಯಲು ಮುಂದಾಗಿದ್ದರು. ಆದರೆ, ಯುವಕ ತಪ್ಪಿಸಿಕೊಂಡು ಓಡಲಾರಂಭಿಸಿದ್ದ. ಈ ದೃಶ್ಯ ವಿಡಿಯೊದಲ್ಲಿದೆ.

ಐದಾರು ಮಂದಿ ಬೆನ್ನಟ್ಟಿ ಯುವಕನನ್ನು ಹಿಡಿದು ಚಾಕು ಕಸಿದುಕೊಳ್ಳಲು ಮುಂದಾಗಿದ್ದರು. ಆತನನ್ನು ಥಳಿಸಿದ್ದರು. ಎಲ್ಲರನ್ನೂ ತಳ್ಳಿದ್ದ ಯುವಕ, ವಾಹನಗಳ ಮಧ್ಯೆ ನುಸುಳಿಕೊಂಡು ಪರಾರಿಯಾಗಿದ್ದಾನೆ.

ಕಾಶ್ಮೀರ ಪ್ರತ್ಯೇಕತಾವಾದಿ ನಾಯಕ ಗಿಲಾನಿ ನಿಧನ

ಪ್ರಜಾವಾಣಿ ವಾರ್ತೆ



ಸೈಯದ್ ಅಲಿ ಗಿಲಾನಿ

ಶ್ರೀನಗರ: ಕೆಲ ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಕಾಶ್ಮೀರ ಪ್ರತ್ಯೇಕತಾವಾದಿ ನಾಯಕ ಸೈಯದ್ ಅಲಿ ಗಿಲಾನಿ (91) ಬುಧವಾರ ರಾತ್ರಿ ಶ್ರೀನಗರದ ತಮ್ಮ ನಿವಾಸದಲ್ಲಿ ನಿಧನರಾದರು.

ಗಿಲಾನಿ ಅವರ ನಿಧನವನ್ನು ಅವರ ಕುಟುಂಬದವರು ದೃಢಪಡಿಸಿದ್ದಾರೆ. 2013ರಿಂದ ಹೆಚ್ಚಾಗಿ ಗೃಹಬಂಧನದಲ್ಲಿಯೇ ಇದ್ದ ಅವರ ಆರೋಗ್ಯ ಮೂರು ವರ್ಷಗಳಿಂದ ಹದಗೆಟ್ಟಿತ್ತು.

ಹಲವು ಬಾರಿ ಅವರ ಆರೋಗ್ಯದ ಬಗ್ಗೆ ವದಂತಿಗಳು ಹಬ್ಬಿ, ಕಣಿವೆಯಲ್ಲಿ ಅಶಾಂತಿಯ ವಾತಾವರಣ ನಿರ್ಮಾಣವಾಗಿತ್ತು. ಹೀಗಾಗಿ ಕುಟುಂಬದ ಸದಸ್ಯರನ್ನು ಹೊರತುಪಡಿಸಿ ಉಳಿದವರು ಅವರನ್ನು ಭೇಟಿ ಮಾಡುವುದಕ್ಕೆ ಅವಕಾಶ ನೀಡುತ್ತಿರಲಿಲ್ಲ.

ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರು ಗಿಲಾನಿ ನಿಧನಕ್ಕೆ ಟ್ವೀಟ್ ಮೂಲಕ ಕಂಬನಿ ಮಿಡಿದಿದ್ದಾರೆ.

ವೈವಾಹಿಕ ಜಾಲತಾಣದಲ್ಲಿ ಮಹಿಳೆಯರ ಪರಿಚಯ ● ಚಿನ್ನ, ನಗದು ಪಡೆದು ಪರಾರಿ

ಪೊಲೀಸರ ಬಲೆಗೆ ಬಿದ್ದ 'ಆನ್‌ಲೈನ್ ವರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈವಾಹಿಕ ಜಾಲತಾಣದಲ್ಲಿ ಮಹಿಳೆಯರನ್ನು ಪರಿಚಯಿಸಿಕೊಂಡು ಮದುವೆ ನೆಪದಲ್ಲಿ ಚಿನ್ನಾಭರಣ ಹಾಗೂ ನಗದು ಪಡೆದು ವಂಚಿಸುತ್ತಿದ್ದ ಆರೋಪದಡಿ ಜಗನ್ನಾಥ್ ಸಜ್ಜನರ್ (32) ಎಂಬಾತನನ್ನು ಹೆಣ್ಣೂರು ಪೊಲೀಸರು ಬಂಧಿಸಿದ್ದಾರೆ.

'ವಿಜಯಪುರ ಜಿಲ್ಲೆಯ ಜಗನ್ನಾಥ್, ಬಿ.ಎ ಪದವೀಧರ. ಎಲ್ಲಿಯೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಹಲವರ ಜೊತೆ ದುರ್ವರ್ತನೆ ತೋರುತ್ತಿದ್ದ. ಹೀಗಾಗಿ, ಕುಟುಂಬದವರು ಆತನನ್ನು ಮನೆಯಿಂದ ಹೊರಗೆ ಹಾಕಿದ್ದರು. ಬೆಂಗಳೂರಿಗೆ ಬಂದಿದ್ದ ಆತ, ಉಲ್ಲಾಳದಲ್ಲಿ ನೆಲೆಸಿದ್ದ. ಮಹಿಳೆಯರನ್ನು ವಂಚಿಸಿ ಹಣ ಸಂಪಾದನೆ ಮಾಡುತ್ತಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಜಪ್ತಿ ಮಾಡಲಾದ ಚಿನ್ನಾಭರಣ, ನಗದು ಜೊತೆ ಆರೋಪಿ ಜಗನ್ನಾಥ್

'ಆರೋಪಿಯಿಂದ ವಂಚನೆಗೀಡಾಗಿದ್ದ ಬಾಗಲೂರು ಮಹಿಳೆಯೊಬ್ಬರು ಇತ್ತೀಚೆಗೆ ದೂರು ನೀಡಿದ್ದರು. ಅದರ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ. ಆತನಿಂದ 116 ಗ್ರಾಂ ಚಿನ್ನಾಭರಣ, ₹ 1.60 ಲಕ್ಷ ನಗದು, 5 ಮೊಬೈಲ್ ಹಾಗೂ 20 ಸಿಮ್‌ಕಾರ್ಡ್ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು. 'ಮ್ಯಾಟ್ರಿಮೋನಿಯಲ್ ಡಾಟ್ ಕಾಮ್ ಸೇರಿದಂತೆ ಹಲವು ಜಾಲತಾಣಗಳಲ್ಲಿ ಆರೋಪಿ ಖಾತೆ ತೆರೆದಿದ್ದ. ಅಸಲಿ ಹೆಸರು ಬಚ್ಚಿಡುತ್ತಿದ್ದ ಆರೋಪಿ, ತನ್ನ ಹೆಸರು ರಮೇಶ್ ಹಾಗೂ ವಿಜಯ್ ಎಂಬುದಾಗಿ ಸುಳ್ಳು ಹೇಳುತ್ತಿದ್ದ. ವರನನ್ನು ಹುಡುಕಲು ಜಾಲತಾಣದಲ್ಲಿ ಖಾತೆ ತೆರೆಯುತ್ತಿದ್ದ 30 ವರ್ಷ ಮೇಲ್ಪಟ್ಟ ಮಹಿಳೆಯರು ಹಾಗೂ ವಿಚ್ಛೇದಿತ ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಪರಿಚಯ ಮಾಡಿಕೊಳ್ಳುತ್ತಿದ್ದ.'

'ಮದುವೆ ಮಾಡಿಕೊಳ್ಳುವುದಾಗಿ ಮಹಿಳೆಯರಿಗೆ ಭರವಸೆ ನೀಡುತ್ತಿದ್ದ ಆರೋಪಿ, ಸಲುಗೆ ಬೆಳೆಸಿಕೊಳ್ಳುತ್ತಿದ್ದ. ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಿದ್ದು, ಅದಕ್ಕಾಗಿ ಹಣ ಬೇಕಿರುವುದಾಗಿ ಹೇಳುತ್ತಿದ್ದ. ತಮ್ಮನ್ನು ಮದುವೆಯಾಗುತ್ತಾರೆಂದು ನಂಬುತ್ತಿದ್ದ ಮಹಿಳೆಯರು, ಆರೋಪಿಗೆ ನಗದು ಹಾಗೂ ಚಿನ್ನಾಭರಣ ಕೊಡುತ್ತಿದ್ದರು. ಅದನ್ನು ಪಡೆದು ಆರೋಪಿ ಪರಾರಿಯಾಗುತ್ತಿದ್ದ. ಮೊಬೈಲ್ ಸ್ವಿಚ್ ಆಫ್ ಮಾಡುತ್ತಿದ್ದ' ಎಂದೂ ವಿವರಿಸಿದರು.

'ಆರೋಪಿ ಇದುವರೆಗೂ 8 ಮಹಿಳೆಯರನ್ನು ವಂಚಿಸಿರುವ ಮಾಹಿತಿ ಇದೆ. ಒಬ್ಬ ಮಹಿಳೆ ಮಾತ್ರ ದೂರು ನೀಡಿದ್ದಾರೆ. ಯಾರಾದರೂ ವಂಚನೆಗೀಡಾಗಿದ್ದರೆ, ಠಾಣೆಗೆ ಮಾಹಿತಿ ನೀಡಬೇಕು' ಎಂದೂ ಅಧಿಕಾರಿ ಕೋರಿದರು.

ಜೈಲಿಗೂ ಹೋಗಿ ಬಂದಿದ್ದ: 'ಬೈಕ್ ಕಳ್ಳತನ ಪ್ರಕರಣದಲ್ಲಿ ಆರೋಪಿ ಜಗನ್ನಾಥ್‌ನನ್ನು ಬನಶಂಕರಿ ಪೊಲೀಸರು ಕಳೆದ ವರ್ಷ ಬಂಧಿಸಿದ್ದರು. ಜೈಲಿಗೂ ಹೋಗಿದ್ದ ಆರೋಪಿ, ಜಾಮೀನು ಮೇಲೆ ಹೊರಬಂದು ಮಹಿಳೆಯರನ್ನು ವಂಚಿಸಲಾರಂಭಿಸಿದ್ದ' ಎಂದೂ ಅಧಿಕಾರಿ ತಿಳಿಸಿದರು.

'ಅಡವಿಟ್ಟಿದ್ದ ಚಿನ್ನಾಭರಣ'

'ದೂರುದಾರ ಮಹಿಳೆಯನ್ನು ಮದುವೆಯಾಗುವುದಾಗಿ ಹೇಳಿದ್ದ ಆರೋಪಿ, ಅವರಿಂದ ₹ 4.40 ಲಕ್ಷ ನಗದು ಹಾಗೂ ಚಿನ್ನಾಭರಣ ಪಡೆದು ಪರಾರಿಯಾಗಿದ್ದ. ಅದೇ ಚಿನ್ನಾಭರಣವನ್ನು ಫೈನಾನ್ಸ್ ಕಂಪನಿಯೊಂದರಲ್ಲಿ ಅಡವಿಟ್ಟು ಹಣ ಪಡೆದುಕೊಂಡಿದ್ದ. ಆರೋಪಿ ಬಂಧಿಸುತ್ತಿದ್ದಂತೆ ಕಂಪನಿಗೆ ಹೋಗಿ ಆಭರಣ ಜಪ್ತಿ ಮಾಡಲಾಯಿತು' ಎಂದೂ ಅಧಿಕಾರಿ ಹೇಳಿದರು.

ಕಣ್ಣಿನ ಆಸ್ಪತ್ರೆ ಕಟ್ಟಡ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೊಸಿಸ್ ಫೌಂಡೇಷನ್ ಪ್ರಾಯೋಜಕತ್ವದಲ್ಲಿ ಪಾವಗಡದಲ್ಲಿ ನಿರ್ಮಾಣ ಆಗಿರುವ ಶಾರದಾ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನೂತನ ಸಂಕೀರ್ಣದ ಉದ್ಘಾಟನೆ ಸೆ.4ರಂದು ನಡೆಯಲಿದೆ.

ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರು ವೆಬಿನಾರ್ ಮೂಲಕ ಉದ್ಘಾಟನೆ ಮಾಡಲಿದ್ದಾರೆ. ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಎ.ನಾರಾಯಣಸ್ವಾಮಿ, ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಆರೋಗ್ಯ ಸಚಿವ ಕೆ. ಸುಧಾಕರ, ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಸಂಸದ ಡಿ.ಕೆ. ಸುರೇಶ್ ಭಾಗವಹಿಸಲಿದ್ದಾರೆ ಎಂದು ಶಾರದಾದೇವಿ ಕಣ್ಣಿನ ಆಸ್ಪತ್ರೆಯ ರಜತ ಮಹೋತ್ಸವ ಸಮಿತಿ ತಿಳಿಸಿದೆ.

ತೈಲಗೆರೆ ಗ್ರಾಮದ ಬಳಿ ಅನ್ನದಾತರು, ಗಣಿ ಕಾರ್ಮಿಕರ ನಡುವೆ ಜಟಾಪಟಿ

ಗಣಿ ಮಾಲೀಕರಿಗೆ ರೈತರ ದಿಗ್ಬಂಧನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ತೈಲಗೆರೆ ಗ್ರಾಮದ ಸರ್ವೆ ನಂ. 110ರಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸವಾಗಿರುವ ಜನರ ನೆಮ್ಮದಿಗೆ ಭಂಗವಾಗುತ್ತಿದೆ. ಮನೆಗಳು ಬಿರುಕು ಬಿಟ್ಟಿದ್ದು, ರಸ್ತೆಗಳು ಹಾಳಾಗಿವೆ. ಬೆಳೆ ನಾಶವಾಗಿದೆ ಎಂದು ಆರೋಪಿಸಿ ರೈತರು ಬುಧವಾರ ಪ್ರತಿಭಟನೆ ನಡೆಸಿದರು.

ಗಣಿಗಾರಿಕೆ ಪ್ರದೇಶಕ್ಕೆ ಭೇಟಿ ನೀಡಿದ್ದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳ ಮುಂದೆ ರೈತರು ಹಾಗೂ ಗ್ರಾಮಸ್ಥರು ಸಮಸ್ಯೆ ತೋಡಿಕೊಂಡರು. ಈ ನಡುವೆ ರೈತರು ಮತ್ತು ಗಣಿ ಕಾರ್ಮಿಕರ ನಡುವೆ ಮಾತಿನ ಚಕಮಕಿ ನಡೆಯಿತು. ಆಕ್ರೋಶಗೊಂಡ ರೈತರು ಗಣಿ ಮಾಲೀಕರಿಗೆ ಸ್ಥಳದಲ್ಲಿಯೇ ದಿಗ್ಬಂಧನ ವಿಧಿಸಿದರು. ಕೊನೆಗೆ, ಪೊಲೀಸರು ರೈತರನ್ನು ಸಮಾಧಾನಪಡಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ಇತ್ತೀಚೆಗೆ ನಂದಿಬೆಟ್ಟದಲ್ಲಿ ಭೂ ಕುಸಿತವಾಗಿದೆ. ತೈಲಗೆರೆಗೂ ಅದು ಪರಿಣಾಮ ಬೀರುತ್ತಿದೆ. ಕಲ್ಲು ಗಣಿಗಾರಿಕೆ ನಡೆಸುವುದರಿಂದ ಬೆಳೆಗಳಿಗೆ ಹಾನಿಯಾಗುತ್ತಿದೆ ಎಂದು ರೈತರು ದೂರಿದರು.



ರೈತರು ಮತ್ತು ಗಣಿ ಕಾರ್ಮಿಕರ ನಡುವೆ ಮಾತಿನ ಚಕಮಕಿ ನಡೆಯಿತು

'ಪ್ರತಿವರ್ಷ ಬೆಳೆಗಳು ಹಾಳಾಗಿವೆ ಎಂದು ರೈತರು ಪರಿಹಾರ ಪಡೆಯುತ್ತಿದ್ದಾರೆ. ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿಗೆ ಹಣ ಕೊಡುತ್ತಾರೆ. ದೇವಾಲಯಗಳ ಅಭಿವೃದ್ಧಿಗಾಗಿ ಸಹಕಾರ ನೀಡುತ್ತಾರೆ. ಈಗ ಬಂದು ನಮಗೆ ಏನೂ ನೀಡಿಲ್ಲ ಎಂದು ರೈತರು ಸುಳ್ಳು ಹೇಳುತ್ತಿದ್ದಾರೆ' ಎಂದು ಗಣಿ ಕಾರ್ಮಿಕರು ವಾದಿಸಿದರು.

ಗಣಿಗಾರಿಕೆ ನಿಲ್ಲಿಸಿ ನಮ್ಮ ಹೊಟ್ಟೆಯ ಮೇಲೆ ಯಾಕೆ ಹೊಡೆಯುತ್ತೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಗ ಅಧಿಕಾರಿಗಳ ಎದುರಿನಲ್ಲೇ ರೈತರು ಹಾಗೂ ಗಣಿ ಕಾರ್ಮಿಕರ ನಡುವೆ ಮಾತಿನ ಚಕಮಕಿ ನಡೆಯಿತು. ಪರಿಸ್ಥಿತಿಯು ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಯಿತು. ಕೊನೆಗೆ ಪೊಲೀಸರು ಮಧ್ಯಪ್ರವೇಶಿಸಿದರು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪ ನಿರ್ದೇಶಕಿ ಡಾ.ಲಕ್ಷ್ಮಮ್ಮ ಮಾತನಾಡಿ, 'ನಾವು ನೆಪಮಾತ್ರಕ್ಕೆ ಬಂದಿಲ್ಲ. ಗಣಿ ಇಲಾಖೆ ಸಚಿವರು ಹಾಗೂ ಕಾರ್ಯದರ್ಶಿ ಅವರ ಆದೇಶದ ಮೇರೆಗೆ ಭೇಟಿ ನೀಡಿದ್ದೇವೆ. ಇಲ್ಲಿನ ಸಾಧಕ, ಬಾಧಕ ಕುರಿತು ವರದಿ ಸಲ್ಲಿಸಬೇಕಾಗಿದೆ' ಎಂದು ತಿಳಿಸಿದರು.

ರಾಜ್ಯ ಕಲ್ಲು ಗಣಿಗಾರಿಕೆ ಮತ್ತು ಕಲ್ಲಿನ ಕ್ರಷರ್‌ಗಳ ಮಾಲೀಕರ ಅಸೋಸಿಯೇಷನ್ ಕಾರ್ಯದರ್ಶಿ ಕಿರಣ್ ಜೈ ಮಾತನಾಡಿ, 'ನಾವು ನಿಯಮಗಳನ್ನು ಮೀರಿ ಗಣಿಗಾರಿಕೆ ಮಾಡುತ್ತಿಲ್ಲ. ಪ್ರತಿ ಟನ್‌ಗೂ ಹಣ ಕೊಡುತ್ತೇವೆ. ನಿಗದಿತ ಪ್ರಮಾಣದಲ್ಲಿ ನುರಿತ ಕೆಲಸಗಾರರಿಂದ ಸ್ಫೋಟಕ ಬಳಕೆ ಮಾಡುತ್ತಿದ್ದೇವೆ' ಎಂದರು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಜಿಲ್ಲಾ ಉಪ ನಿರ್ದೇಶಕಿ ರೇಣುಕಾ, ಭೂ ವಿಜ್ಞಾನಿ ವಿಕ್ರಂ, ಮೂರ್ತಿ, ಎಇಇ ರಾಜಶೇಖರ್ ಹಾಜರಿದ್ದರು.

'ಜನರು ಬಯಸಿದರೆ ಮೂರನೇ ಪೀಠ'

ಜಮಖಂಡಿ (ಬಾಗಲಕೋಟೆ): ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಪಡೆಯಲು ಸೆ. 5ರ ನಂತರ ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಭೇಟಿಯಾಗಲು ಸಮಾಜದ ಮಠಾಧೀಶರ ಒಕ್ಕೂಟ ಹಾಗೂ ಮುಖಂಡರು ನಿರ್ಧರಿಸಿದ್ದಾರೆ.

'ಮೀಸಲಾತಿ ಪರ ಹೋರಾಟದ ವಿಚಾರದಲ್ಲಿ ಚರ್ಚೆಗೆ ಕೂಡಲಸಂಗಮ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನಮ್ಮನ್ನು ಕರೆದಿಲ್ಲ. ನಾವೂ ಅವರನ್ನು ಕರೆದಿಲ್ಲ. ಹರಿಹರ ಪೀಠಕ್ಕೂ ನಾನು ಹೋಗಿದ್ದೆ ಅವರು ಈ ವಿಷಯದ ಬಗ್ಗೆ ಮಾತನಾಡಿಲ್ಲ' ಎಂದು ಮನಗೂಳಿ ಸಂಗನಬಸವ ಮಹಾಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ಹೇಳಿದರು. 'ಅವರು ಬಂದರೂ ಒಕ್ಕೂಟಕ್ಕೆ ಸೇರಿಸಿಕೊಳ್ಳುತ್ತೇವೆ. ಜನರು ಒತ್ತಾಯಿಸಿದರೆ ಮೂರನೇ ಪೀಠ ಆದರೂ ಆಗಬಹುದು. ನಾನು ಪೀಠಾಧಿಪತಿಯಾಗಲು ಬಯಸುವುದಿಲ್ಲ.' ಎಂದು ಸ್ಪಷ್ಟಪಡಿಸಿದರು.

ವರದಿ ಸಲ್ಲಿಸಲು ದೆಹಲಿ, ಉ.ಪ್ರ ಪೊಲೀಸರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೈಂಗಿಕ ದೌರ್ಜನ್ಯ ಮತ್ತು ಪೊಲೀಸರ ಅಸಡ್ಡೆಗೆ ಒಳಗಾಗಿದ್ದ ಮಹಿಳೆ ಹಾಗೂ ಆಕೆಯ ಸ್ನೇಹಿತ ಸುಪ್ರೀಂ ಕೋರ್ಟ್ ಮುಂಭಾಗದಲ್ಲಿ ಬೆಂಕಿ ಹಚ್ಚಿಕೊಂಡಿದ್ದ ಘಟನೆಗೆ ಸಂಬಂಧಿಸಿ ನಾಲ್ಕು ವಾರಗಳೊಳಗೆ ವರದಿ ಸಲ್ಲಿಸುವಂತೆ ದೆಹಲಿ, ಉತ್ತರ ಪ್ರದೇಶ ಪೊಲೀಸರಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ಸೂಚಿಸಿದೆ.

'ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಗೆ, ವ್ಯವಸ್ಥೆಯಿಂದಲೂ ತಾನು ಸಂತ್ರಸ್ತಳಾದೆ ಎಂಬ ಭಾವನೆ ಮೂಡುವಂತಾಗಿದ್ದು ಆಘಾತಕಾರಿ' ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ಬಿಎಸ್‌ಪಿ ಸಂಸದ ಅತುಲ್ ರಾಯ್ ತನ್ನ ಮೇಲೆ ಅತ್ಯಾಚಾರ ನಡೆಸಿದ್ದರು ಎಂದು 24 ವರ್ಷದ ಮಹಿಳೆ ಆರೋಪಿಸಿದ್ದರು. ಈ ಬಗ್ಗೆ ದೂರು ನೀಡಿದ ನಂತರ ಉತ್ತರ ಪ್ರದೇಶ ಪೊಲೀಸರು ತನಗೆ ಕಿರುಕುಳ ನೀಡುತ್ತಿದ್ದರು ಎಂದೂ ಮಹಿಳೆ ಆರೋಪಿಸಿದ್ದರು.

ಈ ಕಿರುಕುಳ ತಾಳಲಾಗದೇ ಆ ಮಹಿಳೆ ಹಾಗೂ ಆಕೆಯ ಸ್ನೇಹಿತ ಸತ್ಯಂ ರಾಯ್ ಅವರು ಆಗಸ್ಟ್ 16ರಂದು ಸುಪ್ರೀಂಕೋರ್ಟ್‌ನ ಗೇಟ್ ಮುಂದೆ ಬೆಂಕಿ ಹಚ್ಚಿಕೊಂಡಿದ್ದರು. ನಂತರ ಇಬ್ಬರೂ ಚಿಕಿತ್ಸೆಗೆ ಸ್ಪಂದಿಸದೇ ಆಸ್ಪತ್ರೆಯಲ್ಲಿ ಮೃತಪಟ್ಟರು.

ಈ ಪ್ರಕರಣ ಕುರಿತು ವರದಿ ನೀಡುವಂತೆ ಉತ್ತರ ಪ್ರದೇಶ ಡಿಜಿಪಿ ಹಾಗೂ ದೆಹಲಿ ಪೊಲೀಸ್ ಕಮಿಷನರ್ ಅವರಿಗೆ ನೋಟಿಸ್ ನೀಡಲಾಗಿದೆ. ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆಯೂ ತಿಳಿಸುವಂತೆ ಸೂಚಿಸಲಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಸಂತ್ರಸ್ತರ ಕುಟುಂಬಗಳ ಸದಸ್ಯರ ಸುರಕ್ಷತೆಗೆ ಕ್ರಮ ಕೈಗೊಳ್ಳುವಂತೆ ಉತ್ತರ ಪ್ರದೇಶ ಡಿಜಿಪಿ ಅವರಿಗೆ ಆಯೋಗ ಸೂಚಿಸಿದೆ.

'ಬೆಂಕಿ ಹಚ್ಚಿಕೊಳ್ಳುವ ಮುನ್ನ ಮಹಿಳೆ ಮತ್ತು ಆಕೆಯ ಸ್ನೇಹಿತ ಫೇಸ್‌ಬುಕ್ ಲೈವ್ ಮೂಲಕ ತಮ್ಮ ಹೇಳಿಕೆಗಳನ್ನು ದಾಖಲಿಸಿದ್ದಾರೆ. ಅತ್ಯಾಚಾರಕ್ಕೆ ಸಂಬಂಧಿಸಿ 2019ರ ಜೂನ್‌ನಲ್ಲಿ ಸಂಸದ ರಾಯ್ ವಿರುದ್ಧ ದೂರು ದಾಖಲಿಸಿದ್ದೆ, ಆದರೆ, ಪೊಲೀಸರು ಸಂಸದನ ನೆರವಿಗೆ ನಿಂತರು ಎಂದು ಆಕೆ ಹೇಳಿದ್ದರು' ಎಂಬುದಾಗಿ ಆಯೋಗ ತಿಳಿಸಿದೆ.

ರಸ್ತೆಯಲ್ಲಿ ಗುಂಡಿಗಳದ್ದೆ ದರ್ಬಾರು; ಮಳೆಯಾದರೆ ಹೊಂಡ, ಬಿಸಿಲಾದರೆ ದೂಳು

ದೊಡ್ಡಕಲ್ಲಸಂದ್ರ–ಗೊಟ್ಟಿಗೆರೆ ಪ್ರಯಾಣ ಹೈರಾಣ

• ವಿಜಯಕುಮಾರ್ ಎಸ್.ಕೆ.



ನಾರಾಯಣನಗರದ ಬಳಿಯ ಅಂಜನಾಪುರ ಮುಖ್ಯರಸ್ತೆಯ ಸ್ಥಿತಿ

ಬೆಂಗಳೂರು: ರಸ್ತೆಯ ತುಂಬೆಲ್ಲಾ ಗುಂಡಿಗಳ ದರ್ಬಾರು, ಮಳೆಯಾದರೆ ಗುಂಡಿಯಲ್ಲಿ ಬೀಳುವುದು, ಬಿಸಿಲಾದರೆ ದೂಳು ಕುಡಿಯುವ ವಾಹನ ಸವಾರರು, ಕಾಡುತ್ತಿರುವ ಆಸ್ತಮಾ...

ಇದು ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರದಿಂದ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಸಂಪರ್ಕಿಸುವ ಅಂಜನಾಪುರ ಮುಖ್ಯ ರಸ್ತೆಯ ದುಸ್ಥಿತಿ. ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರ ಮೆಟ್ರೊ ನಿಲ್ದಾಣದ ಸಮೀಪದಿಂದ ಆರಂಭವಾಗುವ ಅಂಜನಾಪುರ ಮುಖ್ಯ ರಸ್ತೆಯಲ್ಲಿ ಗೊಟ್ಟಿಗೆರೆ ಕಡೆಗೆ ಹೊರಟರೆ ಗುಂಡಿಗಳ ನಡುವೆ ರಸ್ತೆ ಎಲ್ಲಿದೆ ಎಂದು ಹುಡುಕಾಡಬೇಕಾದ ಸ್ಥಿತಿ ಇದೆ.

2007ರಲ್ಲಿ ಸುತ್ತಮುತ್ತಲ ಬಡಾವಣೆಗಳು ಬಿಬಿಎಂಪಿ ಸೇರ್ಪಡೆಯಾದರೂ, ಈ ರಸ್ತೆ ನಿರ್ವಹಣೆ ಮಾತ್ರ ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ವ್ಯಾಪ್ತಿಯಲ್ಲೇ ಇದೆ. ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗೆ ಜಲ ಮಂಡಳಿಯಿಂದ ಅಗೆದು ಮಣ್ಣು ಮುಚ್ಚಲಾಗಿದೆ. ಆದರೆ, ರಸ್ತೆ ಮರು ನಿರ್ಮಾಣ ಮಾತ್ರ ಆಗಿಲ್ಲ.

ಎಲೆಕ್ಟ್ರಾನಿಕ್ ಸಿಟಿ, ಬೊಮ್ಮಸಂದ್ರ ಕಡೆಗೆ ಹೋಗಲು ಇರುವ ಪ್ರಮುಖ ಸಂಪರ್ಕ ರಸ್ತೆ ಇದಾಗಿದೆ. 12 ವರ್ಷಗಳಿಂದ ಅಭಿವೃದ್ಧಿ ಕಾಣದಿರುವುದರಿಂದ ರಸ್ತೆಯ ತುಂಬೆಲ್ಲಾ ಗುಂಡಿಗಳೇ ತುಂಬಿಕೊಂಡಿವೆ. ಮಳೆಗಾಲದಲ್ಲಿ ಗುಂಡಿಗಳಲ್ಲಿ ನೀರು ತುಂಬಿಕೊಂಡರೆ ವಾಹನ ಚಾಲನೆ ಮಾಡುವುದೇ ಕಷ್ಟವಾಗಿದೆ. ಬೈಕ್ ಸವಾರರು ಗುಂಡಿಗಳಲ್ಲಿ ಬಿದ್ದು ಪೆಟ್ಟು ಮಾಡಿಕೊಳ್ಳುವುದು ನಿತ್ಯವೂ ಸಾಗಿದೆ ಎನ್ನುತ್ತಾರೆ ಸ್ಥಳೀಯರು.

'ಬಿಸಿಲಾದರೆ ಇಡೀ ರಸ್ತೆ ದೂಳುಮಯವಾಗುತ್ತದೆ. ಅದರ ನಡುವೆಯೇ ವಾಹನಗಳು ಸಾಗುವುದರಿಂದ ಸುತ್ತಮುತ್ತಲ ಬಡಾವಣೆಗಳ ಜನರಿಗೆ ಆಸ್ತಮಾ ಕಾಡುತ್ತಿದೆ' ಎಂದು ನಾರಾಯಣನಗರದ ನಿವಾಸಿ ಪವನ್ ವಸಿಷ್ಠ ಹೇಳುತ್ತಾರೆ.

'ಈ ರಸ್ತೆಯ ಗುಂಡಿಗಳಿಗೆ ಹೆದರಿ ವಾಹನ ಸವಾರರು ಈಗ ಎಲೆಕ್ಟ್ರಾನಿಕ್ ಸಿಟಿಗೆ ಹೋಗಲು ಬೇರೆ ರಸ್ತೆಯೊಂದನ್ನು ಕಂಡುಕೊಂಡಿದ್ದಾರೆ. ಕೋಣನಕುಂಟೆ, ಜಂಬು ಸವಾರಿ ದಿಣ್ಣೆ ಮಾರ್ಗದಲ್ಲಿ ಸುತ್ತಾಡಿಕೊಂಡು ತೆರಳುತ್ತಿದ್ದಾರೆ. ಆ ರಸ್ತೆಯಲ್ಲೀಗ ಸಂಚಾರ ದಟ್ಟಣೆ ಸಮಸ್ಯೆ ಹೆಚ್ಚಾಗುತ್ತಿದೆ' ಎಂದು ಹೇಳಿದರು.

'ಬಿಡಿಎ ಅಧಿಕಾರಿಗಳಿಗೆ ಮತ್ತು ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಅವರಿಗೆ ಮನವಿ ಸಲ್ಲಿಸಿ ಸಾಕಾಗಿ ಹೋಗಿದೆ. ಹೊಸ ತಂತ್ರಜ್ಞಾನದಲ್ಲಿ ರಸ್ತೆ ಅಭಿವೃದ್ಧಿ ಆಗಲಿದೆ ಎಂದು ಬಿಡಿಎ ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, 12 ವರ್ಷಗಳಿಂದ ಜನ ಅನುಭವಿಸುತ್ತಿರುವ ತೊಂದರೆಗೆ ಮುಕ್ತಿ ದೊರಕಿಲ್ಲ' ಎಂದರು.

'ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಇನ್ನೆರಡು ವಾರದಲ್ಲಿ ಬಿಡಿಎ ಆರಂಭಿಸದಿದ್ದರೆ ಸುತ್ತಮುತ್ತಲ ಬಡಾವಣೆಗಳ 500ಕ್ಕೂ ಹೆಚ್ಚು ಜನ ಸೇರಿ ಕನಕಪುರ ರಸ್ತೆಯಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ಅವರು ಎಚ್ಚರಿಸಿದರು.

ಹೊಸ ತಂತ್ರಜ್ಞಾನದ ರಸ್ತೆಗೆ ಯೋಜನೆ

'ರಾಜ್ಯದಲ್ಲೇ ಮೊದಲ ಬಾರಿಗೆ ಸಿಮೆಂಟ್ ಸ್ಟೆಬಿಲೈಸೇಷನ್ ತಂತ್ರಜ್ಞಾನದ ಬಳಸಿ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ' ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಎಚ್.ಆರ್. ಶಾಂತರಾಜಣ್ಣ ತಿಳಿಸಿದರು.

'ಹಳೇ ರಸ್ತೆಯಲ್ಲಿನ ಜಲ್ಲಿ ತೆಗೆದು ಮತ್ತೆ ಹೊಸದಾಗಿ ಜಲ್ಲಿ ಹಾಕುವ ಬದಲಿಗೆ ಅಲ್ಲಿರುವ ಡಾಂಬರ್, ಜಲ್ಲಿಯನ್ನೇ ಒಂದು ಅಡಿಯಷ್ಟು ಆಳದವರಿಗೆ ಯಂತ್ರಗಳ ಮೂಲಕ ಪುಡಿ ಮಾಡಲಾಗುವುದು. ಅದಕ್ಕಾಗಿ ಜರ್ಮನಿಯಿಂದ ಯಂತ್ರವನ್ನೂ ತರಿಸಲಾಗುತ್ತಿದೆ. ಪುಡಿಯಾದ ಬಳಿಕ ಸಿಮೆಂಟ್ ಬೆರೆಸಿ ಗಟ್ಟಿ ಮಾಡಲಾಗುವುದು. ನಂತರ ಅದರ ಮೇಲೆ ಡಾಂಬರ್ ಹಾಕುವುದರಿಂದ ಕಡಿಮೆ ವೆಚ್ಚದಲ್ಲಿ ಉತ್ತಮ ರಸ್ತೆ ನಿರ್ಮಾಣವಾಗಲಿದೆ' ಎಂದು ಹೇಳಿದರು.

'6.8 ಕಿಲೋ ಮೀಟರ್ ರಸ್ತೆ ಅಭಿವೃದ್ಧಿಗೆ ₹25 ಕೋಟಿ ಅಂದಾಜಿನ ಯೋಜನೆ ರೂಪಿಸಲಾಗಿದೆ. ಸೇತುವೆ ಮತ್ತು ಚರಂಡಿಗಳ ನಿರ್ಮಾಣವೂ ಈ ಮೊತ್ತದಲ್ಲೇ ಒಳಗೊಂಡಿದೆ. ಮಳೆಗಾಲ ಮುಗಿದ ಬಳಿಕ ಕಾಮಗಾರಿ ಆರಂಭವಾಗಲಿದೆ. 5 ವರ್ಷಗಳ ತನಕ ರಸ್ತೆ ನಿರ್ವಹಣೆಯನ್ನು ಕಾಮಗಾರಿ ಗುತ್ತಿಗೆ ಪಡೆದ ಕಂಪನಿಯೇ ನೋಡಿಕೊಳ್ಳಲಿದೆ' ಎಂದು ವಿವರಿಸಿದರು.

'ಬೇಗೂರು ಕೆರೆ ಉಳಿಸಿ' ಆನ್ ಲೈನ್ ಅಭಿಯಾನ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಬೇಗೂರು ಕೆರೆಯಲ್ಲಿ ನಿರ್ಮಾಣವಾಗುತ್ತಿರುವ ಕಾಂಕ್ರೀಟ್ ಕೃತಕ ದ್ವೀಪದಿಂದಾಗಿ ಉತ್ಪಾದಕ ಪರಿಸರ ವ್ಯವಸ್ಥೆಗೆ ಧಕ್ಕೆಯಾಗಲಿದ್ದು, ಜೀವಜಾಲಕ್ಕೆ ಕೊಡುಗೆ ನೀಡುತ್ತಿರುವ ಕೆರೆಯ ನೈಜತೆಗೆ ಧಕ್ಕೆಯಾಗಲಿದೆ ಎಂದು ಆರೋಪಿಸಿ 'ಬೇಗೂರು ಕೆರೆ ಉಳಿಸಿ' ಎಂಬ ಆನ್ ಲೈನ್ ಅಭಿಯಾನ ನಡೆದಿದೆ.

ಪರಿಸರವಾದಿಗಳು, ಸಾಮಾಜಿಕ ಕಾರ್ಯಕರ್ತರು, ವಕೀಲರು ಹಾಗೂ ವಿಜ್ಞಾನಿಗಳು ಈ ಅಭಿಯಾನ ಕೈಗೊಂಡಿದ್ದಾರೆ.

ಅಭಿಯಾನದ ಭಾಗವಾಗಿ ಮುಖ್ಯಮಂತ್ರಿಗಳಿಗೆ ಬರೆದ ಮನವಿಪತ್ರದಲ್ಲಿ, 'ಕೆರೆಯ ಮಧ್ಯೆ ಮೂರ್ತಿ ಸ್ಥಾಪನೆಯ ಅಕ್ರಮ ನಿರ್ಣಯವನ್ನು ಅಂಗೀಕರಿಸಿದ ಬಿಬಿಎಂಪಿ ಕೌನ್ಸಿಲ್‌ನ ನಿರ್ಧಾರವನ್ನು ತಿರಸ್ಕರಿಸಬೇಕು. ಹಾಗೆಯೇ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಈ ಅಕ್ರಮ ನಿರ್ಣಯಕ್ಕೆ ಮಾನ್ಯತೆ ನೀಡಿರುವುದನ್ನೂ ರದ್ದು ಮಾಡಿ, ಈ ವಿಚಾರ ಕುರಿತಂತೆ ಕ್ರಮ ಕೈಗೊಂಡು ನ್ಯಾಯಾಲಯದ ಗಮನಕ್ಕೆ ತರಬೇಕು' ಎಂದು ಒತ್ತಾಯಿಸಲಾಗಿದೆ.

ಬೇಗೂರು ಕೆರೆಯ ಪ್ರಾಮುಖ್ಯತೆಯನ್ನು ಅದು ನೀರಿನ ಮಟ್ಟ ಮತ್ತು ಅದರ ಸುತ್ತಮುತ್ತಲಿನ ಕೊಳವೆ ಬಾವಿಗಳ ಮೇಲೆ ಮಾಡುವ ಪ್ರಭಾವದ ಆಧಾರದಿಂದ ಗುರುತಿಸಬಹುದಾಗಿದೆ. 'ಕೆಲವು ವರ್ಷಗಳ ಹಿಂದೆ ಅದರ ಮಧ್ಯೆ ಅಕ್ರಮ ಕಿರು ದ್ವೀಪದ ನಿರ್ಮಾಣಕ್ಕಾಗಿ ಕೆರೆಯನ್ನು ಖಾಲಿ ಮಾಡಿದ್ದರಿಂದ ಸುತ್ತಮುತ್ತಲಿನ ಕೊಳವೆ ಬಾವಿಗಳೆಲ್ಲಾ ಬತ್ತಿ ಹೋದವು' ಎಂದು ಅಲ್ಲಿನ ನಿವಾಸಿಗಳು ಹೇಳುತ್ತಾರೆ.

ಕೆರೆ ಸಂರಕ್ಷಣೆ ಕುರಿತಂತೆ ಸರ್ಕಾರದ ಸಂಸ್ಥೆಗಳು ಮತ್ತು ನೀತಿ ನಿಯಮಾವಳಿಗಳನ್ನು ಮೀರುವಂತೆ ಪ್ರಭಾವ ಬೀರುವ ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ. ಇವೆಲ್ಲವೂ ಕಾನೂನು, ಆಡಳಿತ, ಜನರ ಸೌಖ್ಯ, ಪರಿಸರ ಸುಸ್ಥಿರತೆ ಮತ್ತು ಈ ಪ್ರದೇಶದ ಜಲ ಭದ್ರತೆಗೆ ಅಪಾಯಕಾರಿಯಾಗಿದೆ' ಎಂದು ಅಭಿಯಾನದ ಕಾರ್ಯಕರ್ತರು ಆತಂಕ ವ್ಯಕ್ತಪಡಿಸಿದ್ದಾರೆ.

ನ್ಯಾಯಾಲಯ ಆದೇಶವನ್ನು ಉಲ್ಲಂಘಿಸಿ, ಘಟನೆಯನ್ನು ಕೋಮು ಪ್ರಚೋದನೆಗೆ ಬಳಸಿಕೊಂಡವರ ವಿರುದ್ಧ ಎಫ್‌ಐಆರ್ ದಾಖಲಿಸಿದ ನಂತರವೂ ಇನ್ನು ಕೆಲ ದುಷ್ಕರ್ಮಿಗಳು, ಸಾಮಾಜಿಕ ಜಾಲತಾಣಗಳ ಮೂಲಕ ದ್ವೇಷದ ಸಂದೇಶಗಳನ್ನು ಸಾರುತ್ತಿರುವುದರ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ.

ಮೆಟ್ರೊದಲ್ಲಿ ಕನ್ನಡ ಕಡೆಗಣನೆ: ಶಿಸ್ತು ಕ್ರಮಕ್ಕೆ ಸೂಚನೆ



ವಿ. ಸುನಿಲ್ ಕುಮಾರ್

ಬೆಂಗಳೂರು: ಮೈಸೂರು ರಸ್ತೆ–ಕೆಂಗೇರಿ ವಿಸ್ತರಿತ ಮಾರ್ಗದ ಉದ್ಘಾಟನಾ ಕಾರ್ಯಕ್ರಮದ ವೇದಿಕೆಯ ಪರದೆಯ ಮೇಲೆ ಆಡಳಿತ ಭಾಷೆ ಕನ್ನಡ ಕಡೆಗಣನೆಗೆ ಅಸಮಾಧಾನ ವ್ಯಕ್ತಪಡಿಸಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್, 'ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕೂಡಲೇ ಶಿಸ್ತುಕ್ರಮ ಕೈಗೊಳ್ಳಬೇಕು' ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದ್ದಾರೆ.

ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ. 'ಕಳೆದ ತಿಂಗಳು 29ರಂದು ನಡೆದ ಸಮಾರಂಭದಲ್ಲಿ ವೇದಿಕೆಯ ಪರದೆಯ ಮೇಲೆ ಇಂಗ್ಲಿಷ್ ಮಾತ್ರ ಬಳಸಿ, ಕನ್ನಡವನ್ನು ಕಡೆಗಣಿಸಲಾಗಿದೆ. ಸಮಾರಂಭದ ಮುಖ್ಯ ವೇದಿಕೆಯ ಫಲಕಗಳಲ್ಲಿ ಹಾಗೂ ಹಿಂಬದಿಯ ಪರದೆಯಲ್ಲಿ ಕನ್ನಡ ಭಾಷೆಯನ್ನು ಬಳಸಿರಲಿಲ್ಲ ಎಂಬುದು ನಿಜಕ್ಕೂ ಗಂಭೀರವಾದ ಸಂಗತಿ. ರಾಜ್ಯದ ರಾಜಧಾನಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಆಡಳಿತ ಭಾಷೆಯನ್ನು ಕಡೆಗಣಿಸಿರುವುದು ಗಂಭೀರ ಲೋಪ' ಎಂದು ಹೇಳಿದ್ದಾರೆ.

'ಈಗಾಗಲೇ ಆಡಳಿತ ಭಾಷೆಯಾಗಿ ಕನ್ನಡ ಬಳಕೆಯನ್ನು ಕಡ್ಡಾಯಗೊಳಿಸಿ, ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಅಷ್ಟಾಗಿಯೂ ಕರ್ತವ್ಯ ಲೋಪವಾಗಿರುವುದು ನಿಜಕ್ಕೂ ದುರದೃಷ್ಟಕರ. ಈ ಬಗ್ಗೆ ಗಮನಹರಿಸಬೇಕಾದದ್ದು ಅಧೀನದಲ್ಲಿರುವ ಅಧಿಕಾರಿಗಳ ಕರ್ತವ್ಯ. ಈ ವಿಚಾರದಲ್ಲಿ ನಿರ್ಲಕ್ಷ್ಯ ತೋರಿರುವುದನ್ನು ಸಹಿಸಲಾಗದು. ಭಾಷೆ ಒಂದು ಭಾವನಾತ್ಮಕ ವಿಚಾರ. ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸಬೇಕಾದ ಸರ್ಕಾರದ ಇಲಾಖೆಗಳು ಈ ರೀತಿ ಮಾಡುವುದು ಗಂಭೀರ ಕರ್ತವ್ಯಲೋಪ ಎಂದು ಪರಿಗಣಿಸಲ್ಪಡುತ್ತದೆ. ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಕೈಗೊಂಡು, ಸೂಕ್ತ ವಿವರಣೆ ನೀಡಬೇಕು' ಎಂದು ಹೇಳಿದ್ದಾರೆ.

'ಹೆಚ್ಚು ಶುಲ್ಕ ವಸೂಲಿ ವಿರುದ್ಧ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರ ನಿಗದಿ ಮಾಡಿದ ದರಕ್ಕಿಂತ ಹೆಚ್ಚು ಶುಲ್ಕವನ್ನು ವಸೂಲಿ ಮಾಡಿದರೆ, ಅಂತಹ ಕಾಲೇಜುಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

'ಕೆಲವು ಪಿ.ಯು ಕಾಲೇಜುಗಳಲ್ಲಿ ದುಬಾರಿ ಶುಲ್ಕ ವಸೂಲಿ ಮಾಡುತ್ತಿರುವ ವಿಚಾರ ಗಮನಕ್ಕೆ ಬಂದಿದೆ. ಪದವಿಪೂರ್ವ ಇಲಾಖೆ ನಿರ್ದೇಶಕರ ಜತೆ ಮಾತನಾಡಿದ್ದು, ಎಲ್ಲ ಡಿಡಿಪಿಐಗಳಿಂದ ಮಾಹಿತಿ ಪಡೆದುಕೊಂಡ ಬಳಿಕ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಸರ್ಕಾರದ ನಿಯಮಗಳು ಮತ್ತು ಆದೇಶವನ್ನು ಉಲ್ಲಂಘಿಸಿದ್ದು ದೃಢಪಟ್ಟರೆ, ಕಾಯ್ದೆಯ ಪ್ರಕಾರ ಕ್ರಮ ತೆಗೆದುಕೊಳ್ಳುವುದು ಅನಿವಾರ್ಯ. ಖಾಸಗಿ ಶಾಲಾ–ಕಾಲೇಜುಗಳಲ್ಲಿ ಮನಸ್ಸಿಗೆ ಬಂದಂತೆ ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ ಕೆಲವು ಪೋಷಕರು ಗಮನಕ್ಕೆ ತಂದಿದ್ದಾರೆ ಎಂದರು.

ಸರ್ಕಾರ ನಿಗದಿ ಮಾಡಿದ ಶುಲ್ಕ ಪ್ರಮಾಣವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಮಗೆ ಹೊರೆ ಹೆಚ್ಚುತ್ತದೆ ಎಂದು ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು ಆಕ್ಷೇಪ ಎತ್ತಿವೆ ಎಂದು ಮೂಲಗಳು ಹೇಳಿವೆ.

6 ತಿಂಗಳಲ್ಲಿ ಶೇ 50ರಷ್ಟು ಕಾಮಗಾರಿ ಪೂರ್ಣಗೊಳಿಸಲು ಸಚಿವರ ಸೂಚನೆ

ಯಶವಂತಪುರ: ರಸ್ತೆ ವಿಸ್ತರಣೆಗೆ ಕ್ರಮ

ಪ್ರಜಾವಾಣಿ ವಾರ್ತೆ



ಯಶವಂತಪುರ ಮಾರುಕಟ್ಟೆ ಸುತ್ತಮುತ್ತಲಿನ ಪ್ರದೇಶವನ್ನು ಸಚಿವರಾದ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಹಾಗೂ ಮುನಿರತ್ನ ಬುಧವಾರ ಪರಿಶೀಲಿಸಿದರು.

ಬೆಂಗಳೂರು: ಮಲ್ಲೇಶ್ವರ ಮತ್ತು ರಾಜರಾಜೇಶ್ವರಿನಗರ ಕ್ಷೇತ್ರಗಳ ಗಡಿ ಭಾಗದಲ್ಲಿರುವ ಯಶವಂತಪುರದ ವಿವಿಧ ಪ್ರದೇಶಗಳಿಗೆ ಬುಧವಾರ ಭೇಟಿ ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಹಾಗೂ ತೋಟಗಾರಿಕೆ ಸಚಿವ ಮುನಿರತ್ನ ಅವರು ಈ ಭಾಗದಲ್ಲಿನ ಸಂಚಾರ ದಟ್ಟಣೆಗೆ ಪರ್ಯಾಯ ಮಾರ್ಗಗಳ ಬಗ್ಗೆ ಪರಿಶೀಲಿಸಿದರು.

ಜನರ ಅನುಕೂಲಕ್ಕಾಗಿ ಕೆಲವು ಯೋಜನೆಗಳನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದರಲ್ಲದೆ, ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣ ಮಾಡಬೇಕು ಎಂದು ತಾಕೀತು ಮಾಡಿದರು.

'ಯಶವಂತಪುರ ವೃತ್ತದಿಂದ ಆರ್‌ಟಿಒ ಕಚೇರಿ ಮುಂಭಾಗದಲ್ಲಿ ಸಾಗುವ ರಸ್ತೆಯ ವಿಸ್ತರಣೆಗೆ ಕೂಡಲೇ ಕ್ರಮ ವಹಿಸಬೇಕು. ಆರು ತಿಂಗಳಲ್ಲಿ ಶೇ 50ರಷ್ಟು ಕಾಮಗಾರಿ ಪೂರ್ಣಗೊಳ್ಳಬೇಕು ಎಂದು ಸಚಿವರು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಸೂಚನೆ ನೀಡಿದರು.

ಇದಕ್ಕೆ ಸ್ಪಂದಿಸಿದ ಆಯುಕ್ತರು, 'ಕೂಡಲೇ ಈ ಕಾಮಗಾರಿ ಕೈಗೆತ್ತಿಕೊಂಡು ರಸ್ತೆಯನ್ನು ವಿಸ್ತರಣೆ ಮಾಡಲಾಗುವುದು. ವಿಶಾಲ ಪಾದಚಾರಿ ಮಾರ್ಗ ನಿರ್ಮಾಣದ ಜತೆಗೆ, ಅಗತ್ಯವಾದ ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗುವುದು' ಎಂದರು.

ಯಶವಂತಪುರ ಸರ್ಕಲ್‌ನಿಂದ ಮಾರುಕಟ್ಟೆವರೆಗೆ ಸಿಗ್ನಲ್ ಫ್ರೀ ಕಾರಿಡಾರ್ ಮಾಡುವ ಪ್ರಸ್ತಾವನೆ ಇದೆ. ಸಂಚಾರ ದಟ್ಟಣೆ ತಪ್ಪಿಸಲು ಎಲ್ಲ ಕ್ರಮ ಕೈಗೊಳ್ಳಲಾಗುವುದು ಎಂದು ಮುನಿರತ್ನ ಹೇಳಿದರು.

ಯಶವಂತಪುರ ಮೀನು ಮಾರುಕಟ್ಟೆಯಿಂದ ತುಮಕೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಅಂಡರ್‌ಪಾಸ್ ಕಂಡು ಸಚಿವರು ಕಿಡಿಕಾರಿದರು.

'ಅವೈಜ್ಞಾನಿಕವಾಗಿ ನಿರ್ಮಾಣವಾಗಿರುವ ಈ ಅಂಡರ್‌ಪಾಸ್‌ನಲ್ಲಿ ಮಳೆ ನೀರು ಹೊರಹೋಗುತ್ತಿಲ್ಲ. ಕೊಳಚೆ ನೀರು ಸೇರಿಕೊಂಡು ದುರ್ನಾತ ಬೀರುತ್ತಿತ್ತಲ್ಲದೆ, ಜನರು ಸಂಚಾರ ಮಾಡಲು ಸಾಧ್ಯವಾಗದ ಸ್ಥಿತಿ ಇದೆ. ತಕ್ಷಣ ಇದಕ್ಕೊಂದು ಪರಿಹಾರ ಕಲ್ಪಿಸಬೇಕು' ಎಂದು ಸಚಿವರು ನಿರ್ದೇಶನ ನೀಡಿದರು.

ಸುಸಜ್ಜಿತ ಮಾರುಕಟ್ಟೆ ನಿರ್ಮಾಣಕ್ಕೆ ಕ್ರಮ: 'ಯಶವಂತಪುರದಲ್ಲಿ ಯಲಹಂಕ ತಾಲ್ಲೂಕು ಪಂಚಾಯಿತಿಗೆ ಸೇರಿದ ಜಾಗವಿದ್ದು, ಅದರ ಪಕ್ಕದಲ್ಲಿ ಹೂವಿನ ಮಾರುಕಟ್ಟೆ ಇದೆ. ವ್ಯಾಪಾರಿಗಳು ಬೀದಿ ಬದಿಯಲ್ಲೇ ವ್ಯಾಪಾರ ಮಾಡುತ್ತಿದ್ದು ಇದರಿಂದ ಜನ ಸಂಚಾರಕ್ಕೆ ಅಡ್ಡಿ ಉಂಟಾಗಿದೆ. ಹೀಗಾಗಿ ಖಾಲಿ ಇರುವ ತಾಲ್ಲೂಕು ಪಂಚಾಯಿತಿ ಜಾಗದಲ್ಲಿ ಸುಸಜ್ಜಿತ ಹೈಟೆಕ್ ಮಾರುಕಟ್ಟೆ ನಿರ್ಮಾಣ ಮಾಡುವ ಬಗ್ಗೆ ಯೋಜನೆ ಸಿದ್ಧಪಡಿಸಿದ್ದು ಅದರ ಕಾಮಗಾರಿಯನ್ನು ಆದಷ್ಟು ಬೇಗ ಆರಂಭಿಸಬೇಕು' ಎಂದು ಸಚಿವ ಡಾ.ಅಶ್ವತ್ಥನಾರಾಯಣ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಶ್ಚಿಮ ವಿಭಾಗದ ಆಯುಕ್ತ ಬಸವರಾಜು, ಜಂಟಿ ಆಯುಕ್ತ ಶಿವಸ್ವಾಮಿ ಇದ್ದರು.

ಆಸ್ತಿ ನಗದೀಕರಣದ ವಿರುದ್ಧ ಆಂದೋಲನ: ಸಚಿನ್ ಪೈಲಟ್

ಪ್ರಜಾವಾಣಿ ವಾರ್ತೆ



ಸಚಿನ್ ಪೈಲಟ್ ಅವರನ್ನು ಡಿ.ಕೆ. ಶಿವಕುಮಾರ್ ಸನ್ಮಾನಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆ (ಎನ್‌ಎಂಪಿ) ಮೂಲಕ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ದೇಶವನ್ನು ಲೂಟಿ ಹೊಡೆಯಲು ಮುಂದಾಗಿದೆ. ಯೋಜನೆಯನ್ನು ಘೋಷಿಸುವ ಮುನ್ನ ಜನಾಭಿಪ್ರಾಯ ಪಡೆದಿಲ್ಲ. ಚರ್ಚೆಯನ್ನೂ ನಡೆಸದೆ ಸರ್ವಾಧಿಕಾರಿ ಧೋರಣೆಯಿಂದ ವರ್ತಿಸಿದೆ' ಎಂದು ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಎನ್‌ಎಂಪಿ ವಿರುದ್ಧ ಪಕ್ಷದ ವತಿಯಿಂದ ದೇಶವ್ಯಾಪಿ ಆಂದೋಲನ ಹಮ್ಮಿಕೊಳ್ಳಲಾಗುವುದು' ಎಂದರು.

'ರೈಲು ನಿಲ್ದಾಣಗಳು, ರಸ್ತೆಗಳು, ತೈಲ ಮತ್ತು ನೈಸರ್ಗಿಕ ಅನಿಲ ಸಾಗಣೆ ಕೊಳವೆ ಮಾರ್ಗ, ವಿದ್ಯುತ್ ವಲಯದ ಯೋಜನೆಗಳನ್ನು ಖಾಸಗಿ ವಲಯದ ಕಂಪನಿಗಳಿಗೆ ಲೀಸ್ ಆಧಾರದಲ್ಲಿ ವರ್ಗಾಯಿಸಲು ಕೇಂದ್ರ ಮುಂದಾಗಿದೆ. ಕಾಂಗ್ರೆಸ್ ನೇತೃತ್ವದ ಸರ್ಕಾರ 70 ವರ್ಷಗಳಿಂದ ಸೃಷ್ಟಿಸಿದ್ದ ಸಂಪತ್ತನ್ನು, ಪ್ರಧಾನಿ ಮೋದಿ ಏಳು ವರ್ಷಗಳಲ್ಲೇ ಮಾರಾಟ ಮಾಡಲು ಹೊರಟಿದ್ದಾರೆ. ಇದೇನಾ ಆತ್ಮ ನಿರ್ಭರ್' ಎಂದು ಪ್ರಶ್ನಿಸಿದರು.

'ಕೇಂದ್ರ ಸರಿಯಾದ ನೀತಿಗಳನ್ನು ಜಾರಿಗೆ ತರುತ್ತಿಲ್ಲ. ಕೇಂದ್ರದ ಯೋಜನೆಗಳು ಜನಪರವಾಗಿಲ್ಲ. ರೈತ ವಿರೋಧಿ ಕಾನೂನುಗಳ ವಿರುದ್ಧ ಹೋರಾಟ ನಡೆಯುತ್ತಿದ್ದರೂ ಕೇಂದ್ರ ಗಮನಹರಿಸುತ್ತಿಲ್ಲ. ಕೋವಿಡ್ ಲಸಿಕೆ ವಿತರಣೆಯಲ್ಲೂ ಅವ್ಯವಹಾರ ನಡೆಯುತ್ತಿದೆ. ರಾಜ್ಯ ಹಾಗೂ ಕೇಂದ್ರದ ನಡುವೆ ಸಾಮರಸ್ಯವಿಲ್ಲ. ಕೇಂದ್ರ ಸರ್ಕಾರ ಉದ್ಯೋಗ ಸೃಷ್ಟಿ ಮಾಡುವಲ್ಲಿ ಹಿಂದೆ ಬಿದ್ದಿದೆ. ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ಪಡೆಯುವ ಕಾರ್ಯ ಮಾಡಿಲ್ಲ. ಸರ್ಕಾರ ಎನ್ನುವುದು ಬಿಜೆಪಿಯ ಖಾಸಗಿ ಸ್ವತ್ತಲ್ಲ. ಫಲಾನುಭವಿಗಳಿಗೆ ಅನ್ಯಾಯವಾಗದಂತೆ ಸರ್ಕಾರ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕ ದಿನೇಶ್ ಗುಂಡೂರಾವ್ ಇದ್ದರು.

'ವರಿಷ್ಠರು ತೀರ್ಮಾನಿಸುತ್ತಾರೆ'

ರಾಜಸ್ಥಾನದಲ್ಲಿ ಸಂಪುಟ ವಿಸ್ತರಣೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿನ್ ಪೈಲಟ್, 'ಪಕ್ಷದ ವರಿಷ್ಠರು ಮತ್ತು ಮುಖ್ಯಮಂತ್ರಿ ಸೇರಿ ಈ ಬಗ್ಗೆ ಆದಷ್ಟು ಶೀಘ್ರ ತೀರ್ಮಾನ ಕೈಗೊಳ್ಳುತ್ತಾರೆ. ಪಕ್ಷದ ಅಧ್ಯಕ್ಷನಾಗಿ ನಾನು ಮಧ್ಯಪ್ರವೇಶ ಮಾಡುವುದಿಲ್ಲ. ಆದಷ್ಟು ತ್ವರಿತವಾಗಿ ಎಲ್ಲವೂ ನಿರ್ಧಾರವಾಗಲಿದೆ ಎಲ್ಲರೂ ಒಟ್ಟಾಗಿಯೇ ಕೆಲಸ ಮಾಡುತ್ತಿದ್ದೇವೆ' ಎಂದರು.

'ಪಕ್ಷದಲ್ಲಿ ಯಾವುದೇ ರೀತಿಯ ಭಿನ್ನಮತಗಳಿಲ್ಲ. ನಾಯಕರು, ಕಾರ್ಯಕರ್ತರ ನಡುವೆ ಹೊಂದಾಣಿಕೆಯಿದೆ. ಬಿಜೆಪಿ ವಿರುದ್ಧ ನಮ್ಮ ಹೋರಾಟ ಮುಂದುವರಿದಿದೆ' ಎಂದರು.

ಕ್ರಮ ತೆಗೆದುಕೊಳ್ಳದ ಸರ್ಕಾರ: ಆರೋಪ

ಬೆಂಗಳೂರು: 'ಚಾಮರಾಜನಗರದಲ್ಲಿ ಆಮ್ಲಜನಕ ಸಿಗದೆ 36 ಜನರು ಸಾವಿಗೀಡಾಗಲು ಕಾರಣರಾದ ಯಾವ ಅಧಿಕಾರಿ ವಿರುದ್ಧವೂ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಅಷ್ಟೇ ಅಲ್ಲ, ಅವರನ್ನು ರಾಜಕೀಯ ನಾಯಕರಂತೆ ಬಿಂಬಿಸಿ ಪ್ರಚಾರ ನೀಡುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಬಿಜೆಪಿ ವಿಭಿನ್ನ ಆಡಳಿತ ನಡೆಸುತ್ತಿದೆ. ಆಮ್ಲಜನಕ ಸಿಗದೆ ಜನರು ಸತ್ತಿರುವುದನ್ನು ಹೈಕೋರ್ಟ್ ಸಮಿತಿ ವರದಿ ಕೊಟ್ಟ ನಂತರ ಒಪ್ಪಿಕೊಂಡ ಸರ್ಕಾರ, ಸತ್ತವರ ಕುಟುಂಬಕ್ಕೆ ₹ 2 ಲಕ್ಷ ಪರಿಹಾರ ಘೋಷಿಸಿತು. ಆದರೆ, ಸಂಸತ್ತಿಗೆ ಮಾತ್ರ ಆಮ್ಲಜನಕ ಸಿಗದೆ ಯಾರೂ ಸತ್ತಿಲ್ಲ ಎಂದು ಮಾಹಿತಿ ನೀಡಿದೆ' ಎಂದರು.

'ಪ್ರತಿ ಬಡವನಿಗೆ ಉಚಿತ ಲಸಿಕೆ ನೀಡಲು ಆದ್ಯತೆ ನೀಡುವ ಬದಲು 'ನೋ ವ್ಯಾಕ್ಸಿನೇಷನ್, ನೋ ರೇಷನ್' ಎಂದು ಹೇಳಿ, ಅವರಲ್ಲಿ ಆತಂಕ ಮೂಡಿಸಿರುವ ಅಧಿಕಾರಿಯನ್ನು ತಕ್ಷಣ ಕರ್ತವ್ಯದಿಂದ ಅಮಾನತು ಮಾಡಬೇಕು. ಆತನ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದರು.

'ಅಡುಗೆ ಅನಿಲ, ಆಟೊ ಗ್ಯಾಸ್, ಪೆಟ್ರೋಲ್, ಡೀಸೆಲ್ ಎಲ್ಲದರ ಬೆಲೆ ಏರುತ್ತಿದೆ. ಇದೇ 5, 6ರಂದು ಪಕ್ಷದ ನಾಯಕರ ಸಭೆ ಕರೆಯಲಾಗಿದೆ. ಈ ಸಭೆಯಲ್ಲಿ ನಮ್ಮ ಹೋರಾಟದ ಬಗ್ಗೆ ಚರ್ಚಿಸುತ್ತೇವೆ' ಎಂದರು.



ಕಾಮಗಾರಿಗೆ ಸಚಿವ ಎಸ್‌.ಟಿ.ಸೋಮಶೇಖರ್ ಚಾಲನೆ ನೀಡಿದರು. ಸೋಮನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವಿಜಯ್ ಕುಮಾರ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಪವನ್, ಮುಖಂಡರಾದ ಕೇಶವ ಹಾಗೂ ಮುನಿರಾಜು ಇದ್ದಾರೆ

ಒಳಚರಂಡಿ ಕಾಮಗಾರಿಗೆ ಚಾಲನೆ

ಕೆಂಗೇರಿ: ಅಮೃತ ಯೋಜನೆಯಡಿ ಗ್ರಾಮ ಪಂಚಾಯಿತಿಗಳನ್ನು ಸರ್ವತೋಮುಖವಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಯೋಜನೆ ರೂಪಿಸಿದೆ ಎಂದು ಸಹಕಾರ ಸಚಿವ ಎಸ್. ಟಿ.ಸೋಮಶೇಖರ್ ಹೇಳಿದರು.

ಸೋಮನಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು ₹4.5 ಕೋಟಿ ಒಳ ಚರಂಡಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ತ್ಯಾಜ್ಯ ನೀರು ಕೆರೆ ಕುಂಟೆಗಳಿಗೆ ಸೇರಿ ಜಲ ಮೂಲಗಳು ನಾಶ ಹೊಂದುವ ಅಪಾಯವಿದೆ. ಈ ನಿಟ್ಟಿನಲ್ಲಿ ಸೋಮನಹಳ್ಳಿ ಗ್ರಾಮದಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದರೊಂದಿಗೆ ತ್ಯಾಜ್ಯ ನೀರು ಸಂಸ್ಕರಣಕ್ಕಾಗಿ ಎಸ್ ಟಿ ಪಿ ಘಟಕ ಸ್ಥಾಪನೆಗೂ ಒತ್ತು ನೀಡಲಾಗಿದೆ ಎಂದು ಹೇಳಿದರು.

ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೇವಗೆರೆ ಹಾಗೂ ತಗಚಗುಪ್ಪೆ ಕಾಲೊನಿಗಳ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಕುಂಬಳಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸ ಪಾಳ್ಯ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಪೂಜೆ ನೆರವೇರಿಸಲಾಯಿತು.

ರಾಜ್‌ಕುಮಾರ್, ವಿಷ್ಣುವರ್ಧನ್ ಪ್ರತಿಮೆಗಳ ತೆರವಿಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಆದೇಶದಂತೆ ಅಕ್ರಮ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಲು ಮುಂದಾಗಿರುವ ಬಿಬಿಎಂಪಿ, ಚಿತ್ರ ನಟರು ಮತ್ತು ಸಮಾಜ ಸುಧಾರಕರ 21 ಪ್ರತಿಮೆಗಳನ್ನೂ ಪಟ್ಟಿ ಮಾಡಿದೆ.

ಈ ಸಂಬಂಧ ರಿಟ್ ಅರ್ಜಿ ವಿಚಾರಣೆ ನಡೆಸುತ್ತಿರುವ ಹೈಕೋರ್ಟ್, ಸರ್ಕಾರಿ ಜಾಗದಲ್ಲಿರುವ ಕಟ್ಟಡ ಮತ್ತು ಪ್ರತಿಮೆಗಳ ಸರ್ವೆ ನಡೆಸುವಂತೆ ಬಿಬಿಎಂಪಿ, ನಗರ ಪೊಲೀಸ್ ಮತ್ತು ಸಂಚಾರ ಪೊಲೀಸರಿಗೆ ನಿರ್ದೇಶನ ನೀಡಿತ್ತು. ಸೆ.2ರಂದು ನಡೆಯಲಿರುವ ವಿಚಾರಣೆ ವೇಳೆ ಈ ಪಟ್ಟಿ ಸಲ್ಲಿಸಲು ಬಿಬಿಎಂಪಿ ಸಿದ್ಧತೆ ಮಾಡಿಕೊಂಡಿದೆ.

ಭಾಷ್ಯಂ ವೃತ್ತ, ಟಿ.ಆರ್ ಮಿಲ್ ವೃತ್ತ, ಟಿಸಿಎಂ ರಾಯನ್ ವೃತ್ತ, ಬಳೆಪೇಟೆ ವೃತ್ತ, ಶಿವನಹಳ್ಳಿ ಮುಖ್ಯ ರಸ್ತೆ, ಅಕ್ಕಿಪೇಟೆ ವೃತ್ತದ ಬಳಿ, ಗಾಂಧಿನಗರ ಪಾರ್ಕ್ ರಸ್ತೆ, ವಿಜಯನಗರ ಟೋಲ್‌ಗೇಟ್ ವೃತ್ತ, ಮಾಗಡಿ ರಸ್ತೆ, ಶೇಷಾದ್ರಿಪುರ ವೃತ್ತದಲ್ಲಿ ಪ್ರತಿಮೆಗಳಿವೆ ಎಂದು ಬಿಬಿಎಂಪಿ ಗುರುತಿಸಿದೆ.

'ನಾವು ಸರ್ವೆ ಕಾರ್ಯವನ್ನು ಸಂಪೂರ್ಣವಾಗಿ ಮುಗಿಸಿದ್ದೇವೆ. ಅಭಿಮಾನಿಗಳು ಚಿತ್ರ ನಟರ ಪ್ರತಿಮೆಗಳನ್ನು ಅಲ್ಲಲ್ಲಿ ನಿರ್ಮಿಸಿದ್ದಾರೆ. ಅಭಿಮಾನಿಗಳನ್ನು ವಿಶ್ವಾಸಕ್ಕೆ ಪಡೆದು ತೆರವುಗೊಳಿಸಲಾಗುವುದು' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ರಾಜ್‌ಕುಮಾರ್, ವಿಷ್ಣುವರ್ಧನ್, ಶಂಕರನಾಗ್, ಸಮಾಜ ಸುಧಾರಕ ಬಸವಣ್ಣನ ಪ್ರತಿಮೆಗಳು ಈ ಪಟ್ಟಿಯಲ್ಲಿ ಇವೆ. ಅಕ್ರಮ ನಿರ್ಮಾಣ ಎಂಬುದು ಜನರಿಗೆ ಅರ್ಥವಾಗಿಲ್ಲ. ಏಕಾಏಕಿ ತೆರವುಗೊಳಿಸಿದರೆ ನಾವು ಈ ನಟರು ಮತ್ತು ಸಮಾಜ ಸುಧಾರಕರ ವಿರುದ್ಧ ಇದ್ದೇವೆ ಎಂದು ಅವರು ಭಾವಿಸುತ್ತಾರೆ. ಅದಕ್ಕೆ ಅವಕಾಶ ಆಗದಂತೆ ಅವರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ' ಎಂದು ಹೇಳಿದರು.

'ಗುರುವಾರ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ. ಈ ಪ್ರತಿಮೆಗಳ ತೆರವಿಗೆ ಇನ್ನಷ್ಟು ಸಮಯ ಕೇಳಲಾಗುವುದು' ಎಂದು ತಿಳಿಸಿದರು.



ಸೈಕಲ್ ರ್‍ಯಾಲಿಯಲ್ಲಿ ಪಾಲ್ಗೊಂಡಿರುವ ಯೋಧರನ್ನು ಯಲಹಂಕದ ಸಿಆರ್‌ಪಿಎಫ್ ಕೇಂದ್ರದಲ್ಲಿ ಸ್ವಾಗತಿಸಲಾಯಿತು. ಶಾಸಕ ಎಸ್‌.ಆರ್‌.ವಿಶ್ವನಾಥ್, ಸಿಆರ್‌ಪಿಎಫ್ ಕರ್ನಾಟಕ ಮತ್ತು ಕೇರಳ ವಲಯದ ಪೊಲೀಸ್ ಮಹಾನಿರ್ದೇಶಕ ಜಿ.ವಿ.ಎಚ್‌.ಗಿರಿಪ್ರಸಾದ್, ಉಪಪೊಲೀಸ್ ಮಹಾನಿರ್ದೇಶಕರಾದ ಹಿಮಾನ್ಶುಕುಮಾರ್, ಎಂ.ಎಲ್‌.ರವೀಂದ್ರ ಇದ್ದರು

ಸಿಆರ್‌ಪಿಎಫ್ ಯೋಧರ ಸೈಕಲ್ ರ್‍ಯಾಲಿಗೆ ಸ್ವಾಗತ

ಯಲಹಂಕ: 75ನೇ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಸಿಆರ್‌ಪಿಎಫ್ ವತಿಯಿಂದ ಕನ್ಯಾಕುಮಾರಿಯಿಂದ ದೆಹಲಿಯ ರಾಜ್ ಘಾಟ್ ವರೆಗೆ ಹಮ್ಮಿಕೊಂಡಿರುವ ಸೈಕಲ್ ರ್‍ಯಾಲಿ ಯಲಹಂಕದ ಕೇಂದ್ರೀಯ ಮೀಸಲು ಪೊಲೀಸ್ ಪಡೆ ಕೇಂದ್ರಕ್ಕೆ ಬುಧವಾರ ತಲುಪಿತು.

ಶಾಸಕ ಎಸ್.ಆರ್.ವಿಶ್ವನಾಥ್, ಸಿಆರ್‌ಪಿಎಫ್‌ನ ಕರ್ನಾಟಕ ಮತ್ತು ಕೇರಳ ವಲಯದ ಪೊಲೀಸ್ ಮಹಾನಿರ್ದೇಶಕ ಜಿ.ವಿ.ಎಚ್. ಗಿರಿಪ್ರಸಾದ್, ಉಪಪೊಲೀಸ್ ಮಹಾನಿರ್ದೇಶಕರಾದ ಹಿಮಾನ್ಶುಕು ಮಾರ್, ಎಂ.ಎಲ್.ರವೀಂದ್ರ ಸೇರಿದಂತೆ ಹಿರಿಯ ಅಧಿಕಾರಿಗಳು ತಂಡದ ಸದಸ್ಯರನ್ನು ಸ್ವಾಗತಿಸಿದರು.

ದೇಶದ ಗಡಿಗಳಲ್ಲಿ ಕಠಿಣ ಪರಿಸ್ಥಿತಿಗಳಲ್ಲಿಯೂ ಸಹ ಶತ್ರುಗಳ ವಿರುದ್ಧ ಹೋರಾಡುವ ಯೋಧರು, ದೇಶವನ್ನು ರಕ್ಷಿಸುವ ಕಾರ್ಯವನ್ನು ಯಶಸ್ವಿಯಾಗಿ ನಿಭಾಯಿಸುವುದರ ಜೊತೆಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಇಂತಹ ರ್‍ಯಾಲಿಯನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಕಾರ್ಯ ಎಂದು ಶಾಸಕ ವಿಶ್ವನಾಥ್ ಹೇಳಿದರು.

ಸೆಪ್ಟೆಂಬರ್ 2ರಂದು ಬೆಳಗ್ಗೆ 6 ಗಂಟೆಗೆ ಇಲ್ಲಿಂದ ಹೊರಡುವ ರ್‍ಯಾಲಿಯ ಜೊತೆಗೆ ಇನ್ನೂ 20 ಯೋಧರು ಸೇರ್ಪಡೆಯಾಗಲಿದ್ದಾರೆ. ಈ ರ್‍ಯಾಲಿಯು ಹೈದರಾಬಾದ್, ನಾಗಪುರ ಮಾರ್ಗವಾಗಿ ಅಕ್ಟೋಬರ್ 2ರಂದು ದೆಹಲಿ ತಲುಪಲಿದೆ.

ಕಾವೇರಿ ನದಿ ನೀರು; ಸಂಕಷ್ಟ ಸೂತ್ರ ಪಾಲಿಸಲು ಸಲಹೆ

ಮೈಸೂರು: 'ಮಳೆ ಬೀಳದ ವರ್ಷದಲ್ಲಿ ಕಾವೇರಿ ನದಿ ನೀರು ಪ್ರಾಧಿಕಾರ ಹೇಳಿದಷ್ಟು ನೀರನ್ನು ತಮಿಳುನಾಡಿಗೆ ಬಿಡುವ ಬದಲು ಸಂಕಷ್ಟ ಸೂತ್ರ ಪಾಲಿಸಬೇಕು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಲಹೆ ನೀಡಿದರು.

'ಉತ್ತಮ ಮಳೆಯಾಗಿ ಜಲಾಶಯಗಳು ತುಂಬಿದ್ದರೆ, ಪ್ರಾಧಿಕಾರ ಹೇಳಿದಷ್ಟು ನೀರನ್ನು ಬಿಡಬಹುದಿತ್ತು. ಆದರೆ, ಜಲಾಶಯಗಳೇ ತುಂಬಿಲ್ಲದಿರುವಾಗ ಹೇಳಿದಷ್ಟು ನೀರನ್ನು ಬಿಡುವುದು ಸಾಧ್ಯವಿಲ್ಲ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಜಿಐ ಟ್ಯಾಗ್ ಪಡೆದ ಬಳಿಕ ಹೆಚ್ಚಿದ ಬೇಡಿಕೆ, ಬೆಲೆ

₹600 ಕೋಟಿ ಮೊತ್ತದ 'ಶಿರಸಿ ಸುಪಾರಿ' ರಫ್ತು

• ಗಣಪತಿ ಹೆಗಡೆ

ಶಿರಸಿ: ಜಾಗತಿಕ ಸೂಚಿ (ಜಿಐ ಟ್ಯಾಗ್) ಪಡೆದ ಬಳಿಕ 'ಶಿರಸಿ ಸುಪಾರಿ' ಎರಡು ವರ್ಷಗಳಲ್ಲಿ ₹ 600 ಕೋಟಿ ಮೊತ್ತದ ರಫ್ತು ವಹಿವಾಟು ಕಂಡಿದೆ.

ಶಿರಸಿ, ಸಿದ್ದಾಪುರ ಮತ್ತು ಯಲ್ಲಾಪುರ ಭಾಗದಲ್ಲಿ ಬೆಳೆಯಲಾಗುವ ಕೆಂಪಡಿಕೆ, ಚಾಲಿಗೆ ಇಲ್ಲಿನ ಟಿಎಸ್‌ಎಸ್ ಸಂಸ್ಥೆ 2019ರ ಮಾರ್ಚ್‌ನಲ್ಲಿ ಜಿಐ ಟ್ಯಾಗ್ ಪಡೆದುಕೊಂಡಿದೆ. ಈ ಟ್ಯಾಗ್ ಅಡಿಯಲ್ಲಿ ಸಂಸ್ಥೆ 2.04 ಲಕ್ಷ ಕ್ವಿಂಟಲ್ ಅಡಿಕೆ ವಹಿವಾಟು ನಡೆಸಿದೆ. ಇದು ದಾಖಲೆ ಪ್ರಮಾಣದ ವಹಿವಾಟು ಎಂಬುದು ಮಾರುಕಟ್ಟೆ ತಜ್ಞರ ಅಭಿಪ್ರಾಯ.

ಜಿಐ ಟ್ಯಾಗ್ ಪಡೆಯುವುದಕ್ಕೂ ಮೊದಲಿನ ಆರ್ಥಿಕ ವಹಿವಾಟಿಗೆ ಹೋಲಿಕೆ ಮಾಡಿದರೆ ಎರಡು ವರ್ಷಗಳಲ್ಲಿ ವ್ಯಾಪಾರದ ಮೊತ್ತ ಶೇ 25ರಿಂದ 30ರಷ್ಟು ಏರಿಕೆ ಕಂಡಿದೆ ಎಂದು ಸಂಸ್ಥೆ ಹೇಳಿದೆ.



ಶಿರಸಿಯ ಟಿಎಸ್‌ಎಸ್ ಸಂಸ್ಥೆಯ ವ್ಯಾಪಾರಿ ಅಂಗಳದಲ್ಲಿ ರಾಶಿ ಹಾಕಲಾಗಿರುವ ಕೆಂಪಡಿಕೆ ಮತ್ತು ಚಾಲಿ

'ಜಿಐ ಟ್ಯಾಗ್ ಪಡೆದುಕೊಂಡ ಬಳಿಕ ಉತ್ತರ ಭಾರತದ ಮಾರುಕಟ್ಟೆಯಲ್ಲಿ ಈ ಭಾಗದ ಅಡಿಕೆಗೆ ಬೇಡಿಕೆ ವೃದ್ಧಿಯಾಗಿದೆ. ದರವೂ ಹೆಚ್ಚಿದೆ' ಎನ್ನುತ್ತಾರೆ ಟಿಎಸ್‌ಎಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ರವೀಶ ಹೆಗಡೆ.

'ರೈತರಿಂದ ಖರೀದಿಸಿದ ಅಡಿಕೆಯನ್ನು ಗುಣಮಟ್ಟ ಆಧರಿಸಿ ಪ್ರತ್ಯೇಕಿಸುತ್ತೇವೆ. ಬೆಟ್ಟೆ, ಕೆಂಪಡಿಕೆ, ಚಾಲಿಯ ಪ್ರತ್ಯೇಕ ಬ್ರ್ಯಾಂಡಿಂಗ್ ಗಳನ್ನು ಪ್ರಾದೇಶಿಕ ಬೇಡಿಕೆಗೆ ಅನುಗುಣವಾಗಿ ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಕ್ಕೆ ಕಳುಹಿಸುತ್ತಿದ್ದೇವೆ. ರಾಜ್ಯದಲ್ಲೂ ಹಲವೆಡೆ ಬೇಡಿಕೆ ಇದೆ' ಎನ್ನುತ್ತಾರೆ ಅವರು.

'ಅಡಿಕೆ ಬೆಲೆ ಸ್ಥಿತ್ಯಂತರಗೊಳ್ಳುತ್ತಲೇ ಇತ್ತು. ಜಿಐ ಟ್ಯಾಗ್ ಪಡೆದ ಬಳಿಕ 'ಶಿರಸಿ ಸುಪಾರಿ' ಬ್ರ್ಯಾಂಡ್ ಅಡಿಯಲ್ಲಿ ರಫ್ತು ಚಟುವಟಿಕೆ ಕೈಗೊಂಡಿದ್ದು ವಹಿವಾಟು ಹೆಚ್ಚುವ ಜತೆಗೆ ಉತ್ತಮ ಬೆಲೆ ಸಿಗುವಂತೆ ಮಾಡಿದೆ' ಎಂದು ಅಭಿಪ್ರಾಯಪಟ್ಟರು.

ಜಿಐ ಟ್ಯಾಗ್ ಪಡೆದ ಬಳಿಕ ಶಿರಸಿ ಸುಪಾರಿಯ ಗುಣಮಟ್ಟದ ಬಗ್ಗೆ ಉತ್ತರ ಭಾರತವೂ ಸೇರಿದಂತೆ ದೇಶದ ವಿವಿಧೆಡೆ ಗ್ರಾಹಕರಲ್ಲಿ ವಿಶ್ವಾಸ ಮೂಡಿದ್ದೆ ಉತ್ತಮ ಬೆಲೆ ದೊರೆಯಲು ಕಾರಣ.

ರವೀಶ ಹೆಗಡೆ, ಟಿಎಸ್‌ಎಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ

ಕೆಂಪು ಅಡಿಕೆಗೆ ದಾಖಲೆ ಬೆಲೆ 11

ಆನಂದ್ ಸಿಂಗ್ ಅಳಿಯನಿಗೆ ಕ್ಷಮಾಪಣೆ ಕೇಳಲು ಗಡುವು

ಹೊಸಪೇಟೆ (ವಿಜಯನಗರ): ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿರುವ ಆರೋಪ ಎದುರಿಸುತ್ತಿರುವ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರ ಸೋದರ ಅಳಿಯ ಸಂದೀಪ್ ಸಿಂಗ್ ಎರಡು ದಿನಗಳೊಳಗೆ ಬಹಿರಂಗ ಕ್ಷಮೆ ಯಾಚಿಸಬೇಕೆಂದು ವಾಲ್ಮೀಕಿ ಸಮಾಜ ಗಡುವು ನೀಡಿದೆ.

ಬುಧವಾರ ಸಂಜೆ ನಗರದಲ್ಲಿ ಸಭೆ ಸೇರಿದ ತಾಲ್ಲೂಕು ವಾಲ್ಮೀಕಿ ಸಮಾಜದ ಇನ್ನೂರಕ್ಕೂ ಹೆಚ್ಚು ಜನರು ಪೊಲೀಸ್ ಠಾಣೆಗೆ ತೆರಳಿ ಸಂದೀಪ್ ಸಿಂಗ್ ಅವರನ್ನು ಠಾಣೆಗೆ ಕರೆಯಿಸಿ, ಕ್ಷಮೆ ಯಾಚಿಸಲಿ ಎಂದು ಪಟ್ಟು ಹಿಡಿದರು. ಈ ಸಂಬಂಧ ಸಂದೀಪ್ ಸಿಂಗ್ ಅವರನ್ನು 'ಪ್ರಜಾವಾಣಿ' ಹಲವು ಸಲ ಸಂಪರ್ಕಿಸಿದರೂ ಅವರು ಕರೆ ಸ್ವೀಕರಿಸಲಿಲ್ಲ.

> ಈ ವಿಷಯ ಈಗಷ್ಟೇ ನನ್ನ ಗಮನಕ್ಕೆ ಬಂದಿದೆ. ಅದರ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡ ನಂತರ ಪ್ರತಿಕ್ರಿಯೆ ಕೊಡುವೆ
> **ಆನಂದ್ ಸಿಂಗ್**, ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಖಾತೆ

ಶಾಲಾ ಕಟ್ಟಡಗಳಿಗೆ ಎನ್‌ಒಸಿ: 14 ಶಿಫಾರಸುಗಳು

ನೆಲ ಅಂತಸ್ತಿನ ಶಾಲೆಗಳಿಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲ ಮಹಡಿ ಮಾತ್ರ ಇರುವ ಶಾಲೆಗಳಿಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯುವುದರಿಂದ ವಿನಾಯಿತಿ ನೀಡಿದ್ದು, 15 ಮೀಟರ್‌ಗಿಂತ ಕಡಿಮೆ ಎತ್ತರದ ಶಾಲಾ ಕಟ್ಟಡಗಳಿಗೆ ಅಗ್ನಿ ಸುರಕ್ಷತಾ ಎನ್‌ಒಸಿ ನೀಡುವ ಅಧಿಕಾರ ಆಯಾ ಜಿಲ್ಲೆಗಳ ಅಗ್ನಿ ಸುರಕ್ಷತಾ ಅಧಿಕಾರಿಗಳಿಗೆ ನೀಡಲು ಶಿಫಾರಸು ಮಾಡಲಾಗಿದೆ.

ಖಾಸಗಿ ಅನುದಾನಿತ, ಅನುದಾನರಹಿತ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳ ಕಟ್ಟಡ ಸುರಕ್ಷತಾ ಪ್ರಮಾಣಪತ್ರದ ಅಗತ್ಯತೆ ಕುರಿತು ವಿಧಾನಪರಿಷತ್ ಸದಸ್ಯ ಎಸ್.ವಿ.ಸಂಕನೂರ ಅಧ್ಯಕ್ಷತೆಯಲ್ಲಿ ಪರಿಶೀಲನೆಗಾಗಿ ರಚಿಸಿದ ಪರಿಶೀಲನಾ ಸಮಿತಿಯು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಬುಧವಾರ ಸಲ್ಲಿಸಿರುವ ವರದಿಯಲ್ಲಿ 14 ಶಿಫಾರಸುಗಳನ್ನು ನೀಡಲಾಗಿದೆ.

ಪ್ರಮುಖ ಶಿಫಾರಸುಗಳು:

- ನೆಲ ಮಹಡಿ ಹೊಂದಿದ ಶಾಲಾ-ಕಾಲೇಜುಗಳಿಗೆ ನಿಗದಿಪಡಿಸಿರುವ ಓವರ್ ಹೆಡ್ ಟ್ಯಾಂಕಿನ ಸಾಮರ್ಥ್ಯ ಕಡಿಮೆಗೊಳಿಸಿ, 2,000 ದಿಂದ 5,000 ಲೀಟರ್‌ಗಳ ಸಾಮರ್ಥ್ಯದ ಟ್ಯಾಂಕ್ ಅಳವಡಿಸಿಕೊಳ್ಳಬಹುದು.
- ಶಾಲಾ ಕಟ್ಟಡಗಳ ಸ್ಥಿರತೆ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ವಿಕೇಂದ್ರೀಕರಿಸಬೇಕು. ನೆಲಮಹಡಿ ಮತ್ತು ಎಲ್ಲ ಅಂತಸ್ತುಗಳ ಶಾಲಾ ಕಟ್ಟಡಗಳಿಗೆ ಸ್ಥಿರತೆ ಪ್ರಮಾಣ ನೀಡುವ ಅಧಿಕಾರವನ್ನು (15 ಮೀಟರ್‌ಗಳಿಗಿಂತ ಕಡಿಮೆ ಎತ್ತರವಿರುವ ಶಾಲೆಗಳಿಗೆ) ಎಕ್ಸಿಕ್ಯೂಟಿವ್ ಎಂಜಿನಿಯರ್ ಬದಲಿಗೆ ಸಹಾಯಕ ಎಕ್ಸಿಕ್ಯೂಟಿವ್ ಎಂಜಿನಿಯರ್ ಅವರಿಗೆ ನೀಡಬಹುದು.
- ಸುವರ್ಣ ಮಹೋತ್ಸವ, ವಜ್ರ ಮಹೋತ್ಸವ ಹಾಗೂ ಶತಮಾನೋತ್ಸವ ಕಂಡ ಶಾಲಾ- ಕಾಲೇಜುಗಳ ಶಿಕ್ಷಣ ಸಂಸ್ಥೆಯವರು ಕಟ್ಟಡದ ನೀಲನಕ್ಷೆ, ಕಟ್ಟಡ ನಿರ್ಮಾಣ ಮತ್ತು ಮೇಲ್ವಿಚಾರಣೆ ಮಾಡಿದವರಿಂದ ಪ್ರಮಾಣ ಪತ್ರ ಒದಗಿಸುವುದು ಕಷ್ಟವಾಗುವುದರಿಂದ ಇವುಗಳಿಗೆ ವಿನಾಯಿತಿ ನೀಡಬೇಕು.
- ನೂತನವಾಗಿ ಕಟ್ಟಿಸಿದ ಮತ್ತು 30 ವರ್ಷದೊಳಗಿನ ಆರ್‌ಸಿಸಿ ಶಾಲಾ-ಕಾಲೇಜು ಕಟ್ಟಡಗಳಿಗೆ ಸುರಕ್ಷತಾ ಪ್ರಮಾಣ ಪತ್ರ ನವೀಕರಿಸುವ ಅವಧಿಯನ್ನು 5 ವರ್ಷಗಳ ಬದಲಿಗೆ 10 ವರ್ಷಕ್ಕೊಮ್ಮೆ ಮಾಡುವುದು. 30 ವರ್ಷ ಮೇಲ್ಪಟ್ಟ ಕಟ್ಟಡಗಳಿಗೆ ಈಗಿರುವ ನಿಯಮದ ಅನ್ವಯ 5 ವರ್ಷಕ್ಕೊಮ್ಮೆ ನವೀಕರಿಸುವ ಪದ್ಧತಿ ಮುಂದುವರಿಸಬೇಕು.
- ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ಮತ್ತು ನ್ಯಾಷನಲ್ ಬಿಲ್ಡಿಂಗ್ ಕೋಡ್ ನಿಯಮಗಳ ಅನ್ವಯ ಶಾಲಾ-ಕಾಲೇಜು ಕಟ್ಟಡಗಳಲ್ಲಿ ಅಗ್ನಿ ಸುರಕ್ಷತಾ ನಿಯಮಗಳನ್ನು ಅಳವಡಿಸಬೇಕು. ಇದಕ್ಕಾಗಿ ಮುಂದಿನ ಬಜೆಟ್‌ನಲ್ಲಿ ಹಣ ನಿಗದಿ ಮಾಡಬೇಕು.
- ಗ್ರಾಮಾಂತರ, ಹೋಬಳಿ, ಪಟ್ಟಣ ಪಂಚಾಯಿತಿ, ತಾಲ್ಲೂಕು ಮಟ್ಟದಲ್ಲಿರುವ ಶಾಲೆ ಕಾಲೇಜುಗಳು ಅಗ್ನಿಶಾಮಕ ಸೌಲಭ್ಯದಿಂದ ದೂರವಿವೆ. ಆದ್ದರಿಂದ ಈ ಪ್ರದೇಶಗಳಲ್ಲಿ ಇರುವ ಶಾಲೆ ಕಾಲೇಜುಗಳಿಗೆ ಪ್ರಮಾಣ ಪತ್ರ ಪಡೆಯಲು ನಿಗದಿ ಪಡಿಸಿರುವ ಶುಲ್ಕ ₹20 ಸಾವಿರದಿಂದ ₹5 ಸಾವಿರಕ್ಕೆ, ಜಿಲ್ಲಾ ಮಟ್ಟದಲ್ಲಿರುವ ಶಾಲೆಗಳಿಗೆ ₹10 ಸಾವಿರಕ್ಕೆ ಕಡಿಮೆಗೊಳಿಸಲು ಕ್ರಮ ತೆಗೆದುಕೊಳ್ಳಬೇಕು

ಚರ್ಚಿಸಿ ಕ್ರಮ

'ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ ಅಧಿಕಾರಿಗಳ ಜತೆ ಚರ್ಚಿಸಿ ಶಿಫಾರಸು ಜಾರಿ ತರಲಾಗುವುದು. ಶಾಲಾ ಕಟ್ಟಡಗಳ ಸುರಕ್ಷತೆಯ ಬಗ್ಗೆ ಗಮನಹರಿಸಲಾಗುವುದು. ಹಿಂದೆ ಅಧಿಕಾರಿಗಳು ಕೊಟ್ಟ ವರದಿಯನ್ನು ಅವಲೋಕಿಸಲಾಗುವುದು. ಸರ್ಕಾರಿ ಶಾಲೆಗಳಿಗೂ ಅನ್ವಯಿಸಲಾಗುವುದು' ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.


ಗಣೇಶೋತ್ಸವಕ್ಕೆ ಅನುಮತಿ ಸಾಧ್ಯತೆ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿ ಕೋವಿಡ್ ನಿರ್ಬಂಧಗಳನ್ನು ವಿಧಿಸಿ ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ಸುಳಿವು ನೀಡಿದ್ದಾರೆ.

ಬಿಜೆಪಿ ರಾಜ್ಯ ಕಚೇರಿಗೆ ಬುಧವಾರ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಹಿಂದೂ ಸಂಘಟನೆಗಳ ಭಾವನೆಯನ್ನು ಅರ್ಥ ಮಾಡಿಕೊಂಡು ಗಣೇಶ ಹಬ್ಬ ನಡೆಸಲು ಅನುಮತಿ ನೀಡುವ ಸಾಧ್ಯತೆ ಇದೆ ಎಂದು ಹೇಳಿದರು.

ಗಣೇಶೋತ್ಸವ ಆಚರಿಸಲು ಅವಕಾಶ ನೀಡಬೇಕು ಎಂಬುದು ಬಹುತೇಕರ ಒತ್ತಾಯವಾಗಿದೆ. ಅವರ ಭಾವನೆಗಳಿಗೆ ಬೆಲೆ ನೀಡುವುದು ಸರ್ಕಾರದ ಕರ್ತವ್ಯ. ಆದ್ದರಿಂದ ಅನುಮತಿ ನೀಡಲಾಗುವುದು. ಹಬ್ಬದ ಆಚರಣೆ ಹೇಗಿರಬೇಕು, ಎಷ್ಟು ಜನ ಭಾಗವಹಿಸಬೇಕು, ವಿಧಿಸಬೇಕಾದ ನಿರ್ಬಂಧಗಳ ಬಗ್ಗೆ ಮುಖ್ಯಮಂತ್ರಿಯವರು ಅಧಿಕಾರಿಗಳ ಜತೆ ಚರ್ಚಿಸಿ ತೀರ್ಮಾನಿಸಲಿದ್ದಾರೆ ಎಂದು ಈಶ್ವರಪ್ಪ ಹೇಳಿದರು.





ಐಎಎಸ್ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಬೇಕಾದರೆ ಕೋಚಿಂಗ್ ತೆಗೆದುಕೊಳ್ಳಬೇಕೇ, ಯಾವ ರೀತಿಯ ಕೋಚಿಂಗ್ ಸೂಕ್ತ ಎಂಬ ಪ್ರಶ್ನೆಗಳು ಸಾಮಾನ್ಯ. ಈ ನಿಟ್ಟಿನಲ್ಲಿ ಆನ್‌ಲೈನ್ ಕೋಚಿಂಗ್ ಎಷ್ಟು ಉತ್ತಮ?

ಐಎಎಸ್ ಸಿದ್ಧತೆಗೆ ಯಾವ ಕೋಚಿಂಗ್ ಸೂಕ್ತ?

ಆರ್.ಬಿ. ಗುರುಬಸವರಾಜ

ದೇಶದ ಕಠಿಣ ಪರೀಕ್ಷೆಗಳಲ್ಲಿ ಒಂದಾದ ಐಎಎಸ್ ಪರೀಕ್ಷೆಯಲ್ಲಿ ಯಶಸ್ವಿಯಾಗುವುದು ಬಹುದೊಡ್ಡ ಸವಾಲಿನ ಕೆಲಸ. ಪಾರಂಪರಿಕ ಸಿದ್ಧತೆಗಿಂತ ತಾಂತ್ರಿಕ ನೆರವಿನ ಸಿದ್ಧತೆ ಇಂದು ಹೆಚ್ಚು ಪರಿಣಾಮಕಾರಿಯಾಗಿದೆ. ಮಾಹಿತಿ ತಂತ್ರಜ್ಞಾನದ ಕ್ಷಿಪ್ರ ಬೆಳವಣಿಗೆಯಿಂದ ಬೆರಳ ತುದಿಯಲ್ಲಿಯೇ ಸಾಕಷ್ಟು ಸಂಪನ್ಮೂಲ ದೊರೆಯುತ್ತಿದೆ. ಇಂಟರ್‌ನೆಟ್‌ನ ಅನ್ವಯಿಕದೊಂದಿಗೆ ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್, ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್‌ನಂತಹ ಗ್ಯಾಜೆಟ್ ಬಳಕೆಯೊಂದಿಗೆ ಐಎಎಸ್ ತಯಾರಿ ಸುಲಭವಾಗಿದೆ. ಎಲ್ಲವೂ ಆನ್‌ಲೈನ್‌ನಲ್ಲಿ ಲಭ್ಯವಿರುವಾಗ ಐಎಎಸ್ ಕೋಚಿಂಗ್ ಅವಕಾಶವನ್ನು ಆನ್‌ಲೈನ್ ಮೂಲಕವೂ ಪಡೆಯಬಹುದಾಗಿದೆ.

ಕೋಚಿಂಗ್ ಅಗತ್ಯವೇ?

ಐಎಎಸ್ ಸಿದ್ಧತೆಗೆ ಸಂಪನ್ಮೂಲಗಳ ಅಗತ್ಯವಿದೆ. ಆಫ್‌ಲೈನ್ ಮತ್ತು ಆನ್‌ಲೈನ್‌ನಲ್ಲಿ ಸಾಕಷ್ಟು ಸಂಪನ್ಮೂಲ ಲಭ್ಯವಿರುವಾಗ ಕೋಚಿಂಗ್ ಅಗತ್ಯವೇ ಎಂಬ ಪ್ರಶ್ನೆ ಮೂಡದಿರದು. 'ಅತಿಯಾದರೆ ಅಮೃತವೂ ವಿಷ' ಎಂಬಂತೆ ಯಾವ ಮಾಹಿತಿಯನ್ನು ಓದಬೇಕು? ಹೇಗೆ ಓದಬೇಕು? ಯಾವುದಕ್ಕೆ ಎಷ್ಟು ಪ್ರಾಶಸ್ತ್ಯ ಕೊಡಬೇಕು? ಸಂಪನ್ಮೂಲಗಳ ನಿರ್ವಹಣೆ ಹೇಗಿರಬೇಕು? ದೌರ್ಬಲ್ಯಗಳನ್ನು ಮೆಟ್ಟಿ ನಿಲ್ಲುವ ಮಾರ್ಗಗಳಾವುವು? ಎಂಬಿತ್ಯಾದಿ ಅಂಶಗಳತ್ತ ಗಮನ ಹರಿಸಲು ಕೋಚಿಂಗ್ ಅನಿವಾರ್ಯ.

ಆನ್‌ಲೈನ್ ಕೋಚಿಂಗ್: ಕೋವಿಡ್‌ನಂತಹ ವಿಷಮ ಪರಿಸ್ಥಿತಿಯಲ್ಲಿ ಆನ್‌ಲೈನ್ ಕೋಚಿಂಗ್ ಅನಿವಾರ್ಯವಾಗುತ್ತಿದೆ. ಐಎಎಸ್ ಸಿದ್ಧತೆಗೂ ಆನ್‌ಲೈನ್ ಮಾದರಿಗಳು ಲಭ್ಯವಿದ್ದು, ಉತ್ತಮ ಅಧ್ಯಯನ ಸಾಮಗ್ರಿಗಳನ್ನು ಒದಗಿಸುತ್ತದೆ. ಆಡಿಯೊ-ವಿಡಿಯೊ ರೂಪದಲ್ಲಿರುವ ಸಾಮಗ್ರಿಗಳು ಹೆಚ್ಚು ಪರಿಣಾಮಕಾರಿ ಕಲಿಕೆಗೆ ನಿರ್ಣಾಯಕ ಪಾತ್ರ ವಹಿಸಿವೆ. ಮನೆಯಲ್ಲಿಯೇ ಸುರಕ್ಷಿತವಾಗಿದ್ದು ಕಲಿಯಲು ಆಸಕ್ತಿ ಇರುವ ಆಕಾಂಕ್ಷಿಗಳಿಗೆ ಆನ್‌ಲೈನ್ ತರಬೇತಿ ಉತ್ತಮ ವೇದಿಕೆ.

ಅನುಕೂಲಗಳು

- ಐಎಎಸ್ ಸಿದ್ಧತೆಗೆ ಆನ್‌ಲೈನ್ ಕೋಚಿಂಗ್ ವಿಭಿನ್ನ ಅನುಕೂಲತೆಗಳನ್ನು ಒದಗಿಸುತ್ತದೆ. ಆಕಾಂಕ್ಷಿಗಳಲ್ಲಿ ಸ್ವ-ಅಧ್ಯಯನ ತಂತ್ರಗಾರಿಕೆಯನ್ನು ವೃದ್ಧಿಸುತ್ತದೆ. ಸ್ವ-ಅಧ್ಯಯನವು ಪರಿಣಾಮಕಾರಿ ಕಲಿಕಾ ತಂತ್ರವಾಗಿದ್ದು, ಕಲಿಕಾರ್ಥಿಗಳು ತಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗುರುತಿಸಲು ಆನ್‌ಲೈನ್ ಕೋಚಿಂಗ್ ನೆರವಾಗುತ್ತದೆ. ಆನ್‌ಲೈನ್ ಕೋಚಿಂಗ್‌ನಲ್ಲಿ ದೌರ್ಬಲ್ಯಗಳಿಗೆ ಸೂಕ್ತ ಮಾರ್ಗೋಪಾಯ ಸೂಚಿಸುವ ಮೂಲಕ ವೇಗವರ್ಧಕಗಳನ್ನಾಗಿ ಮಾಡಲಾಗುತ್ತದೆ.
- ಆನ್‌ಲೈನ್ ಕೋಚಿಂಗ್‌ನಿಂದ ಅಧ್ಯಯನ ಸಾಮಗ್ರಿಗಳ ಕೊರತೆ ಬಾಧಿಸುವುದಿಲ್ಲ. ತಜ್ಞರಿಂದ ರೂಪಿಸಲ್ಪಟ್ಟ ಗುಣಮಟ್ಟದ ಅಧ್ಯಯನ ಸಾಮಗ್ರಿಗಳನ್ನು ಕೋಚಿಂಗ್ ಸಂಸ್ಥೆಗಳು ಸಾಕಷ್ಟು ಮುಂಚಿತವಾಗಿ ನೀಡುವ ಮೂಲಕ ಸಾಮಗ್ರಿ ಕೊರತೆ ನೀಗಿಸುತ್ತವೆ.
- ಅನುಕೂಲಕರ ಸಮಯದಲ್ಲಿ ಕಲಿಯಲು ಅವಕಾಶ ಹೆಚ್ಚಿರುತ್ತದೆ. ಆನ್‌ಲೈನ್ ಕೋಚಿಂಗ್ ಮೂಲಕ ನೀಡುವ ಬಹುತೇಕ ಪಾಠಗಳು ಪ್ರಿ-ರೆಕಾರ್ಡೆಡ್ ವಿಡಿಯೊಗಳಾದ್ದರಿಂದ ಕಲಿಕಾರ್ಥಿಯು ತನಗೆ ಅನುಕೂಲವಾದ ಸಮಯದಲ್ಲಿ, ಅನುಕೂಲವಾದ ಸ್ಥಳದಲ್ಲಿ ಕುಳಿತು ಕಲಿಯಲು ಸ್ವಾತಂತ್ರ್ಯ ಇರುತ್ತದೆ.
- ಕೋಚಿಂಗ್ ಸೆಂಟರ್ ಮತ್ತು ಮೆಸ್‌ಗಳಿಗಾಗಿ ಪರದಾಡಬೇಕಾದ ಅಗತ್ಯ ಇರುವುದಿಲ್ಲ. ಮನೆಯಲ್ಲಿಯೇ ಸುರಕ್ಷಿತವಾಗಿದ್ದು, ಮನೆ ಆಹಾರದ ಸವಿಯೊಂದಿಗೆ ಕೋಚಿಂಗ್ ಪಡೆಯುವ ಅವಕಾಶ. ದಿವ್ಯಾಂಗ ಚೇತನರಿಗೆ ಆನ್‌ಲೈನ್ ಕೋಚಿಂಗ್ ಅತ್ಯುಪಯುಕ್ತವಾದುದು.
- ಸಂಕೀರ್ಣ ಪರಿಕಲ್ಪನೆಗಳನ್ನು ಸುಲಭವಾಗಿ ಪರಿಹರಿಸುವ ತಂತ್ರಗಾರಿಕೆ ಇರುತ್ತದೆ. ಅನುಭವಿ ಬೋಧಕರ ವಿಷಯ ನಿರೂಪಣೆ ಜೊತೆಗೆ ಅನುಮಾನ ಮತ್ತು ಪ್ರಶ್ನೆಗಳನ್ನು ತಜ್ಞರೊಂದಿಗೆ ಕೇಳಿ ಪರಿಹರಿಸಿಕೊಳ್ಳುವ ಅವಕಾಶ ಇರುತ್ತದೆ. ಅಗತ್ಯ ಎನಿಸಿದರೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ತರಬೇತುದಾರರಿಂದ ಕೋಚಿಂಗ್ ನೀಡಲಾಗುತ್ತದೆ.
- ನಿಗದಿತ ಹಾಗೂ ನಿರ್ದಿಷ್ಟವಾದ ಅಧ್ಯಯನ ಸಾಮಗ್ರಿಗಳು ಲಭ್ಯವಾಗುವುದರಿಂದ ಅಧ್ಯಯನ ಸಾಮಗ್ರಿಗಳಿಗಾಗಿ ಹುಡುಕಾಡುವ ಶ್ರಮ ತಪ್ಪುತ್ತದೆ. ಐಎಎಸ್ ಸಿದ್ಧತೆಗೆ ಸಾಕಷ್ಟು ಮಾಹಿತಿ ದೊರೆಯುತ್ತಿದೆ. ಆದರೆ ಆನ್‌ಲೈನ್ ಕೋಚಿಂಗ್‌ನಲ್ಲಿ ಪರೀಕ್ಷಾ ಪಠ್ಯಕ್ರಮ ಕೇಂದ್ರಿತ ಅಧ್ಯಯನ ಸಾಮಗ್ರಿಗಳನ್ನು ಮಾತ್ರ ಒದಗಿಸುವುದರಿಂದ ಅಧ್ಯಯನದ ದಿಕ್ಕು ಗುರಿಯತ್ತ ಸಾಗುತ್ತದೆ.
- ಪಠ್ಯಕ್ರಮ ಬದಲಾದಂತೆಲ್ಲಾ ಆನ್‌ಲೈನ್ ತರಬೇತಿಯೂ ಸಹ ನವೀಕೃತಗೊಳ್ಳುತ್ತದೆ. ನೀವು ಬಳಸುವ ಗ್ಯಾಜೆಟ್‌ಗಳಲ್ಲೇ ಮಾಹಿತಿಯನ್ನು ಅಪ್‌ಡೇಟ್ ಮಾಡಲಾಗುತ್ತದೆ. ಹಾಗಾಗಿ ಅಪ್‌ಡೇಟ್ ಮಾಹಿತಿಗಾಗಿ ಹುಡುಕುವ ಶ್ರಮ ತಪ್ಪುತ್ತದೆ.
- ಆನ್‌ಲೈನ್ ಕೋಚಿಂಗ್‌ನಲ್ಲಿ ನಿಮ್ಮ ಬರಹ ಶೈಲಿಯನ್ನು ತೀಕ್ಷ್ಣಗೊಳಿಸಲಾಗುತ್ತದೆ. ಕಾಲಕಾಲಕ್ಕೆ ನಿಮ್ಮ ಬರವಣಿಗೆ ಶೈಲಿಯನ್ನು ಗಮನಿಸಿ, ವಿಶ್ಲೇಷಿಸಿ, ಸೂಕ್ತ ಮಾರ್ಗದರ್ಶನದೊಂದಿಗೆ ಬರವಣಿಗೆಯನ್ನು ತಿದ್ದಲಾಗುತ್ತದೆ. ಪರೀಕ್ಷಾ ದೃಷ್ಟಿಯಿಂದ ಬರವಣಿಗೆಯಲ್ಲಿ ಆಗಬೇಕಾದ ಮಾರ್ಪಾಡುಗಳ ಬಗ್ಗೆ ಸಲಹೆ ನೀಡಲಾಗುತ್ತದೆ.
- ಆನ್‌ಲೈನ್ ಕೋಚಿಂಗ್‌ನ ಪ್ರಮುಖ ಲಾಭವೆಂದರೆ ಇನ್ನಿತರೇ ಕೆಲಸ ಅಥವಾ ಇನ್ನಿತರೇ ಕೋರ್ಸ್‌ಗಳ ಅಧ್ಯಯನದ ಜೊತೆಜೊತೆಗೆ ಐಎಎಸ್‌ಗೆ ಕೋಚಿಂಗ್ ಪಡೆಯಬಹುದು.

ಯಾವುದು ಸೂಕ್ತ?

ಆನ್‌ಲೈನ್ ಕೋಚಿಂಗ್ ನೀಡಲು ಹಲವಾರು ಸಂಸ್ಥೆಗಳಿವೆ. ಅದರಲ್ಲಿ ಯಾವುದು ಸೂಕ್ತ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರತಿಯೊಂದು ಸಂಸ್ಥೆಯು ವಿಭಿನ್ನವಾದ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿರುತ್ತದೆ. ಅಲ್ಲದೇ ಪ್ರತಿ ಸಂಸ್ಥೆಯ ಅಧ್ಯಯನ ಸಾಮಗ್ರಿ ವಿಭಿನ್ನವಾಗಿರುತ್ತದೆ. ಆಯ್ಕೆ ವಿಷಯಕ್ಕೆ ಬಂದಾಗ ನಿಮಗೆ ಅನುಕೂಲವಾಗುವ ಸಂಸ್ಥೆಯ ಡೆಮೋ ಕ್ಲಾಸ್ ಮತ್ತು ಅಧ್ಯಯನ ಸಾಮಗ್ರಿಗಳನ್ನು ವೀಕ್ಷಿಸಿ. ಸಾಧ್ಯವಾದರೆ ಹಿರಿಯ ಪರೀಕ್ಷಾರ್ಥಿಗಳ ಸಲಹೆ ಪಡೆಯಿರಿ. ಪೂರ್ವಗ್ರಹಗಳಿಗೆ ಒಳಗಾಗದೇ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವ ಹೊಣೆಗಾರಿಕೆ ನಿಮ್ಮದು. ನಿಮ್ಮ ಆದ್ಯತೆಗೆ ಅನುಕೂಲವಾಗುವ ಕೋಚಿಂಗ್ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಿ.

ನೆಗೆಟಿವ್ ಅಂಕ ಕಡಿಮೆ ಮಾಡುವುದು ಹೇಗೆ?

ಮನೋಜ್ ಟಿ.ಪಿ.

ಈಗಂತೂ ಹೆಚ್ಚು ಕಡಿಮೆ ಪ್ರತಿಯೊಂದು ಸ್ಪರ್ಧಾತ್ಮಕ ಪರೀಕ್ಷೆಯಲ್ಲೂ ಋಣಾತ್ಮಕ (ನೆಗೆಟಿವ್) ಅಂಕ ನೀಡುವುದು ಸಾಮಾನ್ಯವಾಗಿದೆ. ನೆಗೆಟಿವ್ ಅಂಕವೆಂದರೆ ತಪ್ಪಾದ ಉತ್ತರವನ್ನು ಗುರುತಿಸಿದರೆ ಅಂಕಗಳನ್ನು ಕಳೆಯುವ ಪ್ರಕ್ರಿಯೆ. ಹೀಗಾಗಿ ಇಂತಹ ನೆಗೆಟಿವ್ ಅಂಕಗಳಿಂದ ಪಾರಾಗುವುದು ಅಥವಾ ಕಡಿಮೆ ಮಾಡಿಕೊಳ್ಳುವುದು ಹೇಗೆ ಎಂಬುದು ಪ್ರತಿಯೊಬ್ಬ ಸ್ಪರ್ಧಾರ್ಥಿಯ ಎದುರಿಗಿರುವ ಪ್ರಶ್ನೆ.

ಪರೀಕ್ಷೆಯಲ್ಲಿ ಈ ನೆಗೆಟಿವ್ ಅಂಕಗಳನ್ನು ಕಡಿಮೆ ಮಾಡಲು ಸಾಕಷ್ಟು ಉಪಾಯಗಳಿವೆ. ಈ ಮಾರ್ಗಗಳನ್ನು ಕೇವಲ ಸ್ಪರ್ಧಾರ್ಥಿಗಳು ಮಾತ್ರವಲ್ಲ, ಶಾಲೆ- ಕಾಲೇಜು ವಿದ್ಯಾರ್ಥಿಗಳು ಮತ್ತು ಕೆಲವು ಖಾಸಗಿ ಕಂಪನಿಗಳ ನೇಮಕಾತಿ ಪರೀಕ್ಷೆಯಲ್ಲೂ ಅಭ್ಯರ್ಥಿಗಳು ಅನುಸರಿಸಬಹುದು.

ಸಾಮಾನ್ಯವಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ವೇಗವಾಗಿ ಉತ್ತರಗಳನ್ನು ಗುರುತಿಸಬೇಕಾಗುತ್ತದೆ. ಈ ಅಭ್ಯಾಸ ಮಾಡಿಕೊಳ್ಳದಿದ್ದರೆ ತಪ್ಪಾಗಿ ಗುರುತಿಸಿ ಅಂಕ ಕಳೆದುಕೊಳ್ಳಬೇಕಾಗುತ್ತದೆ. ಪ್ರತಿಯೊಂದು ತಪ್ಪು ಉತ್ತರಕ್ಕೆ 0.25 ಅಂಕ ಕಡಿತಗೊಂಡು, ನಾಲ್ಕು ಉತ್ತರಗಳು ತಪ್ಪಾದರೆ ಒಂದು ಅಂಕ ಕಳೆದುಕೊಳ್ಳಬೇಕಾಗುತ್ತದೆ.

- ಉತ್ತರ ಗೊತ್ತಿರದಿದ್ದರೆ ಊಹಿಸಿಕೊಂಡು ತಪ್ಪಾಗಿ ಗುರುತಿಸಲು ಹೋಗಬೇಡಿ. ಖಚಿತವಾಗಿ ನಿಮಗೆ ತಿಳಿದಿದ್ದರೆ ಮಾತ್ರ ಉತ್ತರಿಸಿ.
- ಉತ್ತರವನ್ನು ಚೆನ್ನಾಗಿ ಆದರೆ ವೇಗವಾಗಿ ವಿಶ್ಲೇಷಿಸಿ. ಅದು ಸರಿ ಇದೆಯೇ ಎಂದು ಅಷ್ಟೇ ಶೀಘ್ರವಾಗಿ ಖಚಿತಪಡಿಸಿಕೊಳ್ಳಿ. ನಂತರ ಸರಿಯುತ್ತರ ಗುರುತಿಸಿ. ಇದನ್ನು ಪದೇ ಪದೇ ಅಭ್ಯಾಸ ಮಾಡುವುದರಿಂದ ಮನನ ಮಾಡಿಕೊಳ್ಳಬಹುದು.
- ಯಾವ ಪ್ರಶ್ನೆಗೆ ಎಷ್ಟು ಸಮಯ ಮೀಸಲಿಡಬೇಕು ಎಂಬುದನ್ನು ಕೂಡ ಅಭ್ಯಾಸ ಮಾಡಿಕೊಂಡರೆ ಸೂಕ್ತ. ಇದರಿಂದ ನೀವು ಸಮಯ ನಿರ್ವಹಣೆಯ ಜೊತೆಗೆ ತಪ್ಪಾಗಿ ಉತ್ತರಿಸುವುದನ್ನು ತಪ್ಪಿಸಬಹುದು.
- ಮಾನಸಿಕವಾಗಿ ಸಿದ್ಧರಿರಬೇಕು. ಅಂದರೆ ಪರೀಕ್ಷೆಯೆಂದು ಒತ್ತಡಕ್ಕೆ ಒಳಗಾಗದೆ ಆರಾಮವಾಗಿರುವುದನ್ನು ಧ್ಯಾನ, ಪ್ರಾಣಾಯಾಮದ ಮೂಲಕ ಮೊದಲೇ ಅಭ್ಯಾಸ ಮಾಡಿಕೊಳ್ಳಿ. ಶಾಂತಚಿತ್ತರಾಗಿ ಪರೀಕ್ಷೆಗೆ ಉತ್ತರಿಸಲು ಶುರು ಮಾಡಿದರೆ ತಪ್ಪು ಉತ್ತರ ಗುರುತಿಸಿ ಗೊಂದಲಕ್ಕೆ ಒಳಗಾಗುವುದನ್ನು ತಪ್ಪಿಸಬಹುದು. ಸರಿಯಾದ ಉತ್ತರದತ್ತ ಗಮನ ನೀಡಲು ಇದರಿಂದ ಸಾಧ್ಯ.
- ಶುರುವಿನಲ್ಲಿಯೇ ವೇಗವಾಗಿ ಉತ್ತರಿಸಲು ಹೋಗಬೇಡಿ. ಇದರಿಂದ ಗಲಿಬಿಲಿಗೆ ಒಳಗಾಗುವ ಸಂಭವ ಅಧಿಕ.
- ಮುಖ್ಯವಾದ ಶಬ್ದಗಳು, ಫಾರ್ಮುಲಾ ಮತ್ತು ಕೆಲವು ತಂತ್ರಗಳನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿ. ಇದು ಸತತ ಅಭ್ಯಾಸದಿಂದ ಮಾತ್ರ ಸಾಧ್ಯ. ಪರೀಕ್ಷೆಯಲ್ಲಿ ಇವುಗಳೆಲ್ಲ ನೆರವಿಗೆ ಬರುತ್ತವೆ. ಇದರಿಂದ ತಪ್ಪು ಮಾಡುವುದರಿಂದ ಪಾರಾಗಬಹುದು.
- ಎಲ್ಲ ಪ್ರಶ್ನೆಗಳನ್ನೂ ಚೆನ್ನಾಗಿ ಓದಿದ ನಂತರ ಉತ್ತರಿಸಲು ಶುರು ಮಾಡಿ. ಪ್ರಶ್ನೆಪತ್ರಿಕೆ ಕೈಗೆ ಸಿಕ್ಕ ಕೂಡಲೇ ಉತ್ತರಿಸಲು ಗಡಿಬಿಡಿ ಮಾಡಿದರೆ ತಪ್ಪಾಗುವ ಸಾಧ್ಯತೆ ಹೆಚ್ಚು. ಹಾಗೆಯೇ ಇಡೀ ಪ್ರಶ್ನೆ ಪತ್ರಿಕೆಯಲ್ಲಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸುವುದೂ ಸರಿಯಲ್ಲ. ಇದರಿಂದ ತಪ್ಪು ಉತ್ತರವನ್ನು ಗುರುತಿಸುತ್ತಾ ಹೋಗುತ್ತೀರಿ. ಅದರ ಬದಲು ಗೊತ್ತಿರುವ ಉತ್ತರಗಳನ್ನಷ್ಟೇ ಗುರುತಿಸಿದರೆ ಅಂಕಗಳು ಹೆಚ್ಚು ಬರುತ್ತವೆ.
- ಕೊನೆಯ ಕ್ಷಣದಲ್ಲಿ ಉತ್ತರಿಸಲು ಹೋಗಬೇಡಿ. ಇದರಿಂದ ಆತುರಕ್ಕೊಳಗಾಗಿ ತಪ್ಪಾಗಿ ಉತ್ತರ ಬರೆಯಬಹುದು. ಈ ಸಮಯವನ್ನು ಈಗಾಗಲೇ ಗುರುತಿಸಿರುವ ಉತ್ತರಗಳನ್ನು ಇನ್ನೊಮ್ಮೆ ಪರಿಶೀಲಿಸಲು ಬಳಸಿ.
- ಉತ್ತರಗಳನ್ನು ಕಚ್ಚಾ ಹಾಳೆಯ ಮೇಲೆ ಒಮ್ಮೆ ಬರೆದು ಸರಿಯೆಂದು ಅನಿಸಿದರೆ ಉತ್ತರ ಪತ್ರಿಕೆಯಲ್ಲಿ ಗುರುತಿಸಿ. ಸರಿಯಾದ ಉತ್ತರ ಗೊತ್ತಿರದಿದ್ದರೆ ಹೆಚ್ಚು ಚಿಂತಿಸದೆ ಮುಂದಿನ ಪ್ರಶ್ನೆಯತ್ತ ಗಮನ ಹರಿಸಿ.

ಪ್ರಜಾವಾಣಿ ಉದ್ಯೋಗ ವಾರ್ತೆ

ಎನ್‌ಡಿಆರ್‌ಎಫ್‌ನಲ್ಲಿ 1978 ಹುದ್ದೆಗಳು

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) 1978 ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

- **ಹುದ್ದೆಗಳು:** ಅಸಿಸ್ಟೆಂಟ್ ಕಮಾಂಡೆಂಟ್, ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್, ಹೆಡ್ ಕಾನ್‌ಸ್ಟೇಬಲ್ ಹಾಗೂ ಕಾನ್‌ಸ್ಟೇಬಲ್
- **ಹುದ್ದೆಗಳ ಸಂಖ್ಯೆ:** 1978
- **ಸ್ಥಳ:** ಭಾರತದೆಲ್ಲೆಡೆ
- **ವಿದ್ಯಾರ್ಹತೆ:** ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆಯನ್ನು ನಿಗದಿ ಮಾಡಲಾಗಿದೆ.
- **ವಯೋಮಿತಿ:** ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ ಗರಿಷ್ಠ 45 ವರ್ಷ ವಯಸ್ಸಾಗಿರಬೇಕು.
- **ಆಯ್ಕೆ ಪ್ರಕ್ರಿಯೆ:** ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಅಕ್ಟೋಬರ್ 18, 2021
- **ಅರ್ಜಿ ಸಲ್ಲಿಸುವ ವಿಳಾಸ:** ಡಿಗ್, ಎಚ್‌ಕ್ಯೂ ಎನ್‌ಡಿಆರ್‌ಎಫ್, 6ನೇ ಮಹಡಿ, ಎನ್‌ಡಿಸಿಸಿ-2ನೇ ಮಹಡಿ ಬಿಲ್ಡಿಂಗ್, ಜೈ ಸಿಂಗ್ ರೋಡ್, ನವದೆಹಲಿ – 110001
- **ಹೆಚ್ಚಿನ ಮಾಹಿತಿಗೆ:** ndrf.gov.in

ಎಸ್‌ಡಿಎ ಸಾಮಾನ್ಯ ಪರೀಕ್ಷೆಯಲ್ಲಿ ಮೆಂಟಲ್ ಎಬಿಲಿಟಿ

ಕರ್ನಾಟಕ ಲೋಕ ಸೇವಾ ಆಯೋಗವು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆಯನ್ನು ಸದ್ಯದಲ್ಲಿಯೇ ಅಂದರೆ ಬರುವ ಸೆಪ್ಟೆಂಬರ್ 18 ರಂದು ನಡೆಸಲಿದೆ. ಎಸ್‌ಡಿಎ ಪರೀಕ್ಷೆಯಲ್ಲಿ ಸಾಮಾನ್ಯ ಕನ್ನಡವು ಮಹತ್ವದ ಪತ್ರಿಕೆಯಾಗಿದ್ದು ನೀವೆಲ್ಲಾ ಕನ್ನಡದಲ್ಲಿ ಹೆಚ್ಚು ಅಂಕಗಳನ್ನು ಗಳಿಸಲು ಪ್ರಯತ್ನ ಹಾಕಿದರೆ ಉತ್ತಮ. ಸಾಮಾನ್ಯಜ್ಞಾನಕ್ಕೆ ಹೋಲಿಸಿದರೆ ಈ ಪತ್ರಿಕೆ ಸುಲಭವಾಗಿರುತ್ತದೆ. ಹೀಗಾಗಿ ಉತ್ತಮ ಅಂಕಗಳನ್ನು ಗಳಿಸಬಹುದಾಗಿದೆ.

ಸಾಮಾನ್ಯ ಕನ್ನಡ ಪತ್ರಿಕೆಯಲ್ಲಿ ಒಂದು ವೇಳೆ ನೀವು ಒಂದಿಷ್ಟು ಪ್ರಯತ್ನಿಸಿ 100 ಅಂಕಗಳಿಗೆ 90 ರಿಂದ 95ರ ತನಕ ಪಡೆದಿದ್ದೀರಿ ಎಂದುಕೊಳ್ಳೋಣ. ಆದರೆ ಇದೇ ಪ್ರಮಾಣದ ಪ್ರಯತ್ನವನ್ನು ಹಾಕಿ ಅಷ್ಟೇ ಅಂಕಗಳನ್ನು ಸಾಮಾನ್ಯ ಅಧ್ಯಯನದಲ್ಲಿ ಗಳಿಸುವುದು ತುಂಬಾ ಕಷ್ಟದ ಮಾತು. ಆದ್ದರಿಂದ ಕನ್ನಡವನ್ನು ಗಮನವಿಟ್ಟು ಓದಿ.

ಬಹುತೇಕ ವಿದ್ಯಾರ್ಥಿಗಳು ಸಾಮಾನ್ಯ ಕನ್ನಡವೆಂದರೆ ಕೇವಲ ಕನ್ನಡ ವ್ಯಾಕರಣ ಎಂದು ಭಾವಿಸುತ್ತಾರೆ. ಆದರೆ ಈ ಪತ್ರಿಕೆಯಲ್ಲಿ ಕೇವಲ ವ್ಯಾಕರಣ ಮಾತ್ರ ಇರುವುದಿಲ್ಲ. ಕನ್ನಡ ವ್ಯಾಕರಣದ ಜೊತೆಗೆ ಅದರಾಚೆಯ ವಿಷಯ ಇರುತ್ತವೆ. ಅವು ಯಾವುವು ಎಂಬುದನ್ನು ನೋಡೋಣ.

ನೀವು ಹಳೆಯ ಪ್ರಶ್ನೆಪತ್ರಿಕೆಯನ್ನು ಗಮನಿಸಿದರೆ ಈ ಕೆಳಗಿನ ವಿಭಾಗಗಳಿಂದ ಪ್ರಶ್ನೆಗಳನ್ನು ಕೇಳಿರುವುದನ್ನು ನೋಡಬಹುದಾಗಿದೆ.

1) ಕನ್ನಡ ಭಾಷೆ ಮತ್ತು ಸಾಹಿತ್ಯ. 2) ಪದಗಳ ಸುಧಾರಣೆ. 3) ಸಮಾನಾರ್ಥಕ ಪದಗಳು.
4) ವಿರುದ್ಧಾರ್ಥಕ ಪದಗಳು 5) ನುಡಿಗಟ್ಟುಗಳ ಅರ್ಥವನ್ನು ಗ್ರಹಿಸುವುದು. 6) ತಪ್ಪಿರುವ ಭಾಗವನ್ನು ಸರಿಪಡಿಸಿ. 7) ಬಿಟ್ಟಸ್ಥಳ ತುಂಬಿ
8) ಪ್ಯಾರಾಓದಿ: ಪ್ರಶ್ನೆ ಉತ್ತರಿಸಿ. 9) ಪದ ಬಳಸಿ ವಾಕ್ಯ ರಚಿಸಿ. 10) ವಾಕ್ಯಗಳನ್ನು ಬಳಸಿ: ಸಾಹಿತ್ಯ ಖಂಡ ರಚಿಸಿ.
11) ವ್ಯಾಕರಣ 12) ಭಿನ್ನ ಪದ ಗುರುತಿಸಿ.

ಈ ಕೆಳಗಿನ ಕೆಲವು ಪ್ರಶ್ನೆಗಳನ್ನು ಅಭ್ಯಾಸ ಮಾಡಬಹುದು.

1) ಕರ್ನಾಟಕದ ಹಲವು ಭಾಗಗಳಲ್ಲಿ ಬ್ರಿಟಿಷರ 1. ಸಶಸ್ತ್ರ ಬಂಡಾಯಗಳು ಸಂಭವಿಸಿದವು. ಅಂತಹ ಬಂಡಾಯಗಳಲ್ಲಿ ದಾವಣಗೆರೆ ಜಿಲ್ಲೆಯ ಧೋಂಡಿಯಾ ವಾಘನದು 2. ಚೆನ್ನಗಿರಿಯ ಮರಾಠಿ ಕುಟುಂಬದಲ್ಲಿ 3. ಧೋಂಡಿಜ, ಧೋಂಡಿಯಾ ವಾಘನೆಂದೇ ಪ್ರಸಿದ್ಧ. ಕೊಲ್ಲಾಪುರದ ಛತ್ರಪತಿಯ ನಂತರ ಮೈಸೂರಿನ ಟಿಪ್ಪುವಿನ ಸೇನೆಯಲ್ಲಿ 4. ನಂತರ ಮಲೆನಾಡಿನಲ್ಲಿ ಬ್ರಿಟಿಷರ ವಿರುದ್ಧ 5. ಈತನನ್ನು ಕರ್ನಾಟಕದ ಮೊದಲ ಕ್ರಾಂತಿಕಾರಿ ಎನ್ನುತ್ತಾರೆ.

1) ಎ) ವಿರುದ್ಧ ಬಿ) ಪರ
ಸಿ) ತಟಸ್ಥ ಡಿ) ಯಾವುದೂ ಅಲ್ಲ
2) ಎ) ಕುಪ್ರಸಿದ್ಧವಾದುದು ಬಿ) ಗಮಾನಾರ್ಹವಾದುದು
ಸಿ) ಸಹನಾಶೀಲವಾದುದು ಡಿ) ಗಮಾನಾರ್ಹವಾಗಿರದೇ ಇರುವುದು
3) ಎ) ಜನಿಸಿದ ಬಿ) ಸತ್ತ
ಸಿ) ಉದ್ಭವಿಸಿದ ಡಿ) ಉದ್ಧಾರ ಮಾಡಿದ
4) ಎ) ಸೇವೆ ಸಲ್ಲಿಸಿದ ಬಿ) ಜೀತ ಮಾಡಿದ
ಸಿ) ಪ್ರತಿಭಟಿಸಿದ ಡಿ) ವಿನಯನಾಗಿದ್ದ
5) ಎ) ಚೀರಾಡಿದ ಬಿ) ಹಾರಾಡಿದ
ಸಿ) ಹೋರಾಡಿದ ಡಿ) ಕೂಗಾಡಿದ

2) ವಿಜ್ಞಾನವು ಭೂಮಿಯ 1 ನಿಜ ಸಂಗತಿಯನ್ನು ಕಂಡು ಹಿಡಿದಿದೆ. ಭೂಮಿ ಗುಂಡಾಗಿದೆ. ಯಾವುದೂ ಅದನ್ನು 2 ನಿಂತಿಲ್ಲ. ಸೂರ್ಯನಿಗೆ ಇರುವ 3 ಭೂಮಿಯು ಸೂರ್ಯನನ್ನು ಸುತ್ತು ಹಾಕುತ್ತಿದೆ ಎಂದು 4 ಮಾಡಿದೆ. ಒಟ್ಟಿನಲ್ಲಿ ವಿಜ್ಞಾನವು ಭೂಮಿಯ ಬಗ್ಗೆ ತಿಳಿಯದೇ ಇದ್ದ ಅನೇಕ ಸಂಗತಿಗಳನ್ನು ತಿಳಿಸಿ ತಪ್ಪಾಗಿ ತಿಳಿದಿದ್ದ ವಿಷಯಗಳನ್ನು 5

(1) ಎ) ಮೇಲ್ಮೈ ಲಕ್ಷಣ ಬಿ) ಅವಿವೇಕತೆಯ
ಸಿ) ಹುಟ್ಟು ಬೆಳವಣಿಗೆಯ ಡಿ) ಧಾರಾಳತೆಯ
(2) ಎ) ಓಡಿಸಿಕೊಂಡು ಬಿ) ಹೊತ್ತುಕೊಂಡು
ಸಿ) ಹಾರಿಸಿಕೊಂಡು ಡಿ) ಮಾರಿಕೊಂಡು
(3) ಎ) ತೇಜಸ್ ಶಕ್ತಿಯಿಂದ ಬಿ) ಕ್ಷುದ್ರಶಕ್ತಿಯಿಂದ
ಸಿ) ಪ್ರತಾಪ ಶಕ್ತಿಯಿಂದ ಡಿ) ಆಕರ್ಷಣ ಶಕ್ತಿಯಿಂದ
(4) ಎ) ಮನದಟ್ಟು ಬಿ) ಮನಮುಟ್ಟು
ಸಿ) ಹದಗೆಟ್ಟು ಡಿ) ಹುಡಿಗಟ್ಟು
(5) ಎ) ಕಾಡುತ್ತದೆ ಬಿ) ತಿದ್ದಿದೆ
ಸಿ) ನೋಡುತ್ತದೆ ಡಿ) ಮಾಡುತ್ತದೆ

ಉತ್ತರ:- 1) 1-ಎ, 2-ಬಿ, 3-ಎ, 4-ಎ, 5-ಸಿ
2) 1-ಎ, 2-ಬಿ, 3-ಡಿ, 4-ಎ, 5-ಬಿ

ಸಾಮಾನ್ಯವಾಗಿ ಮೇಲೆ ನೀಡಲಾದ ವರ್ಬಲ್ ರೀಸನಿಂಗ್ ರೀತಿಯ ಪ್ರಶ್ನೆಗಳನ್ನು ಕೇಳುತ್ತಾರೆ. ಅಂದರೆ ಒಂದು ಸಣ್ಣ ಪ್ಯಾರಾ ನೀಡಿ ಅದರಲ್ಲಿ ಬಿಟ್ಟಸ್ಥಳ ಕೊಟ್ಟಿರುತ್ತಾರೆ ಹಾಗೂ ಉತ್ತರ ಸಂಕೇತಗಳಲ್ಲಿ ನಾಲ್ಕು ಆಯ್ಕೆಗಳಿರುತ್ತದೆ. ನೀಡಲಾದ ಆ ನಾಲ್ಕು ಉತ್ತರಗಳಿಂದಲೇ ಸರಿಯಾದ ಉತ್ತರವನ್ನು ಆರಿಸಬೇಕು. ಈ ತರಹದ ಪ್ರಶ್ನೆಗಳನ್ನು ಯಾವುದೇ ಪುಸ್ತಕದಿಂದ ನೇರವಾಗಿ ತೆಗೆದಿರುವುದಿಲ್ಲ. ಹೀಗಾಗಿ ಪುಸ್ತಕ ಓದಿ ಕಂಠಪಾಠವನ್ನು ಮಾಡಿಕೊಂಡು ಹೋದರೆ ಪ್ರಯೋಜನ ಬರುವುದಿಲ್ಲ. ಬದಲಾಗಿ ಸಾಮಾನ್ಯ ಜ್ಞಾನ ಬಳಸಿ ಉತ್ತರ ಬರೆಯಬೇಕಾಗುತ್ತದೆ.

ವಿರುದ್ಧಾರ್ಥಕ ಪದಗಳು

ಸೂಚನೆ: ಈ ಕೆಳಗೆ ನೀಡಲಾದ ಪದಗಳಿಗೆ ಸಮನಾದ ಅಥವಾ ಹತ್ತಿರವಿರುವ ವಿರುದ್ಧಾರ್ಥಕ ಪದವನ್ನು ತಿಳಿಸಿ

1)'ಗೊರವ' ಶಬ್ದದ ವಿರುದ್ಧಾರ್ಥಕ ಪದ...
ಎ) ಗೊರಲೆ ಬಿ) ಗೊರಟೆ
ಸಿ) ನಾಸ್ತಿಕ ಡಿ) ಆಸ್ತಿಕ
2) 'ಪಾಂಬ' ಶಬ್ದದ ವಿರುದ್ಧಾರ್ಥಕ ಪದ......
ಎ) ಪಾಪ ಬಿ) ಸಭ್ಯಸ್ಥ
ಸಿ) ಪಾರುಮಾಡು ಡಿ) ಪಕ್ಕಾ
3) 'ಕೂನ' ಶಬ್ದದ ವಿರುದ್ಧಾರ್ಥಕ ಪದ......... ಎ) ಎತ್ತರವಾಗಿರುವವ
ಬಿ) ಕುಳ್ಳಗಿರುವವ ಸಿ) ಜೊರಾಗಿರುವವ
ಡಿ) ಬುದ್ಧಿವಂತ
4) 'ತಟ್ಟೈಸು' ಶಬ್ದದ ವಿರುದ್ಧಾರ್ಥಕ ಪದ......
ಎ) ತಡವಾಗಿ ಬರುವುದು ಬಿ) ಬೇಗ ಬರುವುದು
ಸಿ) ಗುಂಪಾಗಿರುವುದು ಡಿ) ಏಕಾಂಗಿಯಾಗಿರುವುದು.
5) 'ಪಾಡುಗಾ' ಶಬ್ದದ ವಿರುದ್ಧಾರ್ಥಕ ಪದ...
ಎ) ರಕ್ಷಿಸು ಬಿ) ಪ್ರೇಮಿಸು



ಸಿ) ಹಿಂಸಿಸು ಡಿ) ಸಹಕರಿಸು
6) 'ಮುಮ್ಮೊನೆ' ಶಬ್ದದ ವಿರುದ್ಧಾರ್ಥಕ ಪದ...
ಎ) ಹಿಂಭಾಗ ಬಿ) ಮುಂಭಾಗ
ಸಿ) ಮುನ್ನೋಟ ಡಿ) ಕಿರಿಕಿರಿ
7)'ಪುಸುಕಲು' ಶಬ್ದದ ವಿರುದ್ಧಾರ್ಥಕ ಪದ ...
ಎ) ದುರ್ಬಲ ವ್ಯಕ್ತಿ ಬಿ) ಸಶಕ್ತ(ಸಬಲ) ವ್ಯಕ್ತಿ
ಸಿ) ಅಶಕ್ತ(ಅಬಲ) ಪ್ರಾಣಿ ಡಿ) ವಿಶೇಷ ವ್ಯಕ್ತಿ
8) 'ಬಂಡಾಟ' ಶಬ್ದದ ವಿರುದ್ಧಾರ್ಥಕ ಪದ......
ಎ) ಅವಮಾನ ಬಿ) ಸಮ್ಮಾನ
ಸಿ) ನಿಷ್ಫಲ ಡಿ) ವಿಶೇಷ ಫಲ
9) 'ಬಂಡಣ' ಶಬ್ದದ ವಿರುದ್ಧಾರ್ಥಕ ಪದ...
ಎ) ಅಸಹನೆ ಬಿ) ಕ್ರಾಂತಿ
ಸಿ) ಯುದ್ಧ ಡಿ) ಶಾಂತಿ

ಹೇಗೆ ರೀಸನಿಂಗ್ ವಿಭಾಗದಲ್ಲಿ ನಿಘಂಟಿನ ವಿಭಾಗದಿಂದ ಕಠಿಣ ಶಬ್ದಗಳನ್ನು ಕೇಳಿ ಆ ಶಬ್ದದ ಸಮನಾದ ಅರ್ಥಕ್ಕೆ ವಿರುದ್ಧವಾದ ಪದಗಳನ್ನು ಸೂಚಿಸಲು ಕೇಳುತ್ತಾರೋ ಅದೇ ಮಾದರಿಯಲ್ಲಿ ಎಸ್‌ಡಿಎ ಪರೀಕ್ಷೆಯಲ್ಲಿಯೂ ಸಹಾ ಪ್ರಶ್ನೆಗಳನ್ನು ಕೇಳಿರುವುದನ್ನು ನೋಡುತ್ತೇವೆ. ಆ ಪ್ರಶ್ನೆಗಳು ನಾವು ಸಾಮಾನ್ಯವಾಗಿ ಕೇಳದೇ ಇರುವ ಆದರೆ ಸಾಹಿತ್ಯಿಕ ಭಾಷೆಯಲ್ಲಿ, ಉತ್ತಮ ಗ್ರಂಥಗಳಲ್ಲಿ ಬಳಕೆಯಾದ ಕೆಲವು ಪದಗಳನ್ನು ನೀಡಿ ಆ ಪದಗಳಿಗೆ ಇರುವ ಅರ್ಥಕ್ಕೆ ವಿರುದ್ಧಾರ್ಥಕ ಪದಗಳನ್ನು ಹುಡುಕಿ ಉತ್ತರ ಬರೆಯಲು ಪ್ರಶ್ನೆಪತ್ರಿಕೆಯಲ್ಲಿ ಕೇಳಿರುವುದನ್ನು ನಾವು ನೋಡಿದ್ದೇವೆ. ಹೀಗಾಗಿ ಈ ವಿಭಾಗದಲ್ಲಿಯೂ ನೀವು ತಕ್ಕ ತಯಾರಿ ಮಾಡಿಕೊಂಡಿರಬೇಕು.

ಮೇಲಿನ ಪ್ರಶ್ನೆಗಳಿಗೆ ಉತ್ತರವನ್ನು ನೋಡೋಣ

1) ಸಿ (ವಿವರಣೆ- ಗೊರವ ಎಂದರೆ ಶಿವಭಕ್ತ ಎಂದರ್ಥ. ಆದ್ದರಿಂದ ಹತ್ತಿರವಾದ ವಿರುದ್ಧಾರ್ಥಕ ಶಬ್ದವೆಂದರೆ ನಾಸ್ತಿಕ)
2) ಬಿ (ವಿವರಣೆ- ಪಾಂಬ ಎಂದರೆ ವ್ಯಭಿಚಾರಿ ಎಂದರ್ಥ. ಇದಕ್ಕೆ ವಿರುದ್ಧಾರ್ಥಕ ಪದವೆಂದರೆ ಸಭ್ಯಸ್ಥ)
3) ಎ (ವಿವರಣೆ- ಕೂನ ಎಂದರೆ ಕುಬ್ಜ ಎಂದರ್ಥ. ಆದ್ದರಿಂದ ಎತ್ತರವಾಗಿರುವ ಎಂಬುದು ಸರಿಯಾದ ಉತ್ತರವಾಗಿದೆ.)
4) ಡಿ (ವಿವರಣೆ- ತಟ್ಟೈಸು ಎಂದರೆ ಗುಂಪಾಗಿರುವುದು ಎಂದರ್ಥ. ಆದ್ದರಿಂದ ಇದಕ್ಕೆ ಸರಿಯಾದ ವಿರುದ್ಧ ಪದವೆಂದರೆ ಏಕಾಂಗಿಯಾಗಿರುವುದು ಎಂಬುದಾಗಿದೆ.)
5) ಸಿ (ವಿವರಣೆ- ಪಾಡುಗಾ ಎಂದರೆ ಕ್ಷೇಮವನ್ನು ಕಾಪಾಡು ಅಥವಾ ರಕ್ಷಿಸು ಎಂದರ್ಥ. ಆದ್ದರಿಂದ ಇದಕ್ಕೆ ಸರಿಯಾದ ಅಥವಾ ಹತ್ತಿರವಿರುವ ವಿರುದ್ಧ ಪದವೆಂದರೆ ಹಿಂಸಿಸುವುದು ಎಂಬುದಾಗಿದೆ.)
6) ಎ (ವಿವರಣೆ- ಮುಮ್ಮೊನೆ ಎಂದರೆ ಎದುರು/ ಅಭಿಮುಖ ಎಂದರ್ಥ. ಆದ್ದರಿಂದ ಇದಕ್ಕೆ ಸರಿಯಾದ ವಿರುದ್ಧ ಪದವೆಂದರೆ ಹಿಂಭಾಗ ಎಂಬುದಾಗಿದೆ.)
7) ಬಿ(ವಿವರಣೆ- ಪುಸುಕಲು ಎಂದರೆ ಅಶಕ್ತ ವ್ಯಕ್ತಿ ಎಂದರ್ಥ. ಆದ್ದರಿಂದ ಇದಕ್ಕೆ ಸರಿಯಾದ ವಿರುದ್ಧ ಪದವೆಂದರೆ ಸಶಕ್ತವ್ಯಕ್ತಿ ಎಂಬುದಾಗಿದೆ)
8) ಬಿ (ವಿವರಣೆ- ಬಂಡಾಟ ಎಂದರೆ ಅವಮಾನ ಎಂದರ್ಥ. ಆದ್ದರಿಂದ ಇದಕ್ಕೆ ಸರಿಯಾದ ವಿರುದ್ಧ ಪದವೆಂದರೆ ಸಮ್ಮಾನ ಎಂಬುದಾಗಿದೆ)
9) ಡಿ (ವಿವರಣೆ- ಬಂಡಣ ಎಂದರೆ ಯುದ್ಧ ಎಂದರ್ಥ. ಆದ್ದರಿಂದ ಇದಕ್ಕೆ ಸರಿಯಾದ ವಿರುದ್ಧ ಪದವೆಂದರೆ ಶಾಂತಿ ಎಂಬುದಾಗಿದೆ)

ಉತ್ತರಕ್ಕೆ ಆಧಾರ: ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿತ 'ಸಂಕ್ಷಿಪ್ತ ಕನ್ನಡ ನಿಘಂಟು'

(ಸಂಯೋಜನೆ: Spardha Bharati UPSC ಯೂಟ್ಯೂಬ್ ಚಾನೆಲ್)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 52

706) ಸೂಕ್ಷ್ಮ ಹಣಕಾಸು ಸಂಸ್ಥೆಗಳ ಅತ್ಯಂತ ಜನಪ್ರಿಯವಾದ ಮಾದರಿಗಳೆಂದರೆ
ಎ) ಸಹಕಾರಿ ಬ್ಯಾಂಕುಗಳು
ಬಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು
ಸಿ) ಸ್ವ-ಸಹಾಯ ಗುಂಪುಗಳು
ಡಿ) ವಿಶೇಷ ಉದ್ದೇಶದ ವಾಹನಗಳು

707) ನರೇಗಾ ಇದಕ್ಕೆ ಉದಾಹರಣೆ
1. ಗ್ರಾಮೀಣ ಹಣಕಾಸು
2. ಗ್ರಾಮೀಣ ಕೈಗಾರೀಕರಣ
3. ಸಾರ್ವಜನಿಕ ಸ್ವತ್ತಿನ ಸೃಷ್ಟಿ
4. ಜೀವನೋಪಾಯ ಭದ್ರತೆ
ಎ) 1 ಮತ್ತು 2
ಬಿ) 2 ಮತ್ತು 3
ಸಿ) 3 ಮತ್ತು 4
ಡಿ) 1 ಮತ್ತು 4

708) TRIPS ಯಾವ ಬಹುರಾಷ್ಟ್ರೀಯ ಸಂಸ್ಥೆಗೆ ಸಂಬಂಧಿಸಿದ್ದಾಗಿದೆ?
ಎ) NAFTA
ಬಿ) WHO
ಸಿ) WTO
ಡಿ) World Bank

709) ರಂಗರಾಜನ್ ಸಮಿತಿ ಈ ಕೆಳಗಿನ ಯಾವ ವಿಷಯಕ್ಕೆ ಸಂಬಂಧಿಸಿದೆ?
ಎ) ಹಣಕಾಸು ವಲಯದ ಸುಧಾರಣೆಗಳು
ಬಿ) ವಿಮಾ ಸುಧಾರಣೆಗಳು
ಸಿ) ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಪಿಪಿಪಿ ಮಾದರಿಗಳು
ಡಿ) ಬಡತನ ಅಂದಾಜುಗಳು

710) ಆದಾಯದ ಅಸಮಾನತೆಯನ್ನು ಇದರಿಂದ ಮಾಪನ ಮಾಡಬಹುದು.
ಎ) ಏಂಜೆಲ್ ಅನುಪಾತ್
ಬಿ) ಗೆಸ್ಟಿನ್ ಅನುಪಾತ್
ಸಿ) ಗಿನಿ-ಲೋರೆಂಜ್ ಅನುಪಾತ್
ಡಿ) ಗೋಸೆನ್-ಲಾಫರ್

711) ಹೀರು ಕಾಗದವು ಶಾಯಿಯನ್ನು ಹೀರುವ ಕ್ರಿಯೆಯ ಇದನ್ನು ಒಳಗೊಳ್ಳುತ್ತದೆ?
ಎ) ಶಾಯಿಯ ಜಿಗುಟು
ಬಿ) ಲೋಮನಾಳ ಕ್ರಿಯೆ
ಸಿ) ಹೀರು ಕಾಗದದ ಮೇಲೆ ಶಾಯಿಯ ಪ್ರಸರಣ
ಡಿ) ನುಗ್ಗುವ ಕ್ರಿಯೆ

712) ಪಾಲಿಥೀನ್ ಅನ್ನು ಉತ್ಪಾದಿಸಲು ಬೇಕಾಗುವ ವಸ್ತು ಯಾವುದು?
ಎ) ಈಥೇನ್
ಬಿ) ಎಥಿಲೀನ್
ಸಿ) ಈಥೈಲ್ ಆಲ್ಕೋಹಾಲ್
ಡಿ) ಈಥೀನ್

713) MRI ಇದರ ವಿಸ್ತೃತ ರೂಪವೇನು?
ಎ) ಮೀಟರ್ಡ್ ರೆಸೋನಾನ್ಸ್ ಇಮೇಜಿಂಗ್
ಬಿ) ಮ್ಯಾಗ್ನೆಟಿಕ್ ರೆಸೋನಾನ್ಸ್ ಇಮೇಜಿಂಗ್
ಸಿ) ಮ್ಯಾಗ್ನೆಟಿಕ್ ರಿಯಾಕ್ಷನ್ ಇಮೇಜಿಂಗ್
ಡಿ) ಮೀಟರ್ಡ್ ರಿಯಾಕ್ಷನ್ ಇಮೇಜಿಂಗ್

714) ಈ ಅಂಶವನ್ನು ಒಂದು ಜೀವಿಗೆ ನೀಡಿದಾಗ ಅದರಲ್ಲಿ ಪ್ರತಿ ನಿರೋಧಕ ಜೀವಿಗಳು ಉತ್ಪತ್ತಿಯಾಗುತ್ತವೆ.
ಎ) ಕೀವುಗಳೆಕ
ಬಿ) ಪ್ರತಿನಿಮಿಷ
ಸಿ) ಪ್ರತಿಜನಕ
ಡಿ) ಪ್ರತಿಜೀವಕ

715) ಜೇನುಗೂಡುಗಳ ನಿರ್ವಹಣೆಗೆ ಏನೆಂದು ಕರೆಯುತ್ತಾರೆ?
ಎ) ಸೆರಿಕಲ್ಚರ್
ಬಿ) ಎಫಿಕಲ್ಚರ್
ಸಿ) ಪಿಸ್ಸಿಕಲ್ಚರ್
ಡಿ) ವರ್ಮಿಕಲ್ಚರ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ-51 ರ ಉತ್ತರ: 691. ಬಿ, 692. ಬಿ, 693. ಎ, 694. ಎ, 695. ಡಿ, 696. ಸಿ, 697. ಎ, 698. ಸಿ, 699. ಸಿ, 700. ಎ, 701. ಬಿ, 702. ಬಿ, 703. ಡಿ, 704. ಸಿ, 705. ಎ

ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

‘ರಾಜ್ಯದಲ್ಲಿ ಹೊಸ ಮರಳು ನೀತಿ ಶೀಘ್ರ ಜಾರಿ’

ಪ್ರಜಾವಾಣಿ ವಾರ್ತೆ

ಹಾವೇರಿ: ರಾಜ್ಯದಲ್ಲಿ ಹಲವಾರು ಮರಳು ನೀತಿಗಳಿಂದ ಗೊಂದಲ ಉಂಟಾಗಿದೆ. ಹೀಗಾಗಿ ಅಧಿಕಾರಿಗಳಿಗೆ ಮರಳು ನೀತಿಯ ಕರಡನ್ನು ಸಿದ್ಧಪಡಿಸಲು ಸೂಚಿಸಿದ್ದು, ಶೀಘ್ರದಲ್ಲೇ ‘ಹೊಸ ಮರಳು ನೀತಿ’ ಜಾರಿಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹಾವೇರಿ ಜಿಲ್ಲೆಯ ಮುಖ್ಯಮಂತ್ರಿಯವರ ಸ್ವಕ್ಷೇತ್ರ ಶಿಗ್ಗಾವಿ ಮತ್ತು ಸವಣೂರ ತಾಲ್ಲೂಕಿನಲ್ಲಿ ಒಟ್ಟು ₹96.97 ಕೋಟಿ ವೆಚ್ಚದ 6 ಕಾಮಗಾರಿಗಳ ಉದ್ಘಾಟನೆ ಮತ್ತು 10 ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿದ ನಂತರ ಅವರು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು.

ಹಿಂದೆ ಗಣಿ ಮತ್ತು ಭೂವಿಜ್ಞಾನ ಸಚಿವರಾಗಿದ್ದ ಸಿ.ಸಿ.ಪಾಟೀಲ ಅವರು ಮರಳು ನೀತಿ ಸಿದ್ಧಪಡಿಸಿದ್ದರು. ಅದನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಸರ್ಕಾರಿ ಯೋಜನೆಗಳಿಗೆ, ಆಶ್ರಯ ಯೋಜನೆ ಫಲಾನುಭವಿಗಳಿಗೆ ಹಾಗೂ ಸಾಮಾನ್ಯ ಜನರಿಗೆ ಸುಲಭವಾಗಿ ಮರಳು ಸಿಗುವ ವ್ಯವಸ್ಥೆ ಕಲ್ಪಿಸುತ್ತೇವೆ ಎಂದು ಭರವಸೆ ನೀಡಿದರು.



ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಸವಣೂರ ಪಟ್ಟಣಕ್ಕೆ ಬುಧವಾರ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಹೂವಿನಹಾರ ತುರಾಯಿ ಬೇಡ’ ಎಂದಿದ್ದರಿಂದ ಅವರಿಗೆ ಬಿಜೆಪಿ ಕಾರ್ಯಕರ್ತರು ಮತ್ತು ಕ್ಷೇತ್ರದ ಜನರು ಹೂಮಳೆ ಸುರಿಸಿ ಸ್ವಾಗತಿಸಿದರು

ಡಿ.ಸಿ.ಗಳ ಆದೇಶ ಸರಿಯಲ್ಲ: ಕೋವಿಡ್ ಲಸಿಕೆ ಪಡೆಯದಿದ್ದರೆ ಪಡಿತರ, ಪಿಂಚಣಿ ಇಲ್ಲ ಎಂದು ಕೆಲವು ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿರುವ ಕುರಿತ ಪತ್ರಕರ್ತರ ಪ್ರಶ್ನೆಗೆ, ‘ಈ ರೀತಿ ಆದೇಶ ಹೊರಡಿಸುವುದು ಸರಿಯಲ್ಲ. ಸಾರ್ವಜನಿಕರ ಮನವೊಲಿಸಿ ಕೆಲಸ ಮಾಡಬೇಕು. ಕೋವಿಡ್ ಲಸಿಕೆ ಲಭ್ಯ ಇರುವುದರಿಂದ ಜನರು ಕೂಡ ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು’ ಎಂದು ತಿಳಿಸಿದರು.

ಗಣೇಶೋತ್ಸವ ಅನುಮತಿಗೆ ಹೆಚ್ಚಿದ ಒತ್ತಡ: ಸಿ.ಎಂ

ಹುಬ್ಬಳ್ಳಿ: ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡುವಂತೆ ಒತ್ತಡ ಹೆಚ್ಚಾಗುತ್ತಿದ್ದು, ಸೆ. 5ರಂದು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬುಧವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು ‘ಕೋವಿಡ್ ಪರಿಸ್ಥಿತಿಯಲ್ಲಿ ಹಿಂದಿನ ವರ್ಷ ಯಾವ ರೀತಿ ಗಣೇಶೋತ್ಸವ ಆಚರಿಸಲಾಗಿತ್ತು. ಈ ವರ್ಷ ಪರಿಸ್ಥಿತಿ ಬಗ್ಗೆ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಅವರು ನೀಡುವ ವರದಿಯನ್ನು ತಜ್ಞರ ತಂಡ ಪರಿಶೀಲನೆ ನಡೆಸಿದ ಬಳಿಕ ತೀರ್ಮಾನ ಕೈಗೊಳ್ಳಲಾಗುವುದು’ ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗುರುವಾರ ಹುಬ್ಬಳ್ಳಿಗೆ ಬರಲಿದ್ದು, ರಾಜ್ಯದ ಅಭಿವೃದ್ಧಿ ಕಾರ್ಯಗಳು ಹಾಗೂ ಭವಿಷ್ಯದ ಯೋಜನೆಗಳ ಬಗ್ಗೆ ಚರ್ಚೆಯಾಗಲಿವೆ ಎಂದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald--Prajavani Relief Trust’** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.finc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - ***0404101200385***
IFSC code - ***CNRB0000404***
MICR Code - ***560015009***

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು - 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ




ಸಮವಸ್ತ್ರಕ್ಕೆ ಬಳಸಿಕೊಂಡೆ

‘ಪ್ರಜಾವಾಣಿ ಸ್ಕಾಲರ್‌ಶಿಪ್’ ಅನ್ನು ಕಾಲೇಜಿನ ಸಮವಸ್ತ್ರ ಹೊಲಿಸಿಕೊಳ್ಳಲು ಬಳಸಿಕೊಂಡಿದ್ದೇನೆ. ಆರ್ಥಿಕ ತೊಂದರೆಯಲ್ಲಿರುವ ಕುಟುಂಬದ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಿ, ಉತ್ತಮ, ಉನ್ನತ ಶಿಕ್ಷಣ ಪಡೆಯಲು ‘ಪ್ರಜಾವಾಣಿ’ ಉತ್ತೇಜನ ನೀಡುತ್ತಿದೆ.

ಉಮಾಭಾರತಿ ಬಸವರಾಜ ಹುಲ್ಲಂಬಿ, ಕಲಘಟಗಿ

ಕಾಲೇಜು ಶುಲ್ಕ ಕಟ್ಟಲು ನೆರವಾಯಿತು



ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಅಂಕಗಳಿಸಿದ್ದರಿಂದ ‘ಪ್ರಜಾವಾಣಿ’ಯ ವಿದ್ಯಾರ್ಥಿವೇತನ ಸಿಕ್ಕಿತು. ಈ ವಿದ್ಯಾರ್ಥಿವೇತನ ನಮ್ಮಂತಹ ವಿದ್ಯಾರ್ಥಿಗಳಿಗೆ ತುಂಬಾ ಸಹಕಾರಿಯಾಗಿದೆ. ಕೊರೊನಾದಂತಹ ಸಂಕಷ್ಟದ ಸಮಯದಲ್ಲಿ ಸಂಸ್ಥೆ ನೀಡಿದ ವಿದ್ಯಾರ್ಥಿವೇತನದಿಂದ ಕಾಲೇಜು ಶುಲ್ಕ ಕಟ್ಟಿದೆ. ಇದರಿಂದ ನನ್ನ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಯಿತು. ‘ಪ್ರಜಾವಾಣಿ’ಗೆ ಧನ್ಯವಾದಗಳು.

ವಿಸ್ಮಯ ಜೆ.ಆರ್., ದೇವರಾಜ್ ಅರಸ್ ನಗರ, ಶಿವಮೊಗ್ಗ

ಬರ್ನಾಬಿ: 5 ರಂದು ‘ಗೌರಿ ಲಂಕೇಶ್ ದಿನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಷ್ಕರ್ಮಿಗಳಿಂದ ಹತ್ಯೆಗೀಡಾದ ಪತ್ರಕರ್ತೆ ಗೌರಿ ಲಂಕೇಶ್ ಅವರ ಗೌರವಾರ್ಥ ಇದೇ 5ರಂದು ಕೆನಡಾದ ಬರ್ನಾಬಿ ನಗರದಲ್ಲಿ ‘ಗೌರಿ ಲಂಕೇಶ್ ದಿನ’ ಆಚರಿಸಲಾಗುತ್ತಿದೆ.

ಬರ್ನಾಬಿ ಮಹಾನಗರ ಪಾಲಿಕೆಯ ಮೇಯರ್ ಮೈಕ್ ಹರ್ಲೆ ಅವರು ಈ ಕುರಿತು ಆಗಸ್ಟ್ 31ರಂದು ಘೋಷಣೆ ಹೊರಡಿಸಿದ್ದಾರೆ. ‘ಗೌರಿ ಲಂಕೇಶ್ ಸತ್ಯ ಮತ್ತು ನ್ಯಾಯದ ಪರ ನಿಂತ ಧೈರ್ಯಶಾಲಿ ಪತ್ರಕರ್ತೆ. ದಮನಕಾರಿ ನೀತಿ ವಿರುದ್ಧ ಮತ್ತು ಮಾನವ ಹಕ್ಕುಗಳ ಪರವಾಗಿ ಹೋರಾಟ ನಡೆಸಿದ್ದರು. ಬಲಪಂಥೀಯ ದುಷ್ಕರ್ಮಿಗಳಿಂದ ಹತ್ಯೆಗೀಡಾದ ಅವರ ಸ್ಮರಣಾರ್ಥ ಭಾನುವಾರ (ಸೆ.5) ಬರ್ನಾಬಿ ನಗರದಲ್ಲಿ ಗೌರಿ ಲಂಕೇಶ್ ದಿನ ಆಚರಿಸಲಾಗುತ್ತಿದೆ’ ಎಂದು ಘೋಷಣೆಯಲ್ಲಿ ಉಲ್ಲೇಖಿಸಿದ್ದಾರೆ.



ಗೌರಿ ಲಂಕೇಶ್

ಪಂಜಾಬ್‌ನಲ್ಲಿ ಪೊಲೀಸರ ದೌರ್ಜನ್ಯದಿಂದ ಪ್ರಾಣ ಕಳೆದುಕೊಂಡಿದ್ದ ಪತ್ರಕರ್ತ ಜಸ್ವಂತ್ ಸಿಂಗ್ ಕಾಲ್ರಾ ಸ್ಮರಣಾರ್ಥ ಬರ್ನಾಬಿಯಲ್ಲಿ 2020ರಲ್ಲಿ ‘ಜಸ್ವಂತ್ ಸಿಂಗ್ ಕಾಲ್ರಾ’ ಸ್ಮರಣೆಯ ದಿನ ಆಚರಿಸಲಾಗಿತ್ತು. ಅದೇ ಮಾದರಿಯಲ್ಲಿ ಈ ಬಾರಿ ಗೌರಿ ಲಂಕೇಶ್ ಅವರಿಗೆ ಗೌರವ ಸಲ್ಲಿಸಲಾಗುತ್ತಿದೆ. ಬರ್ನಾಬಿ ಮಹಾನಗರ ಪಾಲಿಕೆ ವೆಬ್‌ಸೈಟ್‌ನಲ್ಲಿ ಘೋಷಣೆಯನ್ನು ಅಧಿಕೃತವಾಗಿ ಪ್ರಕಟಿಸಲಾಗಿದೆ.

‘ಬರ್ನಾಬಿಯ ಪಾಲಿಕೆ ಸದಸ್ಯ ಸಾವ್ ಧಾಲಿವಾಲ್, ಬರ್ನಾಬಿ ಸ್ಕೂಲ್ ಟ್ರಸ್ಟಿ ಬಲ್ಜಿಂದರ್ ಕುಮಾರ್ ನಾರಂಗ್ ಪ್ರಯತ್ನದಿಂದ ಈ ಘೋಷಣೆಗಳು ಹೊರಬಿದ್ದಿವೆ. ದಕ್ಷಿಣ ಏಷ್ಯಾ ಸಮುದಾಯವನ್ನು ಪ್ರತಿನಿಧಿಸುವ ರ‍್ಯಾಡಿಕಲ್ ದೇಸಿ ಮತ್ತು ಇತರ ಸದಸ್ಯರ ಮನವಿಯಂತೆ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಮಾನವ ಹಕ್ಕುಗಳ ಪರ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಜೆಡಿಎಸ್ ಫ್ಯೂಸ್ ತೆಗೆಯಲು ಯಾರಿಂದಲೂ ಸಾಧ್ಯವಿಲ್ಲ: ಕುಮಾರಸ್ವಾಮಿ


‘ಹಣ ಸಂಗ್ರಹಿಸಲು ಬಂದ ಅರುಣ್‌ಸಿಂಗ್’

ಪ್ರಜಾವಾಣಿ ವಾರ್ತೆ

ಮೈಸೂರು: ‘ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಹಣ ವಸೂಲಿ ಮಾಡಲು ರಾಜ್ಯಕ್ಕೆ ಬಂದಿದ್ದರಷ್ಟೇ. ಅದಕ್ಕಾಗಿಯೇ ಅವರು ಆಗಾಗ್ಗೆ ಬರುತ್ತಿರುತ್ತಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದರು.

‘ಅವರು ಬಂದು ಕೇವಲ ಸೂಟ್‌ಕೇಸ್ ತೆಗೆದುಕೊಂಡು ಹೋದರಷ್ಟೇ ಸಾಲದು. ರಾಜ್ಯದ ಯೋಜನೆಗಳ ಕುರಿತೂ ಮಾತನಾಡಬೇಕು. ಜೆಡಿಎಸ್ ಅನ್ನು ಮುಳುಗುವ ಹಡಗು ಎಂದು ಲಘುವಾಗಿ ಹೇಳಿದ್ದಾರೆ. ಆದರೆ, ಜೆಡಿಎಸ್‌ನ ಫ್ಯೂಸ್ ತೆಗೆಯಲು ಯಾರಿಂದಲೂ ಸಾಧ್ಯವಿಲ್ಲ. ಕೇಂದ್ರದಿಂದ ಬರುವ ಇಂಥ ದಲ್ಲಾಳಿಗಳಿಗೆ ರಾಜ್ಯದ ನಾಯಕರು ವಾಸ್ತವ ಸ್ಥಿತಿಯನ್ನು ಮನದಟ್ಟು ಮಾಡಿಸಬೇಕು’ ಎಂದು ಇಲ್ಲಿ ಬುಧವಾರ ಸುದ್ದಿಗಾರರಿಗೆ ಹೇಳಿದರು.

‘ಮೇಕೆದಾಟು ಯೋಜನೆ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲಾಗದ ರಾಜ್ಯದ ಸಚಿವರಿಗೆ ಮೂಳೆಗಳೇ ಇಲ್ಲ. ಎಂಜಿನ್ ಕೆಟ್ಟಿತೆಂದು ನಾಯಕತ್ವ ಬದಲಾವಣೆ ಮೂಲಕ ಮತ್ತೊಂದು ಎಂಜಿನ್ ಜೋಡಿಸಿದ್ದಾರೆ. ಆದರೆ, ಬೋಗಿಗಳೆಲ್ಲ ಕೊಳೆತಿವೆ. ಇಂಥವರಿಂದ ಏನನ್ನು ತಾನೆ ನಿರೀಕ್ಷಿಸಲು ಸಾಧ್ಯ’ ಎಂದು ಪ್ರಶ್ನಿಸಿದರು.



ಕುಮಾರಸ್ವಾಮಿ

‘ಎಚ್‌.ಡಿ.ದೇವೇಗೌಡರು ಬಸವರಾಜ ಬೊಮ್ಮಾಯಿಯವರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ ಎಂಬುದು ಸುಳ್ಳು. ಕೆಲವು ಸಚಿವರು ತಮ್ಮ ಕಚೇರಿಗಳಿಗೇ ಹೋಗಿಲ್ಲ. ಸರ್ಕಾರ ಟೇಕ್ ಆಫ್ ಆಗಿದೆ ಎಂದು ಹೇಳುವ ಸಮಯವಿದಲ್ಲ’ ಎಂದರು.

‘ಮುಂಬರುವ ವಿಧಾನಸಭಾ ಚುನಾವಣೆಯ ಜೆಡಿಎಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಸೆ. 28ಕ್ಕೆ ಬಿಡುಗಡೆಯಾಗಲಿದೆ. ಮಿಷನ್ 123 ನನ್ನ ಸ್ಪಷ್ಟ ಗುರಿ. ಅದಕ್ಕಾಗಿ 100ಕ್ಕೂ ಅಧಿಕ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಂಡಿದ್ದು, ಬಿಡದಿಯಲ್ಲಿ ಕಾರ್ಯಾಗಾರ ನಡೆಸಲಾಗುವುದು’ ಎಂದು ಹೇಳಿದರು.

‘ಜೆಡಿಎಸ್ ಬಾಗಿಲು ದೊಡ್ಡದಾಗಿಯೇ ತೆರೆದಿದೆ. ಬರುವವರಿಗೆ ಸ್ವಾಗತ, ಹೋಗುವವರಿಗೆ ಶುಭ ಹಾರೈಸುತ್ತೇವೆ. ಜಿ.ಟಿ.ದೇವೇಗೌಡ ಎರಡು ವರ್ಷದ ಹಿಂದೆಯೇ ಪಕ್ಷ ಬಿಟ್ಟಿದ್ದರು. ಕೈಗೆಟುಕದ ದ್ರಾಕ್ಷಿ ಹುಳಿ ಎನ್ನುವವರಿಗೆ ಏನೂ ಹೇಳಲು ಸಾಧ್ಯವಿಲ್ಲ’ ಎಂದು ವ್ಯಂಗ್ಯವಾಡಿದರು.

‘ಬಿಜೆಪಿಯವರು ಜನಾಶೀರ್ವಾದ ಯಾತ್ರೆ ಮಾಡಿ, ಗೌರಿಗಣೇಶ ಹಬ್ಬಕ್ಕೆ ನಿರ್ಬಂಧ ಹೇರುವುದು ಸರಿಯಲ್ಲ. ಹಬ್ಬವನ್ನು ಮುಕ್ತವಾಗಿ ಆಚರಿಸಲು ಬಿಡಬೇಕು’ ಎಂದರು.

ಹಗುರವಾಗಿ ಮಾತನಾಡುವುದು ತರವಲ್ಲ: ಅರುಣ್‌ಸಿಂಗ್

ಚನ್ನರಾಯಪಟ್ಟಣ: ‘ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡರ ಬಗ್ಗೆ ಗೌರವವಿದೆ. ಅವರ ಪುತ್ರ ಎಚ್‌.ಡಿ.ಕುಮಾರಸ್ವಾಮಿ ಅವರು ಇನ್ನೊಬ್ಬರ ಬಗ್ಗೆ ಹಗುರವಾಗಿ ಮಾತನಾಡಬಾರದು’ ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಕಿವಿಮಾತು ಹೇಳಿದರು.

‘ರಾಜ್ಯ ಬಿಜೆಪಿ ಉಸ್ತುವಾರಿ ಹಣ ವಸೂಲಿಗಾಗಿ ಆಗಾಗ್ಗೆ ರಾಜ್ಯಕ್ಕೆ ಬರುತ್ತಿರುತ್ತಾರೆ’ಎಂಬ ಎಚ್‌.ಡಿ. ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿ ಸಿಂಗ್, ಕುಮಾರಸ್ವಾಮಿ ಈ ರೀತಿ ಹೇಳಿಕೆ ನೀಡಬಾರದಿತ್ತು. ಗುಜರಾತ್ ಮಾದರಿಯಲ್ಲಿ ರಾಜ್ಯದಲ್ಲಿ ಪಕ್ಷ ಸಂಘಟಿಸಲಾಗುವುದು. ತಳಮಟ್ಟದಿಂದ ಪಕ್ಷವನ್ನು ಸದೃಢವಾಗಿ ಸಂಘಟಿಸಲು ಒತ್ತು ನೀಡಲಾಗುವುದು. ಕಾಂಗ್ರೆಸ್ ಮತ್ತು ಜೆಡಿಎಸ್ ಅನಗತ್ಯವಾಗಿ ಬಿಜೆಪಿಯನ್ನು ಟೀಕಿಸುತ್ತಿವೆ’ ಎಂದರು.

ಕೈಕೊಟ್ಟ ಕೇಂದ್ರ: ಯೋಜನೆ ಸ್ಥಗಿತ

ಒಂದನೇ ಪುಟದಿಂದ...

ಗ್ರಾಮ ಸಡಕ್ ಯೋಜನೆಗೆ ಕೇಂದ್ರ ಸರ್ಕಾರ ₹ 900 ಕೋಟಿ ಮತ್ತು ರಾಜ್ಯ ಸರ್ಕಾರ ₹ 600 ಕೋಟಿ ಒದಗಿಸಬೇಕು. ಎರಡೂ ಸರ್ಕಾರಗಳು ಯಾವುದೇ ಅನುದಾನ ಬಿಡುಗಡೆ ಮಾಡಿಲ್ಲ. ಆದರೆ, ಹಿಂದಿನ ಆರ್ಥಿಕ ವರ್ಷದಲ್ಲಿ ಉಳಿದಿದ್ದ ₹ 271.36 ಕೋಟಿಯಲ್ಲಿ ₹ 251.39 ಕೋಟಿ ಬಳಕೆ ಮಾಡಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೆಲವು ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ.

ಸ್ವಚ್ಛ ಭಾರತ ಯೋಜನೆಗೆ ಕೇಂದ್ರ ಸರ್ಕಾರ ₹ 249.60 ಕೋಟಿ ಮತ್ತು ರಾಜ್ಯ ಸರ್ಕಾರ ₹ 166.40 ಕೋಟಿ ಒದಗಿಸಬೇಕಿದೆ. ಈ ಯೋಜನೆಯಡಿ ₹ 680.23 ಕೋಟಿ ಪ್ರಾರಂಭಿಕ ಶಿಲ್ಕು ಇತ್ತು. ಅದರಲ್ಲೇ ₹ 83.25 ಕೋಟಿ ಬಳಕೆ ಮಾಡಿರುವ ಗ್ರಾಮೀಣಾಭಿವೃದ್ಧಿ ಇಲಾಖೆ, ಯೋಜನೆಯ ಅನುಷ್ಠಾನವನ್ನು ಜೀವಂತವಾಗಿರಿಸಿದೆ.


ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಕೇಂದ್ರ ₹ 300 ಕೋಟಿ ಮತ್ತು ರಾಜ್ಯ ₹ 200 ಕೋಟಿ ವೆಚ್ಚ ಮಾಡಬೇಕಿದೆ. ಈ ಯೋಜನೆಯಡಿ ಕಳೆದ ವರ್ಷ ಒದಗಿಸಿದ್ದ ಅನುದಾನದಲ್ಲಿ ₹ 404.77 ಕೋಟಿ ಉಳಿಕೆಯಾಗಿತ್ತು. ಅದರಲ್ಲಿ ₹ 26.81 ಕೋಟಿ ಮಾತ್ರ ಬಳಕೆ ಮಾಡಲಾಗಿದೆ.

> **ಕೆಲವು ಇಲಾಖೆಗಳಲ್ಲಿ ಕಳೆದ ವರ್ಷದ ಅನುದಾನದ ಪೂರ್ಣ ಬಳಕೆ ಇನ್ನೂ ಆಗದೇ ಇರುವುದರಿಂದ ಹೊಸ ಅನುದಾನ ಬಿಡುಗಡೆ ವಿಳಂಬವಾಗಿದೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಆರ್ಥಿಕ ಇಲಾಖೆಯಿಂದ ನಿರ್ಬಂಧ: ‘ಕೇಂದ್ರ ಸರ್ಕಾರದ ಅನುದಾನ ಬಿಡುಗಡೆ ವಿಳಂಬವಾದರೂ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡುವ ಮೂಲಕ ಯೋಜನೆಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿತ್ತು. ಕೋವಿಡ್, ಜಿಎಸ್‌ಟಿ ಪಾಲು ಹಂಚಿಕೆ ಮತ್ತು ಪರಿಹಾರದ ಮೊತ್ತದಲ್ಲಿ ಕಡಿತವಾಗಿರುವುದರಿಂದ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಮುಂಗಡವಾಗಿ ಹೊಂದಾಣಿಕೆ ಅನುದಾನ ಬಿಡುಗಡೆ ಮಾಡದಂತೆ ಆರ್ಥಿಕ ಇಲಾಖೆ ನಿರ್ಬಂಧ ವಿಧಿಸಿದೆ’ ಎಂದು ಮೂಲಗಳು ತಿಳಿಸಿವೆ.

ಚರ್ಚೆ ಹುಟ್ಟು ಹಾಕಿದ ‘ಜನರಿಗೆ ತೆರಿಗೆ ಶೂಲ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಸರ್ಕಾರಕ್ಕೆ ಸಾಲ: ಜನರಿಗೆ ತೆರಿಗೆ ಶೂಲ’ ವಿಶೇಷ ವರದಿಗೆ ಓದುಗರಿಂದ ಮೆಚ್ಚುಗೆ ವ್ಯಕ್ತವಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯನ್ನೂ ಹುಟ್ಟು ಹಾಕಿದೆ.

ವಿಶೇಷ ವರದಿಯನ್ನು ಟ್ಯಾಗ್ ಮಾಡಿ ತಮ್ಮ ಜಾಲತಾಣಗಳಲ್ಲಿ ಹಂಚಿಕೊಂಡ ನೂರಾರು ಮಂದಿ ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದು, ಆಯ್ದ ಕೆಲವನ್ನು ಇಲ್ಲಿ ನೀಡಲಾಗಿದೆ.

‘ನಮ್ಮಲ್ಲಿ ಕಾರ್ಪೊರೇಟ್ ತೆರಿಗೆ ಇತರ ದೇಶಗಳಿಗಿಂತ ಕಡಿಮೆ. ಕಡಿಮೆ ಆದಾಯದವರಿಗೆ, ತೆರಿಗೆ ಹೆಚ್ಚು. ತೆರಿಗೆ ಮನ್ನಾ ಇದರಲ್ಲಿ ಸೇರಿಲ್ಲ. ಆದರೂ ತೆರಿಗೆ ಹಣ ವ್ಯರ್ಥ ಆಗುತ್ತಿದೆ ಎಂದು ಕಾರ್ಪೊರೇಟ್ ಧಣಿಗಳು ಹುಯಿಲೆಬ್ಬಿಸುತ್ತಿದ್ದಾರೆ. ಅದನ್ನು ಹಲವರು ಎಲ್ಲರಿಗೂ ಕಳಿಸಿಕೊಟ್ಟು ತಮ್ಮಿಂದಾದಷ್ಟು ‘ದೇಶ ಸೇವೆ’ ಮಾಡುತ್ತಿದ್ದಾರೆ’ ಎಂದು ಲೇಖಕ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಕಾರ್ಪೊರೇಟ್‌ಗಳಿಗೆ ಜಗತ್ತಿನಲ್ಲೇ ಅತಿ ಕಡಿಮೆ ತೆರಿಗೆ ಇರುವ ರಾಷ್ಟ್ರಗಳಲ್ಲಿ ನಮ್ಮದೂ ಒಂದು. ಇಷ್ಟಾದ ಮೇಲೂ ನಾವು ತೆರಿಗೆ ಕಟ್ಟೋರು. ಮಿಕ್ಕವರು ಕುಂತು ತಿನ್ನೋರು ಎಂದು ಬಾಯಿ ಬಡಿದುಕೊಳ್ಳುವ ಮೇಲ್ಮಧ್ಯಮ ವರ್ಗದ ತುಂಡುಗಳು ಮತ್ತು ‘ಪರಿವಾರಿ’ಗಳಿಂದ ಪ್ರಚಾರ ನಡೆದಿದೆ. ಇದಕ್ಕೆ ಪಿ.ವಿ.ನರಸಿಂಹರಾವ್, ಮನಮೋಹನ್ ಸಿಂಗ್ ಅವರು ಮುನ್ನುಡಿ ಬರೆದರು. ಬಿಜೆಪಿ ಸರ್ಕಾರ ದೇಶದ ಜನಸಾಮಾನ್ಯರನ್ನು ಹಿಂಡಿ ಕಾರ್ಪೊರೇಟ್‌ಗಳಿಗೆ, ಅತಿ ಶ್ರೀಮಂತರಿಗೆ ಮಣೆ ಹಾಕುವುದರಲ್ಲಿ ಮಿಕ್ಕವರನ್ನು ಮೀರಿಸಿದೆ. ಒಂದು ರಾಷ್ಟ್ರ- ಒಂದು ತೆರಿಗೆಯಲ್ಲ; ಒಂದು ರಾಷ್ಟ್ರ ಜನಸಾಮಾನ್ಯರಿಗೆ ತೆರಿಗೆ, ಶ್ರೀಮಂತರಿಗೆ ವಿನಾಯಿತಿ ಎನ್ನಬಹುದು. ಅಂಕಿ-ಅಂಶ, ಪುರಾವೆಗಳನ್ನು ಬಿಟ್ಟು ಫೇಕ್ ಫಾರ್ವರ್ಡ್ ಮಾಡಿಕೊಂಡು ದೇಶ ದ್ರೋಹ ಎಸಗುತ್ತಿರುವ ನಾವು ಟ್ಯಾಕ್ಸ್‌ಪೇಯರ್ಸ್ ಮನಸ್ಥಿತಿಯವರಿಗೆ ಅರ್ಥವಾದೀತೆ’ ಎಂದು ಡಾ. ವಾಸು ಎಚ್‌.ವಿ ಪ್ರಶ್ನಿಸಿದ್ದಾರೆ.

‘ಉದಾರೀಕರಣವೂ, ಹಣವಂತರ ಪರವಾದ ನಿರ್ದಯೀ ಸುಲಿಗೆಕೋರರ ಸರ್ಕಾರವೂ, ಸಾಮಾನ್ಯರ ಅಸಹಾಯಕ ಕಥೆಯೂ, ಸರ್ಕಾರದ ಭಾವನಾತ್ಮಕ ಕಣ್ಕಟ್ಟುಗಳು ಉಳ್ಳವರ ಅಮಾನವೀಯ ಹಾಗೂ ಉಡಾಫೆಯೂ’ ಎಂದು ಸಂಜೋತಿ ವಿ.ಕೆ ಪ್ರತಿಕ್ರಿಯಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	117	5,397	9,655
ಹಾರಂಗಿ	2,859	2,858.16	2,417	1,808
ಕಬಿನಿ	2,284	2,281.64	4,400	5,000
ಹೇಮಾವತಿ	2,922	2,916.74	2,879	5,190
ಲಿಂಗನಮಕ್ಕಿ	1,819	1,812.70	5,620	-
ಸೂಪಾ (ಮೀ)	564	554.76	2,679	2,679
ಮಾಣಿ	594.36	585.96	1,573	-
ತುಂಗಭದ್ರಾ	1,633	1,632.80	21,380	10,726
ಮಲಪ್ರಭಾ	2,079.50	2,078.70	3,378	1,094
ಘಟಪ್ರಭಾ	2,175	2,175	879	879
ಭದ್ರಾ	186	185.40	3,547	3,547
ಆಲಮಟ್ಟಿ (ಮೀ)	519.60	519.60	9,088	9,088
ನಾರಾಯಣಪುರ (ಮೀ)	492.25	492.02	7,640	5,400

* ನೆಲಮಟ್ಟದಿಂದ

ವರದಿ ಜಾರಿಗೆ ವಿರೋಧ: ಸಚಿವರ ಕಾರಿಗೆ ಮುತ್ತಿಗೆ

ಕೊಪ್ಪಳ: ‘ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಜಾರಿಗೆ ವಿರೋಧವಿದೆ’ ಎಂದು ಹೇಳಿಕೆ ನೀಡಿದ್ದ ಪಶುಸಂಗೋಪನಾ ಸಚಿವ ಪ್ರಭು ಚವಾಣ್ ಅವರ ಕಾರಿಗೆ ಮಾದಿಗ ಮಹಾಸಭಾದ ಮುಖಂಡರು ಮುತ್ತಿಗೆ ಹಾಕಲು ಬಂದಿದ್ದರಿಂದ ಅವರನ್ನು ಪೊಲೀಸರು ಬಂಧಿಸಿ ವಾಹನದಲ್ಲಿ ಕರೆದುಕೊಂಡು ಹೋದರು.

ನಗರದಲ್ಲಿ ಬುಧವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಲು ಬಂದಾಗ ಮಾದಿಗ ಸಮಾಜದ ಮುಖಂಡರು ಸಚಿವರ ವಿರುದ್ಧ ಘೋಷಣೆ ಕೂಗಿ, ಕಾರಿನತ್ತ ಬಂದರು. ಅವರನ್ನು ಪೊಲೀಸರು ತಡೆದು ಬಂಧಿಸಿ ಮುನಿರಾಬಾದ್‌ಗೆ ಕರೆದುಕೊಂಡು ಹೋಗಿ ನಂತರ ಬಿಡುಗಡೆ ಮಾಡಿದರು.

ಮಾದಿಗ ಮಹಾಸಭಾದ ಮುಖಂಡ ಮಲ್ಲಿಕಾರ್ಜುನ ಪೂಜಾರ, ‘ಸಚಿವ ಚವಾಣ್ ಅವರು ಹೇಳಿಕೆ ಹಿಂದಕ್ಕೆ ಪಡೆದು, ವರದಿ ಜಾರಿಗೆ ಸಹಕರಿಸಬೇಕು. ಇಲ್ಲದಿದ್ದರೆ ಅವರು ಭಾಗವಹಿಸುವ ಎಲ್ಲ ಕಾರ್ಯಕ್ರಮಗಳಲ್ಲಿ ಕಪ್ಪುಬಟ್ಟೆ ಪ್ರದರ್ಶನ ಮಾಡಿ ಪ್ರತಿಭಟನೆ ನಡೆಸುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ‘ಈ ಮಾತನ್ನು ನಾನು ಹಿಂದಿನಿಂದಲೂ ಹೇಳುತ್ತ ಬಂದಿದ್ದೇನೆ. ಇದು ನನ್ನ ವೈಯಕ್ತಿಕ ಮತ್ತು ಸಮಾಜದ ಅಭಿಪ್ರಾಯ. ವರದಿ ಜಾರಿಗೆ ಬಿಡುವುದಿಲ್ಲ’ ಎಂದರು.

ತಮ್ಮ ಹಿಂಬಾಲಕರಿಂದ ಶೂ ತರಿಸಿಕೊಂಡ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ‘ಇದು ದೊಡ್ಡ ವಿಷಯವಲ್ಲ. ಶೂ ತರುವಂತೆ ಹೇಳಿದ್ದೇನೆಯೇ ಹೊರತು ಕೈಯಲ್ಲಿ ಹಿಡಿದುಕೊಂಡು ಬರುವಂತೆ ಹೇಳಿಲ್ಲ’ ಎಂದು ಸಮಜಾಯಿಷಿ ನೀಡಿದರು.



ಹುಬ್ಬಳ್ಳಿಯ ಡೆನಿಸನ್ಸ್ ಹೋಟೆಲ್‌ನಲ್ಲಿ ಬುಧವಾರ ನಡೆದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಪುತ್ರಿ ಅರ್ಪಿತಾ ಹಾಗೂ ಕೆ.ಎಸ್. ಹೃಷಿಕೇಶ್ ಮದುವೆ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪಾಲ್ಗೊಂಡಿದ್ದರು

ಜೋಶಿ ಪುತ್ರಿ ಮದುವೆಗೆ ಗಣ್ಯರ ದಂಡು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಡೆನಿಸನ್ಸ್ ಹೋಟೆಲ್‌ನಲ್ಲಿ ಬುಧವಾರ ಅದ್ದೂರಿಯಾಗಿ ನಡೆದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಪುತ್ರಿ ಅರ್ಪಿತಾ ಮದುವೆ ಸಮಾರಂಭದಲ್ಲಿ ರಾಷ್ಟ್ರ, ರಾಜ್ಯ ನಾಯಕರ ದಂಡೇ ಭಾಗವಹಿಸಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವರಾದ ಡಿ.ರಾವ್‌ಸಾಹೇಬ್ ದಾದಾರಾವ್, ಅರ್ಜುನ್ ರಾಮಪಾಲ್ ಮೇಘ್ವಾಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಆರ್. ಅಶೋಕ್, ಹಾಲಪ್ಪ ಆಚಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಮತ್ತಿತರರು ಪಾಲ್ಗೊಂಡಿದ್ದರು.

ಗುರವಾರ ಸಂಜೆ ನಡೆಯುವ ಆರತಕ್ಷತೆ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವರಾದ ಅಮಿತ್ ಷಾ, ಪಿಯೂಷ್ ಗೋಯಲ್, ನಿತಿನ್ ಗಡ್ಕರಿ, ಧರ್ಮೇಂದ್ರ ಪ್ರಧಾನ, ರಾಜೀವ್ ಚಂದ್ರಶೇಖರ್, ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಮಹಾನಗರ ಪಾಲಿಕೆ ಚುನಾವಣೆಗೆ ಸೆ.3 ರಂದು ನಡೆಯಲಿದ್ದು, ನೀತಿ ಸಂಹಿತೆ ಜಾರಿಯಲ್ಲಿದೆ. ಮತದಾರರಲ್ಲದ ರಾಜಕೀಯ ನಾಯಕರು ಹುಬ್ಬಳ್ಳಿಗೆ ಬರುವಂತಿಲ್ಲ ಎಂದಿದ್ದರೂ, ಮದುವೆಯಲ್ಲಿ ಭಾಗವಹಿಸುತ್ತಿರುವುದಕ್ಕೆ, ಕೋವಿಡ್ ನಿಯಮಾವಳಿ ಉಲ್ಲಂಘನೆಯಾಗುತ್ತಿರುವ ಬಗೆಗೂ ಸಾರ್ವಜನಿಕ ಚರ್ಚೆಯಾಗುತ್ತಿದೆ.

ನೀತಿ ಸಂಹಿತೆ ಉಲ್ಲಂಘನೆ ಕುರಿತು ಮಾಧ್ಯಮದವರಿಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಯಾವುದೇ ರಾಜಕೀಯ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ. ಹಾಗಾಗಿ, ನೀತಿ ಸಂಹಿತೆ ಉಲ್ಲಂಘನೆ ಮಾಡಿಲ್ಲ ಎಂದರು.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹುಬ್ಬಳ್ಳಿ ನಿವಾಸಿಯಾಗಿದ್ದಾರೆ. ಅವರ ಸ್ವಂತ ಮನೆಯೂ ಇಲ್ಲಿಯೇ ಇದ್ದು, ಮತದಾನದ ಹಕ್ಕು ಹೊಂದಿದ್ದಾರೆ. ಚುನಾವಣಾ ಪ್ರಚಾರಕ್ಕೆ ಬಂದವರು ವಾಸ್ತವ್ಯ ಹೂಡುವಂತಿಲ್ಲ ಎಂದು ಆಯೋಗ ಸ್ಪಷ್ಟವಾಗಿ ತಿಳಿಸಿದೆ. ಹಲವು ಸಚಿವರು ಬರುತ್ತಿದ್ದು, ಯಾರೂ ಪ್ರಚಾರ ಕಾರ್ಯದಲ್ಲಿ ತೊಡಗುತ್ತಿಲ್ಲ. ಬಹಿರಂಗ ಪ್ರಚಾರವೂ ಈಗಾಗಲೇ ಅಂತ್ಯ ಕಂಡಿದೆ’ ಎಂದು ತಿಳಿಸಿದರು.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣ; ಇನ್‌ಸ್ಟಾಗ್ರಾಮ್ ಖಾತೆಯಿಂದ ವ್ಯವಹಾರ

ಡ್ರಗ್ಸ್ ದಂಧೆಯೇ ಪ್ರತೀಕ್ ವೃತ್ತಿ: ಗೆಳತಿ ಸಹಕಾರ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಡ್ರಗ್ಸ್ ಪೆಡ್ಲರ್ ಹಾಗೂ ಖರೀದಿದಾರರ ನಡುವೆ ಮಧ್ಯವರ್ತಿ ಆಗಿ ಕೆಲಸ ಮಾಡುತ್ತಿದ್ದ ಆರೋಪಿ ಪ್ರತೀಕ್ ಶೆಟ್ಟಿ, ಡ್ರಗ್ಸ್ ದಂಧೆಯನ್ನೇ ವೃತ್ತಿ ಮಾಡಿಕೊಂಡಿದ್ದ. ಆತನ ದಂಧೆಗೆ ಗೆಳತಿ ಅಪೇಕ್ಷಾ ನಾಯಕ್ ಸಹಕಾರ ನೀಡುತ್ತಿದ್ದಳೆಂಬ ಸಂಗತಿ ಸಿಸಿಬಿ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.



ಪ್ರತೀಕ್ ಶೆಟ್ಟಿ

‘ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದಲ್ಲಿ 15ನೇ ಆರೋಪಿ ಆಗಿರುವ ಪ್ರತೀಕ್ ಶೆಟ್ಟಿ ಹಾಗೂ 25ನೇ ಆರೋಪಿ ಅಪೇಕ್ಷಾ ನಾಯಕ್, ಹಲವು ವರ್ಷಗಳ ಸ್ನೇಹಿತರು. ಇಬ್ಬರೂ ಒಟ್ಟಿಗೆ ‘ಡ್ರಗ್ಸ್ ಪಾರ್ಟಿ’ಯಲ್ಲಿ ಪಾಲ್ಗೊಳ್ಳುತ್ತಿದ್ದರು. ಡ್ರಗ್ಸ್ ಸೇವಿಸುತ್ತಿದ್ದ ಅವರಿಬ್ಬರು, ಡ್ರಗ್ಸ್ ಮಾರಾಟದ ಮೂಲಕವೂ ಹಣ ಸಂಪಾದಿಸುತ್ತಿದ್ದರು’ ಎಂಬ ಅಂಶ ಸಿಸಿಬಿ ಪೊಲೀಸರ ದೋಷಾರೋಪ ಪಟ್ಟಿಯಲ್ಲಿದೆ.

‘ಪ್ರಕರಣದ ಆರೋಪಿಯೂ ಆಗಿರುವ ಆರ್‌ಟಿಒ ಕಚೇರಿ ಎಫ್‌ಡಿಎ ಬಿ.ಕೆ.ರವಿಶಂಕರ್ ನಾದಿನಿಯೇ ಈ ಅಪೇಕ್ಷಾ ನಾಯಕ್. ಆಕೆಯನ್ನು ಪಾರ್ಟಿಯೊಂದರಲ್ಲಿ ಪರಿಚಯಿಸಿಕೊಂಡು ಸ್ನೇಹ ಬೆಳೆಸಿದ್ದ ಪ್ರತೀಕ್, ಆಕೆಯ ಜೊತೆ ಡ್ರಗ್ಸ್ ದಂಧೆ ಮುಂದುವರಿಸಿದ್ದ. ಇವರಿಬ್ಬರು ಶಿವಪ್ರಕಾಶ್ ಅಲಿಯಾಸ್ ಚಿಪ್ಪಿ,



ದೊಡ್ಡವರ ‘ಡ್ರಗ್ಸ್’ ನಶೆ

ವೀರೇನ್ ಖನ್ನಾ, ರವಿಶಂಕರ್ ಹಾಗೂ ಇತರೆ ಆರೋಪಿಗಳ ಜೊತೆ ಒಡನಾಟವಿಟ್ಟುಕೊಂಡು ಡ್ರಗ್ಸ್ ಸರಬರಾಜು ಮಾಡುತ್ತಿದ್ದರು. ನೈಜೀರಿಯಾ ಪ್ರಜೆಗಳಿಗೂ ಇವರಿಬ್ಬರು ಆತ್ಮೀಯರಾಗಿದ್ದರು. ಇದಕ್ಕೆ ಸಂಬಂಧಪಟ್ಟ ಮೊಬೈಲ್ ಮಾತುಕತೆ ವಿವರಗಳು ಸಿಕ್ಕಿವೆ.’

‘ಇಬ್ಬರೂ ಆರೋಪಿಗಳು ನಗರದ ವಿವಿಧ ಹೋಟೆಲ್, ವಿಲ್ಲಾ ಹಾಗೂ ಕ್ಲಬ್‌ಗಳಲ್ಲಿ ಪಾರ್ಟಿ ಆಯೋಜಿಸುತ್ತಿದ್ದರು. ಪಾರ್ಟಿಗೆ ಯುವಕ-ಯುವತಿಯರನ್ನು ಆಹ್ವಾನಿಸಿ ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆಯೂ ಪುರಾವೆಗಳು ಲಭ್ಯವಾಗಿವೆ’ ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

ಇನ್‌ಸ್ಟಾಗ್ರಾಮ್ ಖಾತೆಯಿಂದ ವ್ಯವಹಾರ: ‘ಇನ್‌ಸ್ಟಾಗ್ರಾಮ್ ಆ್ಯಪ್‌ನಲ್ಲಿ ‘#pattshetty’ ಹೆಸರಿನಲ್ಲಿ ಖಾತೆ ಹೊಂದಿದ್ದ ಪ್ರತೀಕ್ ಶೆಟ್ಟಿ, ಅದರ ಮೂಲಕವೇ ಗ್ರಾಹಕರನ್ನು ಸಂಪರ್ಕಿಸಿ ಡ್ರಗ್ಸ್ ವ್ಯವಹಾರ ಮಾಡುತ್ತಿದ್ದ’ ಎಂಬ ಅಂಶ ಪಟ್ಟಿಯಲ್ಲಿದೆ.

‘ಪ್ರಕರಣದ ಆರೋಪಿಗಳಾಗಿರುವ ನೈಜೀರಿಯಾ ಪ್ರಜೆಗಳ ಜೊತೆ ಹೆಚ್ಚು ಒಡನಾಟ ಹೊಂದಿದ್ದ ಪ್ರತೀಕ್, ಅವರಿಂದಲೇ ಡ್ರಗ್ಸ್ ಖರೀದಿಸಿದ್ದಕ್ಕೆ ಸಾಕ್ಷ್ಯಗಳಿವೆ. ಅವರನ್ನು ಇತರರಿಗೆ ಪರಿಚಯ ಮಾಡಿಕೊಟ್ಟು ‘ಕಮಿಷನ್’ ಸಹ ಪಡೆಯುತ್ತಿದ್ದ. ಪ್ರತೀಕ್ ಶೆಟ್ಟಿ ಮನೆ ಮೇಲೆ ದಾಳಿ ಮಾಡಿದ್ದಾಗ, 11.50 ಗ್ರಾಂ ಎಕ್ಸ್‌ಟೆಸಿ ಮಾತ್ರೆಗಳು ಪತ್ತೆಯಾಗಿದ್ದವು’ ಎಂಬ ಮಾಹಿತಿಯನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

‘ಡ್ರಗ್ಸ್ ಮಾರಾಟ ಪ್ರಕರಣವೊಂದರಲ್ಲಿ ನೈಜೀರಿಯಾ ಪ್ರಜೆಗಳ ಜೊತೆ ಪ್ರತೀಕ್‌ನನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದರು. ಕೆಲ ದಿನ ಜೈಲಿನಲ್ಲಿದ್ದ ಆತ, ಜಾಮೀನು ಮೇಲೆ ಹೊರಬಂದು ಪುನಃ ಡ್ರಗ್ಸ್ ಮಾರಲಾರಂಭಿಸಿದ್ದ. ಇತರೆ ಆರೋಪಿಗಳ ಜೊತೆ ಸಂಘಟಿತನಾಗಿ ‘ಡ್ರಗ್ಸ್ ಪೆಡ್ಲರ್’ ಆಗಿ ಬೆಳೆಯುತ್ತಿದ್ದ’ ಎಂಬ ಅಂಶವೂ ಪಟ್ಟಿಯಲ್ಲಿದೆ.

ಲಾಕ್‌ಡೌನ್‌ನಲ್ಲೂ ಡ್ರಗ್ಸ್ ಪಾರ್ಟಿ: ‘ಆರೋಪಿಯೂ ಆಗಿರುವ ನಟಿ ಸಂಜನಾ ಗಲ್ರಾನಿ ಜೊತೆ ಒಡನಾಟ ಹೊಂದಿದ್ದ ಅಪೇಕ್ಷಾ, ಕೆಲ ಆ್ಯಪ್‌ಗಳಲ್ಲಿ ಖಾತೆ ತೆರೆಯಲು ಸಹಕಾರ ನೀಡಿದ್ದಳು. ಅಂಥ ಖಾತೆಗಳಿಂದಲೂ ಡ್ರಗ್ಸ್ ವ್ಯವಹಾರ ನಡೆಯುತ್ತಿತ್ತು’ ಎಂಬ ಮಾಹಿತಿ ಪಟ್ಟಿಯಲ್ಲಿದೆ.

‘ಲಾಕ್‌ಡೌನ್ ಸಮಯದಲ್ಲೂ ಕೆಲವೆಡೆ ಪಾರ್ಟಿಗಳು ನಡೆದಿದ್ದವು. ಅಪೇಕ್ಷಾ, ಗೆಳೆಯ ಪ್ರತೀಕ್ ಜೊತೆ ಪಾರ್ಟಿಗಳಲ್ಲಿ ಪಾಲ್ಗೊಂಡು ಡ್ರಗ್ಸ್ ಸೇವನೆ ಮಾಡಿದ್ದಳು’ ಎಂದೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

‘ಸದಾಶಿವನಗರ ಮನೆಯಲ್ಲಿ ಡ್ರಗ್ಸ್ ಪಾರ್ಟಿ’

‘ಪ್ರಕರಣದ 10ನೇ ಆರೋಪಿ ಅಭಿಸ್ವಾಮಿ ಅಲಿಯಾಸ್ ಅಭಿಜಿತ್ ರಂಗಸ್ವಾಮಿ, ಖಾಸಗಿ ಕಂಪನಿ ಉದ್ಯೋಗಿ. ಸದಾಶಿವನಗರದ ಭಾಷ್ಯಂ ವೃತ್ತ ಬಳಿಯ ಹಾಗೂ ನೆಲಮಂಗಲ ರಸ್ತೆಯಲ್ಲಿರುವ ಮನೆಗಳಲ್ಲಿ ಡ್ರಗ್ಸ್ ಪಾರ್ಟಿ ಮಾಡಿದ್ದ’ ಎಂಬ ಮಾಹಿತಿ ಆರೋಪ ಪಟ್ಟಿಯಲ್ಲಿದೆ.

‘ಪ್ರತಿ ಬಾರಿಯೂ ರಾತ್ರಿ 10 ಗಂಟೆಗೆ ಆರಂಭವಾಗುತ್ತಿದ್ದ ಪಾರ್ಟಿ, ನಸುಕಿನವರೆಗೂ ನಡೆಯುತ್ತಿತ್ತು. ನಟ ದಿಗಂತ್ ಹಾಗೂ ನಟಿ ಐಂದ್ರಿತಾ ರೈ ಸಹ ಒಮ್ಮೆ ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ಅವರ ಎದುರೇ ಕೊಕೇನ್ ಹಾಗೂ ಎಕ್ಸ್‌ಟೆಸಿ ಮಾತ್ರೆಗಳ ಮಾರಾಟ ಆಗಿತ್ತು. ಈ ಬಗ್ಗೆ ಅವರಿಬ್ಬರು ಸಾಕ್ಷಿ ಹೇಳಿದ್ದಾರೆ.’

‘ಪ್ರಕರಣದಲ್ಲಿ ನಟಿ ರಾಗಿಣಿ ಬಂಧನವಾಗುತ್ತಿದ್ದಂತೆ ಸ್ನೇಹಿತರೊಬ್ಬರನ್ನು ತನ್ನ ಮನೆಗೆ ಕರೆಸಿದ್ದ ಅಭಿಸ್ವಾಮಿ, ‘ಡ್ರಗ್ಸ್ ಪ್ರಕರಣದಲ್ಲಿ ನನ್ನ ಹೆಸರು ಸಹ ಇದೆ. ಪೊಲೀಸರು ನನ್ನನ್ನು ಯಾವಾಗ ಬೇಕಾದರೂ ಬಂಧಿಸಬಹುದು. ಈ ಬಗ್ಗೆ ಆತಂಕ ಶುರುವಾಗಿದೆ’ ಎಂದಿದ್ದ. ಅದೇ ದಿನ ಸ್ನೇಹಿತನ ಮೊಬೈಲ್‌ನಿಂದ ಪೆಡ್ಲರ್‌ಗೆ ಕರೆ ಮಾಡಿ ಕೊಕೇನ್ ಡ್ರಗ್ಸ್ ತರಿಸಿಕೊಂಡು ಸೇವಿಸಿದ್ದ’ ಎಂಬ ಮಾಹಿತಿ ಪಟ್ಟಿಯಲ್ಲಿದೆ.



ಅಫ್ಗಾನಿಸ್ತಾನ ಸ್ವಾತಂತ್ರ್ಯದ ಅವಸಾನ

ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಳ್ವಿಕೆ: ಅಗತ್ಯ ವಸ್ತುಗಳ ತೀವ್ರ ಕೊರತೆ, ಬೆಲೆ ವಿಪರೀತ ಏರಿಕೆ; ಕರೆನ್ಸಿ ದರ ಪಾತಾಳಕ್ಕೆ

ಬಡತನ, ಬರಗಾಲದ ಹೊಸ ಯುಗ

ಕಾಬೂಲ್ (ರಾಯಿಟರ್ಸ್): ಅಂಗಡಿಗಳು ಮತ್ತು ಬ್ಯಾಂಕುಗಳ ಮುಂದೆ ಉದ್ದ ಸಾಲುಗಳು, ಅಗತ್ಯ ವಸ್ತುಗಳ ಬೆಲೆಯಲ್ಲಿ ವಿಪರೀತ ಏರಿಕೆಯು ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಡಳಿತದ ಆರಂಭಕ್ಕೆ ಸಾಕ್ಷಿಯಾಗಿವೆ. ಅಫ್ಗಾನಿಸ್ತಾನವು ತಾಲಿಬಾನ್ ವಶವಾದ ಬಳಿಕ ಅಲ್ಲಿನ ಜನರ ನಿತ್ಯದ ಸಂಕಷ್ಟ ಇನ್ನಷ್ಟು ಏರಿಕೆಯಾಗಿದೆ.

ಹೆಚ್ಚುತ್ತಲೇ ಇರುವ ಆರ್ಥಿಕ ಸಂಕಷ್ಟವು ತಾಲಿಬಾನ್ ಮುಂದೆ ಇರುವ ಅತ್ಯಂತ ದೊಡ್ಡ ಸವಾಲಾಗಿದೆ. ಅಫ್ಗಾನಿಸ್ತಾನದ ಕರೆನ್ಸಿ ಅಫ್ಗನಿಯ ಮೌಲ್ಯ ಕುಸಿಯುತ್ತಲೇ ಇದೆ. ಹಣದುಬ್ಬರ ಏರುತ್ತಿದೆ. ದೇಶದ ಜನರ ಪೈಕಿ ಮೂರನೇ ಒಂದರಷ್ಟು ಮಂದಿಯು ದಿನಕ್ಕೆ ₹150ರಷ್ಟು ವೆಚ್ಚ ಮಾಡುವ ಸ್ಥಿತಿಯನ್ನೂ ಹೊಂದಿಲ್ಲ.

ಸ್ವಲ್ಪ ಸ್ಥಿತಿವಂತರು ಎನಿಸಿಕೊಂಡವರ ಪರಿಸ್ಥಿತಿಯೂ ಈಗ ಚೆನ್ನಾಗಿಲ್ಲ. ಕಚೇರಿಗಳು ಮತ್ತು ಅಂಗಡಿಗಳಲ್ಲಿ ಹೆಚ್ಚಿನವು ಮುಚ್ಚಿವೆ. ನೌಕರರಿಗೆ ವೇತನ ಪಾವತಿ ಆಗಿಲ್ಲ. ಹಾಗಾಗಿ, ಮೂರು ಹೊತ್ತಿನ ಆಹಾರ ಹೊಂದಿಸಿಕೊಳ್ಳುವುದು ಕೂಡ ಜನರಿಗೆ ದೊಡ್ಡ ಪಡಿಪಾಟಲಾಗಿದೆ.

‘ಈಗ ಎಲ್ಲವೂ ದುಬಾರಿ. ಬೆಲೆಗಳು ದಿನಕಳೆದಂತೆ ಹೆಚ್ಚುತ್ತಲೇ ಇವೆ’ ಎಂದು ಕಾಬೂಲ್ ನಿವಾಸಿ ಝೀಲ್‌ಗಾಯ್ ಹೇಳಿದ್ದಾರೆ. ಟೊಮ್ಯಾಟೊಕ್ಕೆ ಈಗ ಕಿಲೋಗೆ 80 ಅಫ್ಗನಿ ನೀಡಬೇಕಾಗಿದೆ. ಮೊದಲು ಇದು 50 ಅಫ್ಗನಿಯ ಒಳಗೆ ಇತ್ತು ಎಂದು ಅವರು ವಿವರ ನೀಡಿದ್ದಾರೆ.

ನಗರಗಳಲ್ಲಿ ಆಹಾರ ವಸ್ತುಗಳ ಕೊರತೆ ತೀವ್ರವಾಗಿದೆ. ಸತತ ಬರಗಾಲದಿಂದಾಗಿ ಗ್ರಾಮೀಣ ಪ್ರದೇಶದ ಜನರೂ ನಗರಗಳಿಗೆ ಬಂದು ಸೇರಿಕೊಂಡಿದ್ದಾರೆ. ಬಹುದೊಡ್ಡ ಮಾನವೀಯ ಸಂಕಷ್ಟಕ್ಕೆ ಇದು ಕಾರಣವಾಗಲಿದೆ ಎಂದು ಅಫ್ಗಾನಿಸ್ತಾನದಲ್ಲಿ ಕೆಲಸ ಮಾಡುವ ಹಲವು ಸಂಘಟನೆಗಳು ಎಚ್ಚರಿಸಿವೆ.

ಜನರು ರಸ್ತೆ ಬದಿಗಳಲ್ಲಿ ಡೇರೆಗಳನ್ನು ಹಾಕಿ ವಾಸಿಸುತ್ತಿರುವುದು ನಗರದ ಎಲ್ಲೆಡೆ ಕಂಡು ಬರುತ್ತಿದೆ ಎಂದು ನಗರ ನಿವಾಸಿಯೊಬ್ಬರು ಹೇಳಿದ್ದಾರೆ. ಕಾಬೂಲ್ ಮಾರುಕಟ್ಟೆಯಲ್ಲಿ 50 ಕಿಲೋ ಗೋಧಿಹಿಟ್ಟಿನ ಚೀಲದ ದರವು 2,200 ಅಫ್ಗನಿಯಷ್ಟಾಗಿದೆ. ಇದು ಸಾಮಾನ್ಯ ದಿನಕ್ಕೆ ಹೋಲಿಸಿದರೆ ಶೇ 30ರಷ್ಟು ಹೆಚ್ಚು. ತರಕಾರಿ ದರದಲ್ಲಿ ಶೇ 50ರಷ್ಟು, ಪೆಟ್ರೋಲ್ ದರದಲ್ಲಿ ಶೇ 75ರಷ್ಟು ಏರಿಕೆ ಆಗಿದೆ.



ಕಾಬೂಲ್‌ನ ಬ್ಯಾಂಕ್ ಶಾಖೆಯೊಂದರ ಮುಂದೆ ಭಾರಿ ಉದ್ದದ ಸಾಲು ಬುಧವಾರ ಕಂಡು ಬಂತು ರಾಯಿಟರ್ಸ್ ಚಿತ್ರ

ತೆರವು ಕೊನೆಯಾದ ಬಳಿಕ...

- ಅರ್ಥವ್ಯವಸ್ಥೆಗೆ ಮತ್ತೆ ಚಾಲನೆ ನೀಡುವುದಕ್ಕಾಗಿ ಬ್ಯಾಂಕು ತೆರೆಯುವಂತೆ ಆದೇಶಿಸಲಾಗಿದೆ
- ಬ್ಯಾಂಕುಗಳಿಂದ ಹಣ ವಾಪಸ್ ಪಡೆಯುವುದಕ್ಕೆ ಮಿತಿ ಹೇರಲಾಗಿದೆ
- ಅಫ್ಗಾನಿಸ್ತಾನದಲ್ಲಿರುವ ಭಯೋತ್ಪಾದಕ ಸಂಘಟನೆಗಳು ಒಡ್ಡಬಹುದಾದ ಅಪಾಯದ ಅರಿವಿದೆ. ಹಾಗಾಗಿ, ಚೀನಾ ಜತೆಗಿನ ಗುಪ್ತಚರ ಮಾಹಿತಿ ಹಂಚಿಕೆ ಮತ್ತು ಭಯೋತ್ಪಾದನೆ ತಡೆ ಸಹಕಾರವನ್ನು ಬಲಪಡಿಸಲಾಗುವುದು ಎಂದು ಪಾಕಿಸ್ತಾನ ಹೇಳಿದೆ
- ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾಚರಣೆ ಪುನರಾರಂಭಕ್ಕೆ ಕತಾರ್‌ನ ತಾಂತ್ರಿಕ ತಂಡವು ಕಾಬೂಲ್‌ಗೆ ತಲುಪಿದೆ
- ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಡಾಮಿನಿಕ್ ರಾಬ್ ಅವರೊಂದಿಗೆ ಅಫ್ಗನ್ ಸ್ಥಿತಿ ಬಗ್ಗೆ ಚರ್ಚೆ ನಡೆಸಿದ್ದಾರೆ. ಒಂದು ವಾರದಲ್ಲಿ ನಡೆದ ಎರಡನೇ ಸಭೆ ಇದು

ನಗದು ಸಂಕಷ್ಟ

ಕಾಬೂಲ್ ನಗರವು ತಾಲಿಬಾನ್ ವಶವಾಗುವ ಮೊದಲು 80 ಅಫ್ಗನಿಗಳಿಗೆ ಒಂದು ಡಾಲರ್ ಮೌಲ್ಯ ಇತ್ತು. ಈಗ ಅದು 93–95 ಅಫ್ಗನಿಗಳಿಗೆ ಏರಿದೆ. ಈ ದರವು ಒಂದು ಸೂಚಕ ಮಾತ್ರ. ಅಫ್ಗನಿಯು ಪೂರ್ಣವಾಗಿ ಮೌಲ್ಯವನ್ನೇ ಕಳೆದುಕೊಂಡಿದೆ.

ನಗದು ಕೇಂದ್ರಿತ ಅರ್ಥವ್ಯವಸ್ಥೆಯಲ್ಲಿ ನಗದು ಚಲಾವಣೆಯೇ ನಿಂತು ಹೋಗಿದೆ. ಗಡಿಯಲ್ಲಿರುವ ಪಾಕಿಸ್ತಾನದ ನಗರ ಪೆಶಾವರದಲ್ಲಿ ಅಫ್ಗನಿಯನ್ನು ಯಾರೂ ಸ್ವೀಕರಿಸುತ್ತಿಲ್ಲ. ಇದರ ಮೌಲ್ಯದ ಬಗ್ಗೆ ಇರುವ ಅಸ್ಥಿರತೆ ಇದಕ್ಕೆ ಕಾರಣ. ದೇಶದೊಳಗೆ ಡಾಲರ್ ಕೊರತೆ ಇರುವುದೇ ಅಫ್ಗನಿಯು ಅಲ್ಪಸ್ವಲ್ಪ ಮೌಲ್ಯ ಉಳಿಸಿಕೊಳ್ಳಲು ಕಾರಣ ಎನ್ನಲಾಗಿದೆ.


ವಿದೇಶದಿಂದ ಬರುವ ಹಣ ಸಂಪೂರ್ಣವಾಗಿ ನಿಂತು ಹೋಗಿದೆ. ವೆಸ್ಟರ್ನ್ ಯೂನಿಯನ್‌ನಂತಹ ಹಣ ವರ್ಗಾವಣೆ ಸಂಸ್ಥೆಗಳು ಮುಚ್ಚಿವೆ. ಪರಿಣಾಮವಾಗಿ ಜನರ ಬಳಿ ಹಣ ಸಂಪೂರ್ಣ ಖಾಲಿಯಾಗಿದೆ. ಜನರು ತಮ್ಮಲ್ಲಿರುವ ಆಭರಣ ಅಥವಾ ಮನೆಯ ವಸ್ತುಗಳನ್ನು ಸಿಕ್ಕ ದರಕ್ಕೆ ಮಾರಾಟ ಮಾಡುತ್ತಿದ್ದಾರೆ.

ಪೂರ್ಣ ಮನಸ್ಸಿನಿಂದ ನಾನು ಮಾತು ಕೊಡುತ್ತೇನೆ, ಇದು (ಅಫ್ಗನ್ ಯುದ್ಧದ ಕೊನೆ) ಅಮೆರಿಕಕ್ಕೆ ಸರಿಯಾದ, ವಿವೇಕಯುತವಾದ ಅತ್ಯುತ್ತಮ ನಿರ್ಧಾರ
ಜೋ ಬೈಡನ್, ಅಮೆರಿಕದ ಅಧ್ಯಕ್ಷ

ಅಮೆರಿಕದ ಅಫ್ಗನ್ ಕಾರ್ಯಾಚರಣೆಯು ದುರಂತಗಳು, ನಷ್ಟಗಳಿಗೆ ಮಾತ್ರ ಕಾರಣವಾಗಿದೆ. ಕಾರ್ಯಾಚರಣೆಯ ಫಲಿತಾಂಶವು ಬರೇ ಸೊನ್ನೆ
ವ್ಲಾಡಿಮಿರ್ ಪುಟಿನ್, ರಷ್ಯಾ ಅಧ್ಯಕ್ಷ

ಕೈಗೆಟುಕದ ಮೀಸಲು ನಿಧಿ

ಅಫ್ಗಾನಿಸ್ತಾನವು ದೇಶದ ಹೊರಗೆ ಇರಿಸಿರುವ ಸುಮಾರು 900 ಕೋಟಿ ಡಾಲರ್‌ನ (ಸುಮಾರು ₹66 ಸಾವಿರ ಕೋಟಿ) ಮೀಸಲು ನಿಧಿ ಇದೆ. ಆದರೆ, ಅಫ್ಗಾನಿಸ್ತಾನದ ಆಳ್ವಿಕೆಗೆ ತಾಲಿಬಾನ್ ಅನ್ನು ಅಧಿಕೃತವಾಗಿ ಇನ್ನೂ ನೇಮಕ ಮಾಡಲಾಗಿಲ್ಲ. ಜತೆಗೆ, ತಾಲಿಬಾನ್ ನೇತೃತ್ವದ ಸರ್ಕಾರಕ್ಕೆ ಅಂತರರಾಷ್ಟ್ರೀಯ ಮಾನ್ಯತೆಯೂ ಸದ್ಯಕ್ಕೆ ದೊರೆಯುವ ಸಾಧ್ಯತೆ ಇಲ್ಲ. ಹಾಗಾಗಿ, ಈ ನಿಧಿಯು ಅಫ್ಗಾನಿಸ್ತಾನದ ನೆರವಿಗೆ ಬರುವ ಸಾಧ್ಯತೆ ಕ್ಷೀಣ ಎನ್ನಲಾಗಿದೆ.



ಹಮ್‌ವೀ ವಾಹನದಲ್ಲಿ ತಾಲಿಬಾನ್ ಸೈನಿಕರ ಗಸ್ತು ಎಎಫ್‌ಪಿ ಚಿತ್ರ

ಯುದ್ಧ ವಾಹನಗಳ ಪರೇಡ್

ಕಂದಹಾರ್ (ಎಎಫ್‌ಪಿ): ಅಮೆರಿಕವು ಅಫ್ಗಾನಿಸ್ತಾನದ ಸೇನೆಗೆ ಪೂರೈಸಿದ್ದ ಶಸ್ತ್ರಸಜ್ಜಿತ ವಾಹನಗಳು, ಹಮ್‌ವೀ ಜೀಪುಗಳು ಹಾಗೂ ಇತರ ಯುದ್ಧ ವಾಹನಗಳೊಂದಿಗೆ ತಾಲಿಬಾನ್ ಸೈನಿಕರು ಬುಧವಾರ ಕಂದಹಾರ್‌ನಲ್ಲಿ ಪರೇಡ್ ನಡೆಸಿದ್ದಾರೆ.

ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್ ಸೇರಿದಂತೆ ಹಸಿರು ಬಣ್ಣದ ವಾಹನಗಳ ಉದ್ದನೆಯ ಸಾಲು ಕಂದಹಾರ್‌ನ ಹೆದ್ದಾರಿಯಲ್ಲಿ ಬುಧವಾರ ಕಂಡು ಬಂದಿತು. ಅವುಗಳ ಮೇಲೆ ಕಪ್ಪು–ಬಿಳುಪು ಬಣ್ಣದ ತಾಲಿಬಾನ್ ಧ್ವಜಗಳು ಹಾರಾಡುತ್ತಿದ್ದವು ಎಂದು ಸುದ್ದಿಸಂಸ್ಥೆಯ ವರದಿಗಾರ ತಿಳಿಸಿದ್ದಾರೆ.

ಕಳೆದ ಇಪ್ಪತ್ತು ವರ್ಷಗಳಲ್ಲಿ ಅಫ್ಗಾನಿಸ್ತಾನದಲ್ಲಿ ಅಮೆರಿಕ, ನ್ಯಾಟೊ ಹಾಗೂ ಅಫ್ಗನ್ ಪಡೆಯು ಉಪಯೋಗಿಸಿದ್ದ ಟ್ರಕ್‌ಗಳನ್ನು ಕೆಲವರು ನಿಯಂತ್ರಿಸುತ್ತಿದ್ದರೆ, ಇನ್ನು ಕೆಲವರು ವಾಹನಗಳ ಮೇಲೆ ಹತ್ತಿ ನಿಂತಿದ್ದರು. ತಾಲಿಬಾನ್ ಯೋಧರಿಂದ ತುಂಬಿದ್ದ ಪಿಕ್‌ಅಪ್ ಟ್ರಕ್‌ಗಳು ಸೇನಾ ವಾಹನಗಳನ್ನು ಹಿಂಬಾಲಿಸಿದರೆ, ಇನ್ನು ಕೆಲವರು ಭಾರೀ ಆಯುಧ ಹಾಗೂ ಮಷಿನ್‌ಗನ್‌ಗಳನ್ನು ಹೊತ್ತುಕೊಂಡಿದ್ದರು.

ತಾಲಿಬಾನ್‌ನ ಸಂಘಟನೆ ಹುಟ್ಟಿದ ನೆಲವಾಗಿರುವ ಕಂದಹಾರ್ ಬಳಿ, ಇತ್ತೀಚಿನ ದಿನಗಳಲ್ಲಿ ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್ ಒಂದು ಹಾರಾಟ ನಡೆಸುತ್ತಿದೆ. ತಾಲಿಬಾನ್ ಪಡೆಯಲ್ಲಿ ನುರಿತ ಪೈಲಟ್‌ಗಳು ಇಲ್ಲದೇ ಇರುವುದರಿಂದ ಅಫ್ಗನ್ ಸೇನೆಯ ಮಾಜಿ ಯೋಧರೊಬ್ಬರು ಈ ಹೆಲಿಕಾಪ್ಟರ್ ಹಾರಾಟವನ್ನು ನಿಯಂತ್ರಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ತಾಲಿಬಾನ್ ಮುಖಂಡರು, ಕಂದಹಾರ್‌ನ ಕ್ರಿಕೆಟ್ ಮೈದಾನದಲ್ಲಿನ ನೆಲಮಾಳಿಗೆಯಲ್ಲಿ ಗೋಪ್ಯವಾಗಿದ್ದುಕೊಂಡು ಪರೇಡ್ ಆರಂಭವಾಗುವುದನ್ನು ಕಾಯುತ್ತಿದ್ದರೆ, ಇನ್ನು ಕೆಲವರು ಮೈದಾನದ ಹುಲ್ಲಿನ ಮೇಲೆ ಕಾದು ಕುಳಿತಿದ್ದರು. ಇನ್ನೂ ನೂರಾರು ಜನರು ಪರೇಡ್ ನೋಡುವುದಕ್ಕಾಗಿ ಮಹಡಿಯ ಮೇಲೆ ಹತ್ತಿ ನಿಂತಿದ್ದರು ಎಂದು ತಿಳಿದುಬಂದಿದೆ.

ಇದುವರೆಗೆ ಅಜ್ಞಾತ ಸ್ಥಳದಲ್ಲಿದ್ದ ತಾಲಿಬಾನ್‌ನ ಸರ್ವೋಚ್ಚ ನಾಯಕ ಹೈಬತ್‌ಉಲ್ಲಾ ಅಖುಂಜಾದಾ, ಕಂದಹಾರ್‌ನಲ್ಲಿಯೇ ಇರುವುದಾಗಿ ತಾಲಿಬಾನ್ ಹೇಳಿದೆ. ಆತ, ಬುಧವಾರ ಬಹಿರಂಗವಾಗಿ ಕಾಣಿಸಿಕೊಳ್ಳುವ ನಿರೀಕ್ಷೆ ಇತ್ತು. ಆದರೆ, ಕಾಣಿಸಿಕೊಳ್ಳಲಿಲ್ಲ. ಆತನ ಬದಲಾಗಿ ನಗರದ ಹೊಸ ಆಡಳಿತಾಧಿಕಾರಿ ಜನರನ್ನು ಉದ್ದೇಶಿಸಿ ಮಾತನಾಡಿದ್ದಾನೆ ಎನ್ನಲಾಗಿದೆ. ಅಮೆರಿಕದ ಸೇನಾಪಡೆಯ ಕೊನೆಯ ತುಕಡಿಯ ನಿರ್ಗಮನದಿಂದಾಗಿ, ತಾಲಿಬಾನ್ ಸೈನಿಕರು ಕಂದಹಾರ್‌ನಲ್ಲಿಯೂ ಮಂಗಳವಾರ ವಿಜಯೋತ್ಸವ ನಡೆಸಿದ್ದರು.

ವಿರೋಧಿ ಪಡೆಗಳೊಂದಿಗೆ ನಿಲ್ಲದ ಸಂಘರ್ಷ

ಕಾಬೂಲ್ (ರಾಯಿಟರ್ಸ್): ತಾಲಿಬಾನ್ ಆಡಳಿತವನ್ನು ವಿರೋಧಿಸುತ್ತಿರುವ ಪಂಜ್‌ಶಿರ್ ಹಾಗೂ ಅದರ ನೆರೆಯ ಬಾಘ್ಲಾನ್ ಪ್ರಾಂತ್ಯದಲ್ಲಿ ತಾಲಿಬಾನ್ ಹಾಗೂ ಅದರ ವಿರೋಧಿ ಪಡೆಯ ನಡುವೆ ಸಂಘರ್ಷ ಬುಧವಾರವೂ ಮುಂದುವರಿದಿದೆ.

ಅಫ್ಗಾನಿಸ್ತಾನದ ಮೇಲೆ ಸಂಪೂರ್ಣ ಪ್ರಾಬಲ್ಯ ಸಾಧಿಸುವಲ್ಲಿ ಅಲ್ಲಿನ ಸ್ಥಳೀಯ ಯೋಧರ ಪಡೆಯು ಪ್ರತಿರೋಧ ಒಡ್ಡುತ್ತಿದೆ.

ಈ ನಡುವೆ ಪಂಜ್‌ಶಿರ್ ಪ್ರಾಂತ್ಯವನ್ನು ಸುತ್ತುವರಿದಿರುವುದಾಗಿ ತಾಲಿಬಾನ್ ಬುಧವಾರ ಹೇಳಿದ್ದು, ತನ್ನೊಂದಿಗೆ ಒಪ್ಪಂದಕ್ಕೆ ಮುಂದಾಗುವಂತೆ ಮತ್ತೊಮ್ಮೆ ಆಹ್ವಾನ ನೀಡಿದೆ. ಅಲ್ಲಿ, ಅಹಮ್ಮದ್ ಮಸೂದ್ ನೇತೃತ್ವದಲ್ಲಿ ಸ್ಥಳೀಯ ಯೋಧರ ಪಡೆಯು ತಾಲಿಬಾನ್ ವಿರುದ್ಧ ನಿಂತಿದೆ.

‘ಎಲ್ಲ ಅಫ್ಗನ್ನರಿಗೂ ಇಸ್ಲಾಮಿಕ್ ಎಮಿರೇಟ್ ಆಫ್ ಅಫ್ಗಾನಿಸ್ತಾನ ಆಶ್ರಯ ನೀಡಲಿದೆ. ಬಂಡುಕೋರರು ಶಸ್ತ್ರಾಸ್ತ್ರಗಳನ್ನು ತ್ಯಜಿಸಬೇಕು’ ಎಂದು ಪಂಜ್‌ಶಿರ್ ಪ್ರಾಂತ್ಯದಲ್ಲಿನ ಜನರನ್ನು ಉದ್ದೇಶಿಸಿ ತಾಲಿಬಾನ್ ಮುಖಂಡ ಅಮಿರ್ ಖಾನ್ ಮೊತಾಖಿ ಧ್ವನಿಮುದ್ರಿತ ಭಾಷಣದಲ್ಲಿ ಹೇಳಿದ್ದಾರೆ.

‘ಪಂಜ್‌ಶಿರ್‌ನ ವಿರೋಧಿ ಪಡೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಹಲವು ಸಲ ಪ್ರಯತ್ನಿಸಲಾಗಿದೆ. ದುರದೃಷ್ಟಕ್ಕೆ ಆ ಪ್ರಯತ್ನ ಫಲಿಸಿಲ್ಲ’ ಎಂದೂ ಮೊತಾಖಿ ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಪಂಜ್‌ಶಿರ್ ಕಣಿವೆಯನ್ನು ನಾಲ್ಕೂ ಕಡೆಗಳಿಂದ ಸುತ್ತುವರಿಯಲು ತಾಲಿಬಾನ್ ಸೈನಿಕರು ಸಿದ್ಧತೆ ನಡೆಸಿದ್ದಾರೆ ಮತ್ತು ಕದನಕ್ಕೆ ಯಾವುದೇ ಕಾರಣವಿಲ್ಲ ಮೊತಾಖಿ ಹೇಳಿದ್ದಾರೆ; ‘ನ್ಯಾಟೊ ಹಾಗೂ ಅಮೆರಿಕ ಪಡೆಗಳ ಬೆಂಬಲದಿಂದಲೂ ತಾಲಿಬಾನ್ ಪಡೆಯನ್ನು ಸೋಲಿಸಲಾಗದು ಎಂಬುದನ್ನು ವಿರೋಧಿ ಪಡೆಗಳು ನೆನಪಿನಲ್ಲಿ ಇಟ್ಟುಕೊಳ್ಳಬೇಕು’ ಎಂದಿದ್ದಾರೆ.

ಆದರೆ, ಕಣಿವೆಯನ್ನು ಪ್ರವೇಶಿಸಲು ನಡೆಸಿದ ಪ್ರಯತ್ನದಲ್ಲಿ ಏಳು ಸೈನಿಕರನ್ನು ಕಳೆದುಕೊಂಡ ಮೇಲೆ ತಾಲಿಬಾನ್‌ನಿಂದ ಇಂಥ ಹೇಳಿಕೆ ಹೊರಬಿದ್ದಿದೆ ಎನ್ನುತ್ತಾರೆ ವಿರೋಧಿ ಪಡೆಯ ನಾಯಕರು.

ಎರಡು ದಿನಗಳ ಹಿಂದೆ ಕಣಿವೆಯ ಮೂರ್ನಾಲ್ಕು ಕಡೆಗಳಿಂದ ತಾಲಿಬಾನ್ ಸೈನಿಕರು ಆಕ್ರಮಣ ನಡೆಸಿದ್ದರು. ಅಲ್ಲೆಲ್ಲ ಅವರನ್ನು ಹಿಮ್ಮೆಟ್ಟಿಸಲಾಗಿದೆ ಎಂದು ‘ಅಫ್ಗಾನಿಸ್ತಾನದ ರಾಷ್ಟ್ರೀಯ ಪ್ರತಿರೋಧ ವೇದಿಕೆ’ಯ ವಕ್ತಾರ ಹೇಳಿದ್ದಾರೆ

ವಿಮಾನಗಳ ಹಾರಾಟವಿಲ್ಲ; ಭೂಮಾರ್ಗವೇ ಏಕೈಕ ಆಯ್ಕೆ

ಗಡಿಯತ್ತ ನಡೆದ ಸಾವಿರಾರು ಅಫ್ಗನ್ನರು

ಕಾಬೂಲ್ (ರಾಯಿಟರ್ಸ್): ಅಮೆರಿಕವು ದೇಶದಿಂದ ಹೊರನಡೆದ ಮರುದಿನ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಡಳಿತ ಅಧಿಕೃತವಾಗಿ ಆರಂಭವಾಗಿದೆ. ಆದರೆ ತಾಲಿಬಾನ್ ನಿಯಂತ್ರಣದಿಂದ ಪಾರಾಗುವ ಜನರ ಬಯಕೆ ಮಾತ್ರ ಹಾಗೆಯೇ ಉಳಿದುಕೊಂಡಿದೆ. ಆದರೆ ತಪ್ಪಿಸಿಕೊಳ್ಳುವುದಕ್ಕೆ ಹೆಚ್ಚು ಆಯ್ಕೆಗಳು ಉಳಿದಿಲ್ಲ.

ತೆರವು ಕಾರ್ಯಾಚರಣೆ ನಡೆಸಲು ಇಷ್ಟು ದಿನ ಹಾರಾಟ ನಡೆಸಿದ್ದ ವಿದೇಶಗಳ ವಿಮಾನಗಳು ಕಾಬೂಲ್ ವಿಮಾನ ನಿಲ್ದಾಣಗಳಲ್ಲಿ ಮಂಗಳವಾರ ಕಂಡುಬರಲಿಲ್ಲ. ದೇಶ ತೊರೆಯುವ ಹಂಬಲದಿಂದ ವಿಮಾನ ನಿಲ್ದಾಣದಲ್ಲಿ ಜಮಾವಣೆಯಾಗಿದ್ದ ಜನರು ಈಗ ಪಾಕಿಸ್ತಾನ ಹಾಗೂ ಇರಾನ್ ದೇಶಗಳ ಭೂ ಗಡಿಗಳತ್ತ ಚಿತ್ತ ನೆಟ್ಟಿದ್ದಾರೆ. ಭೂಮಾರ್ಗವೇ ಸದ್ಯಕ್ಕಿರುವ ಏಕೈಕ ಆಯ್ಕೆ ಎಂದು ಅಮೆರಿಕ ಸೇನಾಪರಿಣಿತರು ಹೇಳಿದ್ದಾರೆ.

ಪಾಕಿಸ್ತಾನಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಗಡಿಯಾದ ಟಾರ್ಕಮ್‌ನಲ್ಲಿ ಪ್ರವೇಶದ್ವಾರ ತೆಗೆಯುವುದನ್ನೇ ಅಫ್ಗನ್ನರು ಕಾಯುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇನ್ನು, ಅಫ್ಗಾನಿಸ್ತಾನ ಮತ್ತು ಇರಾನ್ ನಡುವಿನ ಇಸ್ಲಾಂ ಕ್ವಾಲಾ ಗಡಿಠಾಣೆಯಲ್ಲಿ ಸಾವಿರಾರು ಜನರು ಸೇರಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

‘ಕಳೆದ ಬಾರಿಗೆ ಹೋಲಿಸಿದರೆ, ಈ ಬಾರಿ ಗಡಿ ಪ್ರವೇಶಿಸುವ ವಿಚಾರದಲ್ಲಿ ಇರಾನ್ ಭದ್ರತಾ ಪಡೆಗಳು ಕೊಂಚ ಮೆದುವಾಗಿ ವರ್ತಿಸಿದವು’ ಎಂದು ಗಡಿ ದಾಟಿ ಇರಾನ್ ದೇಶ ಪ್ರವೇಶಿಸಿದ ಅಫ್ಗನ್ ಪ್ರಜೆಯೊಬ್ಬರು ಹೇಳಿದ್ದಾರೆ.

ಮುಖ್ಯರಸ್ತೆಗಳಲ್ಲಿ ತಾಲಿಬಾನ್ ಸೈನಿಕರು ಚೆಕ್‌ಪಾಯಿಂಟ್‌ಗಳನ್ನು ಈಗಾಗಲೇ ಹಾಕಿದ್ದಾರೆ. ಮಹಿಳೆಯರು ಒಬ್ಬಂಟಿಯಾಗಿ ಮನೆಯಿಂದ ಹೊರಗೆ ಬರುವುದನ್ನು ನಿರ್ಬಂಧಿಸಿದ್ದಾರೆ. ‘ತಾಲಿಬಾನ್ ಹಿಂಬಾಲಿಸುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳದೆಯೇ ದೇಶದ ಗಡಿಗಳನ್ನು ತಲುಪಲು ಪ್ರಯತ್ನಿಸಬಾರದು’ ಎಂದು ದೇಶ ತೊರೆಯಲು ಯತ್ನಿಸುತ್ತಿರುವ ಜನರಿಗೆ ಸಹಾಯ ಮಾಡುತ್ತಿರುವ ಸಂಘಟನೆಗಳು ಸೂಚಿಸಿವೆ.

ತಜಕಿಸ್ತಾನವು 1 ಲಕ್ಷ ಅಫ್ಗನ್ ನಿರಾಶ್ರಿತರನ್ನು ಸ್ವೀಕರಿಸಲು ಪ್ರತಿಜ್ಞೆ ಮಾಡಿದೆ. ಉಜ್ಬೇಕಿಸ್ತಾನವು ತನ್ನ ಭೂಪ್ರದೇಶದ ಮೂಲಕ ಅಮೆರಿಕನ್ನರು ಮತ್ತು ಅಫ್ಗನ್ನರು ಸಾಗಲು ಅವಕಾಶ ನೀಡಿದೆ. ಆದರೆ ಈ ಎರಡೂ ದೇಶಗಳು ಎಷ್ಟು ಜನರಿಗೆ ಅವಕಾಶ ನೀಡಿವೆ ಎಂಬ ಅಂಕಿಅಂಶ ಸದ್ಯಕ್ಕೆ ಲಭ್ಯವಿಲ್ಲ.

14 ಲಕ್ಷಕ್ಕೂ ಹೆಚ್ಚು ಅಫ್ಗನ್ ನಿರಾಶ್ರಿತರಿಗೆ ನೆಲೆಯಾಗಿರುವ ಪಾಕಿಸ್ತಾನವು, ವಿವಿಧ ದೇಶಗಳ ರಾಜತಾಂತ್ರಿಕರು, ಅಂತರರಾಷ್ಟ್ರೀಯ ಸಂಸ್ಥೆಗಳ ಸಿಬ್ಬಂದಿ, ಎನ್‌ಜಿಒ ಸಿಬ್ಬಂದಿ ಸೇರಿದಂತೆ ಸುಮಾರು 2,000 ಜನರಿಗೆ ತಿಂಗಳ ಮಟ್ಟಿಗೆ ಟ್ರಾನ್ಸಿಟ್ ವೀಸಾ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕ ಹಾಗೂ ಮಿತ್ರಪಡೆಗಳು ಅಫ್ಗನ್‌ನಿಂದ ಸುಮಾರು 1.3 ಲಕ್ಷ ಜನರನ್ನು ತೆರವು ಮಾಡಿವೆ. ಅಫ್ಗಾನಿಸ್ತಾನದಲ್ಲಿ ಅಭಿವೃದ್ಧಿ ಸಂಸ್ಥೆಗಳಿಗಾಗಿ ಕೆಲಸ ಮಾಡುತ್ತಿರುವ ಸುಮಾರು 40,000 ಜನರನ್ನು ಸ್ಥಳಾಂತರಿಸಬೇಕಾಗಬಹುದು ಎಂದು ಜರ್ಮನಿ ಹೇಳಿದೆ.

ಅಫ್ಗನ್ ತೊರೆಯಲು ಬಯಸುತ್ತಿರುವ ಜನರಿಗೆ ಅವಕಾಶ ಮಾಡಿಕೊಡಬೇಕು ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಅನುಮೋದಿಸಿದ ನಿರ್ಣಯದಲ್ಲಿ ತಾಲಿಬಾನ್‌ಗೆ ಮನವಿ ಮಾಡಲಾಗಿದೆ. ಕಾಬೂಲ್ ವಿಮಾನ ನಿಲ್ದಾಣ ನಿರ್ವಹಣೆ ಕುರಿತು ಕತಾರ್ ಮತ್ತು ಟರ್ಕಿಯೊಂದಿಗೆ ತಾಲಿಬಾನ್ ಮಾತುಕತೆ ನಡೆಸುತ್ತಿದೆ ಎಂದು ಫ್ರಾನ್ಸ್ ವಿದೇಶಾಂಗ ಸಚಿವ ಜೀನ್-ವೈಸ್ ಲೆ ಡ್ರಿಯಾನ್ ಹೇಳಿದ್ದಾರೆ.



ಪಾಕಿಸ್ತಾನ–ಅಫ್ಗಾನಿಸ್ತಾನ ಗಡಿ ಪಟ್ಟಣ ಚಮನ್‌ನಲ್ಲಿ ಫ್ರೆಂಡ್‌ಶಿಪ್ ಗೇಟ್ ದಾಟಲು ಬುಧವಾರ ಸಾಲಾಗಿ ನಿಂತಿದ್ದ ಅಫ್ಗನ್ ನಾಗರಿಕರು–ರಾಯಿಟರ್ಸ್ ಚಿತ್ರ

‘ಮಾನವೀಯತೆ ಮೆರೆಯಿರಿ’

ನವದೆಹಲಿ: ಅಫ್ಗಾನಿಸ್ತಾನದಲ್ಲಿ ಶಾಂತಿ, ಸೌಹಾರ್ದ ಹಾಗೂ ಪ್ರಜಾಸತ್ತೆಯ ಸ್ಥಾಪನೆಯ ಪ್ರಯತ್ನಕ್ಕೆ ಭಾರತ ಬೆಂಬಲವಾಗಿ ನಿಲ್ಲಬೇಕು ಎಂದು ‘ಅಫ್ಗಾನಿಸ್ತಾನದ ಭಾರತೀಯ ಸ್ನೇಹಿತರು’ ಹೆಸರಿನ ವೇದಿಕೆ ಬುಧವಾರ ಮನವಿ ಮಾಡಿದೆ.

ದೋಹಾದಲ್ಲಿ ತಾಲಿಬಾನ್ ಜೊತೆ ಭಾರತ ಸರ್ಕಾರ ನಡೆಸಿದ ಮಾತುಕತೆಯು ಭರವಸೆ ಮೂಡಿಸಿದೆ ಎಂದು ವೇದಿಕೆ ಹೇಳಿದೆ. ಸ್ವಾತಂತ್ರ್ಯ–ಶಾಂತಿಗಾಗಿ ತುಡಿಯುತ್ತಿರುವ ಅಫ್ಗಾನಿಸ್ತಾನದ ಎಲ್ಲ ಜನರ ಬಗ್ಗೆಯೂ ವೇದಿಕೆಯು ಕಾಳಜಿ ವ್ಯಕ್ತಪಡಿಸಿದೆ. ಶಾಂತಿ, ಸ್ವಾತಂತ್ರ್ಯ, ನ್ಯಾಯ, ವಿಶ್ವಭ್ರಾತೃತ್ವದ ಬಗ್ಗೆ ಗೌರವ ಇಟ್ಟುಕೊಂಡಿರುವ ಭಾರತ– ಅಫ್ಗಾನಿಸ್ತಾನದ ನಡುವಿನ ಬಾಂಧವ್ಯಕ್ಕೆ ದೀರ್ಘ ಇತಿಹಾಸವಿದೆ. ಹೀಗಾಗಿ ಎರಡೂ ರಾಷ್ಟ್ರಗಳು ಈ ಪ್ರಯತ್ನಕ್ಕೆ ಜೊತೆಗೂಡಬೇಕು. ಧರ್ಮಾತೀತವಾಗಿ ಅಲ್ಲಿನ ಎಲ್ಲರನ್ನೂ ರಕ್ಷಿಸಬೇಕು. ಅವರೊಂದಿಗೆ ನಿಲ್ಲುವ ಈ ಆಶಯಕ್ಕೆ, ವಸಾಹತುಶಾಹಿ ವಿರೋಧಿ ಹೋರಾಟದ ಸಂದರ್ಭದಲ್ಲಿ ಸಂಘಟಿತರಾಗಿದ್ದ ಮಹಾತ್ಮಾ ಗಾಂಧಿ ಹಾಗೂ ಖಾನ್ ಅಬ್ದುಲ್ ಗಫಾರ್ ಖಾನ್ ಅವರ ಜೋಡಿಯೇ ಅತ್ಯುತ್ತಮ ಸಂಕೇತ ಎಂದು ಅದು ಪ್ರಕಟಣೆಯಲ್ಲಿ ಹೇಳಿದೆ.

ಅಲ್ಲಿನ ಪತ್ರಕರ್ತರು, ಕಲಾವಿದರು ಹಾಗೂ ನಾಗರಿಕರಿಗೆ ಭಾರತದಲ್ಲಿ ತಾತ್ಕಾಲಿಕವಾಗಿ ಆಶ್ರಯ ನೀಡಬೇಕು. ರಾಜಕೀಯ ಪಕ್ಷಗಳು ಅಲ್ಲಿನ ಬೆಳವಣಿಗೆಯನ್ನು ಕೋಮು ಧ್ರುವೀಕರಣಕ್ಕೆ, ಚುನಾವಣಾ ಹಿತಾಸಕ್ತಿಗೆ ಬಳಸಿಕೊಳ್ಳಬಾರದು ಎಂದೂ ಮನವಿ ಮಾಡಿದೆ.

ತಾಲಿಬಾನ್ ಹಾಗೂ ಅಫ್ಗಾನಿಸ್ತಾನದಲ್ಲಿ ಇತರ ರಾಜಕೀಯ ಶಕ್ತಿಗಳು ಅಂತಃಕಲಹವನ್ನು ಬಿಟ್ಟು ಶಾಂತಿ ಸ್ಥಾಪನೆಯತ್ತ ಮುಖ ಮಾಡಬೇಕು. ಪ್ರತಿಯೊಬ್ಬರಿಗೂ ಸುರಕ್ಷತೆ, ಘನತೆಯ ಬದುಕು ನೀಡಿ, ದೇಶದ ಅಭಿವೃದ್ಧಿಗೆ ಗಮನ ನೀಡಬೇಕು ಎಂದು ಮನವಿ ಮಾಡಿದೆ. ಇತ್ತ ಅಂತರಾಷ್ಟ್ರೀಯ ಸಮುದಾಯವೂ ಮಾನವೀಯ ಹೊಣೆಗಾರಿಕೆಯಿಂದ ವಿಮುಖವಾಗಬಾರದು ಎಂದು ಕೇಳಿಕೊಂಡಿದೆ. ಬಿಕ್ಕಟ್ಟಿನಲ್ಲಿರುವ ಈ ದೇಶವನ್ನು ಪುನರ್ ನಿರ್ಮಿಸುವ ಹಾಗೂ ಶಾಂತಿ ಸ್ಥಾಪನೆಯ ಪ್ರಯತ್ನದಲ್ಲಿ, ಯಾವ ದೇಶವೂ ಹಿಂದಡಿ ಇಡಬಾರದು. ಅಸ್ತವ್ಯಸ್ತಗೊಂಡಿರುವ ದೇಶವನ್ನು ಒಂಟಿ ಮಾಡದೇ, ಮಾನವೀಯತೆ ನೆಲೆಯಲ್ಲಿ ಆ ದೇಶಕ್ಕೆ ತುರ್ತಾಗಿ ಅಗತ್ಯವಿರುವ ಬೆಂಬಲ ನೀಡಬೇಕು ಎಂದು ಮನವಿ ಮಾಡಿದೆ.

ಕೆ. ನಟವರ್ ಸಿಂಗ್, ಯಶವಂತ್ ಸಿನ್ಹಾ, ಮಣಿಶಂಕರ್ ಅಯ್ಯರ್, ನಜೀಬ್ ಜಂಗ್, ಲೇಖಕ ಹಾಗೂ ಅಫ್ಗಾನಿಸ್ತಾನದ ಬೆಳವಣಿಗೆಗಳ ತಜ್ಞ ಡಾ. ವೇದಪ್ರತಾಪ್ ವೈದಿಕ್, ಪೊಲೀಸ್ ಅಧಿಕಾರಿ ಜುಲಿಯೊ ರೆಬಿರೊ, ದಕ್ಷಿಣ ಏಷ್ಯಾ ಫೋರಂ ಸಂಸ್ಥಾಪಕ ಸುಧೀಂದ್ರ ಕುಲಕರ್ಣಿ ಅವರನ್ನೊಳಗೊಂಡ ವೇದಿಕೆಯು ಭಾರತ ಹಾಗೂ ಅಂತರರಾಷ್ಟ್ರೀಯ ಸಮುದಾಯಕ್ಕೆ ಮನವಿ ಮಾಡಿದೆ.

ಪತ್ರಕರ್ತೆಯರ ಸಂಖ್ಯೆ 100ಕ್ಕೂ ಕಡಿಮೆ

ಪ್ಯಾರಿಸ್ (ಎಎಫ್‌ಪಿ): ಅಫ್ಗಾನಿಸ್ತಾನದಲ್ಲಿ ಈಗ ಉಳಿದಿರುವ ಪತ್ರಕರ್ತೆಯ ಸಂಖ್ಯೆ 100ಕ್ಕೂ ಕಡಿಮೆ. ಈ ಹಿಂದೆ 70ಂಕ್ಕೂ ಹೆಚ್ಚು ಪತ್ರಕರ್ತೆಯರು ಇಲ್ಲಿ ಇದ್ದರು ಎಂದು ಮಾಧ್ಯಮ ಕಾವಲು ಸಮಿತಿಯೊಂದು ಬುಧವಾರ ಹೇಳಿದೆ.

ಮಹಿಳಾ ಪತ್ರಕರ್ತರು ಮನೆಯಲ್ಲಿಯೇ ಇರಬೇಕು, ವರದಿ ಮಾಡಲು ತೆರಳುವುದನ್ನು ನಿಲ್ಲಿಸಬೇಕು, ಇಲ್ಲದಿದ್ದರೆ ಹಲ್ಲೆ ಮಾಡುವುದಾಗಿ ತಾಲಿಬಾನ್ ಪಡೆಗಳು ಎಚ್ಚರಿಸಿವೆ ಎಂದು ರಿಪೋರ್ಟರ್ಸ್ ಸ್ಯಾನ್ಸ್ ಫ್ರಾಂಟಿಯರ್ಸ್ (ಆರ್‌ಎಸ್‌ಎಫ್) ವರದಿ ತಿಳಿಸಿದೆ. ಕಾಬೂಲ್‌ನಲ್ಲಿ 108 ಮಾಧ್ಯಮಗಳು ಕಾರ್ಯನಿರ್ವಹಿಸುತ್ತಿರುವುದಾಗಿ ಕಳೆದ ವರ್ಷ ಲೆಕ್ಕ ಹಾಕಲಾಗಿದೆ. ಇದರಲ್ಲಿ ಕೆಲಸ ಮಾಡುತ್ತಿರುವ 4,940 ಜನರಲ್ಲಿ 1,080 ಜನ ಮಹಿಳೆಯರು, ಈ ಪೈಕಿ 700 ಮಂದಿ ಪತ್ರಕರ್ತೆಯರಿದ್ದರು ಎಂದು ಆರ್‌ಎಸ್‌ಎಫ್ ಹೇಳಿದೆ.

‘2020ರಲ್ಲಿ ದೇಶದ 8 ಅತಿದೊಡ್ಡ ಮಾಧ್ಯಮ ಸಮೂಹಗಳಿಂದ ನೇಮಕಗೊಂಡ 510 ಮಹಿಳೆಯರಲ್ಲಿ ಈಗ 39 ಪತ್ರಕರ್ತರೂ ಸೇರಿದಂತೆ 76 ಮಹಿಳೆಯರು ಮಾತ್ರ ಕೆಲಸ ಮಾಡುತ್ತಿದ್ದಾರೆ’ ಎಂದು ಕಾವಲು ಸಮಿತಿ ಹೇಳಿದೆ.

‘ಈ ಅಂಕಿ ಅಂಶಗಳು ಅಫ್ಗನ್ ರಾಜಧಾನಿಯಲ್ಲಿ ಪತ್ರಕರ್ತೆಯರು ಕಣ್ಮರೆಯಾಗಿರುವುದನ್ನು ತೋರುತ್ತದೆ’ ಎಂದು ಆರ್‌ಎಸ್‌ಎಫ್ ಉಲ್ಲೇಖಿಸಿದೆ.

ಪತ್ರಿಕಾ ಸ್ವಾತಂತ್ರ್ಯವನ್ನು ಗೌರವಿಸಲಾಗುವುದು ಮತ್ತು ಮಹಿಳಾ ಪತ್ರಕರ್ತರಿಗೆ ಕೆಲಸ ಮಾಡಲು ಸಾಧ್ಯವಾಗಲಿದೆ ಎಂದು ತಾಲಿಬಾನ್ ಭರವಸೆ ನೀಡಿದೆ. ಆದರೆ ಇಲ್ಲಿ ಮಹಿಳಾ ಪತ್ರಕರ್ತರಿಲ್ಲದ ಹೊಸ ಮಾಧ್ಯಮ ಅಸ್ತಿತ್ವಕ್ಕೆ ಬರಲಿದೆ ಎಂದು ಕಾವಲು ಸಮಿತಿ ಹೇಳಿದೆ.

ಭಾರತದ ಸಕ್ಕರೆ ರಫ್ತು ಸ್ಥಗಿತ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನಕ್ಕೆ ಭಾರತದ ಸಕ್ಕರೆ ರಫ್ತು ಬಹುತೇಕ ಸ್ಥಗಿತಗೊಂಡಿದೆ. ಅಲ್ಲಿನ ಸದ್ಯದ ಪರಿಸ್ಥಿತಿಯನ್ನು ಮನಗಂಡು ಭಾರತೀಯ ವ್ಯಾಪಾರಿಗಳು ಸಕ್ಕರೆ ಪೂರೈಕೆಯನ್ನು ನಿಲ್ಲಿಸಿದ್ದಾರೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ.

ಭಾರತವು ಸಕ್ಕರೆ ರಫ್ತು ಮಾಡುವ ಮೂರು ಅಗ್ರ ದೇಶಗಳಲ್ಲಿ ಅಫ್ಗಾನಿಸ್ತಾನವು ಒಂದಾಗಿದೆ. ಅಲ್ಲಿಗೆ ವರ್ಷಕ್ಕೆ 6–7 ಲಕ್ಷ ಟನ್ ಸಕ್ಕರೆ ರಫ್ತಾಗುತ್ತದೆ.

‘ಅಫ್ಗನ್‌ನಲ್ಲಿ ಸದ್ಯ ಪರಿಸ್ಥಿತಿ ಬಿಗಡಾಯಿಸಿರುವುದರಿಂದ ಅಲ್ಲಿಗೆ ನಮ್ಮ ಸಕ್ಕರೆ ರಫ್ತು ಸ್ಥಗಿತಗೊಂಡಿದೆ. ಈಗ ಬಂದಿರುವ ಕೆಲವು ಪೂರೈಕೆ ಬೇಡಿಕೆಗಳನ್ನು ರದ್ದುಗೊಳಿಸಲಾಗಿದೆ’ ಎಂದು ಆಹಾರ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಬೋಧ್ ಕುಮಾರ್ ಸಿಂಗ್ ಪಿಟಿಐಗೆ ತಿಳಿಸಿದರು.

42 ಭ್ರಷ್ಟಾಚಾರ ಪ್ರಕರಣ ಸಿವಿಸಿ ಗಂಭೀರ ಪರಿಗಣನೆ



ನವದೆಹಲಿ(ಪಿಟಿಐ): ಸರ್ಕಾರದ ವಿವಿಧ ಇಲಾಖೆಗಳ ಭಷ್ಟ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ತಾನು ನೀಡಿದ್ದ ಸಲಹೆ ಪಾಲನೆಯಾಗದಿರುವ 42 ಪ್ರಕರಣಗಳನ್ನು ಕೇಂದ್ರ ಜಾಗೃತ ಆಯೋಗ (ಸಿವಿಸಿ) ಗಂಭೀರವಾಗಿ ಪರಿಗಣಿಸಿದೆ.

ಇದರಲ್ಲಿ ರೈಲ್ವೆಯ 10 ಮತ್ತು ಕೆನರಾ ಬ್ಯಾಂಕಿನ ಐದು ಪ್ರಕರಣಗಳೂ ಇವೆ. ಅಲ್ಲದೇ ಸಿಂಡಿಕೇಟ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಮಹಾನದಿ ಕೋಲ್‌ಫೀಲ್ಡ್ಸ್ ಲಿಮಿಟೆಡ್ ಮತ್ತು ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ)ಯಲ್ಲೂ ತಲಾ ಎರಡು ಪ್ರಕರಣಗಳಿವೆ ಎಂದು ವರದಿ ಹೇಳಿದೆ.

ವಿವಿಧ ಬ್ಯಾಂಕ್ ಮತ್ತು ಇಲಾಖೆಗಳಲ್ಲಿನ ಪ್ರಕರಣಗಳ ಪಟ್ಟಿ ಬಿಡುಗಡೆ ಮಾಡಿರುವ ಸಿವಿಸಿ, ‘ಆಯೋಗದ ಸಲಹೆಯನ್ನು ಅಂಗೀಕರಿಸದಿರುವುದು ಅಥವಾ ಆಯೋಗದೊಂದಿಗೆ ಸಮಾಲೋಚಿಸದಿರುವುದು ಜಾಗರೂಕ ಪ್ರಕ್ರಿಯೆಯನ್ನು ಹಾಳುಮಾಡುತ್ತದೆ ಮತ್ತು ಜಾಗೃತ ಆಡಳಿತದ ನಿಷ್ಪಕ್ಷಪಾತವನ್ನು ದುರ್ಬಲಗೊಳಿಸುತ್ತದೆ’ ಎಂದು ಹೇಳಿದೆ.

2020ರ ಸಾಲಿನ ಸಿವಿಸಿಯ ವಾರ್ಷಿಕ ವರದಿಯನ್ನು ಇತ್ತೀಚೆಗೆ ಮುಕ್ತಾಯಗೊಂಡ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಮಂಡಿಸಲಾಗಿದೆ. ಈ ವರದಿಯನ್ನು ಸಿವಿಸಿ ತನ್ನ ವೆಬ್‌ಸೈಟ್‌ನಲ್ಲಿ ಮಂಗಳವಾರ ಅಪ್‌ಲೋಡ್ ಮಾಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿದ್ದ ಕೇಂದ್ರಕ್ಕೆ ಮುಖಭಂಗ

ಅಪರೂಪದ ಕಾಯಿಲೆ ಪ್ರಕರಣ ಕೇಂದ್ರ ಮನವಿ ಒಪ್ಪದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರೂಪದ ಕಾಯಿಲೆಗಳ ವಿಚಾರದಲ್ಲಿ ಇತ್ತೀಚೆಗೆ ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪನ್ನು ರದ್ದುಗೊಳಿಸುವಂತೆ ಕೋರಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ವಿಶೇಷ ಮನವಿಯನ್ನು ಸುಪ್ರೀಂ ಕೋರ್ಟ್ ವಜಾಮಾಡಿದೆ. ರಾಜ್ಯದಲ್ಲಿ ಅಪರೂಪದ ಕಾಯಿಲೆಯಿಂದ ಬಳಲುತ್ತಿರುವ 25 ರೋಗಿಗಳ ಚಿಕಿತ್ಸೆಗಾಗಿ ಇಂದಿರಾಗಾಂಧಿ ಮಕ್ಕಳ ಆರೈಕೆ ಕೇಂದ್ರಕ್ಕೆ ಕೇಂದ್ರ ಸರ್ಕಾರ ₹3 ಕೋಟಿ ಹಾಗೂ ರಾಜ್ಯ ಸರ್ಕಾರ ₹2 ಕೋಟಿ ನೀಡಬೇಕು ಎಂದು ಕರ್ನಾಟಕ ಹೈಕೋರ್ಟ್ ಏಪ್ರಿಲ್ 23ರಂದು ನಿರ್ದೇಶಿಸಿತ್ತು.

ಕೇಂದ್ರ ಸರ್ಕಾರವು ಹಣ ನೀಡುವ ಬದಲಾಗಿ, ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಅರ್ಜಿ ಸಲ್ಲಿಸಿ, ಆರೋಗ್ಯವು ರಾಜ್ಯ ಸರ್ಕಾರಗಳ ಆದ್ಯತೆಯ ವಿಷಯ ಎಂದು ಪ್ರತಿಪಾದಿಸಿತ್ತು. ಲೈಸೋಸೋಮಲ್ ಸ್ಟೋರೇಜ್ ಡಿಸಾರ್ಡರ್‌ನಂತಹ (ಎಲ್‌ಎಸ್‌ಡಿ) ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳ ಸಾವು ಬದುಕಿನ ವಿಚಾರವಿದು ಎಂದು ಹೇಳಿದ್ದ ಹೈಕೋರ್ಟ್, ಜುಲೈ ಮೂರನೇ ವಾರದೊಳಗೆ ಹಣ ಬಿಡುಗಡೆ ಮಾಡದಿದ್ದರೆ, ಈ ಮಕ್ಕಳ ಸ್ಥಿತಿ ಇನ್ನಷ್ಟು ಗಂಭೀರವಾಗಲಿದೆ ಎಂದು ಎಚ್ಚರಿಸಿತ್ತು.

ಆಗಸ್ಟ್ 27ರಂದು ಕೇಂದ್ರದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಹೈಕೋರ್ಟ್ ರಿಜಿಸ್ಟ್ರಿ ಬಳಿ ಮುಂದಿನ ವಿಚಾರಣೆಯ ಹೊತ್ತಿಗೆ ₹3 ಕೋಟಿ ಹಣ ಠೇವಣಿ ಇಡುವಂತೆ ಸೂಚಿಸಿತು. ಕರ್ನಾಟಕ ಸರ್ಕಾರವು ಈಗಾಗಲೇ ₹2 ಕೋಟಿ ಹಣ ಬಿಡುಗಡೆ ಮಾಡಿದ್ದು, ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೈಕೆ ಕೇಂದ್ರದಲ್ಲಿ ಮಕ್ಕಳ ಚಿಕಿತ್ಸೆಗೆ ಬಳಕೆ ಮಾಡಲಾಗುತ್ತಿದೆ.

ಇಂಥದೇ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್ ಆದೇಶ ಪ್ರಶ್ನಿಸಿ 2020ರಲ್ಲಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ತಮಿಳುನಾಡಿನಲ್ಲಿ ಅಪರೂಪದ ಕಾಯಿಲೆಯಿಂದ ಬಳುತ್ತಿರುವ 11 ಮಕ್ಕಳ ಚಿಕಿತ್ಸೆಗೆ ₹4.4 ಕೋಟಿ ಪಾವತಿಸುವಂತೆ ಹೈಕೋರ್ಟ್ ನೀಡಿದ್ದ ಆದೇಶವನ್ನು ಕೇಂದ್ರ ಪ್ರಶ್ನಿಸಿತ್ತು. ಆದರೆ ಕೇಂದ್ರದ ಅರ್ಜಿ ತಳ್ಳಿಹಾಕಿದ್ದ ಸುಪ್ರೀಂ ಕೋರ್ಟ್, ರಾಷ್ಟ್ರೀಯ ವಿಪತ್ತಿಗೆ ಕಡಿಮೆಯಿಲ್ಲದಂತೆ ಈ ಪ್ರಕರಣವನ್ನು ಪರಿಗಣಿಸುವಂತೆ ತಿಳಿಸಿತ್ತು.

‘ಸ್ಪ್ರಿಂಕ್ಲರ್’ ಜತೆಗಿನ ಒಪ್ಪಂದದಲ್ಲಿ ಶಿವಶಂಕರ್‌ಗೆ ದುರುದ್ದೇಶವಿರಲಿಲ್ಲ



ಎಂ. ಶಿವಶಂಕರ್

ತಿರುವನಂತಪುರ: ‘ಸ್ಪ್ರಿಂಕ್ಲರ್’ ಸಂಸ್ಥೆ ಜತೆಗಿನ ಒಪ್ಪಂದದಲ್ಲಿ ಕೇರಳದ ಮಾಜಿ ಐ.ಟಿ ಕಾರ್ಯದರ್ಶಿ ಎಂ.ಶಿವಶಂಕರ್ ಅವರು ಯಾವುದೇ ರೀತಿಯ ದುರುದ್ದೇಶ ಹೊಂದಿರಲಿಲ್ಲ ಎಂದು ‘ಸ್ಪ್ರಿಂಕ್ಲರ್’ ಪ್ರಕರಣದ ತನಿಖೆ ಕುರಿತು ನೇಮಿಸಿದ್ದ ತ್ರಿಸದಸ್ಯರ ಸಮಿತಿ ವರದಿಯಲ್ಲಿ ತಿಳಿಸಿದೆ.

‘ಈ ಸಂಸ್ಥೆ ಜತೆಗಿನ ಒಪ್ಪಂದದಿಂದ ಯಾವುದೇ ಮಾಹಿತಿ ಸೋರಿಕೆಯಾಗಿಲ್ಲ. ಒಪ್ಪಂದಿಂದ ರಾಜ್ಯದ ಹಿತಾಸಕ್ತಿ ಮೇಲೆ ಪ್ರತಿಕೂಲ ಪರಿಣಾಮ ಬೀರಿರುವ ಕುರಿತು ಯಾವುದೇ ಪುರಾವೆಗಳಿಲ್ಲ’ ಎಂದು ಕೇರಳದ ಮಾಜಿ ಕಾನೂನು ಕಾರ್ಯದರ್ಶಿ ಕೆ. ಶಶಿಧರನ್ ನಾಯರ್ ಅಧ್ಯಕ್ಷತೆಯ ತ್ರಿಸದಸ್ಯ ಸಮಿತಿಯು ವರದಿಯಲ್ಲಿ ಹೇಳಿದೆ.

ಕೋವಿಡ್ ರೋಗಿಗಳು ಮತ್ತು ಶಂಕಿತರ ಮಾಹಿತಿ (ದತ್ತಾಂಶ) ಒದಗಿಸುವ ಕುರಿತು ಶಿವಶಂಕರ್ ಅಮೆರಿಕ ಮೂಲದ ‘ಸ್ಪ್ರಿಂಕ್ಲರ್’ ಸಂಸ್ಥೆ ಜತೆಗೆ ಒಪ್ಪಂದ ಮಾಡಿಕೊಂಡಿದ್ದಾರೆ ಎಂದು ಪ್ರತಿಪಕ್ಷ ಕಾಂಗ್ರೆಸ್ ಆರೋಪ ಮಾಡಿತ್ತು. ತ್ರಿಸದಸ್ಯ ಸಮಿತಿಯ ವರದಿಗೆ ವಿರೋಧ ವ್ಯಕ್ತಪಡಿಸಿರುವ ಕಾಂಗ್ರೆಸ್, ಈ ಕುರಿತು ನ್ಯಾಯಾಂಗ ತನಿಖೆಗೆ ಆಗ್ರಹಿಸಿದೆ.

ಈ ಹಿಂದೆ ಚಿನ್ನ ಕಳ್ಳಸಾಗಣೆಯ ಪ್ರಮುಖ ಆರೋಪಿ ಸ್ವಪ್ನ ಸುರೇಶ್ ಅವರೊಂದಿಗೆ ನಂಟು ಹೊಂದಿದ್ದ ಆರೋಪದ ಮೇರೆಗೆ ಶಿವಶಂಕರ್ ಅವರನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಕಾರ್ಯದರ್ಶಿ ಹುದ್ದೆಯಿಂದ ವಜಾಗೊಳಿಸಲಾಗಿತ್ತು.

ನಾರದ ಪ್ರಕರಣ: ಐವರಿಗೆ ಸಮನ್ಸ್

ಕೋಲ್ಕತ್ತ: ನಾರದ ಹಗರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಇಬ್ಬರು ಸಚಿವರು ಮತ್ತು ಇತರ ಮೂವರಿಗೆ ವಿಶೇಷ ನ್ಯಾಯಾಲಯ ಬುಧವಾರ ಸಮನ್ಸ್ ನೀಡಿದೆ.

ಅಕ್ರಮ ಹಣ ವರ್ಗಾವಣೆ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಜಾರಿ ನಿರ್ದೇಶನಾಲಯ ನೀಡಿದ ದೂರಿನ ಅನ್ವಯ ಸಚಿವರಾದ ಸುಬ್ರತಾ ಮುಖರ್ಜಿ ಮತ್ತು ಫಿರ್ಹಾದ್ ಹಕಿಮ್ ಮತ್ತು ಸುಬ್ರತಾ ತೃಣಮೂಲ ಕಾಂಗ್ರೆಸ್ ಶಾಸಕ ಮದನ್ ಮಿತ್ರಾ, ಕೋಲ್ಕತ್ತದ ಮಾಜಿ ಮೇಯರ್ ಸೋವನ್ ಚಟರ್ಜಿ ಹಾಗೂ ಅಮಾನತುಗೊಂಡಿರುವ ಐಪಿಎಸ್ ಅಧಿಕಾರಿ ಎಸ್‌ಎಂಎಚ್ ಮಿರ್ಜಾ ಅವರಿಗೆ ಈ ಸಮನ್ಸ್ ನೀಡಲಾಗಿದೆ.



ಫಿರ್ಹಾದ್



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ನಿಮ್ಮ ಸಂತೋಷವು ವಾಸ್ತವಿಕ ನೆಲೆಗಟ್ಟನ್ನು ಆಧರಿಸಿರಬೇಕೇ ವಿನಾ ಭ್ರಮೆ ಮತ್ತು ನಿರೀಕ್ಷೆಗಳನ್ನು ಅಲ್ಲ.
–ದೀಪಕ್ ಚೋಪ್ರಾ

ಜನರ ಆದಾಯ ಹೆಚ್ಚಿಸಿ ತೆರಿಗೆ ಭಾರ ಇಳಿಸಿ

ಪ್ರಜೆ ಬಡವನಾಗಿ ಇರುವಾಗ ಸರ್ಕಾರಗಳು ಶ್ರೀಮಂತ ಆಗುವುದಿಲ್ಲ. ಪ್ರಜೆಗಳು ಪಾವತಿಸುವ ತೆರಿಗೆಯ ಹಣವೇ ಸರ್ಕಾರಗಳಿಗೆ ವರಮಾನದ ಪ್ರಮುಖ ಮೂಲ. ಇದಲ್ಲದೆ, ಸರ್ಕಾರಿ ಸ್ವಾಮ್ಯದ ಕೆಲವು ಉದ್ದಿಮೆಗಳು ತಯಾರಿಸುವ ಉತ್ಪನ್ನಗಳ ಮಾರಾಟ, ಸೇವೆಗಳ ಒದಗಿಸುವಿಕೆಯ ಮೂಲಕವೂ ಸರ್ಕಾರಗಳು ವರಮಾನ ಸಂಗ್ರಹಿಸುವುದು ಇದೆ. ಈ ವರಮಾನ ಚೆನ್ನಾಗಿರಬೇಕಾದರೆ ಪ್ರಜೆಯ ಕೈಯಲ್ಲಿ ಒಳ್ಳೆಯ ಮೊತ್ತ ಇರಬೇಕಾಗುತ್ತದೆ. ಪ್ರಜೆ ಶ್ರೀಮಂತನಾದಂತೆಲ್ಲ ಹೆಚ್ಚು ಖರ್ಚು ಮಾಡುತ್ತಾನೆ. ಆತ ಮಾಡುವ ಖರ್ಚುಗಳಲ್ಲಿನ ಒಂದು ಭಾಗವು ತೆರಿಗೆಯ ರೂಪದಲ್ಲಿ ಸರ್ಕಾರದ ಬೊಕ್ಕಸಕ್ಕೆ ಸಂದಾಯ ಆಗುತ್ತದೆ. ಆ ಹಣವನ್ನು ಸರ್ಕಾರವು ಮೂಲಸೌಕರ್ಯ ಯೋಜನೆಗಳಿಗೆ, ಅಭಿವೃದ್ಧಿ ಯೋಜನೆಗಳಿಗೆ ಹೂಡಿಕೆ ಮಾಡಿ ಪ್ರಜೆಗೆ ಇನ್ನಷ್ಟು ಸವಲತ್ತುಗಳು ಸಿಗುವಂತೆ ಮಾಡಬೇಕು. ಈ ಪ್ರಕ್ರಿಯೆಯಲ್ಲಿ, ಕಾಲ ಸರಿದಂತೆಲ್ಲ ಪ್ರಜೆ ಹಾಗೂ ಸರ್ಕಾರ ಜೊತೆಜೊತೆಯಾಗಿ ಶ್ರೀಮಂತ ಆಗಬೇಕು. ಇದು ನಾವು ಒಪ್ಪಿಕೊಂಡು ಬಂದಿರುವ ಆರ್ಥಿಕ ವ್ಯವಸ್ಥೆಯಲ್ಲಿ ಆಗಬೇಕಾದ ಪ್ರಕ್ರಿಯೆ. ಆದರೆ, ಕೋವಿಡ್-19 ಸಾಂಕ್ರಾಮಿಕವು ಧುತ್ತೆಂದು ಎದುರಾದಾಗ, ಅದು ಹರಡುವುದನ್ನು ತಡೆಯುವ ಉದ್ದೇಶದಿಂದ ಲಾಕ್‌ಡೌನ್ ಜಾರಿಗೆ ತರಲಾಯಿತು. ಜನ ಹೊರಗಡೆ ಬಂದು ಖರ್ಚು ಮಾಡುವುದು ಇದ್ದಕ್ಕಿದ್ದಂತೆ ತೀವ್ರವಾಗಿ ಕಡಿಮೆ ಆಯಿತು. ಇದರಿಂದಾಗಿ ಸರ್ಕಾರಗಳ ವರಮಾನ ಕುಸಿಯಿತು. ಅರ್ಥ ವ್ಯವಸ್ಥೆಯು ಲಾಕ್‌ಡೌನ್‌ನ ಪರಿಣಾಮಗಳಿಂದ ಇನ್ನೂ ಪೂರ್ತಿಯಾಗಿ ಹೊರಬಂದಿಲ್ಲ. ಜನ ಧೈರ್ಯವಾಗಿ ಖರ್ಚು ಮಾಡುತ್ತಿಲ್ಲ. ಏಕೆಂದರೆ, ಎಲ್ಲ ವರ್ಗಗಳಿಗೆ ಸೇರಿದ ಜನರ ಆದಾಯವು ಕೋವಿಡ್ ಪೂರ್ವದ ಸ್ಥಿತಿಗೆ ಇನ್ನೂ ಬಂದಿರುವಂತೆ ಕಾಣುತ್ತಿಲ್ಲ. ಜನರ ಸ್ಥಿತಿ ಸುಧಾರಿಸುವವರೆಗೆ ಸರ್ಕಾರಗಳ ವರಮಾನ ಕೂಡ ಸಾಮಾನ್ಯವಾಗಿ ಏರುಗತಿಯನ್ನು ಕಾಣುವುದಿಲ್ಲ. ಜನರ ದುಡಿಮೆಯ ಶಕ್ತಿಯನ್ನು ಆಧರಿಸಿಯೇ ಸರ್ಕಾರಗಳ ವರಮಾನ ತೀರ್ಮಾನ ಆಗಬೇಕು. ಆದರೆ, ಈ ಪರಿಸ್ಥಿತಿಯಲ್ಲಿಯೂ ಹೆಚ್ಚಿನ ವರಮಾನ ಸಂಗ್ರಹಿಸುವ ಉದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನರ ಮೇಲಿನ ತೆರಿಗೆಯ ಹೊರೆಯನ್ನು ವಿಪರೀತ ಎಂಬಂತೆ ಹೆಚ್ಚಿಸಿರುವುದು ಸಲ್ಲದ ನಡೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸರ್ಕಾರಗಳು ವಿಧಿಸುತ್ತಿರುವ ಬಗೆಬಗೆಯ ತೆರಿಗೆಯು ಈ ಮಾತಿಗೆ ಅತ್ಯುತ್ತಮ ನಿದರ್ಶನ. ಜನ ಇನ್ನಿಲ್ಲದ ಸಂಕಷ್ಟ ಎದುರಿಸುತ್ತಿರುವ ಸಂದರ್ಭದಲ್ಲಿ ತೆರಿಗೆಗಳನ್ನು ಈ ಪರಿಯಲ್ಲಿ ಹೆಚ್ಚಿಸುವುದು ಸರಿಯೇ ಎಂಬ ಪ್ರಶ್ನೆಗೆ ಆಳುವ ವರ್ಗದವರು ಸ್ವಗತದಲ್ಲಿಯಾದರೂ ಪ್ರಾಮಾಣಿಕ ಉತ್ತರ ಕೊಟ್ಟುಕೊಳ್ಳಬಹುದು...



ಜನ ಇನ್ನಿಲ್ಲದ ಸಂಕಷ್ಟ ಎದುರಿಸುತ್ತಿರುವ ಸಂದರ್ಭದಲ್ಲಿ ತೆರಿಗೆಗಳನ್ನು ಈ ಪರಿ ಹೆಚ್ಚಿಸುವುದು ಸರಿಯೇ?

ನಿತ್ಯದ ಬದುಕಿನಲ್ಲಿ ಅತ್ಯಗತ್ಯವಾಗಿರುವ ವಿದ್ಯುತ್ ದರ ಏರಿಕೆಯನ್ನು ಇನ್ನೊಂದು ನಿದರ್ಶನ-ವನ್ನಾಗಿ ಪರಿಗಣಿಸಬಹುದು. 2020 ಹಾಗೂ 2021ರಲ್ಲಿ ವಿದ್ಯುತ್ ಶುಲ್ಕವನ್ನು ಪ್ರತೀ ಯೂನಿಟ್‌ಗೆ ಒಟ್ಟು 70 ಪೈಸೆಯಷ್ಟು ಹೆಚ್ಚಿಸಲಾಗಿದೆ. ಉದ್ಯೋಗ ಹಾಗೂ ಆದಾಯ ನಷ್ಟದ ಈ ಕಾಲಘಟ್ಟದಲ್ಲಿ ಜನರಿಗೆ ಒಂದಾದ ನಂತರ ಒಂದು ಎಂಬಂತೆ ಬೆಲೆ ಏರಿಕೆಯನ್ನು ತಾಳಿಕೊಳ್ಳುವ ಶಕ್ತಿ ಇರುತ್ತದೆಯೇ? ವೇತನದಲ್ಲಿ ಕಡಿತ ಅನುಭವಿಸುತ್ತಿರುವ ಕುಟುಂಬಗಳು, ಜೀವನೋಪಾಯವನ್ನೇ ಕಳೆದುಕೊಂಡಿರುವ ಕುಟುಂಬಗಳು ಈ ಏರಿಕೆಯನ್ನು ಯಾವ ರೀತಿ ಸ್ವೀಕರಿಸಬಲ್ಲವು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಹೆಚ್ಚಿನ ಸಂಶೋಧನೆ ಬೇಕಾಗಿಲ್ಲ. ತೈಲೋತ್ಪನ್ನಗಳ ದರ ಏರಿಕೆ ಹಾಗೂ ವಿದ್ಯುತ್ ದರ ಏರಿಕೆಯಿಂದಾಗಿ ಮಾರುಕಟ್ಟೆಯಲ್ಲಿ ಸಿಗುವ ಅಷ್ಟೂ ಉತ್ಪನ್ನಗಳ ಬೆಲೆಯಲ್ಲಿ ಅಷ್ಟಿಷ್ಟಾದರೂ ಏರಿಕೆ ಆಗಬಹುದು. ಇದು ಜನರ ಕೊಳ್ಳುವ ಶಕ್ತಿಯ ಮೇಲೆ ಮಾಡುವ ಪರಿಣಾಮ ಏನಿದ್ದಿರಬಹುದು? ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಸಂವೇದನೆಯು ಆಳುವ ವರ್ಗದಲ್ಲಿ ಸದ್ಯಕ್ಕೆ ಕಾಣಿಸುತ್ತಿಲ್ಲ. ಕೋವಿಡ್ ಸೃಷ್ಟಿಸಿರುವ ಅನಿಶ್ಚಿತ ಸ್ಥಿತಿ ನಿವಾರಣೆಯಾಗಿ, ಮಾರುಕಟ್ಟೆಯಲ್ಲಿ ಚಟುವಟಿಕೆಗಳು ಪೂರ್ಣ ಚೈತನ್ಯದೊಂದಿಗೆ ನಡೆಯಲು ಆರಂಭವಾದ ನಂತರದಲ್ಲಿ ಕೈಗೊಳ್ಳಬಹುದಾಗಿದ್ದ ಕೆಲವು ಕ್ರಮಗಳನ್ನು ಆಳುವ ವರ್ಗಗಳು, ಸಂಕಷ್ಟ ಕಾಲದಲ್ಲಿಯೇ ಕೈಗೊಳ್ಳುತ್ತಿವೆ. ಜನರ ಆದಾಯದ ಸ್ಥಿತಿ ಎಲ್ಲಿಗೆ ತಲುಪಿದೆ ಎಂಬುದನ್ನು ಗಮನಿಸದೆಯೇ, ತನ್ನ ವರಮಾನ ಕೊರತೆಯನ್ನು ಮಾತ್ರ ಸರ್ಕಾರವು ಭರ್ತಿ ಮಾಡಿಕೊಳ್ಳಲು ಮುಂದಾಗುತ್ತಿರುವಂತೆ ಭಾಸವಾಗುತ್ತಿದೆ.

ಕೋವಿಡ್‌ನ ಎರಡನೆಯ ಅಲೆಯನ್ನು ನಿಭಾಯಿಸುವ ಉದ್ದೇಶದಿಂದ ರಾಜ್ಯದಲ್ಲಿ ಲಾಕ್‌ಡೌನ್ ಹೇರಿದ್ದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಮದ್ಯದ ಅಂಗಡಿಗಳಲ್ಲಿ ವ್ಯಾಪಾರವು ಕೆಲವು ಷರತ್ತು-ಗಳೊಂದಿಗೆ ನಡೆಯಲು ಅವಕಾಶ ಕಲ್ಪಿಸಿತ್ತು. ಮದ್ಯ ಮಾರಾಟವು ಸರ್ಕಾರದ ಪ್ರಮುಖ ವರಮಾನ ಮೂಲಗಳಲ್ಲಿ ಒಂದು. ಮದ್ಯದ ಅಂಗಡಿ ಪೂರ್ತಿಯಾಗಿ ಮುಚ್ಚಬೇಕಿಲ್ಲ ಎಂದು ತೀರ್ಮಾನಿಸುವ ಮೂಲಕ ಸರ್ಕಾರವು ತನ್ನ ವರಮಾನ ಮೂಲವೊಂದನ್ನು ಮುಕ್ತವಾಗಿ ಇರಿಸಿಕೊಂಡಿತ್ತು. ಅದು ಸರಿ. ವರಮಾನ ಇಲ್ಲದೆ ಸರ್ಕಾರಕ್ಕೆ ಕೆಲಸ ಮಾಡಲು ಆಗುವುದಿಲ್ಲ. ಆದರೆ, ಅದೇ ಸಂದರ್ಭದಲ್ಲಿ ಸರ್ಕಾರವು ಜನರ ಆದಾಯ ಮೂಲ ಬತ್ತಿಹೋಗದಂತೆ ನೋಡಿಕೊಳ್ಳುವ ಬಗ್ಗೆ ಗಮನಹರಿಸಿತ್ತೇ ಎಂಬ ಪ್ರಶ್ನೆ ಇದೆ. ಈ ಪ್ರಶ್ನೆಯನ್ನು ತುಸು ಮಾರ್ಪಡಿಸಿ, ‘ತಮ್ಮ ವರಮಾನ ಸಂಗ್ರಹ ಹೆಚ್ಚಿಸಿಕೊಳ್ಳುವ ಬಗ್ಗೆ ಗಮನ ನೀಡುತ್ತಿರುವ ಸರ್ಕಾರಗಳು, ಜನರ ಆದಾಯ ಹೆಚ್ಚಿಸಲು ತಕ್ಷಣದ ಕ್ರಮವಾಗಿ ಏನು ಮಾಡಿವೆ’ ಎಂದು ಕೇಳಬಹುದು. ಜನರ ಆದಾಯ ಹೆಚ್ಚಾಗದಿರುವಾಗ ಅವರ ಮೇಲಿನ ಕರ ಭಾರವನ್ನು ಹೆಚ್ಚಿಸುವುದು ಸಹ್ಯವಾದ ನಡೆಯಲ್ಲ. ಈ ಬಗ್ಗೆ ಅಧಿಕಾರಸ್ಥರು ಇನ್ನಷ್ಟು ಮಾನವೀಯವಾಗಿ ಆಲೋಚಿಸಬೇಕು. ಜನರ ಆದಾಯ ಹೆಚ್ಚಿಸದೆಯೇ ಅವರು ಮಾಡಬೇಕಿರುವ ಅಗತ್ಯ ವೆಚ್ಚಗಳನ್ನು ಮಾತ್ರ ಹೆಚ್ಚಿಸುವ ಕ್ರಮಗಳಿಗೆ ಕೊನೆಹಾಡಬೇಕು.

ದಿನದ ಟ್ವೀಟ್



ಜಾಣ ಮರೆವು?

ಅಮೆರಿಕ ತಾನು ಬಿಟ್ಟುಬಂದಿರುವ ಬಂದೂಕುಗಳು ಮತ್ತು ಹಾಳಾಗಿರುವ ಹೆಲಿಕಾಪ್ಟರ್‌ಗಳ ಬಗ್ಗೆ ತಾಲಿಬಾನ್ ಜೊತೆ ಚರ್ಚೆ ನಡೆಸುತ್ತದೆ. ಆದರೆ, ಮನುಕುಲದ ಅತಿದೊಡ್ಡ ದುರಂತ ಎದುರಿಸಲು ಅಫ್ಗಾನಿಸ್ತಾನವನ್ನು ತಾನು ಬಿಟ್ಟು ಹೊರಟಿದ್ದನ್ನು ಅದು ಮರೆಯುತ್ತದೆ. 1.4 ಕೋಟಿ ಅಫ್ಗನ್ನರಿಗೆ ಆಹಾರವಿಲ್ಲ, ಐದು ಲಕ್ಷ ಅಫ್ಗನ್ನರು ಆಂತರಿಕವಾಗಿ ಸ್ಥಳಾಂತರಗೊಂಡಿದ್ದಾರೆ, ಆರೋಗ್ಯ ಸೇವೆಗಳು ಹದಗೆಟ್ಟಿವೆ.

ಅಶೋಕ್ ಸ್ವೈನ್, ಪ್ರಾಧ್ಯಾಪಕ

ಕಿಡಿನುಡಿ



ಹಣದ ಮೇಲೆ ರಾಜಕಾರಣ ಮಾಡುವುದು ಜೆಡಿಎಸ್ ಸಂಸ್ಕೃತಿ. ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹಣ ವಸೂಲಿಗಾಗಿ ಆಗಾಗ್ಗೆ ರಾಜ್ಯಕ್ಕೆ ಬರುತ್ತಿರುತ್ತಾರೆ ಎಂದಿರುವ ಎಚ್.ಡಿ.ಕುಮಾರಸ್ವಾಮಿ ತಮ್ಮ ಅನುಭವವನ್ನು ಹೇಳಿಕೊಂಡಿದ್ದಾರೆ. ಕಾಮಾಲೆ ಕಣ್ಣಿಗೆ ಎಲ್ಲವೂ ಹಳದಿಯಾಗಿ ಕಾಣುತ್ತದೆ. ರಾಜ್ಯ, ದೇಶ ಆಳಿದ ಇವರ ನಾಲಿಗೆ ಸರಿಯಾಗಿದ್ದಿದ್ದರೆ ಜೆಡಿಎಸ್‌ಗೆ ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಈ ಪಕ್ಷದ ಪರಿಸ್ಥಿತಿ ಏನೆಂಬುದು ಇಡೀ ರಾಜ್ಯದ ಜನರಿಗೆ ಗೊತ್ತಿದೆ.

ನಳಿನ್ ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ
ಸೋಮವಾರ, 2-9-1996

• **‘ಉಂಡ ಮನೆಗೆ ಎರಡು ಬಗೆದವರು ಶಾಸಕ ಸ್ಥಾನ ತ್ಯಜಿಸಲಿ’**

ಬೆಂಗಳೂರು, ಸೆ. 1– ಜನತಾದಳ ತೊರೆದ ಆರು ಮಂದಿ ವಿಧಾನ ಪರಿಷತ್ತಿನ ಸದಸ್ಯರನ್ನು ತರಾಟೆಗೆ ತೆಗೆದುಕೊಂಡು ಅವರ ರಾಜೀನಾಮೆಗೆ ಸೂಚಿಸಿದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು, ‘ಈ ರೀತಿ ರಾಜಕೀಯ ವ್ಯಭಿಚಾರಕ್ಕೆ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಪ್ರೋತ್ಸಾಹ ನೀಡಬಾರದಿತ್ತು’ ಎಂದು ಕಟುವಾಗಿ ಟೀಕಿಸಿದರು.

‘ವಿಧಾನಸಭೆಯಲ್ಲಿ ಸರ್ಕಾರವನ್ನು ಬೀಳಿಸಲು ಯಾವುದೇ ಶಕ್ತಿಯಿಂದ ಸಾಧ್ಯವಿಲ್ಲ. ಎಲ್ಲ ವಿರೋಧ ಪಕ್ಷಗಳು ಸೇರಿ ಕೊಂಡರೂ ಇದು ಸಾಧ್ಯವಿಲ್ಲ’ ಎಂದು ಹೇಳಿದರು.

ದೆಹಲಿಯಿಂದ ನಗರಕ್ಕೆ ಬೆಳಿಗ್ಗೆ ಬಂದ ಮುಖ್ಯಮಂತ್ರಿ ಅವರು ತಮ್ಮ ನಿವಾಸದಲ್ಲಿ ಭೇಟಿ ಆದ ಪತ್ರಕರ್ತರೊಂದಿಗೆ ಮಾತನಾಡಿ, ರಾಷ್ಟ್ರೀಯ ನವನಿರ್ಮಾಣ ವೇದಿಕೆಗೆ ಸೇರಿದ ಶಾಸಕರನ್ನು ‘ಉಂಡ ಮನೆಗೆ ಎರಡು ಬಗೆಯುವವರು’ ಎಂದು ಕರೆದರು.

50 ವರ್ಷಗಳ ಹಿಂದೆ
ಗುರುವಾರ, 2-9-1971

• **ಚೀನಾದೊಡನೆಯೂ ಮೈತ್ರಿ ಒಪ್ಪಂದಕ್ಕೆ ಭಾರತದ ಪ್ರಯತ್ನ**

ಕೊಚ್ಚಿ, ಸೆ. 1– ರಷ್ಯಾದೊಡನೆ ಮಾಡಿಕೊಂಡಂಥ ಮೈತ್ರಿ ಒಪ್ಪಂದವನ್ನು ಚೀನಾದೊಡನೆಯೂ ಮಾಡಿಕೊಳ್ಳಲು ಭಾರತ ಖಚಿತ ಪ್ರಯತ್ನಗಳನ್ನು ನಡೆಸುತ್ತಿದೆ.

ಇಲ್ಲಿ ಇಂದು ಆಡಳಿತ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಡಾ. ಹೆನ್ರಿ ಆಸ್ಟಿನ್‌ರವರು ಈ ಸೂಚನೆ ನೀಡಿದರಲ್ಲದೆ, ಕೇಂದ್ರ ಸರ್ಕಾರದಲ್ಲಿ ವಿದೇಶಾಂಗ ನೀತಿ ನಿರೂಪಣೆ ಸಮಿತಿಯ ಅಧ್ಯಕ್ಷರಾದ ಡಿ.ಸಿ.ಧಾರ್‌ರವರು ಪ್ರಯತ್ನಿಸುತ್ತಿದ್ದಾರೆಂದೂ ಹೇಳಿದರು.

• **ಕಾನೂನು ಆಯೋಗ ಪುನರ್‌ರಚನೆ**

ನವದೆಹಲಿ, ಸೆ. 1– ಮಾಜಿ ಶ್ರೇಷ್ಠ ನ್ಯಾಯಾಧೀಶ ಪಿ.ಬಿ.ಗಜೇಂದ್ರ ಗಡ್ಕರ್ ಅವರ ಅಧ್ಯಕ್ಷತೆಯಲ್ಲಿ ಇಂದಿನಿಂದ ಪುನರ್ ರಚಿತವಾಗಿರುವ ಕಾನೂನು ಆಯೋಗ ವಿಶಾಲ ಕಾರ್ಯವ್ಯಾಪ್ತಿ ಹೊಂದಿದೆ.

ಅಪರಾಧಿಗಳ ಮನಸ್ಸು ನಿತ್ಯವೂ ಸತ್ಯವನ್ನು ಹತ್ತಿಕ್ಕುತ್ತಲೇ ಇರುತ್ತದೆ

ಸಾಕ್ಷ್ಯ ಆದೀತೇ ಅಪರಾಧಿಗಳ ಆತ್ಮಸಾಕ್ಷಿ?



ವಿಶ್ಲೇಷಣೆ

ಡಾ. ಬಸವರಾಜ ಸಾದರ

ಆ ಘಟನೆ ನೆನಪಾದರೆ, ಹೈಕೋರ್ಟಿನ ನ್ಯಾಯಮೂರ್ತಿಯೊಬ್ಬರಿಗೆ, ಇಷ್ಟು ಹುಂಬಾಗುತ್ತಿಗೆಯ ಪ್ರಶ್ನೆಯನ್ನು ಹೀಗೆ ನೇರವಾಗಿ ಕೇಳಬಹುದೇ ಎಂಬ ಅಳುಕು ಈಗಲೂ ನನ್ನನ್ನು ಕಾಡುತ್ತದೆ. ಆದರೆ, ಆ ನ್ಯಾಯಮೂರ್ತಿಯವರು ಆಗ ಕೊಟ್ಟ ಉತ್ತರ ಮಾತ್ರ, ಎಲ್ಲರ ಆತ್ಮಸಾಕ್ಷಿಯನ್ನು ಕೆಣಕುವಂಥದ್ದಾಗಿರುವ ಕಾರಣ ಅದು ಮತ್ತೆ ಮತ್ತೆ ನೆನಪಾಗುತ್ತಲೇ ಇರುತ್ತದೆ.

ಬೆಂಗಳೂರು ಆಕಾಶವಾಣಿಯಲ್ಲಿ ನಾನು ಕಾರ್ಯಕ್ರಮ ನಿರ್ವಾಹಕನಾಗಿದ್ದಾಗ, ‘ಕಾನೂನು ಸಲಹೆ’ ಎಂಬ ಕಾರ್ಯಕ್ರಮವನ್ನು ತಿಂಗಳಿಗೊಂದರಂತೆ ಪ್ರಸಾರ ಮಾಡುತ್ತಿದ್ದೆ. ಕಾನೂನಿಗೆ ಸಂಬಂಧಪಟ್ಟ ಕೇಳುಗರ ಪ್ರಶ್ನೆಗಳಿಗೆ ತಜ್ಞರಿಂದ ನೇರವಾಗಿ ಉತ್ತರ ಕೊಡಿಸುವ ಉಪಯುಕ್ತ ಕಾರ್ಯಕ್ರಮ ಅದಾಗಿತ್ತು. ಇದಕ್ಕಾಗಿ ಪ್ರತೀ ತಿಂಗಳೂ ಹೈಕೋರ್ಟಿನ ನ್ಯಾಯಮೂರ್ತಿಯೊಬ್ಬರನ್ನು ಆಮಂತ್ರಿಸುತ್ತಿದ್ದೆ. ಈ ಮಾಲಿಕೆಯ ಕಾರ್ಯಕ್ರಮ-ವೊಂದರಲ್ಲಿ ಭಾಗವಹಿಸಲು ಬಂದಿದ್ದರು, ಆ ಹಿರಿಯ ನ್ಯಾಯಮೂರ್ತಿ.

ಕಾರ್ಯಕ್ರಮವನ್ನು ಧ್ವನಿಮುದ್ರಿಸುವ ಮುಂಚೆ, ನ್ಯಾಯಮೂರ್ತಿ ಜೊತೆಗೆ ಚಹಾ ಕುಡಿಯುತ್ತ ಕುಳಿತಿದ್ದಾಗ, ‘ಸರ್, ನ್ಯಾಯಮೂರ್ತಿಯಾದ ನೀವು, ಯಾವುದೇ ಅಪರಾಧದ ಪ್ರಕರಣದಲ್ಲಿ ತೀರ್ಪು ಕೊಡುವಾಗ, ಅಪರಾಧಿ ಯಾರೆಂಬುದು ನಿಮಗೆ ಮೊದಲೇ ತಿಳಿದಿರುತ್ತದೆಯೇ?’ ಎಂದು ಹೆದರುತ್ತಲೇ ಆ ಪ್ರಶ್ನೆ ಕೇಳಿದ್ದೆ. ಆದರೆ ಅವರು ಎಳ್ಳಷ್ಟೂ ಕೋಪಿಸಿಕೊಳ್ಳದೆ, ‘ಇಲ್ಲ, ಅಪರಾಧಿ ಯಾರೆಂಬುದು ಖಂಡಿತವಾಗಿಯೂ ಮೊದಲು ನ್ಯಾಯ-ಮೂರ್ತಿಗಳಿಗೆ ಗೊತ್ತಿರುವುದಿಲ್ಲ’ ಎಂದು ಅತ್ಯಂತ ಸ್ಪಷ್ಟ ಮತ್ತು ನೇರವಾದ ಉತ್ತರ ಕೊಟ್ಟುಬಿಟ್ಟಿದ್ದರು.

ಅಷ್ಟಕ್ಕೇ ಬಿಡದೆ, ‘ಹಾಗಾದರೆ, ಅಪರಾಧಿಗಳ ಪರ ಹಾಗೂ ವಿರುದ್ಧ ವಾದ ಮಂಡಿಸುವ ವಕೀಲರಿಗೆ ಅಪರಾಧಿ ಯಾರೆಂಬುದು ಮೊದಲೇ ತಿಳಿದಿರುತ್ತ-ದೆಯೇ?’ ಎಂದು ನಾನು ಮತ್ತೊಂದು ಪ್ರಶ್ನೆಯನ್ನು ಎಸೆದಿದ್ದೆ. ಅದಕ್ಕೂ ಅವರು ಅಷ್ಟೇ ತಾಳ್ಮೆಯಿಂದ, ‘ಪೂರ್ತಿಯಾಗಿ ಅಲ್ಲ’ ಎಂದು ಎರಡೇ ಶಬ್ದಗಳಲ್ಲಿ ಉತ್ತರ ಕೊಟ್ಟುಬಿಟ್ಟರು! ಅಲ್ಲಿಗೇ ನಿಲ್ಲಿಸದ ನಾನು, ‘ಹಾಗಾದರೆ, ಅಪರಾಧಿ ಯಾರೆಂಬುದು ನಿಜವಾಗಿಯೂ ಮೊದಲು ಯಾರಿಗೆ ತಿಳಿದಿರುತ್ತದೆ?’ ಎಂದು ನನ್ನ ಮೂರನೆಯ ಹಾಗೂ ಕೊನೆಯ ಪ್ರಶ್ನೆಯನ್ನು ಹಿಂಜರಿಕೆಯಿಂದಲೇ ಕೇಳಿದ್ದೆ. ಅದಕ್ಕೆ ಅವರು ಅತ್ಯಂತ ತಾಳ್ಮೆಯಿಂದ ಕೊಟ್ಟ ಉತ್ತರ ಅಚ್ಚರಿಯದಾಗಿತ್ತು- ‘ಅಪರಾಧಿ ಯಾರೆಂಬುದು ಗೊತ್ತಿರುವುದು ಒಬ್ಬರಿಗೆ ಮಾತ್ರ, ಅದು ಅಪರಾಧ ಮಾಡಿದ ವ್ಯಕ್ತಿಗೆ’ ಎಂದು. ನ್ಯಾಯಮೂರ್ತಿಯವರ ಆ ಪ್ರಾಮಾಣಿಕ ಹಾಗೂ ವಾಸ್ತವಿಕವಾದ ಉತ್ತರ ಕೇಳಿ ನಾನು ದಂಗಾಗಿ ಹೋಗಿದ್ದೆ.

ಈಗ ಅದನ್ನೆಲ್ಲ ನೆನೆಸಿಕೊಂಡರೆ, ಅಂದು ಆ ನ್ಯಾಯಮೂರ್ತಿಯವರು ಕೊಟ್ಟ ವೈಯಕ್ತಿಕ ಉತ್ತರದಲ್ಲಿ ಎಷ್ಟೊಂದು ಸತ್ಯಾಂಶವಿದೆಯಲ್ಲ ಎಂದು ಸೋಜಿಗವಾಗುತ್ತದೆ. ನಿಜವಾದ ಅಪರಾಧಿ ಯಾರೆಂಬುದು ಅಪರಾಧ ಮಾಡಿದ ವ್ಯಕ್ತಿಗೆ ಗೊತ್ತಿರಲು ಸಾಧ್ಯವೇ ಹೊರತು, ಉಳಿದವರಿಗಲ್ಲ. ನ್ಯಾಯಾಲಯದಲ್ಲಿ ಆಯಾ ಕಕ್ಷಿಗಾರರ ಪರ ಅಥವಾ ವಿರೋಧವಾಗಿ ವಕೀಲರು ಒದಗಿಸುವ ಸಾಕ್ಷ್ಯಾಧಾರಗಳಿಂದ ಹಾಗೂ ಕಾನೂನಿನ ಇನ್ನಿತರ ಮಾಪನಗಳಿಂದ ಅಳೆದು, ತೂಗಿದ ನಂತರವೇ ನ್ಯಾಯಾಧೀಶರು, ನ್ಯಾಯಮೂರ್ತಿಗಳು ‘ಇಂಥವನೇ ಅಪರಾಧಿ’ ಎಂಬ ನಿರ್ಣಯಕ್ಕೆ ಬರುವುದು ನಮ್ಮ ಕಾನೂನುಗಳ ರೀತಿ ಮತ್ತು ಕ್ರಮ. ನಿಜ, ಅಪರಾಧ ಮಾಡಿದವನಿಗೆ ಮಾತ್ರವೇ ತಾನು ಅಪರಾಧಿ ಎಂಬ ಸತ್ಯ ಗೊತ್ತಿರುತ್ತದೆ. ಆ ಸತ್ಯವನ್ನು ಅವನ ಆತ್ಮಸಾಕ್ಷಿಯು ಸದಾ ಜಾಗೃತವಾಗಿ ಇಟ್ಟಿರುತ್ತದೆ. ಆದರೆ, ಅಂಥ ಆತ್ಮಸಾಕ್ಷಿಗೆ ಅನುಗುಣವಾಗಿ ‘ನಾನೇ ಅಪರಾಧಿ’ ಎಂದು ಒಪ್ಪಿಕೊಂಡುಬಿಡುವ ಅಪರಾಧಿಗಳು ಇದ್ದಾರೆಯೇ ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆ. ಹಾಗೇನಾದರೂ ಇದ್ದಿದ್ದರೆ ನ್ಯಾಯಾಲಯ, ನ್ಯಾಯಾಧೀಶರು, ವಕೀಲರು ಮತ್ತು ನ್ಯಾಯಾಂಗದ ಇನ್ನಿತರ ಪ್ರಕ್ರಿಯೆಗಳ ಅಗತ್ಯವೇ ಇರುತ್ತಿರಲಿಲ್ಲ.

ಆತ್ಮಸಾಕ್ಷಿ ಎಂಬುದು ಉಳಿದ ಯಾವ ಸಾಕ್ಷ್ಯವನ್ನೂ ಬಯಸದ ಎಲ್ಲರೊಳಗಿನ ಅಂತಃಸಾಕ್ಷಿ. ಅದು ಎಂದೂ ಸತ್ಯವನ್ನೇ ಹೇಳುತ್ತಿರುತ್ತದೆ ಮತ್ತು ಸದಾ ಜಾಗೃತವಾಗಿಯೇ ಇರುತ್ತದೆ. ಆದರೆ ಅಪರಾಧಿ ಮನಸ್ಸುಗಳು ತಮ್ಮ ಕಳ್ಳತನ ಮುಚ್ಚಿಕೊಳ್ಳಲು ಮತ್ತು ಸಾಚಾಗಳೆಂದು ತೋರಿಸಿಕೊಳ್ಳಲು ಆ ಆತ್ಮಸಾಕ್ಷಿಯನ್ನು ಸದಾ ಸದೆಬಡಿಯುತ್ತಲೇ ಇರುತ್ತವೆ. ಹೀಗೆ ಅದರ ಬಾಯಿ ಮುಚ್ಚಿಸಿ, ಸುಳ್ಳುಗಳ ಸಾಮ್ರಾಜ್ಯವನ್ನೇ ಕಟ್ಟಿಬಿಡುವ ಕಾರಣಕ್ಕಾಗಿ ಆತ್ಮಸಾಕ್ಷಿಯು, ‘ನನ್ನನ್ನೂ ಇವರು ಅಪರಾಧಿಯನ್ನಾಗಿ ಮಾಡುತ್ತಿದ್ದಾರಲ್ಲ!’ ಎಂದು ಒಳಗೊಳಗೇ ಅಳುತ್ತಿರುತ್ತದೆ. ಆದರೆ ಅದರ ಮೊರೆ ಕೇಳುವವರಾರು?

1970ರ ದಶಕದಲ್ಲಿ, ಜಿ.ಎನ್.ಸಭಾಹಿತ ಎಂಬ ಅತ್ಯಂತ ಸರಳ-ಸಜ್ಜನ, ಕಾನೂನು ತಜ್ಞರೊಬ್ಬರು ಧಾರವಾಡದಲ್ಲಿ ನ್ಯಾಯಾಧೀಶರಾಗಿದ್ದರು. ವಿದ್ಯಾರ್ಥಿಗಳೆಂದರೆ ಕಕ್ಕುಲಾತಿಯನ್ನು ಹೊಂದಿದ್ದ ಅವರು, ವಿದ್ಯಾರ್ಥಿಗಳಿಗೆ ಕಾನೂನಿನ ಅರಿವು ಬರಲಿ ಹಾಗೂ ಅಪರಾಧ ಮಾಡದಂಥ ಶುದ್ಧ ವ್ಯಕ್ತಿಗಳು ಅವರಾಗಲಿ ಎಂಬ ಸದುದ್ದೇಶದಿಂದ ನ್ಯಾಯಾಲಯದ ಕಾರ್ಯಕಲಾಪಗಳು ನಡೆಯುವಾಗಲೇ ಅವರಿಗೆ ಕೋರ್ಟಿನಲ್ಲಿ ಬಂದು ನೋಡಲು-ಕೇಳಲು ಅವಕಾಶ ಕಲ್ಪಿಸುತ್ತಿದ್ದರು. ಕಲಾಪಗಳು ಮುಗಿದ ನಂತರ, ವಿದ್ಯಾರ್ಥಿಗಳೊಂದಿಗೆ ಸಂವಾದವನ್ನೂ ನಡೆಸಿ, ಅವರು ಕೇಳುತ್ತಿದ್ದ ಕಾನೂನು ಸಂಬಂಧಿ ಪ್ರಶ್ನೆಗಳಿಗೆ ಆಪ್ತವಾಗಿ ಉತ್ತರಗಳನ್ನೂ ಕೊಡುತ್ತಿದ್ದರು. ಅಂಥ ಒಂದು ಸಂದರ್ಭದಲ್ಲಿ ಆತ್ಮಸಾಕ್ಷಿಯ ಜೀವಂತಿಕೆ ಮತ್ತು ಮಹತ್ವದ ಬಗ್ಗೆ ಅವರು ಹೇಳಿದ ಒಂದು ಕೇಸಿನ ವಿವರಗಳು ಯಾವಾಗಲೂ ನೆನಪಿನಲ್ಲಿ ಉಳಿಯುವಂಥವು.



ಜಮೀನಿನ ಜಗಳಕ್ಕೆ ಸಂಬಂಧಿಸಿದಂತೆ ಒಬ್ಬ ಶ್ರೀಮಂತ ರೈತನು ತನ್ನ ಹತ್ತಿರದ ಸಂಬಂಧಿಕನನ್ನು ಕೊಲೆ ಮಾಡಿರುತ್ತಾನೆ. ಎಲ್ಲ ಸಾಕ್ಷ್ಯಾಧಾರಗಳನ್ನೂ ನಾಶ ಮಾಡುವಷ್ಟು ಪ್ರಭಾವಿಯಾಗಿದ್ದ ಆತನು ತಾನು ಕೊಲೆ ಮಾಡಿಲ್ಲವೆಂದು ಸಾಬೀತುಪಡಿಸಲು ಏನೆಲ್ಲ ಹಿಕಮತ್ತುಗಳನ್ನು ಮಾಡುತ್ತಾನೆ. ಆದರೆ, ಸಾಕ್ಷ್ಯಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿದ ನ್ಯಾಯಾಧೀಶರಿಗೆ ಮಾತ್ರ ಅವನೇ ಅಪರಾಧಿ ಎಂಬುದು ತಿಳಿದಿತ್ತು. ಆದರೂ ಅವರು ಆ ಶ್ರೀಮಂತ ರೈತನಿಗೇ ಅಚ್ಚರಿಯಾಗುವಂತೆ, ‘ನೀವು ನಿರಪರಾಧಿಯೆಂದು ಈ ನ್ಯಾಯಾಲಯವು ತೀರ್ಮಾನಿಸಿದೆ. ನೀವಿನ್ನು ಹೋಗಬಹುದು’ ಎಂದು ಸಾರಿಬಿಡುತ್ತಾರೆ. ರೈತನಿಗೆ ಖುಷಿಯೋ ಖುಷಿ! ಆತ ಕೋರ್ಟ್ ಹಾಲಿನಲ್ಲಿಯೇ ಕೂಗಾಡುತ್ತ, ಕುಣಿದಾಡುತ್ತ ಬಾಗಿಲ ಕಡೆಗೆ ಹೋಗುತ್ತಿದ್ದಾಗ, ಆ ನ್ಯಾಯಾಧೀಶರು ಒಮ್ಮೆಲೇ, ‘ಯಜಮಾನ್ರೆ, ನಿಮ್ಮ ಕಂಬಳಿಯನ್ನು ನೀವು ಇಲ್ಲೇ ಬಿಟ್ಟು ಹೊರಟಿದ್ದೀರಲ್ಲಾ’ ಎಂದು ಆತನಿಗೆ ಸೂಚಿಸುತ್ತಾರೆ. ನಿರಪರಾಧಿಯೆಂದು ಬಿಡುಗಡೆಯಾದ ಉಮೇದಿನಲ್ಲಿದ್ದ ಆ ರೈತನು, ಅದೇ ವೇಗದಲ್ಲಿ ಹಿಂದಕ್ಕೆ ಬರುತ್ತ, ‘ಏ ಹೌದ್ ನೋಡ್ರೀ ಸಾಹೇಬ್ರ, ಅವತ್ತ ನಾನು ಖೂನೀ ಮಾಡಾಕ ಹೋದಾಗ ಈ ಕಂಬಳೀನ ಅಲ್ಲೇ ಮರತ್ ಬಿಟ್ಟ್ ಬಂದಿದ್ದಾ ನೋಡ್ರಿ’ ಅಂದವನೇ ಅದನ್ನು ತೆಗೆದುಕೊಳ್ಳಲು ವಾಪಸ್ ಬರುತ್ತಾನೆ. ಕೂಡಲೇ ನ್ಯಾಯಾಧೀಶರು, ಅಲ್ಲಿದ್ದ ಪೊಲೀಸರಿಗೆ, ‘ಬಂಧಿಸಿರಿ ಇವನನ್ನು. ಕೊಲೆ ಮಾಡಿದ್ದು ತಾನೇ ಎಂಬುದನ್ನು ಅವನೇ ಒಪ್ಪಿಕೊಂಡಿದ್ದಾನೆ’ ಎಂದು ಆದೇಶ ನೀಡಿದರಂತೆ.

ಕೊಲೆಗಾರ ತಾನೇ ಆಗಿದ್ದರೂ, ಏನೆಲ್ಲ ಅನ್ಯಾಯದ ದಾರಿ ಹಿಡಿದು, ತಾನು ನಿರಪರಾಧಿ ಎಂದು ಸಾಬೀತು ಮಾಡಲು ಶ್ರಮಿಸಿದ್ದ ಆತ ಕೊನೆಗೂ ತನ್ನ ಆತ್ಮಸಾಕ್ಷಿಯನ್ನು ಮುಚ್ಚಿಡಲಾಗಲಿಲ್ಲ ಅಥವಾ ಆತನ ಆತ್ಮಸಾಕ್ಷಿಯು ಸತ್ಯವನ್ನೇ ಹೇಳಿತ್ತು. ಹೊರಗಿನ ಸಾವಿರ ಸಾಕ್ಷಿಗಳು ಸುಳ್ಳಿನ ಸರಮಾಲೆ ಕಟ್ಟಿದರೂ, ಒಳಗಿನ ಆತ್ಮಸಾಕ್ಷಿ ಮಾತ್ರ ಸದಾ ನಿಜವನ್ನೇ ನುಡಿಯುತ್ತದೆ ಎಂಬುದಕ್ಕೆ ನ್ಯಾಯಾಧೀಶ ಜಿ.ಎನ್.ಸಭಾಹಿತ ಅವರು ಅಂದು ವಿದ್ಯಾರ್ಥಿಗಳಿಗೆ ಹೇಳಿದ ಘಟನೆಯೇ ಸಾಕ್ಷಿ.

ಆತ್ಮಸಾಕ್ಷಿ ಎಲ್ಲರ ಅಂತರಂಗದಲ್ಲೂ ಸದಾ ಜೀವಂತವಾಗಿಯೇ ಇರುತ್ತದೆ. ಆದರೆ, ಕಳ್ಳ ಮತ್ತು ಅಪರಾಧಿ ಮನಸ್ಸುಗಳು ಸತ್ಯವನ್ನು ಮರೆಮಾಚಲು ಅದನ್ನು ನಿತ್ಯವೂ ಹತ್ತಿಕ್ಕುತ್ತ ಅಥವಾ ಕೊಲ್ಲುತ್ತಲೇ ಇರುತ್ತವೆ. ಇಂದಿನ ಅನಿಯಂತ್ರಿತ ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರದ ಪ್ರಸಂಗಗಳಲ್ಲಂತೂ ಇದು ಸಾಬೀತಾಗಿರುವ ಸತ್ಯ. ಆತ್ಮಸಾಕ್ಷಿಗೆ ಸಾಕ್ಷ್ಯ ಆಗುವ ಏಕೈಕ ಸಾಧನವೆಂದರೆ ಮನುಷ್ಯನ ಮನಸ್ಸು. ಅದನ್ನೇ ಬಸವಣ್ಣನವರು, ‘ಎನ್ನ ಮನವೇ ಸಾಕ್ಷಿ’ ಎಂದು ಹೇಳಿದ್ದು. ಆದರೆ ಇಂದಿನ ಅಪರಾಧಿತ ಮನಸ್ಸುಗಳೇ ಪೂರ್ತಿ ಭ್ರಷ್ಟವಾಗಿರುವಾಗ, ಅವು ಆತ್ಮಸಾಕ್ಷಿಗೆ ಸಾಕ್ಷ್ಯ ಆಗಲು ಸಾಧ್ಯವೇ?

ನ್ಯಾಯಮೂರ್ತಿಗಳು ಹೇಳಿದಂತೆ, ಅಪರಾಧಿ ತಾನೇ ಎಂದು ಗೊತ್ತಿರುವ ಅಪರಾಧಿಗಳ ಆತ್ಮಸಾಕ್ಷಿಯು ‘ನಾನೇ ಅಪರಾಧಿ’ ಎಂದು ಹೇಳುವ ಕಾಲ ಎಂದಾದರೂ ಬಂದೀತೆ? ಇದು ಒಂದಲ್ಲ; ಸಾವಿರ ಮಿಲಿಯನ್ ಡಾಲರ್ ಪ್ರಶ್ನೆ.

ಚುರುಮುರಿ



ಟ್ರಿಲಿಯನ್: ಎಷ್ಟು ಸೊನ್ನೆ?

• ಆನಂದ

‘ಟ್ರಿಲಿಯನ್ ಎಂದರೆ ಎಷ್ಟು?’ ಎಂದು ಹೆಂಡತಿ ಕೇಳಿದಳು. ‘ಏಕೆ?’ ಎಂದೆ.

‘ಅಫ್ಗಾನಿಸ್ತಾನದಲ್ಲಿ ಮೂಗು ತೂರಿಸಿದ್ದಕ್ಕೆ ಅಮೆರಿಕಕ್ಕೆ 2 ಟ್ರಿಲಿಯನ್ ಡಾಲರ್ ಖರ್ಚಾಗಿದೆ. ಆ ಭೂಗರ್ಭದಲ್ಲಿ 2-3 ಟ್ರಿಲಿಯನ್ ಡಾಲರ್ ಮೌಲ್ಯದಷ್ಟು ಖನಿಜ ಸಂಪತ್ತು ಹುದುಗಿದೆಯಂತೆ. ಅದೆಷ್ಟು ಹಣ?’ ಅವಳ ಪ್ರಶ್ನೆ.

ಕೋಟಿಯಲ್ಲಿ ಎಷ್ಟು ಸೊನ್ನೆ ಇದೆ ಎಂದೇ ನನಗೆ ಸರಿಯಾಗಿ ಗೊತ್ತಿಲ್ಲ. ಕೇಂದ್ರ ಬಜೆಟ್ ಸಮಯದಲ್ಲಿ ಮಂತ್ರಿಗಳು ‘ಲಕ್ಷ ಕೋಟಿ ಅದಕ್ಕೆ, ಲಕ್ಷ ಕೋಟಿ ಇದಕ್ಕೆ’ ಎಂದು, ಮಧ್ಯೆ ಮಧ್ಯೆ ನೀರು ಗುಟುಕರಿಸುತ್ತಾ, ಲೀಲಾಜಾಲವಾಗಿ ಹೇಳುವುದನ್ನು ಕೇಳಿದ್ದೇನೆ. ಕೊನೆಗೆ ನನಗೆ ಅರ್ಥವಾಗುವುದು ಆದಾಯ ತೆರಿಗೆ ಮಿತಿ ಮಾತ್ರ. ಹಾಗಿರುವಾಗ ಟ್ರಿಲಿಯನ್ ಎಂದರೆ ಎಷ್ಟಿರಬಹುದು?

ಗೂಗಲಿಸಿದರೆ ಅದು ‘ನಿಮಗೆ ಬ್ರಿಟಿಷ್ ಟ್ರಿಲಿಯನ್ ಬೇಕೋ ಅಮೆರಿಕನ್ ಟ್ರಿಲಿಯನ್ ಬೇಕೋ?’ ಎಂದು ಕೇಳಿತು. ಅರೆ! ಟ್ರಿಲಿಯನ್‌ನಲ್ಲಿ ಎರಡು ಪ್ರಭೇದಗಳಿವೆ! ಬ್ರಿಟಿಷ್ ಮಂದಿಗೆ 1ರ ಪಕ್ಕ 18 ಸೊನ್ನೆಗಳು ಹಾಕಿದರೆ ಒಂದು ಟ್ರಿಲಿಯನ್; ಅಮೆರಿಕನ್ನರಿಗೆ 12 ಸೊನ್ನೆಗಳು ಸಾಕು. ಅಷ್ಟರಮಟ್ಟಿಗೆ ಅವರ ಗಣಿತ ಸುಲಭ. ಅಂದರೆ ಬ್ರಿಟನ್ನರು ಅಫ್ಗಾನಿಸ್ತಾನದಲ್ಲಿ ಮೂಗು ತೂರಿಸಿದ್ದಿದ್ದರೆ ಅಮೆರಿಕನ್ನರಿಗಿಂತ ಹೆಚ್ಚು ಹಾನಿಗೊಳಗಾಗುತ್ತಿದ್ದರು ಎಂದು ಸಿಂಪಲ್ ಕ್ಯಾಲ್ಕ್ಯುಲೇಷನ್ ಹೇಳುತ್ತದೆ, ಇರಲಿ.

‘ರೂಪಾಯಿ ಲೆಕ್ಕದಲ್ಲಿ ಎಷ್ಟಾಗಬಹುದ್ರೀ?’

‘1ರ ಪಕ್ಕದಲ್ಲಿ 12 ಸೊನ್ನೆ ಹಾಕಿ ಅದನ್ನು 72ರಿಂದ ಗುಣಿಸಿ ಅದನ್ನು ಡಬಲ್ ಮಾಡಿದರೆ ಅಮೆರಿಕಕ್ಕೆ ಎಷ್ಟು ರೂಪಾಯಿ ಖರ್ಚಾಯಿತು ಎಂದು ತಿಳಿದುಕೊಳ್ಳಬಹುದು’ ಎಂದು ಹೆಂಡತಿಗೆ ವಿವರಿಸಿದೆ. ‘ಅದ್ಸರೀರಿ, ಅಲ್ಲಿ ಖನಿಜ ಸಂಪತ್ತು 2-3 ಟ್ರಿಲಿಯನ್ ಡಾಲರ್ ಅಂದೆನಲ್ಲ. ಬಂಗಾರ, ಬೆಳ್ಳಿ, ತಾಮ್ರ, ಕ್ಯಾಡ್ಮಿಯಮ್ ಹೀಗೆ ಬೇಕಾದಷ್ಟಿದೆಯಂತೆ. ಯಾರೂ ಇದುವರೆಗೂ ಮುಟ್ಟಿಲ್ಲವಂತೆ ಅವುಗಳನ್ನು. ಮತ್ತೆ ಇದೊಂದು ಚಾನ್ಸ್ ಅಲ್ಲವಾ?’ ಎಂದಳು.

‘ಯಾರಿಗೆ?’ ಎಂದೆ. ‘ನಮ್ಮ ಗಣಿಧಣಿಗಳಿಗೆ. ಬಳ್ಳಾರೀಲಂತೂ ಗಣಿಗಾರಿಕೆ ಸಾಧ್ಯವಿಲ್ಲ. ಅಲ್ಲಾದರೂ ಹೋದರೆ ಡಾಲರ್‌ಗಳಲ್ಲೇ ಸಂಪಾದಿಸಬಹುದು. ಹೆಲಿಕಾಪ್ಟರ್ ಬದಲು ಪ್ಲೇನನ್ನೇ ಖರೀದಿಸಬಹುದು’ ಎಂದಳು.

ನನಗ್ಯಾಕೆ ಅದರ ಚಿಂತೆ. ನನ್ನ ಬಳಿ ಸ್ಕೂಟರ್ ಸಹ ಇಲ್ಲ.

ಸಂಗತ

ದಾರ್ಶನಿಕರೆಲ್ಲ ಒಟ್ಟಿಗೇ ಮತ್ತೆ ಹುಟ್ಟಿಬರಲಿ!

ವಿಜ್ಞಾನವಿಲ್ಲದೆ ಕುಂಟುತ್ತಿರುವ ಧರ್ಮವನ್ನೂ ಧರ್ಮವಿಲ್ಲದೆ ಕುರುಡಾಗಿರುವ ವಿಜ್ಞಾನವನ್ನೂ ಸರಿಪಡಿಸುವ ಮಂತ್ರವಾದಿ ಎಲ್ಲಿದ್ದಾನೆ?

• ದಾದಾಪೀರ್ ನವಿಲೇಹಾಳ್


ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಗೆಲಿಲಿಯೊ ಗಣಿತದ ತರಗತಿಗಳನ್ನು ಕದ್ದು ಕೇಳುತ್ತಾ ಕನವರಿಸುತ್ತಾ ಖಭೌತ ವಿಸ್ಮಯಗಳ ಕುರಿತು ಗುಣಿಸುತ್ತಿದ್ದ. ಅಪ್ಪನ ಆಗ್ರಹಕ್ಕೆ ಮೆಡಿಕಲ್ ಸೇರಿದ್ದ ಆತ, ವೈದ್ಯಕೀಯಕ್ಕೆ ಹೊರತಾದ ತನ್ನ ಕುತೂಹಲ ಮತ್ತು ಆಸಕ್ತಿಯ ಕ್ಷೇತ್ರದಲ್ಲಿ ಸೃಜನಶೀಲವಾದುದನ್ನು ಸಾಧಿಸಲು ಸಾಧ್ಯವಾಯಿತು.

ಗ್ರಹ, ತಾರೆ, ನೀಹಾರಿಕೆಗಳ ರೂಪ ಸೌಂದರ್ಯದ ಜೊತೆಗೆ ಅವು ಚಲಿಸುವ ಪಥವನ್ನೂ ದೂರವನ್ನೂ ಲೆಕ್ಕ ಹಾಕುತ್ತಾ ಅಲ್ಲೆಲ್ಲೂ ದೇವರನ್ನು ಕಾಣದೆ ಗೆಲಿಲಿಯೊ ಚಡಪಡಿಸುತ್ತಿದ್ದ. ಆಗಸದ ಅನಂತದಲ್ಲಿ ನಡೆಯುತ್ತಿರುವುದಕ್ಕೂ ನೆಲದಲ್ಲಿ ಮನುಷ್ಯ ಮಾಡಿಕೊಂಡ ಗುಡಿ, ಚರ್ಚು, ಮಸೀದಿಗಳಿಗೂ ಏನೇನೂ ಸಂಬಂಧ ಇಲ್ಲ-ದಿರುವುದನ್ನು ಗುರುತಿಸಿಯೂ ತನ್ನ ಪಾಡಿಗೆ ತಾನು ಗಣಿತದ ಸೂತ್ರ ಪ್ರಮೇಯಗಳಲ್ಲಿ ಮುಳುಗಿ ನಂಬಿಕೆ ಮತ್ತು ಸತ್ಯದ ನಡುವಿನ ವ್ಯತ್ಯಾಸದ ಅರಿವಾಗಿ ಅಚ್ಚರಿಪಡುತ್ತಿದ್ದ. ಜಗತ್ತು ಅದುವರೆಗೆ ನಂಬಿದ ಸಂಗತಿ ಸತ್ಯವೇ ಅಲ್ಲವೆಂದೂ, ಅದಕ್ಕೆ ಅರಿವಿನ ಅಭಾವ ಕಾರಣವೆಂದೂ ತಿಳಿಸಲು ಹೋಗಿ ತೊಂದರೆಗೆ ಪಕ್ಕಾದ. ಸಮಾಜಕ್ಕೆ ಗೆಲಿಲಿಯೊ ಹೇಳುತ್ತಿದ್ದ ಸತ್ಯವು ಅಪಥ್ಯವಾಗಿ, ತಿಳಿಗೇಡಿ ಸಮಾಜದ ಎದುರು ಕ್ಷಮೆ ಕೋರುವ ಅನಿವಾರ್ಯಕ್ಕೆ ಸಿಲುಕಿ ಹೊರಬಂದು, ಅದಮ್ಯ ಆತ್ಮವಿಶ್ವಾಸದಿಂದ ‘ಇದು ತಿರುಗೇ ತಿರುಗುತ್ತದೆ’ ಎಂದು ನೆಲಕ್ಕೊಮ್ಮೆ ಜಾಡಿಸಿ ಒದ್ದ. ಜಗತ್ತು ಕಂಡ ಅಪ್ರತಿಮ ವಿಜ್ಞಾನಿಯೊಬ್ಬ ಹೇಳಿದ ಸತ್ಯವನ್ನು ಈಗ ಅದೇ ಜಗತ್ತು ನಿಸ್ಸಂದೇಹವಾಗಿ ನಂಬಿದೆ.

ಸದ್ಯದ ಸಾಮಾಜಿಕ ಪ್ರಪಂಚ ಅತಿ ಎನ್ನುವಷ್ಟು ಲೌಕಿಕವಾಗಿದೆ. ವಿಜ್ಞಾನವನ್ನೂ ಧರ್ಮವನ್ನೂ ಜೀವಪರ ಆಶಯಗಳಿಗಾಗಿ ಧ್ಯಾನಿಸಿದ ಜಾಗತಿಕ ಪರಂಪರೆಗೆ ತೀರಾ ವ್ಯತಿರಿಕ್ತವಾಗಿ ಪ್ರಾಪಂಚಿಕ ಲಾಭದ ಆಸೆಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ. ವಿಜ್ಞಾನ ಮತ್ತು ಧರ್ಮಗಳ ಆತ್ಯಂತಿಕ ಅವಸ್ಥೆಯಲ್ಲಿ ಮನುಷ್ಯ ಮತ್ತು ಪ್ರಕೃತಿ ಕೇವಲ ಹುಚ್ಚು ಅಧಿಕಾರ ಹಾಗೂ ಮಾರಾಟದ ಸರಕಾಗುವ ಆತಂಕವನ್ನು ಅಫ್ಗಾನಿಸ್ತಾನದಲ್ಲಿ ಕಾಣುತ್ತಿದ್ದೇವೆ. ಅಲ್ಲಿನ ಆಘಾತಕಾರಿ ಬೆಳವಣಿಗೆಗಳು ವಿಜ್ಞಾನ ಮತ್ತು ಧರ್ಮಗಳ ಅರಿವಿನ ಅಭಾವದಿಂದ ನಡೆಯದೆ ಅವುಗಳ ವಿಕೃತ ಪ್ರಯೋಗ ಬುದ್ಧಿಯಿಂದ ನಡೆಯುತ್ತಿವೆ. ಇಂತಹ ಕಡೆ ಮಾನವೀಯ ಮೌಲ್ಯಗಳಿಗೆ ಅರ್ಥವೇ ಇಲ್ಲ. ಹೀಗೆ ಜಗತ್ತು ಅರಾಜಕತೆಯಿಲ್ಲದೆ, ರಕ್ತಪಾತವಿಲ್ಲದೆ ಇರುವುದು ಸಾಧ್ಯವಿಲ್ಲ ಎನ್ನುವಂತಹ ವಾತಾವರಣ ಸೃಷ್ಟಿಗೆ ಯಾರು ಹೊಣೆ? ವಿಜ್ಞಾನವಿಲ್ಲದೆ ಕುಂಟುತ್ತಿರುವ ಧರ್ಮವನ್ನೂ ಧರ್ಮವಿಲ್ಲದೆ ಕುರುಡಾಗಿರುವ ವಿಜ್ಞಾನವನ್ನೂ ಸರಿಪಡಿಸುವ ಮಂತ್ರವಾದಿ ಎಲ್ಲಿದ್ದಾನೆ? ಬುದ್ಧ, ಬಸವ, ಗಾಂಧಿ ಎಲ್ಲರೂ ಒಟ್ಟಿಗೇ ಮರುಹುಟ್ಟು ಪಡೆಯಬೇಕಾದ ಕಾಲವಿದು.

ನೀತಿ ಮತ್ತು ನ್ಯಾಯಪ್ರಜ್ಞೆಯನ್ನು ಅನುತ್ಪಾದಕವೆಂದು ಭಾವಿಸಿರುವ ಲೋಕಬುದ್ಧಿ ಸಹಜವಾಗಿ ಅವುಗಳನ್ನು ಜಾಣತನದಿಂದ ಪ್ರತ್ಯೇಕವಾಗಿಯೇ ಬಳಸಿಕೊಳ್ಳುತ್ತದೆ. ಈ ಬಗೆಯ ಅಪಬಳಕೆಯ ಅಪಾಯದಿಂದ ಹೊರಬರಬೇಕಾದ ನಮ್ಮ ಯುವ ಸಮುದಾಯ ತನ್ನ ಹೊಣೆಗಾರಿಕೆಯ ಕುರಿತು ಅಖಂಡ ಉಪೇಕ್ಷೆಯಿಂದ ಕೂಡಿರುವುದು ವಿಷಾದನೀಯ.

ಯುವ ಸಾಫ್ಟ್‌ವೇರ್ ಎಂಜಿನಿಯರೊಬ್ಬ ತನ್ನ ಅಪ್ಪನ ಅಣ್ಣ ತೀರಿಕೊಂಡಿರುವುದಾಗಿ ಫೋನ್‌ನಲ್ಲಿ ತಿಳಿಸಿದ್ದನ್ನು ಕೇಳಿ ರೇಗಿ ಹೋಗಿತ್ತು. ದೊಡ್ಡಪ್ಪ ತೀರಿಕೊಂಡರು ಅಂತ ಹೇಳಲಾಗದ ಆತನ ಬಡತನಕ್ಕೆ ಏನೆನ್ನುವುದು? ಮತ್ತೊಬ್ಬ ವೈದ್ಯ ತನ್ನ ಅಜ್ಜಿ ಸತ್ತಾಗ ಬರಲಿಲ್ಲ. ಯಾವುದೋ ಕಾರ್ಯನಿಮಿತ್ತ ಊರಿಗೆ ಬಂದು ಹಿಂತಿರುಗಿ ಹೊರಟಾಗ ಆತನ ಚಿಕ್ಕಪ್ಪ ‘ನಾಳೆ ನಿನ್ನ ಅಜ್ಜಿಯ ವರ್ಷದ ತಿಥಿ, ಮುಗಿಸಿಕೊಂಡು ಹೋಗಬಾರದೇ?’ ಅಂತ ನಿವೇದಿಸಿದರೆ, ‘ನಾಳೆಯ ನನ್ನ ಸಂಬಳವನ್ನು ನೀನು ಕೊಡುತ್ತೀಯ ಹಾಗಾದರೆ?’ ಎಂದು ಕೇಳಿಬಿಟ್ಟ ಭೂಪ! ಮಗನ ಮಾತಿಗೆ ಎದುರಿಗಿದ್ದ ತಾಯಿ, ತಂದೆ ಕೊಕ್ ಎಂದು ನಕ್ಕರು ಪುಣ್ಯವಂತರು!



ನಾವು ಎಂತಹ ಶಿಕ್ಷಣವನ್ನು ಕಲಿಸುತ್ತಿದ್ದೇವೆ? ಕೆಲವರಂತೂ ಗುಬ್ಬಿಗೆ ಈಜು ಕಲಿಸುವ, ಮೀನಿಗೆ ಮರ ಹತ್ತುವುದನ್ನು ಹೇಳಿಕೊಡುವ ಕೊನೆಯಿಲ್ಲದ ಮೂರ್ಖ ಯತ್ನದಲ್ಲಿ ತೊಡಗುತ್ತಾರೆ. ಮಕ್ಕಳು ಓದಬೇಕು, ಓದುತ್ತಲೇ ಇರಬೇಕು. ಆಟ, ಸಂಗೀತ, ಸೂರ್ಯ, ಚಂದ್ರ, ನದಿ, ಬೆಟ್ಟ, ಸಾಗರ, ಹಬ್ಬ, ಉತ್ಸವ, ಜಾತ್ರೆ, ಹೊಲ, ಗದ್ದೆ, ಬಂಧು ಬಳಗಗಳ ಗೊಡವೆಯಿಲ್ಲದಂತೆ ಓದುವುದೂ ಒಂದು ಓದೇ? ಗೆಲಿಲಿಯೊ, ಐನ್‌ಸ್ಟೀನ್‌ನಂತಹವರ ಓದು ಏಕಕಾಲಕ್ಕೆ ಸಂಭ್ರಮವೂ ಧ್ಯಾನವೂ ಆಗಿದ್ದುದರಿಂದಲೇ ಜಾಗತಿಕ ಸಮುದಾಯವನ್ನು ಬೆರಗುಗೊಳಿಸಿತು. ಆ ಬೆರಗು ಇವತ್ತಿಗೂ ಯುವಜನರ ಆಶಾದೀಪವಾಗಿ ಬೆಳಗುವಂತಿದೆ. ಬೆಳಕಿಗೆ ತೆರೆದುಕೊಳ್ಳುವ ಕಣ್ಣುಗಳು ಬೇಕಾಗಿವೆ ಅಷ್ಟೇ.

ಮಕ್ಕಳಿಗೆ ಸಂಪತ್ತಿನ ದೊಡ್ಡ ಗುರಿ ಸಾಧನೆಯ ಪಾಠ ಹೇಳುವ ಪೋಷಕರು, ಅದನ್ನು ನ್ಯಾಯಮಾರ್ಗದ ಮೂಲಕವೇ ತಲುಪುವ ಆದರ್ಶವನ್ನು ಯಾಕೆ ಗಟ್ಟಿ ದನಿಯಲ್ಲಿ ಹೇಳುತ್ತಿಲ್ಲ? ಇದು ಕೇವಲ ಭೌತಿಕ ಅಭಿವೃದ್ಧಿ ಹಿತಾಸಕ್ತಿ ಹೊಂದಿದ, ಆಧ್ಯಾತ್ಮಿಕವಾಗಿ ಸೋತ ಪತನಮುಖಿ ಸಮಾಜವೊಂದರ ಸುಂದರ ಬಾಹ್ಯ ಚಹರೆಯೇ?

ಕಲೆ, ವಿಜ್ಞಾನ ಯಾವುದೇ ಇರಲಿ, ಪುಸ್ತಕಗಳ ಓದು ಹೃದಯವಂತಿಕೆಯನ್ನು ಉದ್ದೀಪಿಸುವಂತಿರಬೇಕು. ಜ್ಞಾನದ ಅಂತ್ಯವಿಲ್ಲದ ಪಯಣದಲ್ಲಿ ಮನುಷ್ಯ ನಾಗರಿಕನಾಗಿ ಮಾಗಬೇಕು. ನಾಗರಿಕತೆಯು ವಂಶಾನುಗತವಾಗಿ ಬರುವಂತಹದ್ದಲ್ಲ. ಅದನ್ನು ಕಠಿಣತಮ ಶ್ರದ್ಧೆ ಮತ್ತು ಪ್ರಯತ್ನಗಳಿಂದ ಗಳಿಸಬೇಕಾಗುತ್ತದೆ. ನಾಗರಿಕರಾಗುವುದು ಎಷ್ಟು ಕಷ್ಟ ಅಂತ ಗಾಂಧಿಯನ್ನು ಓದಿ ಅರ್ಥ ಮಾಡಿಕೊಳ್ಳಬೇಕಿದೆ.

ವಾಚಕರ ವಾಣಿ

ಮಿಡಿ ತಿಂದು ನೋಡಿ!

ಮಲೆನಾಡಿನ ಅಪ್ಪೆಮಿಡಿ ಮಾವಿನಕಾಯಿಗೆ ಅಂಚೆ ಇಲಾಖೆ ಮಾನ್ಯತೆ ಸಿಕ್ಕಿದೆ (ಪ್ರ.ವಾ., ಸೆ. 1). ದೇಶದಾದ್ಯಂತ ಜನರಿಗೆ ಪರಿಚಯಿಸಲು ಅಪ್ಪೆಮಿಡಿಯ ವಿಶೇಷ ಲಕೋಟೆ ಬಿಡುಗಡೆ ಮಾಡಿದ್ದು ಶ್ಲಾಘನೀಯ ಹಾಗೂ ಇದರ ಉತ್ಪನ್ನಗಳನ್ನು ಗ್ರಾಹಕರಿಗೆ ನೇರವಾಗಿ ತಲುಪಿಸಲು ಇಲಾಖೆಯು ವಿಶೇಷ ನೆರವು ಕೂಡ ಕೊಡಲು ಮುಂದೆ ಬಂದಿರುವುದು ಸಂತಸದ ವಿಷಯ. ಇದರಿಂದ ಮುಖ್ಯವಾಗಿ ಗ್ರಾಮೀಣ ಗೃಹ ಕೈಗಾರಿಕೆಗೆ ಉತ್ತೇಜನ ನೀಡಿದಂತೆ ಆಗುತ್ತದೆ. ಹಿಂದೆ ಮಲೆನಾಡಿನ ಕಪ್ಪೆಗಳು ಸುದ್ದಿ ಮಾಡಿದ್ದವು, ಈಗ ಅಪ್ಪೆ! (ಮಿಡಿ).

ಮಲೆನಾಡಿನ ಹಳೆಯ ಮನೆಗಳಲ್ಲಿ ಇಂದಿಗೂ ಪಿಂಗಾಣಿಯ ಹಳೆಯ ಉಪ್ಪಿನಕಾಯಿ ಜಾಡಿಗಳು ಕೊರಳಲ್ಲಿ ಮಣ್ಣುಮೆತ್ತಿಕೊಂಡು ಕತ್ತಲು ಕೋಣೆಯಲ್ಲಿ ಇದ್ದದ್ದು ಈಗ ಬೆಳಕಿಗೆ ಬಂದಂತಾಯಿತು. ಊಟಕ್ಕೆ ಹಾಲುಅನ್ನ ಅಥವಾ ಮಜ್ಜಿಗೆಅನ್ನಕ್ಕೆ ಅಪ್ಪೆಮಿಡಿ ಉಪ್ಪಿನಕಾಯಿ ಇದ್ದರೆ ಸಾಕು ಮತ್ತೇನೂ ಬೇಡ! ರುಚಿ ನೋಡದವರು ಒಮ್ಮೆ ತಿಂದು ನೋಡಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಸಾರ್ವಜನಿಕ ಹಿತಾಸಕ್ತಿಗೆ ಇರಲಿ ಮಾನ್ಯತೆ

ಮಥುರಾದಲ್ಲಿ ಮದ್ಯ, ಮಾಂಸ ಮಾರಾಟ ನಿಷೇಧಿಸಲು ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮುಂದಾಗಿದ್ದಾರೆ (ಪ್ರ.ವಾ., ಸೆ. 1). ಮುಖ್ಯಮಂತ್ರಿಯಾದವರು ಸಾರ್ವಜನಿಕರ ಹಿತಾಸಕ್ತಿಯಂತೆ ನಡೆಯಬೇಕೇ ವಿನಾ ತಮ್ಮ ಇಷ್ಟದಂತೆ ಅಲ್ಲ. ಧಾರ್ಮಿಕ ಸ್ಥಳಗಳಲ್ಲಿ ಮಾಂಸಾಹಾರ ಅಥವಾ ಮದ್ಯ ವರ್ಜ್ಯ ಎಂದರೆ, ಮುಂದೆ ಅಲ್ಲಿಗೆ ಭೇಟಿ ನೀಡುವವರ ಸಂಖ್ಯೆಯೇ ಕಡಿಮೆಯಾಗಬಹುದು. ಅದಲ್ಲದೆ ರಾಜ್ಯದ ಅಯೋಧ್ಯೆ, ಚಿತ್ರಕೂಟ ಮುಂತಾದ ಧಾರ್ಮಿಕ ನಗರಗಳಲ್ಲೂ ಇಂತಹ ನಿಷೇಧ ಮುಂದುವರಿಸಲು ಸರ್ಕಾರ ಚಿಂತನೆ ನಡೆಸಿರುವುದನ್ನು ನೋಡಿದರೆ, ಮೊಹಮ್ಮದ್ ಬಿನ್ ತುಘಲಕನ ಆಡಳಿತ ನೆನಪಿಗೆ ಬರುತ್ತದೆ. ಸನ್ಯಾಸಿಯಾಗಿರುವ ಆದಿತ್ಯನಾಥ ಅವರು ಜನರೆಲ್ಲಾ ಸನ್ಯಾಸಿಯಾಗಬೇಕೆಂದು ಬಯಸಿದಂತಿದೆ. ಯಾವುದೇ ಧಾರ್ಮಿಕ ಸ್ಥಳಗಳಲ್ಲೂ ಇಲ್ಲದ ಹೊಸ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟದ ಜೊತೆಗೆ ಜನರ ಇಷ್ಟಕ್ಕೆ ವಿರುದ್ಧವಾಗಿ ನಡೆದಂತೆಯೂ ಆಗುತ್ತದೆ. ಇಂತಹ ನಡೆ ಸರಿಯಲ್ಲ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ದೂರು ನೀಡದೆ ಕರ್ತವ್ಯ ಮರೆತವರು

ಮೈಸೂರಿನ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಜನಸಾಮಾನ್ಯರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ಪೊಲೀಸ್ ಇಲಾಖೆಯ ವೈಫಲ್ಯವನ್ನು ಖಂಡಿಸಲಾಗುತ್ತಿದೆ. ಆದರೆ ಈ ವೈಫಲ್ಯದಲ್ಲಿ ತಮ್ಮ ಪಾತ್ರವೂ ಇರುವುದನ್ನು ಸಾರ್ವಜನಿಕ ವಲಯ ಮರೆತಂತಿದೆ. ಪ್ರಕರಣದ ಸಂಬಂಧ ಬಂಧಿಸಲಾಗಿರುವ ಆರೋಪಿಗಳು ಆಗಾಗ್ಗೆ ಮೈಸೂರು ನಗರಕ್ಕೆ ಬಂದು ಹೋಗುತ್ತಿದ್ದು, ಇದಕ್ಕೂ ಮೊದಲು ಹಲವು ಬಾರಿ ಸುಲಿಗೆ, ದೌರ್ಜನ್ಯ ಎಸಗಿರುವುದಾಗಿ ಹೇಳಿಕೊಂಡಿದ್ದಾರೆ. ಆದರೆ ತಮ್ಮ ವಿರುದ್ಧ ಯಾವುದೇ ದೂರು ದಾಖಲಾಗದೆ ಇದ್ದದ್ದು ಮತ್ತೆ ಮತ್ತೆ ಇಲ್ಲಿಗೆ ಬರಲು ಪ್ರೇರೇಪಿಸಿತು ಎಂದಿದ್ದಾರೆ. ಈ ಮೊದಲು ದೌರ್ಜನ್ಯಕ್ಕೊಳಗಾದವರು ಪೊಲೀಸರಲ್ಲಿ ಅಂದೇ ದೂರು ಸಲ್ಲಿಸಿ, ಪೊಲೀಸರು ಆಗಲೇ ಸೂಕ್ತ ಕ್ರಮ ಕೈಗೊಂಡಿದ್ದರೆ, ಇಂದು ಒಬ್ಬ ಅಮಾಯಕ ಯುವತಿ ಅತ್ಯಾಚಾರಕ್ಕೆ ಒಳಗಾಗುವುದನ್ನು ತಪ್ಪಿಸಬಹುದಾಗಿತ್ತು.

ಪೊಲೀಸ್ ಠಾಣೆಯ ಮೆಟ್ಟಿಲೇರುವುದೇ ಒಂದು ಅಪರಾಧ ಅನ್ನುವ ಮನೋಭಾವದಿಂದ ಜನಸಾಮಾನ್ಯರು ಆಚೆ ಬರಬೇಕಿದೆ. ಅನ್ಯಾಯಕ್ಕೊಳಗಾದಾಗ, ಅನ್ಯಾಯವನ್ನು ಕಂಡಾಗ ಪೊಲೀಸರ ಬಳಿ ದೂರು ಸಲ್ಲಿಸುವ ಧೈರ್ಯ ತೋರಬೇಕಿದೆ. ಅದಕ್ಕೆ ತಕ್ಕಂತೆ ಪೊಲೀಸರು ಕೂಡ ದೂರುದಾರರನ್ನು ಹೊಸ ತಲೆನೋವು ಎಂಬಂತೆ ನೋಡದೆ, ಗೌರವದಿಂದ ನಡೆಸಿಕೊಳ್ಳಬೇಕಿದೆ.

ಶ್ರವಣ್ ವಾಲಿ, ವಿಜಯಪುರ

ಹಿನ್ನೆಲೆ– ಮುನ್ನೆಲೆ

...ಜನಪ್ರತಿನಿಧಿಗಳಿಗೆ
ಕ್ರಿಮಿನಲ್ ಹಿನ್ನೆಲೆ (ಪ್ರ.ವಾ., ಆ. 24).
ಆದ್ದರಿಂದಲೇ ಅವರಿಗೆ
ರಾಜಕೀಯ ರಂಗದಲ್ಲಿ
ಗಟ್ಟಿ ನೆಲೆ; ಮುನ್ನೆಲೆ ಕೂಡ!
‘ಕ್ರಿಮಿ’ಯಲ್ಲದ ಮನುಷ್ಯನಲ್ಲಿ
ಕ್ರಿಮಿ‘ನಲ್’ ಪ್ರವೃತ್ತಿ null
ಅಥವಾ nil, ಅರ್ಥಾತ್
ಶೂನ್ಯ ಆಗುವುದೆಂದು?

ಸಿ.ಪಿ.ಕೆ., ಮೈಸೂರು

ಅಧಿಕಾರಕ್ಕಾಗಿ ಅನಿವಾರ್ಯ ಕಸರತ್ತು

ಆಳುವವರು ಮಠಾಧೀಶರ ಕಾಲಿಗೆ ಬೀಳುವುದನ್ನು ಆಕ್ಷೇಪಿಸಿರುವ ರವೀಂದ್ರ ಭಟ್ಟ ಅವರ ಲೇಖನ (ಪ್ರ.ವಾ., ಆ. 31) ರಾಜ್ಯದ ರಾಜಕಾರಣ ಹೇಗಿದೆ ಎಂಬುದರ ದಿಕ್ಸೂಚಿ. ಇದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ-ಯವರಿಗೆ ಮಾತ್ರ ಅನ್ವಯಿಸುವಂಥದ್ದಲ್ಲ. ಅವರು ಹಾಗೆ ಮಠಾಧೀಶರ ಕಾಲಿಗೆ ಬೀಳದಿದ್ದರೆ ಮಠದಾರ ಭಕ್ತರು ಉದ್ಧಟತನ ಎಂದು ಭಾವಿಸುವ ಸ್ಥಿತಿ ಇಂದು ಇದೆ. ಜನಸಾಮಾನ್ಯರ ತೆರಿಗೆ ಹಣವನ್ನು ಜಾತಿಕೇಂದ್ರಿತ ಮಠಗಳಿಗೆ ಹಂಚುವುದು ದುರದೃಷ್ಟಕರ. ಅಧಿಕಾರ ಉಳಿಸಿಕೊಳ್ಳಲು, ಸ್ವಾಮೀಜಿಗಳಿಗೆ ಕವರ್ ಹಂಚಿದ್ದನ್ನೂ ಕಂಡಿದ್ದೇವೆ. ಮಠಗಳ ಸ್ವಾಮೀಜಿಗಳು ಯಾವ ಜಾತಿಗೆ ಎಷ್ಟು ಮೀಸಲಾತಿ ಇರಬೇಕೆಂದು ನಿರ್ಧರಿಸುವ ಮಟ್ಟಿಗೆ ಈ ಸ್ಥಿತಿ ತಲುಪಿರುವುದು ದುರದೃಷ್ಟಕರ.

ಅತ್ತಿಹಳ್ಳಿ ದೇವರಾಜ್, ಹಾಸನ

ಅಪಘಾತವೋ ಸ್ವಯಂಕೃತ ಅಪರಾಧವೋ?

ಅತಿವೇಗವಾಗಿ ಹೋಗುತ್ತಿದ್ದ ‘ಔಡಿ’ ಕಾರು ನಿಯಂತ್ರಣ ಕಳೆದುಕೊಂಡು ಫುಟ್‌ಪಾತ್ ಮೇಲೆ ನುಗ್ಗಿ ಬ್ಯಾಂಕೊಂದರ ಗೋಡೆಗೆ ಡಿಕ್ಕಿ ಹೊಡೆದು ಸಂಭವಿಸಿದ ಭೀಕರ ಅಪಘಾತದಲ್ಲಿ 7 ಮಂದಿ ಮೃತಪಟ್ಟಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ಅಪಘಾತವೋ ಸ್ವಯಂಕೃತ ಅಪರಾಧವೋ? ಅಷ್ಟೊಂದು ದುಬಾರಿ ಬೆಲೆಬಾಳುವ ಐಷಾರಾಮಿ ಕಾರು ಅಪಘಾತಕ್ಕೆ ಒಳಗಾಗುತ್ತಿದ್ದಂತೆಯೇ ಏರ್‌ಬ್ಯಾಗ್ ತೆರೆದುಕೊಳ್ಳಲಿಲ್ಲವೇಕೆ? ಒಂದುವೇಳೆ ಇದೇ ಕಾರು ಬೇರೆ ವಾಹನಕ್ಕೆ ಅಥವಾ ನಡೆದುಕೊಂಡು ಹೋಗುತ್ತಿದ್ದವರಿಗೆ ಗುದ್ದಿ ಅವರು ಪ್ರಾಣ ಕಳೆದುಕೊಂಡಿದ್ದರೆ ಯಾರು ಹೊಣೆ? 180- 200 ಕಿ.ಮೀ. ವೇಗದಲ್ಲಿ ಸಂಚರಿಸುವ ಸಾಮರ್ಥ್ಯವುಳ್ಳ ವಾಹನಗಳನ್ನು ಆ ವೇಗದಲ್ಲಿ ರೇಸಿನಲ್ಲಿ ಉಪಯೋಗಿಸಬಹುದೇ ಹೊರತು ಜನನಿಬಿಡ ನಗರಗಳ ರಸ್ತೆಯಲ್ಲಿ ಅಲ್ಲ.

ಪಿ.ಜೆ.ರಾಘವೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಆರೋಗ್ಯ ಅನುತ್ಪಾದಕವಾಯಿತೇ?

• ಡಾ. ಶ್ರೀನಿವಾಸ ಕಕ್ಕಿಲ್ಲಾಯ, ಮಂಗಳೂರು




ಬ್ರಿಟಿಷರ ಆಳ್ವಿಕೆಯನ್ನು ಕಿತ್ತೊಗೆದು 75 ವರ್ಷಗಳಾಗುತ್ತಿರುವ ಈ ಸಂದರ್ಭದಲ್ಲಿ, ಆರ್ಥಿಕ ನೀತಿಯ ದಿಕ್ಕು ಬದಲಿಸಿ 30 ವರ್ಷಗಳಾಗುತ್ತಿವೆ. ಈಗಿನ ಪಥವು ಹಿಮ್ಮುಖವಾಗಿ ಸ್ವಾತಂತ್ರ್ಯ ಸೇನಾನಿಗಳ ಕನಸುಗಳನ್ನು, ಅವರು ಕಟ್ಟಿದ್ದ ಸಾಧನೆ-ಸಂಸ್ಥೆಗಳನ್ನು ಕುಟ್ಟಿ ಹಾಕಿ ಮತ್ತೆ ದಾಸ್ಯದೆಡೆಗೆ ಒಯ್ಯುವಂತಿದೆ.

ಭವಿಷ್ಯದೊಂದಿಗೆ ಮುಖಾಬಿಲೆಗೆ ಬಡತನ, ಅಜ್ಞಾನ, ಅನಾರೋಗ್ಯ, ಅಸಮಾನತೆಗಳನ್ನು ತೊಡೆದುಹಾಕಿ, ಪ್ರತಿಯೊಬ್ಬನಿಗೂ ಪರಿಪೂರ್ಣವಾದ ಜೀವನವನ್ನು ಖಾತರಿಗೊಳಿಸಬಲ್ಲ ಸಾಮಾಜಿಕ, ಆರ್ಥಿಕ, ರಾಜಕೀಯ ಸಂರಚನೆಗಳನ್ನು ರೂಪಿಸಬೇಕು ಎಂದು ಸ್ವಾತಂತ್ರ್ಯದ ಆ ಬೆಳಗಿನಲ್ಲಿ ಪ್ರಧಾನಿ ಜವಾಹರಲಾಲ್ ನೆಹರು ಘೋಷಿಸಿದ್ದರು. ಅದಕ್ಕೆ ಭದ್ರ ಬುನಾದಿಯನ್ನೂ ಸಿದ್ಧಪಡಿಸಿದ್ದರು. ಸ್ವಾತಂತ್ರ್ಯ ಪೂರ್ವದಲ್ಲೇ (1940) ಕರ್ನಲ್ ಸಾಹಿಬ್ ಸಿಂಗ್ ಸೋಖಿ ಅಧ್ಯಕ್ಷತೆಯ ಆರೋಗ್ಯ ಯೋಜನೆಯ ಉಪಸಮಿತಿಯು ಸರ್ಕಾರವೇ ಸಮಗ್ರ ಆರೋಗ್ಯ ಸೇವೆಗಳನ್ನು ಉಚಿತವಾಗಿ ಒದಗಿಸಬೇಕು, ಆಧುನಿಕ ವೈದ್ಯರನ್ನೇ ಸೇವೆಗೆ ನಿಯೋಜಿಸಬೇಕು, ಸಾವಿರ ಜನಸಂಖ್ಯೆಗೆ ಒಬ್ಬ ವೈದ್ಯನಿರಬೇಕು, ಔಷಧಗಳು ಹಾಗೂ ಉಪಕರಣಗಳು ಸಾರ್ವಜನಿಕ ರಂಗದಲ್ಲೇ ಉತ್ಪಾದನೆಯಾಗಬೇಕು ಎಂದು ಸಲಹೆ ನೀಡಿತ್ತು, ಖಾಸಗಿ ಹಿತಾಸಕ್ತಿಗಳಿಗಾಗಲೀ, ಆಯುರ್ವೇದ ಇತ್ಯಾದಿ ಪದ್ಧತಿಗಳಿಗಾಗಲೀ ಯಾವುದೇ ಮಹತ್ವವನ್ನು ಅದು ನೀಡಿರಲಿಲ್ಲ. ಮುಂದೆ 1943ರಲ್ಲಿ ಸರ್ ಜೋಸೆಫ್ ಭೋರ್ ಅವರ ಸಮಿತಿಯು ಕೂಡ ಸೋಖಿ ಸಮಿತಿಯ ಆಶಯಗಳನ್ನೇ ಬೆಂಬಲಿಸಿ, ಪ್ರತಿ 10-20 ಸಾವಿರ ಜನತೆಗೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಪ್ರತಿ ಜಿಲ್ಲೆಗೊಂದು 2,500 ಹಾಸಿಗೆಗಳ ತೃತೀಯ ಸ್ತರ ಆಸ್ಪತ್ರೆ ಇರಬೇಕು ಎಂದು ಸಲಹೆ ನೀಡಿತು.

ನೆಹರೂ ಸರ್ಕಾರದ ಮೊದಲ ಮೂರು ಪಂಚವಾರ್ಷಿಕ ಯೋಜನೆಗಳ ಅಂತ್ಯಕ್ಕೆ 4,631 ಆರೋಗ್ಯ ಕೇಂದ್ರಗಳಾದವು; ದಿಲ್ಲಿಯ ಏಮ್ಸ್, ಚಂಡೀಗಡದ ಪಿಜಿಐ, ಬೆಂಗಳೂರಿನ ಮನೋರೋಗ ಸಂಸ್ಥೆ, ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆ ಮುಂತಾದ ಅತ್ಯುನ್ನತ ವೈದ್ಯಕೀಯ ಹಾಗೂ ಸಂಶೋಧನಾ ಸಂಸ್ಥೆಗಳು ಸ್ಥಾಪನೆಗೊಂಡವು, ಬ್ರಿಟಿಷರು ತೆರೆದಿದ್ದ ಲಸಿಕೆ ಸಂಶೋಧನಾ ಸಂಸ್ಥೆಗಳು ಬಲಗೊಂಡವು. ಹಿಂದುಸ್ತಾನ್ ಆ್ಯಂಟಿಬಯಾಟಿಕ್ಸ್, ಐಡಿಪಿಎಲ್‌ನಂತಹ ಸಂಸ್ಥೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಸ್ಥಾಪನೆಯಾದವು. ಆಧುನಿಕ ವೈದ್ಯಕೀಯ ಕಾಲೇಜುಗಳು 1946ರಲ್ಲಿ 15 ಇದ್ದುದು 1965ರಲ್ಲಿ 81ರಷ್ಟಾದವು, ಸೀಟುಗಳು 1,200ರಿಂದ 10,000ಕ್ಕೇರಿದವು. ಮಲೇರಿಯಾ, ಕ್ಷಯ, ಕುಷ್ಠ, ಕಾಲರಾ ಮುಂತಾದವುಗಳ ನಿಯಂತ್ರಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮಗಳೂ ಆರಂಭಗೊಂಡವು; 1947ರಲ್ಲಿ ಮಲೇರಿಯಾದಿಂದ ವರ್ಷಕ್ಕೆ 8 ಲಕ್ಷ ಜನರು ಸಾವನ್ನಪ್ಪುತ್ತಿದ್ದರೆ, 1961ರಲ್ಲಿ ಇದು 50 ಸಾವಿರಕ್ಕಿಳಿಯಿತು.

ಕೇಂದ್ರದ ನೀತಿಯಲ್ಲೇ ಸಮಸ್ಯೆ



ವೈದ್ಯಕೀಯ ಕ್ಷೇತ್ರದ ಮೇಲೆ ಜಾಗತೀಕರಣ– ಉದಾರೀಕರಣವು ಮಿಶ್ರ ಪ್ರಭಾವ ಬೀರಿದೆ. ಸಂಶೋಧನೆಗಳು ಹೆಚ್ಚಿವೆ. ಹೊಸಹೊಸ ಔಷಧಿ, ಚಿಕಿತ್ಸಾ ಪದ್ಧತಿಗಳು ಬಂದಿವೆ. ಜತೆಗೆ ಅವು ದುಬಾರಿಯೂ ಆಗಿವೆ. ಈ ವಿಚಾರದಲ್ಲಿ ಗ್ಯಾಟ್ ಒಪ್ಪಂದವನ್ನು ದೂಷಿಸುವುದಕ್ಕಿಂತ ಕೇಂದ್ರ ಸರ್ಕಾರದ ನೀತಿಗಳನ್ನು ಪ್ರಶ್ನಿಸಬೇಕಾಗಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಹಲವು ಸಂಶೋಧನೆಗಳಾಗಿವೆ ನಿಜ, ಆದರೆ ಖಾಸಗಿ ಸಂಸ್ಥೆಗಳೇ ಹೆಚ್ಚು ಸಂಶೋಧನೆಯಲ್ಲಿ ತೊಡಗಿವೆ. ಸಂಶೋಧನೆಗೆ ಹಾಕಿದ ಹಣವನ್ನು ಅವರು ತೆಗೆಯದೇ ಬಿಡುತ್ತಾರೆಯೇ? ಆ ಕಾರಣಕ್ಕೆ ಔಷಧಿಗಳು ದುಬಾರಿ ಆಗಿವೆ. ಇನ್ನೊಂದೆಡೆ, ಎಷ್ಟೇ ಉತ್ತಮ ವೈದ್ಯರಾದರೂ ಚಿಕಿತ್ಸೆಗೆ ಆಧುನಿಕ ತಂತ್ರಜ್ಞಾನ–ಔಷಧಿಗಳು ಬೇಕಲ್ಲವೇ?

ಇಂಗ್ಲೆಂಡ್, ಅಮೆರಿಕದಂಥ ರಾಷ್ಟ್ರಗಳ ವೈದ್ಯಕೀಯ ನೀತಿಯಲ್ಲಿ ಒಂದು ಸ್ಪಷ್ಟತೆ ಇದೆ. ನಮ್ಮ ನೀತಿಗಳಿಂದಾಗಿ ಜಾಗತಿಕ ಮಟ್ಟದಲ್ಲಿ ದೇಶದ ಮಾನ ಹೋಗುತ್ತಿದೆ. ಆರೋಗ್ಯ ಸಚಿವಾಲಯ ಇರುವಾಗಲೇ ಆಯುಷ್‌ಗೆ ಪ್ರತ್ಯೇಕ ಸಚಿವಾಲಯ ಮಾಡಿದ್ದಾರೆ. ಹಾಗಾದರೆ 'ಆಯುಷ್'ಗೂ 'ಆರೋಗ್ಯ'ಕ್ಕೂ ಸಂಬಂಧವೇ ಇಲ್ಲವೇ? ಹಾಗಿದ್ದರೆ ಪ್ರತಿ ಪದ್ಧತಿಗೊಂದು ಸಚಿವಾಲಯ ಮಾಡಲಿ.

ಹಲವಾರು ಕಾಲೇಜುಗಳು ಮತ್ತು ಸಂಸ್ಥೆಗಳು ಸಂಶೋಧನೆ ನಡೆಸುತ್ತಿವೆ. ಇವುಗಳನ್ನು ಸರ್ಕಾರ ಪ್ರೋತ್ಸಾಹಿಸಬೇಕು. ಸರ್ಕಾರವು ಸಂಶೋಧನೆಗೆ ನೀಡಿದ ಅನುದಾನ ಪೋಲಾದ ಕಾರಣ, ನಿವಾರಿಸಲಾಗದೇ ಖಾಸಗೀಕರಣಕ್ಕೆ ಒತ್ತು ನೀಡಿರಬಹುದು. ನಮ್ಮ ಆರೋಗ್ಯ ವಲಯ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂಬುದರ ಸೂಚನೆ ಇದು.

ಡಾ. ಎಂ. ಅಚ್ಯುತ ಆರ್. ಕುಡ್ವ, ಭಾರತೀಯ ವೈದ್ಯಕೀಯ ಸಂಘ ಮಂಗಳೂರು ಘಟಕದ ಅಧ್ಯಕ್ಷ

ಉದಾರೀಕರಣದ ಲಾಭವೇ ಹೆಚ್ಚು

ಉದಾರೀಕರಣದಿಂದ ವೈದ್ಯಕೀಯ ಕ್ಷೇತ್ರಕ್ಕೆ ಪ್ರಯೋಜನ ಆಗಿದೆ. ವಿಶೇಷವಾಗಿ ಔಷಧ ಮತ್ತು ವೈದ್ಯಕೀಯ ಉಪಕರಣಗಳ ತಯಾರಿಕೆಗೆ ಹೆಚ್ಚಿನ ಒತ್ತು ಸಿಕ್ಕಿದೆ. ಆರೋಗ್ಯ ಸೇವೆಯೂ ಉತ್ತಮವಾಗಿದೆ. ಇದರಿಂದಾಗಿ ಈ ಕ್ಷೇತ್ರದಲ್ಲಿ ದೇಶ ಸ್ವಾವಲಂಬನೆ ಸಾಧಿಸಲು ಸಾಧ್ಯವಾಗಿದೆ. ಉತ್ತಮ ಗುಣಮಟ್ಟದ ಆಸ್ಪತ್ರೆಗಳ ಸ್ಥಾಪನೆಯಾಗಿ ರೋಗಿಗಳಿಗೆ ಶ್ರೇಷ್ಠ ಮಟ್ಟದ ಆರೈಕೆ ಸಿಗುತ್ತಿದೆ. ಜಾಗತಿಕವಾಗಿ ವೈದ್ಯಕೀಯ ವಿಜ್ಞಾನ ಬೆಳೆದಂತೆಲ್ಲ ಅದಕ್ಕೆ ಪೂರಕ ಆರೋಗ್ಯ ವ್ಯವಸ್ಥೆ, ತಂತ್ರಜ್ಞಾನ, ಚಿಕಿತ್ಸಾ ಪದ್ಧತಿ ಹೊಂದುವುದೂ ಅಷ್ಟೇ ಮುಖ್ಯ. ಭಾರತ ಮಾತ್ರವಲ್ಲ ಯಾವುದೇ ದೇಶವಿರಲಿ ಉದಾರೀಕರಣಕ್ಕೆ ತೆರೆದುಕೊಂಡ ಬಳಿಕ ಸಾಕಷ್ಟು ಲಾಭ ಪಡೆದಿವೆ. ಕಮ್ಯುನಿಸ್ಟ್ ರಾಷ್ಟ್ರಗಳೂ ಇದಕ್ಕೆ ಹೊರತಾಗಿಲ್ಲ. ಉದಾರೀಕರಣ ಪೂರ್ವದ ವ್ಯವಸ್ಥೆ ಮತ್ತು ಉದಾರೀಕರಣ ವ್ಯವಸ್ಥೆ ಎಂದು ತುಲನೆ ಮಾಡಲು ಸಾಧ್ಯವಿಲ್ಲ. ಹುಟ್ಟಿಕೊಳ್ಳುವ ಹೊಸ ಹೊಸ ಕಾಯಿಲೆಗಳು ಅದನ್ನು ನಿಭಾಯಿಸಲು ರೂಪುಗೊಳ್ಳುವ ಆಧುನಿಕ ತಂತ್ರಜ್ಞಾನ ಮತ್ತು ಔಷಧಗಳ ಲಭ್ಯತೆ ಮುಖ್ಯವಾಗುತ್ತದೆ. ಉದಾರೀಕರಣ ವ್ಯವಸ್ಥೆಯಲ್ಲಿ ಇವೆಲ್ಲವನ್ನೂ ತ್ವರಿತವಾಗಿ ಪಡೆಯಬಹುದು.

ಕಾರ್ಪೊರೇಟ್ ಹಿಡಿತಕ್ಕೆ ಆರೋಗ್ಯ ವಲಯ ಒಳಪಟ್ಟಿದೆ ಎಂಬ ವಾದಕ್ಕೆ ಯಾವುದೇ ಆಧಾರವಿಲ್ಲ.

ಡಾ.ಮಹೇಶ್ ನಲ್ವಾಡ್, ಸಂಚಾಲಕ, ಬಿಜೆಪಿಯ ವೈದ್ಯಕೀಯ ಪ್ರಕೋಷ್ಠ



ನೆಹರೂ ನಂತರ ಈ ಸಾಧನೆಗಳು ಮುಂದುವರಿಯಲಿಲ್ಲ. ತೊಂಬತ್ತರ ಆರಂಭದಲ್ಲಿ ಹೊಸ ಆರ್ಥಿಕ ನೀತಿಯೆಡೆಗೆ ಹೊರಳಿದಾಗ ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಗಳು ಅನುತ್ಪಾದಕವೆನಿಸಿದವು, ಸಾರ್ವಜನಿಕ ಆಸ್ಪತ್ರೆಗಳಲ್ಲಿ ಶುಲ್ಕಗಳೂ ಬಂದವು, ಉನ್ನತ ಶಿಕ್ಷಣ ಖಾಸಗಿಯವರಿಗೆ ವಹಿಸಲ್ಪಟ್ಟಿತು, ಶಿಕ್ಷಣ ಹಾಗೂ ಆರೋಗ್ಯ ಸೇವೆಗಳು ಉಚಿತವಾಗಿರಬೇಕೆಂಬ ಸ್ವಾತಂತ್ರ್ಯೋಧರ ಆಶಯಗಳು ಅಂದೇ ಮಣ್ಣುಪಾಲಾದವು.

ಭೋರ್ ಸಮಿತಿಯನುಸಾರ ಈಗ 1,30,000 ಪ್ರಾಥಮಿಕ ಆರೋಗ್ಯ ಕೇಂದ್ರಗಳಿರಬೇಕಾದಲ್ಲಿ 30,045 ಮಾತ್ರ ಇವೆ, ಇವುಗಳಲ್ಲೂ ಶೇ 24ರಷ್ಟು ಕಡೆ ವೈದ್ಯರಿಲ್ಲ, ಶೇ 35-50ರಷ್ಟು ಸಹಾಯಕ ಸಿಬ್ಬಂದಿಯಿಲ್ಲ. ಇವನ್ನು ಸುಧಾರಿಸುವ ಬದಲಿಗೆ, ಆರೋಗ್ಯ ಕೇಂದ್ರಗಳಿಂದ ಜಿಲ್ಲಾಸ್ಪತ್ರೆಗಳವರೆಗೆ ಎಲ್ಲವನ್ನೂ ಖಾಸಗಿ ಗುತ್ತಿಗೆಗೆ ಒಪ್ಪಿಸಿ, ಉಪಕೇಂದ್ರಗಳನ್ನು ಬದಲಿ ಪದ್ಧತಿ-ಯೋಗಗಳ ಸೌಖ್ಯಾಲಯಗಳನ್ನಾಗಿ ಮಾಡಿ, ಕಾರ್ಪೊರೇಟ್ ಶಕ್ತಿಗಳ ಟೆಲಿಮೆಡಿಸಿನ್ ಜಾಲಕ್ಕೆ ಜೋಡಿಸುವ ಯೋಜನೆಗಳಾಗುತ್ತಿವೆ.

ಭೋರ್ ಸಮಿತಿಯು ರಾಷ್ಟ್ರೀಯ ಉತ್ಪನ್ನದ ಶೇ 15ರಷ್ಟನ್ನು ಆರೋಗ್ಯ ಸೇವೆಗಳಿಗೆ ಒದಗಿಸಬೇಕೆಂದು ಹೇಳಿತ್ತು (ಅತ್ಯುತ್ತಮ ಆರೋಗ್ಯ ಸೇವೆಗಳಿರುವ ದೇಶಗಳಲ್ಲಿ ಶೇ10-11ರಷ್ಟು ವ್ಯಯಿಸಲಾಗುತ್ತಿದೆ). ಹನ್ನೊಂದನೇ ಯೋಜನೆಯಲ್ಲಿ (2007-12) ಇದು ಕೇವಲ ಶೇ 0.9ರಷ್ಟು ಆಯಿತು. ಈಗಿನ ಸರ್ಕಾರವು 2017ರ ಆರೋಗ್ಯ ನೀತಿಯಲ್ಲಿ 2025ಕ್ಕೆ ಶೇ 2.5ರಷ್ಟು ಅನುದಾನವಿರಲಿದೆ ಎಂದು ಹೇಳಿತಾದರೂ, ಅದೆಲ್ಲೂ ಕಾಣುತ್ತಿಲ್ಲ. ಬದಲಿಗೆ, ಕಳೆದ ವರ್ಷದ ಖರ್ಚಿಗಿಂತಲೂ ₹7,000 ಕೋಟಿ ಕಡಿಮೆ ಅನುದಾನ ಒದಗಿಸಿ, ನೀರು-ನೈರ್ಮಲ್ಯಗಳ ಖರ್ಚನ್ನು ಆರೋಗ್ಯ ಸೇವೆಗೆ ಸೇರಿಸಿ, 100 ವರ್ಷಗಳಲ್ಲೇ ಮೊದಲಿಗೆ ಆರೋಗ್ಯಕ್ಕೆ ₹2 ಲಕ್ಷ ಕೋಟಿಗೂ ಮಿಕ್ಕಿ ಹಣ ನೀಡಲಾಗಿದೆ ಎಂದು ಜಾದೂ ಮಾಡಲಾಗಿದೆ.

ಸರ್ಕಾರಿ ಆಸ್ಪತ್ರೆಗಳಿಗೆ ಹಣವೊದಗಿಸದೆ ಕೆಡಿಸಿ, ಆಯುಷ್ಮಾನ್ ಭಾರತ ಇತ್ಯಾದಿ ಹೆಸರಲ್ಲಿ ಜನರನ್ನು ದೊಡ್ಡ ಖಾಸಗಿ ಆಸ್ಪತ್ರೆಗಳತ್ತ ತಳ್ಳಲಾಗುತ್ತಿದೆ. ಸಮಗ್ರ ಆರೋಗ್ಯ ಸೇವೆಗಳಿಗೆ ಪ್ರತಿ ವರ್ಷ ಬೇಕಾಗುವ ಕನಿಷ್ಠ ₹2.15 ಲಕ್ಷ ಕೋಟಿಗಳನ್ನು ಸರ್ಕಾರವು ಒದಗಿಸದಿರುವುದರಿಂದ ಶೇ 80ರಷ್ಟು ಖರ್ಚನ್ನು ಜನರೇ ವ್ಯಯಿಸಿ ಬಡತನಕ್ಕೆ ತಳ್ಳಲ್ಪಡುತ್ತಿದ್ದಾರೆ.

ಈ ಹಿಂದೆ ಅನೇಕ ವೈದ್ಯರು ತಮ್ಮ ಊರುಗಳಲ್ಲಿ ಸಣ್ಣ ಖಾಸಗಿ ಆಸ್ಪತ್ರೆಗಳನ್ನು ನಡೆಸಿ ಶೇ 70ರಷ್ಟು ಆರೋಗ್ಯ ಸೇವೆಗಳನ್ನು ಒದಗಿಸುವಂತಾಗಿತ್ತು. ಈಗ ಬಗೆಬಗೆಯ ನಿಯಂತ್ರಣಗಳನ್ನು ಹೇರಿ ಅವನ್ನು ನಡೆಸಲು ಅಸಾಧ್ಯವಾಗುವಂತೆ ಮಾಡಲಾಗುತ್ತಿದೆ. ಅತ್ತ ಕಾರ್ಪೊರೇಟ್ ಶಕ್ತಿಗಳಿಗೆ ನಗರಗಳಲ್ಲಿ ಬೃಹತ್ ಆಸ್ಪತ್ರೆಗಳನ್ನು ನಿರ್ಮಿಸಲು ಎಕರೆಗಟ್ಟಲೆ ಜಾಗವನ್ನೂ, ಎಲ್ಲ ಬಗೆಯ ವಿನಾಯಿತಿಗಳನ್ನೂ ನೀಡಲಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳನ್ನಷ್ಟೇ ಅಲ್ಲ, ಸಣ್ಣ ಖಾಸಗಿ ಆಸ್ಪತ್ರೆಗಳನ್ನೂ ನುಂಗಲು ಕಾರ್ಪೊರೇಟ್ ಆಸ್ಪತ್ರೆಗಳಿಗೆ ಅನುಕೂಲ ಒದಗಿಸಲಾಗುತ್ತಿದೆ.

ಸಾವಿರ ಜನರಿಗೊಬ್ಬ ಆಧುನಿಕ ವೈದ್ಯನಿರಬೇಕೆಂಬ ಗುರಿಯನ್ನು ತಲುಪಲಾಗಿಲ್ಲ; 1,500 ಜನರಿಗೊಬ್ಬನಂತೆ 9 ಲಕ್ಷದಷ್ಟು ವೈದ್ಯರಿದ್ದಾರೆ, ಜೊತೆಗೆ 8 ಲಕ್ಷದಷ್ಟು ಬದಲಿ ಚಿಕಿತ್ಸಕರನ್ನೂ ತಯಾರಿಸಲಾಗಿದೆ. ಗ್ರಾಮೀಣ ಆರೋಗ್ಯ ಅಭಿಯಾನದಲ್ಲಿ ಉತ್ತಮ ಸಂಬಳಕ್ಕೆ ಆಧುನಿಕ ವೈದ್ಯರನ್ನು ನೇಮಿಸುವ ಬದಲು ಕಡಿಮೆ ಸಂಬಳಕ್ಕೆ 12,000ದಷ್ಟು ಬದಲಿ ಚಿಕಿತ್ಸಕರನ್ನು ನೇಮಿಸಲಾಗಿದೆ. ಹೊಸ ಶಿಕ್ಷಣ ನೀತಿಯಲ್ಲಿ ಆಧುನಿಕ ವೈದ್ಯಕೀಯ ಶಿಕ್ಷಣದಲ್ಲಿ ಬದಲಿ ಪದ್ಧತಿಗಳನ್ನು ಕಲಬೆರಕೆ ಮಾಡುವ ಪ್ರಸ್ತಾವವಿದ್ದು, ಬೆರಕೆಗಳಿಗೆ ಪರವಾನಿಗೆ ಕೊಡಲು ಎನ್‌ಎಂಸಿಯನ್ನೂ ತರಲಾಗಿದೆ. ಒಟ್ಟಿನಲ್ಲಿ ಆಧುನಿಕ ವೈದ್ಯವಿಜ್ಞಾನವೇ ಆರೋಗ್ಯ ಸೇವೆಗಳನ್ನೊದಗಿಸಬೇಕೆಂಬ ಆಶಯಗಳನ್ನೂ ಹೂತು ಹಾಕಿ, ಅದರ ಮಾನಗೆಡಿಸಿ, ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ಅಲ್ಪ ಸಂಬಳಕ್ಕೆ ಗುಲಾಮರಾಗಲು ಬೆರಕೆ ವೈದ್ಯರು ತಯಾರಾಗಲಿದ್ದಾರೆ.

ವೈದ್ಯಕೀಯ ಶಿಕ್ಷಣವನ್ನೂ ಕಾರ್ಪೊರೇಟ್ ಚರಣಗಳಿಗೆ ಅರ್ಪಿಸಲಾಗುತ್ತಿದೆ. ನೆಹರೂ ಕಾಲಾಂತ್ಯಕ್ಕೆ 81 ವೈದ್ಯಕೀಯ ಕಾಲೇಜುಗಳಿದ್ದು, ಅವುಗಳಲ್ಲಿ ಕೇವಲ 7 (ಶೇ9) ಖಾಸಗಿ ಕಾಲೇಜುಗಳಿದ್ದರೆ, ಈಗ ಒಟ್ಟು ಕಾಲೇಜುಗಳು 554ಕ್ಕೆ ಏರಿ, ಸೀಟುಗಳು 10 ಸಾವಿರದಿಂದ 83 ಸಾವಿರವಾಗಿವೆ, ಅವುಗಳಲ್ಲಿ 269 (ಶೇ 49) ಖಾಸಗಿ ಕಾಲೇಜುಗಳಾಗಿದ್ದು, 40 ಸಾವಿರ ಸೀಟುಗಳನ್ನು ಹೊಂದಿವೆ. ಈಗ ಎಂಸಿಐಯನ್ನು ಕಿತ್ತೊಗೆದು ಎನ್‌ಎಂಸಿಯನ್ನು ತಂದು, ಕಾರ್ಪೊರೇಟ್ ಶಕ್ತಿಗಳು ಸೇರಿದಂತೆ ಯಾರು ಬೇಕಾದರೂ, ಎಲ್ಲಿ ಬೇಕಾದರೂ, ಇನ್ನಷ್ಟು ಖಾಸಗಿ ಕಾಲೇಜುಗಳನ್ನು ತೆರೆಯುವುದಕ್ಕೆ ದಾರಿ ತೆರೆಯಲಾಗಿದೆ.

ನೆಹರೂ ಕಾಲದ ಸರ್ಕಾರಿ ಔಷಧ-ಲಸಿಕೆಗಳ ಕಂಪೆನಿಗಳು ಕೂಡ ರೋಗಗ್ರಸ್ತವಾಗಿವೆ, ಮುಚ್ಚಿವೆ. ಔಷಧಗಳ ಮೇಲೆ ವಿದೇಶಿ ಕಂಪೆನಿಗಳ ಹಕ್ಕು ಸ್ವಾಮ್ಯತೆಯನ್ನು ನಿರಾಕರಿಸಿ ನಮ್ಮ ಕಂಪೆನಿಗಳಿಗೆ ಆ ಔಷಧಗಳನ್ನು ಉತ್ಪಾದಿಸಲು ಇತ್ತೀಚಿನವರೆಗೂ ಅವಕಾಶ ನೀಡಲಾಗುತ್ತಿತ್ತು. ಈಗ ಅದಕ್ಕೆ ಅರ್ಜಿ ಹಾಕುವುದನ್ನೇ ತಡೆಯಲಾಗುತ್ತಿದೆ. ಕೊರೊನಾ ಲಸಿಕೆಯನ್ನು ಹಕ್ಕು ಸ್ವಾಮ್ಯತೆಯಿಂದ ಹೊರಗಿರಿಸಬೇಕೆಂಬ ದಕ್ಷಿಣ ಆಫ್ರಿಕಾದ ಪ್ರಸ್ತಾವಕ್ಕೆ ಭಾರತವು ಅಲ್ಲಿ ಜೊತೆಯಾಗಿದ್ದರೂ, ಇಲ್ಲಿ ಖಾಸಗಿ ಕಂಪೆನಿಗಳ ತಾಳಕ್ಕೆ ಕುಣಿದು, ಲಸಿಕೆ ಅಭಿವೃದ್ಧಿ ಪಡಿಸುವಲ್ಲಿ ಐಸಿಎಂಆರ್, ಎನ್‌ಐವಿ ನೀಡಿದ್ದ ಕೊಡುಗೆಗಳನ್ನೇ ಅಡಗಿಸಲಾಗಿದೆ.

ಹೊಸ ಆರ್ಥಿಕ ನೀತಿಯ ಪರಿಣಾಮಗಳೆಲ್ಲವೂ ಕೊರೊನಾ ನಿಭಾವಣೆಯಲ್ಲೇ ಎದ್ದು ತೋರಿವೆ. ನೆಹರೂ ಕಾಲದಲ್ಲಿ ಸರ್ಕಾರಿ ಸಂಸ್ಥೆಗಳ ತಜ್ಞರ ನೇತೃತ್ವದಲ್ಲಿ ಮಲೇರಿಯಾದಂತಹ ರೋಗಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಾಧ್ಯವಾಗಿದ್ದರೆ, ಈಗ ಕೊರೊನಾ ಸೋಂಕನ್ನು ನಿಭಾಯಿಸುವಲ್ಲಿ ತಜ್ಞರೆಲ್ಲರನ್ನೂ ಮೂಲೆಗೆ ತಳ್ಳಿ ಕಾರ್ಪೊರೇಟ್ ಧಣಿಗಳನ್ನೇ ತಜ್ಞರನ್ನಾಗಿಸಿ, ಅವರ ಸಲಹೆಗಳಂತೆಯೇ ಲಾಕ್‌ಡೌನ್, ಶಾಲೆ ಬಂದ್, ಅಲ್ಲಲ್ಲಿ ಆರ್‌ಟಿ ಪಿಸಿಆರ್, ಮತ್ತೀಗ ಕಡ್ಡಾಯ ಲಸಿಕೆ ಎಂದೆಲ್ಲ ಹೇರಲಾಗುತ್ತಿದೆ, ಸೋಂಕೆಂಬ ಪರಿಕಲ್ಪನೆಯೇ ಇಲ್ಲದ ಬದಲಿ ಪದ್ಧತಿಗಳೇ ಕೊರೊನಾ ಸೋಂಕಿಗೆ ಪರಿಹಾರವೆಂಬಂತೆ ಬಿಂಬಿಸಲಾಗುತ್ತಿದೆ.

ಕಾಂಕ್ರೀಟಿಗೆ ಸುರಿಯಲು ಹಣವಿದೆ, ಆರೋಗ್ಯ-ಶಿಕ್ಷಣಗಳಿಗೆ ಇಲ್ಲವಾಗಿದೆ. ಹಾಗಾಗಿ ಆರೋಗ್ಯ ಸೇವೆಗಳು ಕಾರ್ಪೊರೇಟ್ ಮುಷ್ಟಿಯೊಳಗಾಗಿ ಹಿಮ್ಮುಖವಾಗಿವೆ.

(ಲೇಖಕ: ವೈದ್ಯ)

ಮಹಾಪಂಚಾಯಿತಿಗೆ ರೈತರ ಸಿದ್ಧತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿವಿಧ ವಿರೋಧ ಪಕ್ಷಗಳು ಮಹಾಪಂಚಾಯಿತಿಗೆ ಬೆಂಬಲ ಕೊಟ್ಟಿವೆ
- ಪಕ್ಷಗಳ ಮುಖಂಡರನ್ನು ವೇದಿಕೆಗೆ ಆಹ್ವಾನಿಸಲು ಇನ್ನೂ ನಿರ್ಧರಿಸಿಲ್ಲ

ಲಖನೌ: ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆಯ ನೇತೃತ್ವ ವಹಿಸಿರುವ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು), ಉತ್ತರ ಪ್ರದೇಶದ ಮುಜಫ್ಫರ್‌ನಗರದಲ್ಲಿ ಭಾನುವಾರ ಭಾರಿ ಸಮಾವೇಶ ನಡೆಸಲು ಉದ್ದೇಶಿಸಿದೆ.

ಈ ಮಹಾಪಂಚಾಯಿತಿಯಲ್ಲಿ ಲಕ್ಷಾಂತರ ರೈತರು ಭಾಗವಹಿಸಲಿದ್ದಾರೆ ಎಂದು ಬಿಕೆಯು ಅಧ್ಯಕ್ಷ ನರೇಶ್ ಟಿಕಾಯತ್ ಹೇಳಿದ್ದಾರೆ. ಮುಜಫ್ಫರ್‌ನಗರದ ಸರ್ಕಾರಿ ಕಾಲೇಜು ಮೈದಾನದಲ್ಲಿ ಈ ಸಮಾವೇಶ ನಡೆಯಲಿದೆ.

ವಿವಿಧ ಜಾತಿ ಪಂಚಾಯಿತಿಗಳ ನಾಯಕರು ಉತ್ತರ ಪ್ರದೇಶದ ಗ್ರಾಮಗಳಿಗೆ ಭೇಟಿ ಕೊಟ್ಟು ಮಹಾಪಂಚಾಯಿತಿಗೆ ಜನರನ್ನು ಸೇರಿಸಲು ಯತ್ನಿಸುತ್ತಿದ್ದಾರೆ.

ಮುಜಫ್ಫರ್‌ನಗರದ ಮಹಾಪಂಚಾಯಿತಿಯು ದೇಶದ ಅತ್ಯಂತ ದೊಡ್ಡ ರೈತ ಸಮಾವೇಶ ಎನಿಸಿಕೊಳ್ಳಲಿದೆ ಎಂದು ಟಿಕಾಯತ್ ಅವರು ತಿಳಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರವು ರೈತರಿಗೆ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಆಡಳಿತಾರೂಢ ಬಿಜೆಪಿ ಹೇಳಿದೆ. ಉತ್ತರ ಪ್ರದೇಶದಾದ್ಯಂತ 'ಕಿಸಾನ್ ಸಂಪರ್ಕ ಯಾತ್ರೆ' ನಡೆಸಲು ಬಿಜೆಪಿ ಉದ್ದೇಶಿಸಿದೆ. ರೈತರ ಚಳವಳಿಯು ಪ್ರಬಲವಾಗಿರುವ ರಾಜ್ಯದ ಪಶ್ಚಿಮ ಭಾಗಕ್ಕೆ ಹೆಚ್ಚು ಗಮನ ನೀಡಲು ನಿರ್ಧರಿಸಿದೆ.



ಘೋಲ್ ಮೀನು ವಿಂಗಡಿಸುತ್ತಿರುವ ವರ್ತಕರು

ಕೋಟಿ ತಂದುಕೊಟ್ಟ ಘೋಲ್ ಮೀನು

ಪ್ರಜಾವಾಣಿ ವಾರ್ತೆ

ಪಾಲ್ಘರ್: ಆಗಸ್ಟ್ ತಿಂಗಳ ಮಧ್ಯಭಾಗದಲ್ಲಿ ಪಾಲ್ಘರ್‌ನ ಮುರ್ಬೆಯ ಮೀನುಗಾರ ಚಂದ್ರಕಾಂತ್ ತಾರೆ ಅವರು ಸಂಗಡಿಗರ ಜೊತೆ ಮೀನು ಹಿಡಿಯಲು ಹೊರಟಾಗ, ಹಿಂದಿರುಗುವ ಹೊತ್ತಿಗೆ ತಾನು ಕೋಟ್ಯಧಿಪತಿ ಆಗುತ್ತೇನೆ ಎಂಬ ಯಾವ ಸುಳಿವೂ ಅವರಿಗೆ ಇರಲಿಲ್ಲ. ಆದರೆ, ಕಿನಾರೆಗೆ ಹಿಂದಿರುಗಿದಾಗ ಅವರು ಕೋಟ್ಯಧಿಪತಿ. ಅವರನ್ನು ಕೋಟ್ಯಧಿಪತಿ ಮಾಡಿದ್ದು ಮೀನು.

ಮಹಾರಾಷ್ಟ್ರ-ಗುಜರಾತ್ ಕರಾವಳಿಯ ವಾಧ್ವಾನ್‌ನಿಂದ ಸುಮಾರು 20ರಿಂದ 25 ನಾಟಿಕಲ್ ಮೈಲುಗಳಷ್ಟು ದೂರದಲ್ಲಿ, ತಾರೆ ಮತ್ತು ಅವರ ತಂಡವು 157 ಘೋಲ್ ಮೀನುಗಳನ್ನು ಹಿಡಿಯಿತು. ಇವುಗಳನ್ನು 'ಸೀ ಗೋಲ್ಡ್' (ಕಡಲ ಸ್ವರ್ಣ) ಎಂದೇ ಕರೆಯಲಾಗುತ್ತದೆ.

ಅವರು ಇನ್ನೂ ಸಮುದ್ರದಲ್ಲಿದ್ದಾಗಲೇ, ಈ ಸುದ್ದಿ ಮೀನುಗಾರಿಕಾ ವಲಯದಲ್ಲಿ ಕಾಳ್ಗಿಚ್ಚಿನಂತೆ ಹರಡಿತು. ಆಗಸ್ಟ್ 28ರಂದು ಮುರ್ಬೆಗೆ ವಾಪಸಾದಾಗ, ಜನರು ಮೀನು ಕೊಳ್ಳಲು ಸಾಲುಗಟ್ಟಿ ನಿಂತಿದ್ದರು. ಹರಾಜಿನಲ್ಲಿ ಸುಮಾರು ₹1.33 ಕೋಟಿಗೆ ಮೀನು ಮಾರಾಟವಾಯಿತು.

ಘೋಲ್ ಮೀನು ಅಥವಾ ಪ್ರೋಟೋನಿಬಿಯಾ ಡಯಾಕಾಂತಸ್ ಅನ್ನು ಸಾಮಾನ್ಯವಾಗಿ ಕಪ್ಪು ಚುಕ್ಕೆಗಳ ಕ್ರೋಕರ್ ಎಂದು ಕರೆಯಲಾಗುತ್ತದೆ. ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶದ ಮೀನು ಇದು.

ಈ ಮೀನನ್ನು ಅತ್ಯಂತ ರುಚಿಕರ ಖಾದ್ಯವೆಂದು ಪರಿಗಣಿಸಲಾಗಿದೆ. ಮೀನು ಹೊಂದಿರುವ ಔಷಧೀಯ ಗುಣಗಳಿಂದಾಗಿ ಇದಕ್ಕೆ ಭಾರಿ ಬೇಡಿಕೆ ಇದೆ. ಶಸ್ತ್ರಚಿಕಿತ್ಸೆಯ ಬಳಿಕ ಹಾಕುವ ಹೊಲಿಗೆಯ ದಾರವನ್ನೂ ಈ ಮೀನಿನಿಂದ ತಯಾರಿಸುತ್ತಾರೆ. ಈ ದಾರದ ಹೊಲಿಗೆಯು ಕೆಲ ದಿನಗಳಲ್ಲಿ ಕರಗಿ ಹೋಗುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಅಮೆರಿಕದ ಪಡೆಗಳು ಅಫ್ಗನ್‌ನಿಂದ ಕಾಲ್ಕೀಳುತ್ತಿದ್ದಂತೆಯೇ ತಾಲಿಬಾನ್ ಹುಚ್ಚಾಟ ಶುರುವಾಗಿದ್ದು, ವಿರೋಧಿ ವ್ಯಕ್ತಿಯೊಬ್ಬನನ್ನು ಹೆಲಿಕಾಪ್ಟರ್‌ನಲ್ಲಿ ನೇತುಹಾಕಿ ಹಾರಾಟ ಮಾಡಲಾಗಿದೆ' ಎಂಬ ಉಲ್ಲೇಖವಿರುವ ವಿಡಿಯೊಗಳು ಕಳೆದ ಎರಡು ದಿನಗಳಿಂದ ಭಾರಿ ಚರ್ಚೆಗೆ ವಸ್ತುವಾಗಿವೆ. ಅಮೆರಿಕದ ಬ್ಲ್ಯಾಕ್‌ಹಾಕ್ ಹೆಲಿಕಾಪ್ಟರ್ ಮೂಲಕ ತಾಲಿಬಾನ್ ಈ ಕೃತ್ಯ ಎಸಗಿದೆ ಎನ್ನಲಾಗಿದೆ. ಭಾರತದ ಬಹುತೇಕ ಸುದ್ದಿಸಂಸ್ಥೆಗಳು ಈ ವಿಡಿಯೊವನ್ನು ಪ್ರಸಾರ ಮಾಡಿವೆ. ಸಾವಿರಾರು ಜನರು ಈ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.



ಈ ವಿಡಿಯೊದಲ್ಲಿರುವ ವ್ಯಕ್ತಿ ತಾಲಿಬಾನ್‌ಗೆ ಸೇರಿದವನು ಎಂದು ಆಲ್ಟ್‌ನ್ಯೂಸ್ ವರದಿ ಮಾಡಿದೆ. ತಾಲಿಬಾನ್ ಪ್ರತೀಕಾರಕ್ಕಾಗಿ ಹೀಗೆ ಮಾಡಿಲ್ಲ. ಕಂದಹಾರ್‌ನಲ್ಲಿರುವ ಗವರ್ನರ್ ಕಚೇರಿ ಮೇಲೆ ಸಂಘಟನೆಯ ಧ್ವಜವನ್ನು ಅಳವಡಿಸಲು ಈ ರೀತಿ ಯತ್ನಿಸಲಾಗಿದೆ ಎಂಬುದಾಗಿ ಅಫ್ಗನ್‌ನ ಅಸ್ವಾಕಾ ಸುದ್ದಿಸಂಸ್ಥೆ ಟ್ವೀಟ್ ಮಾಡಿದೆ. ಎಲ್ಲೆಡೆ ವರದಿಯಾಗಿರುವಂತೆ ಆ ವ್ಯಕ್ತಿಯ ಕುತ್ತಿಗೆಗೆ ಹಗ್ಗ ಕಟ್ಟಿಲ್ಲ. ಬದಲಾಗಿ ಆತನ ಬೆನ್ನಿಗೆ ಹಗ್ಗ ಕಟ್ಟಲಾಗಿದೆ ಎಂಬ ಅಂಶವು ಸಂಸ್ಥೆ ಹಂಚಿಕೊಂಡಿರುವ ವಿಡಿಯೊದಲ್ಲಿ ಕಾಣುತ್ತದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಶಾಂತಿಯ ಮೂಲ

ಪಿಡಿ ಗಳಿಸು ಭುಜಿಸೊಡೆಯನಾಗೆನ್ನುವುದು ಮೋಹ |
ಕೊಡು ಸಲಿಸು ಸೇವೆಗೈಯೆನ್ನುವುದು ಕರುಣೆ ||
ಬಿಡು ನೀನು ನಾನುಗಳ, ವಿಶ್ವಾತ್ಮಪದವನೀ |
ನಡರೆನ್ನುವುದು ಶಾಂತಿ – ಮಂಕುತಿಮ್ಮ || 456||

ಪದ-ಅರ್ಥ: ಪಿಡಿ = ಹಿಡಿ, ಭುಜಿಸೊಡೆಯನಾಗೆನ್ನು-ವುದು = ಭುಜಿಸು(ತಿನ್ನು) + ಒಡೆಯನಾಗು + ಎನ್ನುವುದು, ಸೇವೆಗೈಯೆನ್ನುವುದು-ಸೇವೆಗೈ(ಸೇವೆ ಮಾಡು) + ಎನ್ನುವುದು, ವಿಶ್ವಾತ್ಮಪದವನೀನ-ಡೆರೆನ್ನುವುದು = ವಿಶ್ವಾತ್ಮಪದವನು + ನೀನು- + ಅಡರು(ಹೊಂದು) + ಎನ್ನುವುದು,

ವಾಚ್ಯಾರ್ಥ: ಹಿಡಿ, ಗಳಿಸು, ಅನುಭವಿಸು, ಒಡೆಯನಾಗು ಎನ್ನುವುದು ಮೋಹ. ನೀಡು, ಸಲ್ಲಿಸು, ಸೇವೆ ಮಾಡು ಎನ್ನುವುದು ಕರುಣೆ. ನೀನು, ನಾನುಗಳನ್ನು ಬಿಟ್ಟು ವಿಶ್ವಾತ್ಮದ ಪದವನ್ನು ಪಡೆ ಎನ್ನುವುದು ಶಾಂತಿ.

ವಿವರಣೆ: ಹಿಂದಿನ ಚೌಪದಿಯಲ್ಲಿ ಡಿ.ವಿ.ಜಿ ಮೂರು ಗುಣಗಳನ್ನು ಹೆಸರಿಸಿ ಅವು ಪರಸ್ಪರವಾಗಿ ಒಂದನ್ನೊಂದು ಬೆಳೆಸಿ ಬದುಕಿಗೆ ಸುಂದರತೆಯನ್ನು ತರುತ್ತವೆ ಎಂದು ತಿಳಿಸಿ, ಈ ಕಗ್ಗದಲ್ಲಿ ಅವುಗಳನ್ನು ವಿವರಿಸುತ್ತಾರೆ. ಮೊದಲನೆಯ ಗುಣ ಮೋಹ. ಮೋಹ ಪದದ ಮೂಲ ಅರ್ಥ ದಿಗ್ಭ್ರಾಂತಿ ಅಥವಾ ಗೊಂದಲ. ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿ 'ಕ್ರೋಧಾದ್ಭವತಿ ಸಂಮೋಹ. ಸಂಮೋಹಾತ್ ಸ್ಮೃತಿ ವಿಭ್ರಮ:' ಎಂಬ ಮಾತು ಬರುತ್ತದೆ. ಮೋಹದಿಂದ ಸತ್ಯದ ಅರ್ಥದ ಗ್ರಹಿಕೆ ಮಬ್ಬಾಗುತ್ತದೆ, ನಿರ್ಣಯ ಸಾಮರ್ಥ್ಯದಲ್ಲಿ ದೋಷ ಕಾಣುತ್ತದೆ. ಮಮತ್ವವೇ ಮೋಹ. ಎಲ್ಲವೂ ನನ್ನದು ಎನ್ನುವುದು ಮೋಹ. ಮೋಹ ಸದಾಕಾಲ ಎಲ್ಲವನ್ನು ತನ್ನದಾಗಿಸಿಕೊಳ್ಳಲು ಹವಣಿಸುತ್ತದೆ. ಅದಕ್ಕೆಂದೇ ಮೋಹ, ಸಿಕ್ಕಿದ್ದನ್ನೆಲ್ಲ ಗಳಿಸು, ಹಿಡಿದುಕೋ, ಪಡೆದದ್ದನ್ನು ಭೋಗಿಸು, ಎಲ್ಲದಕ್ಕೂ ಒಡೆಯನಾಗು ಎನ್ನುತ್ತದೆ. ಇದು ಬದುಕಿನಲ್ಲಿ ಮೊದಲನೆಯ ಹಂತ. ಎಲ್ಲವೂ ತನಗಾಗಿ ಇದ್ದದ್ದು ಎಂಬ ಭ್ರಾಂತಿ.

ಮೋಹದ ನಂತರ ಬರುವ ಎತ್ತರದ ಗುಣ ಕರುಣೆ. ಆಗ 'ನಾನು' ಎನ್ನುವುದು ಸ್ವಲ್ಪ ಕಡಿಮೆಯಾಗಿ ಪರರಿಗಾಗಿ ಏನಾದರೂ ಮಾಡಬೇಕೆಂಬ ಭಾವ ಬಲಿತಿದೆ. ಅದು ತನ್ನ ಸ್ವಹಿತಾಸಕ್ತಿಯನ್ನು ದಾಟಿ ಮತ್ತೊಬ್ಬರಿಗಾ-ಗಿ ಕೊಡುವ, ಸಹಾನುಭೂತಿ ತೋರುವ, ಮತ್ತೊಬ್ಬರಿಗೆ ಅಕಾರಣವಾಗಿ ಸೇವೆ ಮಾಡುವ ಗುಣ. ಕರುಣೆಯಲ್ಲಿ ತ್ಯಾಗದ ಅಂಶ ಉಂಟು. ಕರುಣೆಯಲ್ಲಿ ಭೌತಿಕ ಲಾಭವಿಲ್ಲ ಆದರೆ ನೈತಿಕ ಲಾಭವಿದೆ. ಆದರೆ ಕರುಣೆ ಕೂಡ ಒಂದು ಮನೋವಿಕಾರ. ಅದು ಸಾಮಾನ್ಯ ಸನ್ನಿವೇಶಗ-ಳಲ್ಲಿ ಒಳ್ಳೆಯದೇ. ಮನುಷ್ಯರು, ಮೃಗ, ಪಕ್ಷಿಗಳು ತಮ್ಮ ಮರಿಗಳಲ್ಲಿ ತೋರುವ ಕರುಣೆ ಪ್ರಾಕೃತ-ವಾದದ್ದು. ಅದು ವ್ಯಾಮೋಹಕ್ಕೆ ಎಡೆನೀಡುವಂ-ಥದ್ದು, ಪಕ್ಷಪಾತದ್ದು, ಭ್ರಾಂತಿದೃಷ್ಟಿ. ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನಿಗೆ ಬಂದ ಕರುಣೆ ಇಂಥದ್ದು. ಅವನು ಸ್ವಜನಹತ್ಯೆ ಒಳ್ಳೆಯದಲ್ಲ ಎಂದು ಕರುಣೆ ತೋರುತ್ತಾನೆ. 'ಸ್ವಜನಹತ್ಯೆ'ಯಲ್ಲಿ 'ಸ್ವ' ಎಂಬ ಭಾವ ಮೋಹಮೂಲವಾದದ್ದು. ಅದಕ್ಕೇ ದುಃಖ. ಕರುಣೆ ಸರಿಯಾದ ಸ್ಥಳದಲ್ಲಿ, ನಿರಪೇಕ್ಷವಾಗಿದ್ದಲ್ಲಿ ಅದೊಂದು ಉದಾತ್ತ ಭಾವ. ಇಲ್ಲದಿದ್ದರೆ ಅದು ಹೃದಯ ದೌರ್ಬಲ್ಯ. ಈ ಕಗ್ಗ ಹೇಳುವುದು 'ಸ್ವ' ಪ್ರಜ್ಞೆ ಇಲ್ಲದ, ಮೋಹರಹಿತವಾದ ಕರುಣೆ. ಅದು 'ನಾನು' ಎಂಬುದನ್ನು ಬಿಟ್ಟು 'ನೀನು' ಎನ್ನುವುದರೆ-ಡೆಗೆ ಮನಮಾಡಿದ್ದು.

ಇವೆರಡನ್ನೂ ಮೀರಿದ್ದು ಶಾಂತಿ. ಅದು ದೊರೆಯುವುದು 'ನಾನು' 'ನೀನು' ಗಳ ದ್ವಂದ್ವವನ್ನು ದಾಟಿದಾಗ. ಬೇಂದ್ರೆಯವರ ನಾಕುತಂತಿಯ ಒಂದು ಸಾಲು, 'ನಾನು ನೀನಿನ ಈ ನಿನಾನಿಗೆ ಬೇನೆ ಏನೋ?' ನಾವು ಬೆಳೆದಂತೆಲ್ಲ 'ನಾನು' 'ನನ್ನದು' 'ನಿನ್ನದು' ಎಂಬ ಬೇಲಿಗಳನ್ನು ಕಟ್ಟಿಕೊಂಡೇ ಬದುಕುತ್ತೇವೆ. ಹಾಗಾದರೆ ಈ 'ನಾನು-ನೀನಿನ' ಹುಟ್ಟಿಗೆ 'ಈ ನಿನಾನಿಗೆ' ಮೂಲ ಕಾರಣ ಯಾರು? ಇದರ ಕರ್ತೃತ್ವ ಶಕ್ತಿ ಯಾವುದು? ಹಾಗೆ ಅಂತರ್ಮುಖವಾಗಿ ಹುಡುಕುತ್ತ ಹೊರಟಾಗ ದೊರೆಯುವುದು ವಿಶ್ವಾತ್ಮಪ್ರಜ್ಞೆ. ಅದೇ ಶಾಂತಿಯ ಮೂಲ.

ದಿನ ಭವಿಷ್ಯ

ಗುರುವಾರ ಸೆಪ್ಟೆಂಬರ್ 2, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ಏಕಾದಶಿ ಗಂ. 56-44 (ರಾ. 4-56) ಗುರುವಾರ ನಿತ್ಯ ನಕ್ಷತ್ರ ಆದ್ರ್ರ ಗಂ. 18-9 (ಹ. 1-31) ಸಿದ್ಧಿ ನಾಮ ಯೋಗ ಗಂ. 9-17 ಬವ ಕರಣ ಗಂ. 24-53 ವಿಷ ಗಂ. 50-36 ಅಮೃತಾಭಾವಃ : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-12 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 9

ಮೇಷ: ಅನಿರೀಕ್ಷಿತ ವ್ಯಕ್ತಿಯೊಬ್ಬರ ಭೇಟಿಯಾಗಲಿದ್ದೀರಿ. ಹಿರಿಯರ ಮಾತುಗಳಿಂದಾಗಿ ವ್ಯವಹಾರ ಅನುಕೂಲ. ವಿದ್ಯಾರ್ಥಿಗಳಿಗೆ ವಿಶೇಷ ಅಧ್ಯಯನ ತಂಡದ ನೇತೃತ್ವ ವಹಿಸುವ ಸಾಧ್ಯತೆ. ಅನಿರೀಕ್ಷಿತ ಪ್ರಯಾಣದಿಂದಾಗಿ ಖರ್ಚು.

ವೃಷಭ: ಸಹೋದ್ಯೋಗಿಗಳೊಂದಿಗೆ ಉಂಟಾಗಿದ್ದ ಮನಸ್ತಾಪ ದೂರವಾಗಲಿದೆ. ವೃತ್ತಿಯಲ್ಲಿನ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಿ-ಕೊಳ್ಳುವಿರಿ. ಸಂಗಾತಿಯ ಸಂಪೂರ್ಣ ಸಹಕಾರ ಲಭ್ಯವಾಗಲಿದೆ.

ಮಿಥುನ: ಮಹಿಳೆಯರಿಗೆ ಮಾನಸಿಕ ಇಷ್ಟಾರ್ಥಗಳು ನೆರವೇರಲಿವೆ. ಕುಟುಂ-ಬದವರೊಂದಿಗೆ ಧಾರ್ಮಿಕ ಕ್ಷೇತ್ರ ದರ್ಶನ ಮಾಡಲಿದ್ದೀರಿ. ಹಮ್ಮಿಕೊಂಡಿರುವ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಲೇವಾದೇವಿ ವ್ಯವಹಾರದಲ್ಲಿ ವಿಶೇಷ ಲಾಭ.

ಕರ್ಕಾಟಕ: ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡು ಒತ್ತಡ. ಕೆಲಸ ಕಾರ್ಯಗಳಲ್ಲಿ ಮನೆಯವರ ಸಹಕಾರ ದೊರಕಲಿದೆ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ. ಆರೋಗ್ಯದ ಬಗ್ಗೆ ನಿಗಾ ಇರಲಿ. ದೇವತಾ ದರ್ಶನದಿಂದ ನೆಮ್ಮದಿ.

ಸಿಂಹ: ವ್ಯಾಪಾರ ವ್ಯವಹಾರದ ಅಭಿವೃದ್ಧಿಗಾಗಿ ಚಿಂತನೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ. ವ್ಯಾಪಾರೋದ್ಯಮದಲ್ಲಿ ಎಚ್ಚರಿಕೆಯಿಂದಿರಬೇಕಾದುದು ಅನಿವಾರ್ಯ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಯಶಸ್ಸು.

ಕನ್ಯಾ: ಕೆಲಸ ಕಾರ್ಯಗಳಲ್ಲಿ ಯಶಸ್ಸು. ಹೊಸದೊಂದು ಉದ್ಯಮ ಪ್ರಾರಂಭಿಸುವ ಕಾರ್ಯದಲ್ಲಿ ತಲ್ಲೀನರಾಗುವಿರಿ. ಬಹುಕಾಲದ ಬಯಕೆಗಳು ಈಡೇರುವ ಸಾಧ್ಯತೆ ಕಂಡುಬರುತ್ತಿದೆ. ದೂರದ ಪ್ರಯಾಣವೊಂದಕ್ಕೆ ಸಂಕಲ್ಪ.

ತುಲಾ: ಕೆಲಸದ ಒತ್ತಡದಿಂದಾಗಿ ಮಾನಸಿಕ ಗೊಂದಲ. ಹೊಸ ಯೋಜನೆಗಳು ಕಾರ್ಯರೂಪಕ್ಕೆ ತರುವ ಬಗ್ಗೆ ಚರ್ಚೆ ನಡೆಸಲಿದ್ದೀರಿ. ರಾಜಕೀಯದಲ್ಲಿ ಯಶಸ್ಸು. ನ್ಯಾಯಾಲಯದಲ್ಲಿನ ಕಟ್ಟಳೆಗಳು ಅನುಕೂಲಕರವಾಗಲಿದೆ.

ವೃಶ್ಚಿಕ: ವೃತ್ತಿಯಲ್ಲಿ ಅಮಿತವಾದ ಒತ್ತಡ ಉಂಟಾಗಲಿದ್ದು ತಾಳ್ಮೆಯಿಂದ ವ್ಯವಹರಿಸುವುದು ಅವಶ್ಯ. ಸಂಶಯ ಪ್ರವೃತ್ತಿಯಿಂದಾಗಿ ಸಂಕಷ್ಟ. ಬಂಧುಗಳ ನೆರವಿನಿಂದ ಸಮಸ್ಯೆಗಳು ಪರಿಹಾರಗೊಳ್ಳುವವು. ಅಧ್ಯಾತ್ಮದೆಡೆಗೆ ಒಲವು.

ಧನು: ಸರ್ಕಾರಿ ಉದ್ಯೋಗಿಗಳಿಗೆ ಕೆಲಸದಲ್ಲಿನ ಒತ್ತಡ ಕೊಂಚ ಕಡಿಮೆಯಾಗಲಿದೆ. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ಮಹಿಳೆಯರಿಗೆ ಆಭರಣದ ವಿಷಯದಲ್ಲಿ ಎಚ್ಚರಿಕೆ. ಬರವಣಿಗೆಯಿಂದ ಕೀರ್ತಿಲಾಭ.

ಮಕರ: ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ತೊಡಗಿ ಯಶಸ್ಸು. ವ್ಯವಹಾರದಲ್ಲಿ ಪ್ರಗತಿ ಕುಂಠಿತವಾಗುವ ಸಾಧ್ಯತೆ. ದಾಂಪತ್ಯ ಜೀವನವು ಸುಖಮಯವಾಗಲಿದೆ. ಅನಿರೀಕ್ಷಿತ ಪ್ರಯಾಣವೊಂದು ಮಾಡಬೇಕಾದೀತು.

ಕುಂಭ: ಸಾಮಾಜಿಕ ಕೆಲಸಗಳಲ್ಲಿ ತೊಡಗಿಕೊಳ್ಳಲಿದ್ದೀರಿ. ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಸಾಧ್ಯತೆ. ಸಾಮಾಜಿಕ ಗೌರವಾದರಗಳು ಪ್ರಾಪ್ತವಾಗಲಿವೆ. ಬಹುದಿನಗಳ ಬೇಡಿಕೆಗಳು ಈಡೇರಲಿವೆ.


ಮೀನ: ಅಪೇಕ್ಷಿತರಿಗೆ ಸಂತಾನ ಪ್ರಾಪ್ತವಾಗಲಿದೆ. ಯಂತ್ರೋಪಕರಣಗಳ ಖರೀದಿ ಅಥವಾ ರಿಪೇರಿಗಾಗಿ ಹೆಚ್ಚಿನ ಖರ್ಚು. ಆತ್ಮೀಯರ ಆಗಮನ. ಪ್ರತಿಭಾವಂತ ಮಹಿಳೆಯರಿಗೆ ಉತ್ತಮ ಪ್ರೋತ್ಸಾಹ ದೊರಕಲಿದೆ.

ನಿಮ್ಮ ಜನ್ಮದಿನ 2-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ರಾಜಕೀಯ ಕ್ಷೇತ್ರದಲ್ಲಿ ಬೆಳವಣಿಗೆಯನ್ನು ಸಾಧಿಸಲಿದ್ದೀರಿ. ಸಮಾಜದ ಏಳ್ಗೆಗಾಗಿ ಕೈಗೊಂಡ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ವಿರೋಧ. ಉತ್ತಮ ಕೆಲಸಗಳನ್ನು ಕೈಗೆತ್ತಿಕೊಂಡು ನಿಧಾನವಾಗಿ ಯಶಸ್ಸನ್ನು ಸಾಧಿಸಲಿದ್ದೀರಿ.

ಪದಬಂಧ 4707 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಟ್ಟೆಗಳನ್ನು ಮಡಿ ಮಾಡುವವನು (3)
3.ಹೊನ್ನಿನ ವರ್ಣವಿದು (3)
4.ಈತನಿಗೆ ಸ್ವಲ್ಪವೂ ಬುದ್ಧಿಯಿಲ್ಲ! (4)
6.ಮಂಗಳಕಾರ್ಯದ ಪ್ರಾರಂಭದಲ್ಲಿ ಮಾಡುವ ಪ್ರಾರ್ಥನೆ (2)
7.ಕೆಲವರು ಮಾಡುವ ಕಾರ್ಯ (3)
9.ಮರೆತೆನೆಂದರೂ ಇದು ಜೈಲೇ! (4)
10.ಮತಿಯಿಟ್ಟುಕೊಂಡೇ ನೀಡಿರುವ ಒಪ್ಪಿಗೆ (4)
11.ಗುಲಾಮ ತಂದಿರುವ ಹೂ (3)
13.ಸಿಪ್ಪಿಗನ ಹತ್ತಿರ ಹಣ್ಣಿನ ತೊಗಟೆ ಇದೆ (2)
14.ದೇವರನ್ನು ರಥದಲ್ಲಿಟ್ಟು ಮಾಡುವ ಉತ್ಸವ (4)
16.ಮಡಿವಂತಿಕೆ ಮಾಡಿದವಳ ಉಡಿ! (3)
17.ಮುಂದಾಳು ಇಲ್ಲಿದ್ದಾನೆ (3)

ಮೇಲಿಂದ ಕೆಳಕ್ಕೆ
1.ಈತ ಹಿರಿಯ ಸಹೋದರ (2)
2.ಸಮಯದಲ್ಲೇ ಸರಿಯಾದುದು ಇದೆ! (2)
3.ಇದು ಕೂಡಾ ಹೊಂದಾಣಿಕೆಯೇ! (3)
5.ಮಾದರಿ ಈ ರೀತಿ ಕಾಣುತ್ತಿದೆ (3)
8.ಒಳ್ಳೆಯ ಬುದ್ಧಿ (3)
9.ಸೀರೆಯ ಹೊದೆಯುವ ಭಾಗ (3)
10.ಆ ಸುರನ ಹತ್ತಿರವಿರುವ ರಾಕ್ಷಸ (3)
12.ಸೂರ್ಯನ ಕಾವು (3)
15.ಮದುವಣಗಿತ್ತಿ ಇಲ್ಲಿದ್ದಾಳೆ (2)
16.ತೂಕದ ಒಂದು ಪ್ರಮಾಣ (2)



4706ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹರಿಗೋಲು 3.ಜಗದ್ಗುರು 5.ಗೋಚರ 6.ಡಿರಕ 8.ಛನ 11.ಕರ 13.ಪುಲ್ಲಿಂಗ 15.ಗಣಿತಾ 16.ಆಪದ್ಧನ 17.ಪಕ್ಷಪಾತ

ಮೇಲಿಂದ ಕೆಳಕ್ಕೆ: 1.ಹರತಾಳ 2.ಉಗೋಡೆಕ 3.ಜರಡಿ 7.ಕನ್ನಡಕ 9.ನರುಗಂಪು 10.ಪರಿತಾಪ 12.ರವಿಸುತ 14.ಗಗನ

ಸುಡೊಕು 5093

	7	6		4				9
	9			7		3		
7	8			2			5	3
			4		5			7
6		5		8			2	
		7					9	5
	5	2			7			
9		1		5	8	2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5092 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಪ್ರಭುಪಾದರ ಸ್ಮರಣಾರ್ಥ ₹ 125ರ ವಿಶೇಷ ನಾಣ್ಯ ಬಿಡುಗಡೆ

ನವದೆಹಲಿ(ಪಿಟಿಐ): ಇಸ್ಕಾನ್ ಸಂಸ್ಥಾಪಕ ಶ್ರೀಲ ಭಕ್ತಿವೇದಾಂತ ಸ್ವಾಮಿ ಪ್ರಭುಪಾದರ 125ನೇ ಜಯಂತಿ ಅಂಗವಾಗಿ ₹125ರ ವಿಶೇಷ ನಾಣ್ಯವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಬಿಡುಗಡೆ ಮಾಡಿದರು. ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ಪ್ರಭುಪಾದರ ಕೊಡುಗೆ ಸ್ಮರಿಸಿದರು.



ವೈಕುಂಠ ಸಮಾರಾಧನೆ

ಶ್ರೀ ಹೆಚ್. ಮುನಿರೆಡ್ಡಿ (ಕಿಟ್ಟಣ್ಣ) ಇವರು ಮಾಡುವ ವಿಜ್ಞಾಪನೆಗಳು

ನನ್ನ ಮಗಳಾದ **ಶ್ರೀಮತಿ ಶೃತಿ. ಎಂ.** ರವರು ದಿನಾಂಕ 23-8-2021ನೇ ಸೋಮವಾರ ಮಧ್ಯಾಹ್ನ 03:30-04:30 ಗಂಟೆ ಒಳಗೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಇವರ ಪುಣ್ಯಾಹ ಕಾರ್ಯವನ್ನು ದಿನಾಂಕ 02-09-2021 ನೇ ಗುರುವಾರ ಬೆಳಿಗ್ಗೆ 10:00 ಗಂಟೆಗೆ ಮತ್ತು ವೈಕುಂಠ ಸಮಾರಾಧನೆಯನ್ನು ಮಧ್ಯಾಹ್ನ 12:30 ಗಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿರುತ್ತದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಹೆಚ್.ಎಸ್.ಆರ್. ಬಡಾವಣೆ, ಬೆಂಗಳೂರು-560102

ದುಃಖತಪ್ತರು: ಶ್ರೀ ಹೆಚ್. ಮುನಿರೆಡ್ಡಿ (ಕಿಟ್ಟಣ್ಣ)
ಮಾ|| ವಿಹಾನ್ ಆರುಷ್ ರೆಡ್ಡಿ ಹಾಗೂ ಕುಟುಂಬ ವರ್ಗದವರು.

ದೇಶದ ಶೇ 40ರಷ್ಟು ಜನರ ಜೀವಿತಾವಧಿ 9 ವರ್ಷ ಕಡಿಮೆ: ಇಪಿಐಸಿ ವರದಿಯಲ್ಲಿ ಉಲ್ಲೇಖ

ವಾಯುಮಾಲಿನ್ಯ: ಜನರ ಆಯುಷ್ಯ ಮೊಟಕು

ನವದೆಹಲಿ (ರಾಯಿಟರ್ಸ್): ವಾಯುಮಾಲಿನ್ಯದಿಂದಾಗಿ ಭಾರತದ ಶೇ 40ರಷ್ಟು ಜನರ ಜೀವಿತಾವಧಿಯು ಒಂಬತ್ತು ವರ್ಷ ಕಡಿಮೆಯಾಗಲಿದೆ ಎಂದು ಅಮೆರಿಕದ ಅಧ್ಯಯನ ವರದಿಯೊಂದು ತಿಳಿಸಿದೆ.

ದೇಶದ ಉತ್ತರ, ಪೂರ್ವ ಮತ್ತು ಮಧ್ಯ ಭಾಗ ಹಾಗೂ ರಾಜಧಾನಿ ದೆಹಲಿ ಒಳಗೊಂಡ ಪ್ರದೇಶದಲ್ಲಿ 48 ಕೋಟಿಗೂ ಹೆಚ್ಚು ಜನರು ಇದ್ದಾರೆ. ಇದು ಅತೀ ಹೆಚ್ಚು ವಾಯುಮಾಲಿನ್ಯ ಇರುವ ಪ್ರದೇಶ. ಈ ಪ್ರದೇಶದಲ್ಲಿ ವಾಸಿಸುವ ಜನರ ಆಯುಷ್ಯದ ಅವಧಿ ಒಂಬತ್ತು ವರ್ಷಗಳಷ್ಟು ಕಡಿಮೆಯಾಗಲಿದೆ.

ಮುಖ್ಯಾಂಶಗಳು

- ಮಹಾರಾಷ್ಟ್ರ, ಮಧ್ಯಪ್ರದೇಶದಲ್ಲೂ ಆತಂಕ
- ದೇಶದ ಶುದ್ಧ ಗಾಳಿ ಯೋಜನೆಗೆ ಶ್ಲಾಘನೆ
- 102 ನಗರಗಳಲ್ಲಿ ವಾಯುಮಾಲಿನ್ಯ ತಗ್ಗಿಸುವ ಗುರಿ

ಇದಲ್ಲದೇ ಭಾರತದ ಎಲ್ಲ ಭಾಗಗಳಲ್ಲೂ ವಾಯುಮಾಲಿನ್ಯದ ಪ್ರಮಾಣವು ಹೆಚ್ಚಿರುವುದು ಕಳವಳಕಾರಿಯಾಗಿದೆ ಎಂದು ಷಿಕಾಗೊ ವಿಶ್ವವಿದ್ಯಾಲಯದ ಎನರ್ಜಿ ಪಾಲಿಸಿ ಇನ್‌ಸ್ಟಿಟ್ಯೂಟ್ (ಇಪಿಐಸಿ) ವರದಿ ಹೇಳಿದೆ.


ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶದಲ್ಲಿನ ಪರಿಸ್ಥಿತಿಯೂ ಗಾಬರಿ ಹುಟ್ಟಿಸುವಂತಿದೆ ಎಂದು ಅದು ಹೇಳಿದೆ.

ವಾಯುಮಾಲಿನ್ಯವನ್ನು ನಿಯಂತ್ರಿಸುವ ದಿಸೆಯಲ್ಲಿ, ಭಾರತವು ಆರಂಭಿಸಿರುವ 'ರಾಷ್ಟ್ರೀಯ ಶುದ್ಧ ಗಾಳಿ ಯೋಜನೆ'ಯನ್ನು (ಎನ್‌ಸಿಎಪಿ) ಶ್ಲಾಘಿಸಿರುವ ಇಪಿಐಸಿ, 'ಯೋಜನೆಯು ತನ್ನ ಗುರಿಯನ್ನು ಮುಟ್ಟಿ, ಸ್ಥಿರತೆ ಸಾಧಿಸಿದಲ್ಲಿ ದೇಶದ ಒಟ್ಟಾರೆ ಜನರ ಜೀವಿತಾವಧಿಯನ್ನು 1.7 ವರ್ಷದಷ್ಟು ಹಾಗೂ ದೆಹಲಿ ಜನರ ಜೀವಿತಾವಧಿಯನ್ನು 3.1 ವರ್ಷದಷ್ಟು ಹೆಚ್ಚಿಸಬಹುದು' ಎಂದು ಹೇಳಿದೆ.

2024ರ ವೇಳೆಗೆ, ಅತಿಹೆಚ್ಚು ವಾಯುಮಾಲಿನ್ಯವಿರುವ ದೇಶದ 102 ನಗರಗಳಲ್ಲಿನ ಮಾಲಿನ್ಯವನ್ನು ಶೇ 20ರಿಂದ ಶೇ 30ರಷ್ಟು ತಗ್ಗಿಸುವ ಗುರಿಯನ್ನು ಎನ್‌ಸಿಎಪಿ ಹಾಕಿಕೊಂಡಿದೆ.

ಗಾಳಿಯ ಗುಣಮಟ್ಟವನ್ನು ಪರಿಶೀಲಿಸುವ ಐಕ್ಯು ಏಐಆರ್ ವರದಿ ಪ್ರಕಾರ, 2020ರಲ್ಲಿ ನವದೆಹಲಿಯು ಅತಿ ಹೆಚ್ಚು ವಾಯುಮಾಲಿನ್ಯವಿರುವ ನಗರಗಳ ಪೈಕಿ ಒಂದಾಗಿತ್ತು. ಅತಿ ಹೆಚ್ಚು ವಾಯುಮಾಲಿನ್ಯ ಇರುವ ರಾಜಧಾನಿ ಎನಿಸಿತ್ತು. ಆದರೆ, ಕಳೆದ ವರ್ಷ ಕೊರೊನಾ ಕಾರಣದಿಂದಾಗಿ ಲಾಕ್‌ಡೌನ್ ಜಾರಿಯಾದಾಗ ದೆಹಲಿಯ, ಎರಡು ಕೋಟಿ ಜನರು ಬೇಸಿಗೆಯಲ್ಲಿ ಶುದ್ಧಗಾಳಿಯನ್ನು ಉಸಿರಾಡಿದ್ದರು.

ವಿಶ್ವ ಆರೋಗ್ಯ ಸಂಸ್ಥೆಯು ಶಿಫಾರಸು ಮಾಡಿದ ಅನ್ವಯ, ಗಾಳಿಯ ಗುಣಮಟ್ಟವನ್ನು ಸುಧಾರಿಸುವಲ್ಲಿ ಯಶಸ್ವಿಯಾದರೆ ಭಾರತದ ನೆರೆಯ ರಾಷ್ಟ್ರ ಬಾಂಗ್ಲಾದೇಶದಲ್ಲಿಯೂ ಜನರ ಜೀವಿತಾವಧಿಯು 5.4 ವರ್ಷ ಹೆಚ್ಚಲಿದೆ ಎಂದು ವರದಿ ಹೇಳಿದೆ.



ದೆಹಲಿಯ ಮಿಂಟೋ ಪ್ರದೇಶದ ಕೆಳಸೇತುವೆ ಜಲಾವೃತಗೊಂಡ ಕಾರಣ, ಸಂಚಾರ ಬಂದ್ ಮಾಡಲಾಗಿತ್ತು



ಗುರುಗ್ರಾಮ–ದೆಹಲಿ ಹೆದ್ದಾರಿಯ ನರಸಿಂಗಪುರದಲ್ಲಿ ಕಾರೊಂದು ಜಲಾವೃತ ರಸ್ತೆಯಲ್ಲಿ ಮಗುಚಿತು

ದೆಹಲಿ: ಒಂದೇ ದಿನದಲ್ಲಿ ಸುರಿದ ತಿಂಗಳ ಮಳೆ

ನವದೆಹಲಿ (ಪಿಟಿಐ): ಬುಧವಾರ ಬೆಳಿಗ್ಗೆವರೆಗಿನ 24 ಗಂಟೆಗಳ ಅವಧಿಯಲ್ಲಿ ದೆಹಲಿಯಲ್ಲಿ 112.1 ಮಿಲಿ ಮೀಟರ್ ಮಳೆಯಾಗಿದೆ. ಕಳೆದ 19 ವರ್ಷಗಳಲ್ಲಿ ಸೆಪ್ಟೆಂಬರ್‌ನಲ್ಲಿ ದಾಖಲಾದ ಅತಿ ಹೆಚ್ಚಿನ ಮಳೆ ಪ್ರಮಾಣ ಇದು ಎಂದು ಹವಾಮಾನ ಇಲಾಖೆ ತಿಳಿಸಿದೆ. ಬುಧವಾರ ಸಂಜೆಯ ಹೊತ್ತಿಗೆ ಮಳೆಯ ತೀವ್ರತೆ ಕಡಿಮೆಯಾಗಿದ್ದು, 7ರಂದು ಹೆಚ್ಚು ಮಳೆಯಾಗುವ ಮುನ್ಸೂಚನೆ ಇದೆ.

ಬುಧವಾರ ಬೆಳಿಗ್ಗೆ 8.30ರಿಂದ ಆರಂಭವಾಗಿ, ಕೇವಲ ಮೂರು ಗಂಟೆಗಳಲ್ಲಿ ನಗರದಲ್ಲಿ 75.6 ಮಿ.ಮೀ. ಮಳೆ ಸುರಿಯಿತು. ಇದರರ್ಥ, ದೆಹಲಿಯು ತಿಂಗಳ ಆರಂಭದಲ್ಲೇ ವಾಡಿಕೆಗಿಂತ ಹೆಚ್ಚು ಮಳೆ ದಾಖಲಿಸಿದೆ. ಪ್ರತಿ ವರ್ಷ ಸೆಪ್ಟೆಂಬರ್‌ನಲ್ಲಿ ಸರಾಸರಿ 125.1 ಮಿ.ಮೀ. ಮಳೆಯಾಗುತ್ತದೆ.

2002ರ ಸೆಪ್ಟೆಂಬರ್ 13ರಂದು 126.8 ಮಿ.ಮೀ. ಮಳೆಯಾಗಿತ್ತು. 1963ರ ಸೆಪ್ಟೆಂಬರ್ 16ರಂದು 172.6 ಮಿ.ಮೀ. ಮಳೆಯಾಗಿದ್ದು ಸಾರ್ವಕಾಲಿಕ ದಾಖಲೆ. ಭಾರಿ ಮಳೆಯಿಂದಾಗಿ ಚಾಣಕ್ಯಪುರಿಯ ರಾಜತಾಂತ್ರಿಕ ಪ್ರದೇಶ ಸೇರಿ ಹಲವು ಪ್ರದೇಶಗಳಲ್ಲಿ ನೀರು ನಿಂತಿತ್ತು. ನಗರದ ಕೆಲವು ಭಾಗಗಳಲ್ಲಿ ಸಂಚಾರದ ಮೇಲೆ ಪರಿಣಾಮ ಬೀರಿತು. ಬುಧವಾರ ಬೆಳಿಗ್ಗೆ 8.30ರಿಂದ ಮಧ್ಯಾಹ್ನ 2.30ರ ನಡುವೆ ಅಂದರೆ, ಕೇವಲ ಆರು ಗಂಟೆಗಳಲ್ಲಿ 84 ಮಿ.ಮೀ. ಮಳೆಯಾಗಿದೆ. ರಸ್ತೆಗಳು ಜಲಾವೃತಗೊಂಡಿದ್ದರಿಂದ ಐಟಿಒ, ರಿಂಗ್ ರೋಡ್, ಐಪಿ ಎಸ್ಟೇಟ್ ಫ್ಲೈಓವರ್, ಧೌಲಾ ಬಳಿ ಸಂಚಾರ ದಟ್ಟಣೆ ಉಂಟಾಯಿತು.

'ಎರಡು ಮೂರು ದಿನಗಳ ಮುಂಚಿತವಾಗಿ ದೆಹಲಿಯಂತಹ ಸಣ್ಣ ಪ್ರದೇಶಕ್ಕೆ ನಿಖರವಾದ ಮುನ್ಸೂಚನೆಗಳನ್ನು ನೀಡುವುದು ಕಷ್ಟ' ಎಂದು ತಜ್ಞರು ಹೇಳಿದ್ದಾರೆ.

ಹವಾಮಾನ ಬದಲಾವಣೆಯಿಂದಾಗಿ ಮುಂಗಾರು ಮಳೆಯ ಸಂರಚನೆಯಲ್ಲಿ ವ್ಯತ್ಯಾಸವಾಗುತ್ತಿದೆ ಎಂದು ಖಾಸಗಿ ಹವಾಮಾನ ಸಂಸ್ಥೆ ಸ್ಕೈಮೆಟ್‌ನ ಉಪಾಧ್ಯಕ್ಷ ಮಹೇಶ್ ಪಲಾವತ್ ಹೇಳಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಮಳೆ ಸುರಿಯುವ ದಿನಗಳು ಕಡಿಮೆಯಾಗಿದ್ದು, ವ್ಯತಿರಿಕ್ತ ವಿದ್ಯಮಾನಗಳು ಹೆಚ್ಚುತ್ತಿವೆ ಎಂದಿದ್ದಾರೆ.

ಇಂತಹ ಮಳೆಯಿಂದ ಅಂತರ್ಜಲ ಮರುಪೂರಣವಾಗುವ ಬದಲು, ತಗ್ಗು ಪ್ರದೇಶಗಳಲ್ಲಿ ಪ್ರವಾಹಕ್ಕೆ ಕಾರಣವಾಗುತ್ತದೆ. ನಾಲ್ಕೈದು ದಿನಗಳಲ್ಲಿ ನಿಧಾನವಾಗಿ ಮಳೆ ಬಂದರೆ ನೀರು ಭೂಮಿಯಾಳಕ್ಕೆ ಇಂಗುತ್ತದೆ. ಆದರೆ ರಭಸದ ಮಳೆಯಾದಲ್ಲಿ, ಮಳೆನೀರು ರಭಸವಾಗಿ ಹರಿದುಹೋಗುತ್ತವೆ ಎಂದು ಪಲಾವತ್ ಹೇಳಿದರು.

ಕೋವಿಡ್–19 ನಿಯಂತ್ರಣ ಮಾರ್ಗಸೂಚಿಯೊಂದಿಗೆ ಹಲವು ರಾಜ್ಯಗಳಲ್ಲಿ ತರಗತಿಗಳು ಆರಂಭ

ವಿದ್ಯಾರ್ಥಿಗಳಿಗೆ ಶಾಲೆಗೆ ಮರಳಿದ ಸಂತಸ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್-19 ಪಿಡುಗಿನಿಂದಾಗಿ ದೀರ್ಘಾವಧಿ ತನಕ ಮುಚ್ಚಿದ್ದ ಶಾಲೆಗಳನ್ನು ಮರು ಆರಂಭಿಸಲು ಹಲವು ರಾಜ್ಯ ಸರ್ಕಾರಗಳು ಅನುಮತಿ ನೀಡಿವೆ.

ಕೆಲವು ರಾಜ್ಯಗಳಲ್ಲಿ 6ರಿಂದ 12ನೇ ತರಗತಿಗೆ ಒಪ್ಪಿಗೆ ಸೂಚಿಸಲಾಗಿದೆ. ಕೆಲವೆಡೆ 9ರಿಂದ 12ನೇ ತರಗತಿಗಳನ್ನು ಆರಂಭಿಸಲಾಗಿದೆ. ಆನ್‌ಲೈನ್ ತರಗತಿಯಿಂದ ಬೇಸತ್ತಿದ್ದ ವಿದ್ಯಾರ್ಥಿಗಳು ಉತ್ಸಾಹದೊಂದಿಗೆ ಶಾಲೆಗೆ ಮರಳಿದ್ದಾರೆ.

ಶಾಲಾ-ಕಾಲೇಜುಗಳಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ. ಕೋವಿಡ್-19 ಸೋಂಕು ಹಬ್ಬದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಹಲವಾರು ನಿರ್ಬಂಧಗಳನ್ನು ವಿಧಿಸಲಾಗಿದೆ. ತರಗತಿಗಳಲ್ಲಿ ಶೇಕಡ 50ರಷ್ಟು ವಿದ್ಯಾರ್ಥಿಗಳಿಗೆ ಅವಕಾಶ ಮತ್ತು ಪೋಷಕರ ಒಪ್ಪಿಗೆ ಪಡೆಯುವುದು ಇವುಗಳಲ್ಲಿ ಸೇರಿವೆ.

ದೆಹಲಿ, ರಾಜಸ್ಥಾನ, ಮಧ್ಯಪ್ರದೇಶ, ತಮಿಳುನಾಡು ಸೇರಿದಂತೆ ದೇಶದ ಹಲವು ಭಾಗಗಳಲ್ಲಿ ಶಾಲೆಗಳನ್ನು ಬುಧವಾರದಿಂದಲೇ ಆರಂಭಿಸಲಾಗಿದೆ. ಭೌತಿಕ ತರಗತಿಗಳ ಜತೆಗೆ ಆನ್‌ಲೈನ್ ತರಗತಿಗಳನ್ನು ಮುಂದುವರಿಸಲು ನಿರ್ಧರಿಸಲಾಗಿದೆ. ದೆಹಲಿಯಲ್ಲಿ 9 ರಿಂದ 12 ನೇ ತರಗತಿಗಳು ಪುನರಾರಂಭಗೊಂಡಿವೆ. ಭಾರಿ ಮಳೆಯ ನಡುವೆ ವಿದ್ಯಾರ್ಥಿಗಳು ಭೌತಿಕ ತರಗತಿಗೆ ಸಂತಸದಿಂದ ಮರಳಿದ್ದಾರೆ.



ನವದೆಹಲಿಯ ಸರ್ವೋದಯ ಬಾಲ ವಿದ್ಯಾಲಯದಲ್ಲಿ ಬುಧವಾರ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾದರು ಪಿಟಿಐ ಚಿತ್ರ

ಆದರೆ, ಕೆಲವು ಶಿಕ್ಷಣ ಸಂಸ್ಥೆಗಳು ಕಾದು ನೋಡುವ ತಂತ್ರದ ಮೊರೆ ಹೋಗಿದ್ದು, ಕೆಲ ವಾರಗಳ ಬಳಿಕ ವಿದ್ಯಾರ್ಥಿಗಳನ್ನು ಭೌತಿಕ ತರಗತಿಗಳಿಗೆ ಕರೆಸಿಕೊಳ್ಳುವ ನಿರ್ಧಾರ ಕೈಗೊಂಡಿದೆ. ಶಾಲೆಯ ಎಲ್ಲ ಸಿಬ್ಬಂದಿ ಲಸಿಕೆ ಪಡೆದ ನಂತರವೇ ತರಗತಿಗಳನ್ನು ಆರಂಭಿಸಲು ಕೆಲವು ಸಂಸ್ಥೆಗಳು ನಿರ್ಧರಿಸಿವೆ.

ಮಧ್ಯಪ್ರದೇಶದಲ್ಲಿ 6ರಿಂದ 12ನೇ ತರಗತಿಗಳನ್ನು ಭೌತಿಕವಾಗಿ ಆರಂಭಿಸಲು ಒಪ್ಪಿಗೆ ನೀಡಲಾಗಿದೆ.

ತಮಿಳುನಾಡಿನಲ್ಲಿ 9 ರಿಂದ 12ನೇ ತರಗತಿಗಳು ಹಾಗೂ ತೆಲಂಗಾಣದಲ್ಲಿ 1ರಿಂದ 12ನೇ ತರಗತಿಗಳು ಬುಧವಾರದಿಂದ ಆರಂಭವಾಗಿವೆ. ಉತ್ತರ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಗಳ ತರಗತಿಗಳನ್ನು ಬುಧವಾರದಿಂದ ಆರಂಭಿಸಲಾಗಿದೆ. ಉತ್ತರ ಪ್ರದೇಶದಲ್ಲಿ ಆಗಸ್ಟ್ 16ರಿಂದ 9ರಿಂದ 12 ಮತ್ತು ಆಗಸ್ಟ್ 24ರಿಂದ 6ರಿಂದ 8ನೇ ತರಗತಿಗಳನ್ನು ಆರಂಭಿಸಲಾಗಿದೆ.

ರಾಜಸ್ಥಾನದಲ್ಲಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ 9ರಿಂದ 12ನೇ ತರಗತಿಗಳು ಆರಂಭವಾಗಿವೆ. ಮೊದಲ ದಿನ ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಜರಾಗಿದ್ದರು.

17ತಿಂಗಳುಗಳ ಬಳಿಕ ಶಾಲೆಗಳು ಮತ್ತೆ ಆರಂಭವಾಗಿವೆ. ವಿದ್ಯಾರ್ಥಿಗಳು ಸಂತಸದಿಂದ ಶಾಲೆಗೆ ಮರಳಿದ್ದು, ಸ್ನೇಹಿತರನ್ನು ಭೇಟಿಯಾಗಿ ಖುಷಿಯಾಗಿದ್ದಾರೆ.

ಮನಿಷ್ ಸಿಸೋಡಿಯಾ, ದೆಹಲಿ ಉಪಮುಖ್ಯಮಂತ್ರಿ

ಛತ್ತೀಸಗಡದಲ್ಲೂ ಶೇಕಡ 50ರ ಹಾಜರಾತಿಯೊಂದಿಗೆ 6, 7,9 ಮತ್ತು 11ನೇ ತರಗತಿಗಳನ್ನು ಗುರುವಾರದಿಂದ ಆರಂಭಿಸಲು ಸರ್ಕಾರ ಅನುಮತಿ ನೀಡಿದೆ. 1ರಿಂದ 5 ಹಾಗೂ 8,10 ಮತ್ತು 12 ತರಗತಿಗಳಿಗೆ ಆಗಸ್ಟ್ 1ರಿಂದಲೇ ತರಗತಿಗಳನ್ನು ಆರಂಭಿಸಲಾಗಿದೆ.

ಹರಿಯಾಣದಲ್ಲಿ 4 ಮತ್ತು 5ನೇ ತರಗತಿಗಳು ಬುಧವಾರ ಮರು ಆರಂಭವಾಗಿವೆ. ಒಂದು ತಿಂಗಳ ಹಿಂದೆಯೇ ರಾಜ್ಯದಲ್ಲಿ 9ರಿಂದ 12ತರಗತಿಗಳನ್ನು ಆರಂಭಿಸಲಾಗಿತ್ತು. ನಂತರ, 6ರಿಂದ 8ನೇ ತರಗತಿಗಳನ್ನು ಹಂತ ಹಂತವಾಗಿ ಆರಂಭಿಸಲಾಗಿತ್ತು.

ಸಚಿವರ ಸಭೆ: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸಚಿವಾಲಯದ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿ ವಿವಿಧ ರಾಜ್ಯಗಳಲ್ಲಿ ಶಾಲೆಗಳು ಆರಂಭವಾಗಿರುವ ಬಗ್ಗೆ ವಿವರಗಳನ್ನು ಪಡೆದರು.

ಬೆಲೆ ಏರಿಕೆಯಿಂದ ₹23 ಲಕ್ಷ ಕೋಟಿ ಸಂಗ್ರಹ: ಕೇಂದ್ರದ ವಿರುದ್ಧ ರಾಹುಲ್ ಕಿಡಿ

ಗ್ಯಾಸ್, ಡೀಸೆಲ್, ಪೆಟ್ರೋಲ್ (ಜಿಡಿಪಿ) ಬೆಲೆ ಹೆಚ್ಚಳಕ್ಕೆ ಆಕ್ರೋಶ

ಒಂದನೇ ಪುಟದಿಂದ...

ಅಗತ್ಯ ವಸ್ತುಗಳ ಬೆಲೆ ಹೆಚ್ಚಳಕ್ಕೆ ಕೇಂದ್ರದ ವಿರುದ್ಧ ಕಿಡಿಕಾರಿರುವ ಅವರು, 'ರೈತರು, ನೌಕರರು ಮತ್ತು ಕಾರ್ಮಿಕ ವರ್ಗದವರನ್ನು ಆರ್ಥಿಕ ಸಂಕಷ್ಟಕ್ಕೆ ದೂಡಲಾಗುತ್ತಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರ ಕೆಲವು ಉದ್ಯಮಿ ಸ್ನೇಹಿತರು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಬಡವರ ಆಸ್ತಿಯು ಪ್ರಧಾನಿ ಅವರ ಸ್ನೇಹಿತರಿಗೆ ವರ್ಗಾವಣೆಯಾಗುತ್ತಿದೆ' ಎಂದು ದೂರಿದ್ದಾರೆ.

'ಕೇಂದ್ರ ಸರ್ಕಾರ ಜಿಡಿಪಿ ಎನ್ನುವ ಹೊಸ ಕಲ್ಪನೆಯನ್ನು ಆರಂಭಿಸಿದೆ. ಅಂದರೆ, ಗ್ಯಾಸ್ (ಅಡುಗೆ ಅನಿಲ), ಡೀಸೆಲ್ ಹಾಗೂ ಪೆಟ್ರೋಲ್ ಬೆಲೆ ಹೆಚ್ಚಳ ಮಾಡುವುದಾಗಿದೆ. ಇವುಗಳಿಂದ ಸಂಗ್ರಹವಾಗಿರುವ ₹23 ಲಕ್ಷ ಕೋಟಿ ಮೊತ್ತ ಎಲ್ಲಿ ಹೋಗಿದೆ ಎನ್ನುವುದನ್ನು ದೇಶದ ಜನತೆ ಪ್ರಶ್ನಿಸಬೇಕು' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.



'ತಾನು ನೀಡಿದ ಭರವಸೆಗಳನ್ನು ಈಡೇರಿಸಲು ಸಾಧ್ಯವಾಗದಿರುವುದಕ್ಕೆ ಸರ್ಕಾರ ಆತಂಕಗೊಂಡಿದೆ. ಕೇವಲ ಇಂಧನಗಳ ಬೆಲೆಗಳ ಮೇಲೆ ಸರ್ಕಾರ ಬದುಕುತ್ತಿದೆ' ಎಂದು ತಿಳಿಸಿದ್ದಾರೆ.

'2014ರಿಂದ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಅಂತರರಾಷ್ಟ್ರೀಯ ಬೆಲೆಗಳು ಕಡಿಮೆಯಾಗಿವೆ. ಆದರೆ, ಭಾರತದಲ್ಲಿ ಮಾತ್ರ ಬೆಲೆಗಳು ಗಗನಕ್ಕೇರಿವೆ. ದೇಶವು ಒಗ್ಗಟ್ಟಾಗಿ ಈ ಅನ್ಯಾಯದ ವಿರುದ್ಧ ಹೋರಾಟ ನಡೆಸಲಿದೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

2014ರ ಆರಂಭದಲ್ಲಿ ಯುಪಿಎ ಆಡಳಿತ ನಡೆಸುತ್ತಿದ್ದ ಸಂದರ್ಭದಲ್ಲಿನ ಬೆಲೆಗಳನ್ನು ಈಗಿನ ಬೆಲೆಗಳಿಗೆ ಅವರು ಹೋಲಿಕೆ ಮಾಡಿರುವ ವಿವರಗಳನ್ನು ಈ ಸಂದರ್ಭದಲ್ಲಿ ಅವರು ಪ್ರದರ್ಶಿಸಿದರು.

ಕಂಗನಾ ಅರ್ಜಿ: ಆದೇಶ ಕಾಯ್ದಿರಿಸಿದ ಬಾಂಬೆ ಹೈಕೋರ್ಟ್

ಮುಂಬೈ(ಪಿಟಿಐ): ತಮ್ಮ ವಿರುದ್ಧ ದಾಖಲಾಗಿರುವ ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸುವಂತೆ ಕೋರಿ ನಟಿ ಕಂಗನಾ ರನೌತ್ ಸಲ್ಲಿಸಿದ್ದ ಅರ್ಜಿಯ ಆದೇಶವನ್ನು ಬಾಂಬೆ ಹೈಕೋರ್ಟ್ ಕಾಯ್ದಿರಿಸಿದೆ.

ಲೇಖಕ ಮತ್ತು ಗೀತ ರಚನೆಕಾರ ಜಾವೇದ್ ಅಖ್ತರ್ ಅವರು ಕಂಗನಾ ವಿರುದ್ಧ ಕಳೆದ ನವೆಂಬರ್‌ನಲ್ಲಿ ಅಂಧೇರಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು.

ನ್ಯಾಯಮೂರ್ತಿ ರೇವತಿ ಮೋಹಿತೆ ಡೆರೆ ನೇತೃತ್ವದ ಏಕಸದಸ್ಯ ಪೀಠ ಅರ್ಜಿಯ ವಿಚಾರಣೆ ನಡೆಸಿತು. ಸೆ. 9ರಂದು ಬಾಂಬೆ ಹೈಕೋರ್ಟ್ ಆದೇಶ ನೀಡುವ ಸಾಧ್ಯತೆ ಇದೆ.

ಇವಿಎಂ, ವಿವಿಪ್ಯಾಟ್ ಬಳಕೆಗೆ ಅವಕಾಶ: ತ್ವರಿತ ವಿಚಾರಣೆ ಕೋರಿ 'ಸುಪ್ರೀಂ'ಗೆ ಆಯೋಗದ ಅರ್ಜಿ

'ಚುನಾವಣಾ ತಕರಾರು ಅರ್ಜಿ ಸಲ್ಲಿಕೆಗೆ ಕಾಲಮಿತಿ ಇರಲಿ'

ನವದೆಹಲಿ (ಪಿಟಿಐ): ಆರು ರಾಜ್ಯಗಳ ವಿಧಾನಸಭೆಗೆ ನಡೆದ ಚುನಾವಣೆಗೆ ಬಳಸಲಾದ ಇವಿಎಂ ಹಾಗೂ ವಿವಿಪ್ಯಾಟ್‌ಗಳನ್ನು ತಕರಾರು ಅರ್ಜಿಗಳ ಕಾರಣಗಳಿಂದಾಗಿ ಪುನಃ ಬಳಕೆ ಮಾಡಲು ಆಗುತ್ತಿಲ್ಲ. ಇವುಗಳ ಬಳಕೆಗೆ ಅನುಕೂಲವಾಗುವ ಸಂಬಂಧ ವಿಚಾರಣೆಯನ್ನು ತ್ವರಿತಗೊಳಿಸುವಂತೆ ಕೋರಿ ಚುನಾವಣಾ ಆಯೋಗ ಸುಪ್ರೀಂಕೋರ್ಟ್‌ಗೆ ಬುಧವಾರ ಅರ್ಜಿ ಸಲ್ಲಿಸಿದೆ.




ಚುನಾವಣಾ ಆಯೋಗದ ಅರ್ಜಿಯನ್ನು ಪುರಸ್ಕರಿಸಿರುವ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಸೂರ್ಯಕಾಂತ ಹಾಗೂ ಎ.ಎಸ್.ಬೋಪಣ್ಣ ಅವರಿರುವ ನ್ಯಾಯಪೀಠ, ಮುಂದಿನ ವಾರ ವಿಚಾರಣೆ ನಡೆಸುವುದಾಗಿ ಹೇಳಿತು.

'ಚುನಾವಣಾ ತಕರಾರು ಅರ್ಜಿಗಳ ಹಿನ್ನೆಲೆಯಲ್ಲಿ ಭಾರಿ ಸಂಖ್ಯೆಯಲ್ಲಿ ಇವಿಎಂ ಹಾಗೂ ವಿವಿಪ್ಯಾಟ್‌ಗಳನ್ನು ಸಂರಕ್ಷಿಸಿ ಇಡಲಾಗಿದೆ. ತಕರಾರು ಅರ್ಜಿಗಳ ವಿಲೇವಾರಿಯಾಗದೇ ಇವುಗಳನ್ನು ಬಳಕೆ ಮಾಡುವಂತಿಲ್ಲ. ಹೀಗಾಗಿ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು' ಎಂದು ಆಯೋಗದ ಪರ ಹಿರಿಯ ವಕೀಲ ವಿಕಾಸ್ ಸಿಂಗ್ ನ್ಯಾಯಾಲಯಕ್ಕೆ ಮನವಿ ಮಾಡಿದರು.

'ಅಸ್ಸಾಂ, ಕೇರಳ, ದೆಹಲಿ, ಪುದುಚೇರಿ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳ ವಿಧಾನಸಭೆಗೆ ನಡೆದ ಚುನಾವಣೆಗೆ ಸಂಬಂಧಿಸಿ ತಕರಾರು ಅರ್ಜಿಗಳನ್ನು ಸಲ್ಲಿಸಲು ಕಾಲಮಿತಿ ನಿಗದಿ ಮಾಡಬೇಕು ಎಂದೂ ಅವರು ಮನವಿ ಮಾಡಿದರು.

'ಮುಂದಿನ ವರ್ಷ ಉತ್ತರ ಪ್ರದೇಶ, ಉತ್ತರಾಖಂಡ ಹಾಗೂ ಪಂಜಾಬ್ ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದ್ದು, ಇವಿಎಂ, ವಿವಿಪ್ಯಾಟ್‌ಗಳ ಅಗತ್ಯವಿದೆ' ಎಂದು ಅವರು ಕೋರ್ಟ್ ಗಮನಕ್ಕೆ ತಂದರು.

ಷೇರುಪೇಟೆ ವಹಿವಾಟು 133



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,132
ಇಂದಿನ ಅಂತ್ಯ	17,076
▼	56
ದಿನದ ಕನಿಷ್ಠ	17,055

ವಿನಿಮಯ ದರ

$ ಡಾಲರ್	73.08
£ ಪೌಂಡ್	100.55
€ ಯುರೊ	86.39
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹421

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1590)
ಸೋಯಾ (ರಿಫೈನ್ಡ್)	₹1390(1395)
ಸೂರ್ಯಕಾಂತಿ (ರಿಫೈನ್ಡ್)	₹1460(1480)
ಪಾಮೋಲಿನ್	₹1250 (1265)

ಸಂಕ್ಷಿಪ್ತ ಸುದ್ದಿ

66ನೇ ವರ್ಷಕ್ಕೆ ಕಾಲಿರಿಸಿದ ಎಲ್‌ಐಸಿ

ಬೆಂಗಳೂರು: ದೇಶದ ಅತಿದೊಡ್ಡ ಜೀವ ವಿಮಾ ಕಂಪನಿಯಾಗಿರುವ 'ಭಾರತೀಯ ಜೀವ ವಿಮಾ ನಿಗಮ'ವು (ಎಲ್‌ಐಸಿ) ಬುಧವಾರಕ್ಕೆ (ಸೆಪ್ಟೆಂಬರ್ 1) 65 ವರ್ಷಗಳನ್ನು ಪೂರೈಸಿ, 66ನೆಯ ವರ್ಷಕ್ಕೆ ಕಾಲಿಟ್ಟಿದೆ. 'ಬ್ರ್ಯಾಂಡ್ ಫೈನಾನ್ಸ್ ಇನ್ಶುರೆನ್ಸ್ 100' ಸಮೀಕ್ಷೆಯ ಪ್ರಕಾರ ಎಲ್‌ಐಸಿ ವಿಶ್ವದಲ್ಲಿ ಮೂರನೆಯ ಅತ್ಯಂತ ಬಲಿಷ್ಠ, 10ನೆಯ ಅತ್ಯಂತ ಮೌಲ್ಯಯುತ ಬ್ರ್ಯಾಂಡ್ ಆಗಿದೆ ಎಂದು ಕಂಪನಿಯ ಪ್ರಕಟಣೆ ಹೇಳಿದೆ.

1956ರಲ್ಲಿ ₹ 5 ಕೋಟಿ ಬಂಡವಾಳದೊಂದಿಗೆ ಆರಂಭವಾದ ಎಲ್‌ಐಸಿ ಇಂದು ದೇಶದ ವಿಮಾ ವಲಯದಲ್ಲಿ ಮೊದಲ ಸ್ಥಾನದಲ್ಲಿದೆ. 2020–21ನೆಯ ಸಾಲಿನಲ್ಲಿ ಕಂಪನಿಯು 2.10 ಕೋಟಿ ವಿಮೆಗಳನ್ನು ಮಾರಾಟ ಮಾಡಿದೆ. ಕಂಪನಿಯು ಈಗ 14 ದೇಶಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದೆ.

ಒಂದು ಲಕ್ಷಕ್ಕಿಂತ ಹೆಚ್ಚಿನ ನೌಕರರು, 13.53 ಲಕ್ಷಕ್ಕಿಂತ ಹೆಚ್ಚಿನ ಏಜೆಂಟರು ಇರುವ ಕಂಪನಿಯು ವಿಮಾ ಗ್ರಾಹಕರ ಹಣವನ್ನು ಸಮುದಾಯದ ಒಳಿತಿಗಾಗಿಯೂ, ಗ್ರಾಹಕರಿಗೆ ಒಳ್ಳೆಯ ಲಾಭ ಬರುವಲ್ಲಿಯೂ ಹೂಡಿಕೆ ಮಾಡುತ್ತಿದೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಜೆರೊದಾದಿಂದ ಶೀಘ್ರವೇ ಎಎಂಸಿ ಆರಂಭ?

ಬೆಂಗಳೂರು: ಜನಪ್ರಿಯ ಷೇರು ಬ್ರೋಕರೇಜ್ ಕಂಪನಿಯಾಗಿರುವ ಜೆರೊದಾ ಶೀಘ್ರದಲ್ಲಿಯೇ ಮ್ಯೂಚುವಲ್ ಫಂಡ್ ವಹಿವಾಟುಗಳಿಗೂ ಲಗ್ಗೆ ಇಡುವ ಸಾಧ್ಯತೆ ಇದೆ. ತನ್ನದೇ ಆದ ಆಸ್ತಿ ನಿರ್ವಹಣಾ ಕಂಪನಿ (ಎಎಂಸಿ) ಆರಂಭಿಸಲು 'ಜೆರೊದಾ'ಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಅನುಮತಿ ನೀಡಿದೆ.

'ಎಎಂಸಿ (ಮ್ಯೂಚುವಲ್ ಫಂಡ್) ಪರವಾನಗಿ ಕೋರಿದ್ದಕ್ಕೆ ನಮಗೆ ತಾತ್ವಿಕ ಒಪ್ಪಿಗೆ ದೊರೆತಿದೆ. ಇನ್ನು ಮುಂದೆ ಕಠಿಣ ಕೆಲಸವಿದೆ' ಎಂದು ಜೆರೊದಾ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ನಿತಿನ್ ಕಾಮತ್ ಅವರು ಬುಧವಾರ ಟ್ವೀಟ್ ಮಾಡಿದ್ದಾರೆ.

'ಬಂಡವಾಳ ಮಾರುಕಟ್ಟೆಯಲ್ಲಿನ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು, ಈಗ ಹೂಡಿಕೆ ಮಾಡುತ್ತಿಲ್ಲದವರನ್ನು ತಲುಪಲು ಮ್ಯೂಚುವಲ್ ಫಂಡ್‌ಗಳನ್ನು ಮರುರೂಪಿಸಬೇಕಿದೆ ಎಂಬುದು ನಮ್ಮ ಅನಿಸಿಕೆ. ಹಾಗಾಗಿ, ನಾವು ಆಸ್ತಿ ನಿರ್ವಹಣಾ ಕಂಪನಿ (ಮ್ಯೂಚುವಲ್ ಫಂಡ್) ಆರಂಭಿಸಲು ಅರ್ಜಿ ಸಲ್ಲಿಸಿದ್ದೇವೆ' ಎಂದು ಕಾಮತ್ ಅವರು ಈ ಹಿಂದೆ ಹೇಳಿದ್ದರು.

ಮುಂಬೈ ಧಾರಣೆ

ಶೇಂಗಾ

1-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1600)
ಒಂದು ವಾರದ ಡೆಲಿವರಿ	1575 (1595)
ಸೋಯಾ ಕಚ್ಚಾ	1350 (1360)
ಪಾಮ್ ವಾರದ ಡೆಲಿವರಿ	1248 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1430)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,150 (46,950)
ಬೆಳ್ಳಿ ಕೆ.ಜಿ 63,150 (63,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕಳಸ: ಕ್ವಿಂಟಲ್‌ಗೆ ₹55 ಸಾವಿರದ ಗಡಿ ದಾಟಿದ ಧಾರಣೆ

ಕೆಂಪು ಅಡಿಕೆಗೆ ದಾಖಲೆ ಬೆಲೆ

• ರವಿ ಕೆಳಂಗಡಿ

ಮುಖ್ಯಾಂಶಗಳು

- ಕಡಿಮೆಯಾದ ಅಡಿಕೆ ಫಸಲು
- ಕೆಂಪು ಅಡಿಕೆ ಸರಾಸರಿ ಬೆಲೆ ₹ 53,600
- ಬೆಳೆಗಾರರಿಗೆ ಬಂಪರ್ ಬೆಲೆ

ಕಳಸ: ಕೆಂಪು ಅಡಿಕೆಯ ಬೆಲೆಯು ಐದು ವರ್ಷಗಳಲ್ಲಿ ಗರಿಷ್ಠ ಮಟ್ಟ ತಲುಪಿದ್ದು, ಬೆಳೆಗಾರರು ಮತ್ತು ವ್ಯಾಪಾರಿಗಳಲ್ಲಿ ಸಂಚಲನ ಮೂಡಿಸಿದೆ.

ಮಲೆನಾಡಿನ ಪ್ರಮುಖ ಅಡಿಕೆ ಮಾರುಕಟ್ಟೆಯಾದ ಶಿವಮೊಗ್ಗದಲ್ಲಿ ಬುಧವಾರ ರಾಶಿ ಇಡಿ ಅಡಿಕೆ ಕ್ವಿಂಟಲ್‌ಗೆ ಗರಿಷ್ಠ ₹ 54,700ಕ್ಕೆ ಮಾರಾಟವಾಗಿದೆ. ಕಳಸದಲ್ಲಿ ಕೈ ವ್ಯಾಪಾರದಲ್ಲಿ ಇದು ₹ 55 ಸಾವಿರದ ಗಡಿ ದಾಟಿದೆ. ಸದ್ಯ ಕೆಂಪು ಅಡಿಕೆ ಸರಾಸರಿ ಬೆಲೆಯು ₹ 53,600 ಇದೆ. 'ಹಸ' (ಸರಕು) ಅಡಿಕೆಯ ಬೆಲೆಯು ಗರಿಷ್ಠ ₹ 76,000 ತಲುಪಿದೆ. ಬೆಟ್ಟೆ ಅಡಿಕೆಯು ₹ 53,600ಕ್ಕೆ ಮಾರಾಟ ಆಗಿದೆ. ಕಡಿಮೆ ಗುಣಮಟ್ಟದ ಗೊರಬಲು ಮಾದರಿ ಅಡಿಕೆಗೂ ₹ 39,500 ದರ ಬಂದಿದ್ದು, ಬೆಳೆಗಾರರಿಗೆ ಬಂಪರ್ ಬೆಲೆ ಲಭಿಸಿದಂತಾಗಿದೆ.

'ದೇಶದಲ್ಲಿ ಅಡಿಕೆ ಫಸಲು ಕಡಿಮೆಯಾಗಿರುವುದು, ಆಮದು ಅಡಿಕೆಗೆ ಗರಿಷ್ಠ ಬೆಲೆ ನಿಗದಿ ಮಾಡಿರುವುದು ಮತ್ತು ವಿದೇಶಗಳಿಂದ ಕಳ್ಳ ಸಾಗಾಣಿಕೆ ಮೂಲಕ ಬರುತ್ತಿದ್ದ ಅಡಿಕೆಗೆ ಕಡಿವಾಣ ಬಿದ್ದಿರುವುದರಿಂದ ಬೆಲೆಯಲ್ಲಿ ಗಣನೀಯ ಏರಿಕೆಯಾಗುತ್ತಿದೆ' ಎನ್ನುತ್ತಾರೆ ಮಾರುಕಟ್ಟೆ ತಜ್ಞರು.


ಅಡಿಕೆ ಫಸಲು

2016ರಲ್ಲಿ ಕೆಂಪು ಅಡಿಕೆ ಬೆಲೆ ಕ್ವಿಂಟಲ್‌ಗೆ ₹ 80 ಸಾವಿರದ ಗಡಿ ದಾಟಿ ದಾಖಲೆ ಬರೆದಿತ್ತು. ಆ ನಂತರ ದಾಖಲಾಗಿರುವ ಗರಿಷ್ಠ ಬೆಲೆ ಇದು. 'ಈಗಿನ ಬೆಲೆ ಏರಿಕೆಯ ವೇಗ ಗಮನಿಸಿದರೆ ಹಿಂದಿನ ದಾಖಲೆ ಮಟ್ಟಕ್ಕೆ ಏರಿದರೂ ಅಚ್ಚರಿ ಇಲ್ಲ' ಎನ್ನುತ್ತಾರೆ ಅಡಿಕೆ ವ್ಯಾಪಾರಿ ದಿಲೀಪ್.

'ಅಡಿಕೆ ಬೆಲೆ ಗರಿಷ್ಠ ಎಲ್ಲಿಯವರೆಗೆ ಹೋಗುತ್ತದೆ ಎಂದು ನೋಡಲು ಪ್ರತಿ ವರ್ಷ 100 ಮೂಟೆ ಅಡಿಕೆ ಇಟ್ಟುಕೊಂಡು ಕಾಯುವ ಪ್ರವೃತ್ತಿ ಬೆಳೆಸಿಕೊಂಡಿದ್ದೇನೆ' ಎಂದು ಬೆಳೆಗಾರ ಕೃಷ್ಣ ಶೆಟ್ಟಿ ಹೇಳಿದರು.

₹ 1.12 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ಜುಲೈಗೆ ಹೋಲಿಸಿದರೆ ಆಗಸ್ಟ್‌ನಲ್ಲಿ ಶೇ 3.7ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಆಗಸ್ಟ್‌ನಲ್ಲಿ ₹ 1.12 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಜುಲೈಗೆ ಹೋಲಿಸಿದರೆ ಜಿಎಸ್‌ಟಿ ವರಮಾನ ಸಂಗ್ರಹವು ಶೇಕಡ 3.76ರಷ್ಟು ಇಳಿಕೆಯಾಗಿದೆ.



ಜಿಎಸ್‌ಟಿ ಸಂಗ್ರಹ (ಲಕ್ಷ ಕೋಟಿಗಳಲ್ಲಿ)

₹1.41	ಏಪ್ರಿಲ್
₹1.02	ಮೇ
₹92,849 *	ಜೂನ್
₹1.16	ಜುಲೈ
₹1.12	ಆಗಸ್ಟ್

* (ಕೋಟಿಗಳಲ್ಲಿ)

2020ರ ಆಗಸ್ಟ್‌ನಲ್ಲಿ ಸಂಗ್ರಹವಾಗಿದ್ದ ₹ 86,449 ಕೋಟಿಗೆ ಹೋಲಿಸಿದರೆ ತೆರಿಗೆ ಸಂಗ್ರಹವು ಶೇ 30ರಷ್ಟು ಏರಿಕೆ ಕಂಡಿದೆ. 2019ರ ಆಗಸ್ಟ್‌ಗೆ ಹೋಲಿಸಿದರೆ ಶೇ 14ರಷ್ಟು ಹೆಚ್ಚಾಗಿದೆ.

2021ರ ಆಗಸ್ಟ್‌ನಲ್ಲಿ ಕೇಂದ್ರ ಜಿಎಸ್‌ಟಿ ಮೂಲಕ ₹ 20,522 ಕೋಟಿ, ರಾಜ್ಯ ಜಿಎಸ್‌ಟಿ ಮೂಲಕ ₹ 26,605 ಕೋಟಿ, ಸಮಗ್ರ ಜಿಎಸ್‌ಟಿ ಮೂಲಕ ₹ 56,247 ಕೋಟಿ ಹಾಗೂ ಸೆಸ್ ಮೂಲಕ ₹ 8,646 ಕೋಟಿ ಸಂಗ್ರಹ ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಸತತ ಒಂಬತ್ತು ತಿಂಗಳುಗಳವರೆಗೆ ₹ 1 ಲಕ್ಷ ಕೋಟಿಯನ್ನು ದಾಟಿದ್ದ ಜಿಎಸ್‌ಟಿ ಸಂಗ್ರಹವು ಕೋವಿಡ್‌ನ ಎರಡನೇ ಅಲೆಯ ಪರಿಣಾಮವಾಗಿ ಜೂನ್‌ನಲ್ಲಿ ₹ 1 ಲಕ್ಷ ಕೋಟಿಗಿಂತ ಕೆಳಕ್ಕೆ ಇಳಿದಿತ್ತು.

ಕೋವಿಡ್ ನಿರ್ಬಂಧಗಳು ಸಡಿಲಗೊಂಡ ಬಳಿಕ ಜುಲೈ ಮತ್ತು ಆಗಸ್ಟ್‌ನಲ್ಲಿ ಜಿಎಸ್‌ಟಿ ಸಂಗ್ರಹವು ಮತ್ತೆ ₹ 1 ಲಕ್ಷ ಕೋಟಿಯನ್ನು ದಾಟಿದೆ. ಆರ್ಥಿಕತೆಯು ವೇಗವಾಗಿ ಚೇತರಿಕೆ ಕಾಣುತ್ತಿದೆ ಎನ್ನುವುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತಿದೆ. ತೆರಿಗೆ ವಂಚನೆ ತಡೆಗೆ ಕೈಗೊಂಡಿರುವ ಕ್ರಮಗಳು ಸಹ ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಕೊಡುಗೆ ನೀಡಿವೆ. ಮುಂಬರುವ ತಿಂಗಳುಗಳಲ್ಲಿಯೂ ಜಿಎಸ್‌ಟಿ ವರಮಾನ ಸಂಗ್ರಹವು ಉತ್ತಮವಾಗಿರುವ ಸಾಧ್ಯತೆ ಇದೆ ಎಂದು ಸಚಿವಾಲಯವು ಹೇಳಿದೆ.

ಜಿಎಸ್‌ಟಿ ಸಂಗ್ರಹದಲ್ಲಿ ಇಳಿಕೆ, ಮೂಲಸೌಕರ್ಯ ವಲಯದ ಪ್ರಮುಖ ಎಂಟು ವಲಯಗಳ ಬೆಳವಣಿಗೆ ನಿರೀಕ್ಷೆಗಿಂತಲೂ ಕಡಿಮೆ ಇರುವುದು ಹಾಗೂ ತಯಾರಿಕಾ ವಲಯದ ಸೂಚ್ಯಂಕವು ಅಲ್ಪ ಇಳಿಕೆ ಕಂಡಿರುವುದು ಪ್ರಸಕ್ತ ತ್ರೈಮಾಸಿಕದಲ್ಲಿ ಆರ್ಥಿಕ ಚೇತರಿಕೆಯ ಬಗ್ಗೆ ಎಚ್ಚರಿಕೆ ವಹಿಸುವ ಅಗತ್ಯವಿದೆ ಎನ್ನುವುದನ್ನು ಸೂಚಿಸುತ್ತಿವೆ ಎಂದು ಐಸಿಆರ್‌ಎನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಅಭಿಪ್ರಾಯಪಟ್ಟಿದ್ದಾರೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 7.8ರಿಂದ ಶೇ 8.8ರ ಮಟ್ಟದಲ್ಲಿ ಇರುವ ನಿರೀಕ್ಷೆ ಇದೆ. ಸೇವಾ ವಲಯದ ಬೆಳವಣಿಗೆ ಕಡಿಮೆ ಮಟ್ಟದಲ್ಲಿ ಇರುವುದರಿಂದ ಜಿಡಿಪಿಯು ಕೋವಿಡ್‌ಗೂ ಮುಂಚಿನ ಮಟ್ಟವನ್ನು ತಲುಪಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ.

ಜುಲೈ 2021ರ ಸಂಗ್ರಹಕ್ಕೆ ಹೋಲಿಸಿದರೆ ಆಗಸ್ಟ್‌ನಲ್ಲಿ ವರಮಾನದಲ್ಲಿ ಸ್ಥಿರತೆ ಬಂದಿರುವಂತಿದೆ. ಆರ್ಥಿಕತೆಯು ಸ್ಥಿರ ಅಭಿವೃದ್ಧಿ ಕಾಣುತ್ತಿದೆ ಎಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ ಎಂದು ಸಿಂಘಾನಿಯಾ ಜಿಎಸ್‌ಟಿ ಕನ್ಸಲ್ಟೆನ್ಸಿ ಪಾಲುದಾರ ಆದಿತ್ಯ ಸಿಂಘಾನಿಯಾ ಹೇಳಿದ್ದಾರೆ.

ಆಗಸ್ಟ್‌ನಲ್ಲಿ ಪ್ರಯಾಣಿಕ ವಾಹನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಆಗಸ್ಟ್ ತಿಂಗಳಲ್ಲಿ ಹುಂಡೈ, ಟಾಟಾ ಮೋಟರ್ಸ್, ಮಹೀಂದ್ರ, ಟೊಯೋಟ ಕಿರ್ಲೋಸ್ಕರ್ ಮತ್ತು ಹೋಂಡಾ ಕಂಪನಿಗಳ ಪ್ರಯಾಣಿಕ ವಾಹನಗಳ ಮಾರಾಟವು ಹೆಚ್ಚಳ ಕಂಡಿದೆ. ಆದರೆ, ಸೆಮಿಕಂಡಕ್ಟರ್ ಕೊರತೆಯಿಂದಾಗಿ ಮಾರುತಿ ಸುಜುಕಿ ಕಂಪನಿಯ ವಾಹನಗಳ ಮಾರಾಟ ಇಳಿಕೆ ಆಗಿದೆ.

ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ (ಎಂಎಸ್‌ಐಎಲ್) ಕಂಪನಿಯ ದೇಶಿ ಮಾರಾಟವು ಆಗಸ್ಟ್‌ನಲ್ಲಿ 1.10 ಲಕ್ಷ ಆಗಿದೆ. ಕಳೆದ ವರ್ಷದ ಆಗಸ್ಟ್‌ನಲ್ಲಿ 1.16 ಲಕ್ಷ ವಾಹನಗಳು ಮಾರಾಟ ಆಗಿದ್ದವು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 6ರಷ್ಟು ಇಳಿಕೆ ಆಗಿದೆ. ಆದರೆ, ಒಟ್ಟಾರೆ ಮಾರಾಟವು ಶೇ 5ರಷ್ಟು ಏರಿಕೆಯಾಗಿದೆ.



ಎಲೆಕ್ಟ್ರಾನಿಕ್ ಬಿಡಿಭಾಗಗಳ ಕೊರತೆಯಿಂದಾಗಿ 2021ರ ಆಗಸ್ಟ್‌ನಲ್ಲಿ ಮಾರಾಟದ ಮೇಲೆ ಪರಿಣಾಮ ಉಂಟಾಗಿದೆ. ಹೆಚ್ಚಿನ ಪರಿಣಾಮವನ್ನು ತಡೆಯಲು ಸಾಧ್ಯವಾದ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಹುಂಡೈ ಮೋಟರ್ ಇಂಡಿಯಾ ಕಂಪನಿಯ ಮಾರಾಟವು ಶೇ 2ರಷ್ಟು ಹೆಚ್ಚಾಗಿದೆ. ಮಹೀಂದ್ರ ಕಂಪನಿಯು ತನ್ನ ದೇಶಿ ಪ್ರಯಾಣಿಕ ವಾಹನ ಮಾರಾಟವು ಶೇ 17ರಷ್ಟು ಹೆಚ್ಚಾಗಿದೆ ಎಂದು ತಿಳಿಸಿದೆ.

ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನ ಮಾರಾಟ ಶೇ 51ರಷ್ಟು ಏರಿಕೆ ಕಂಡಿದೆ. ಕಿಯಾ ಇಂಡಿಯಾದ ಮಾರಾಟವು ಶೇ 55ರಷ್ಟು ಹೆಚ್ಚಾಗಿದೆ. ಹೋಂಡಾ ಕಾರ್ಸ್ ಇಂಡಿಯಾದ ಮಾರಾಟ ಶೇ 49ರಷ್ಟು ಹೆಚ್ಚಾಗಿದೆ ಎಂದು ಕಂಪನಿಗಳು ತಿಳಿಸಿವೆ. ಸ್ಕೋಡಾ ಆಟೊ ಇಂಡಿಯಾ ಮತ್ತು ನಿಸಾನ್ ಮೋಟರ್ ಇಂಡಿಯಾದ ಮಾರಾಟವು ನಾಲ್ಕು ಪಟ್ಟು ಏರಿಕೆ ಕಂಡಿದೆ.

ಪೆಟ್ರೋಲ್, ಡೀಸೆಲ್ ತುಸು ಅಗ್ಗ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಬುಧವಾರ ಪೆಟ್ರೋಲ್ ದರವನ್ನು 10 ಪೈಸೆ ಮತ್ತು ಡೀಸೆಲ್ ದರವನ್ನು 14 ಪೈಸೆಯಷ್ಟು ಇಳಿಕೆ ಮಾಡಿವೆ.

ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 104.87 ಮತ್ತು ಡೀಸೆಲ್ ದರ ₹ 94.22ರಷ್ಟಾಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ₹ 101.34 ಮತ್ತು ಡೀಸೆಲ್ ದರ ₹ 88.77ಕ್ಕೆ ತಲುಪಿದ್ದರೆ, ಮುಂಬೈನಲ್ಲಿ ಪೆಟ್ರೋಲ್ ದರ ₹ 107.39 ಮತ್ತು ಡೀಸೆಲ್ ದರ ₹ 96.33ರಷ್ಟಾಗಿದೆ.

ಅಲ್ಪ ತಗ್ಗಿದ ತಯಾರಿಕಾ ವಲಯ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಆಗಸ್ಟ್ ತಿಂಗಳಲ್ಲಿ ತುಸು ಇಳಿಕೆ ಕಂಡಿವೆ. ಜುಲೈ ತಿಂಗಳಲ್ಲಿ 55.3ರಷ್ಟು ಇದ್ದ ಐಎಚ್‌ಎಸ್ ಮರ್ಕಿಟ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ), ಆಗಸ್ಟ್‌ನಲ್ಲಿ 52.3ಕ್ಕೆ ಇಳಿದಿದೆ.

ಆದರೆ ಈ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರುವುದು ತಯಾರಿಕಾ ವಲಯದ ಚಟುವಟಿಕೆಗಳು ಬೆಳವಣಿಗೆ ಕಂಡಿರುವುದನ್ನು ಹೇಳುತ್ತಿವೆ. ಸೂಚ್ಯಂಕವು 50ಕ್ಕಿಂತ ಕಡಿಮೆ ಇದ್ದರೆ ಚಟುವಟಿಕೆಗಳು ಕುಸಿದಿವೆ ಎಂದು ಅರ್ಥೈಸಲಾಗುತ್ತದೆ.



'ಆಗಸ್ಟ್ ತಿಂಗಳಲ್ಲಿ ದೇಶದ ತಯಾರಿಕಾ ವಲಯದ ಚೇತರಿಕೆಯು ಮುಂದುವರಿದಿದೆ. ಆದರೆ, ಚೇತರಿಕೆಯ ವೇಗವು ಕಡಿಮೆ ಆಗಿದೆ. ಬೇಡಿಕೆಯು ತುಸು ಕಡಿಮೆ ಆಗಿದ್ದು ಇದಕ್ಕೆ ಕಾರಣ' ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆಯ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ.

ಅತ್ಯಾಚಾರ ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ: ಸಿದ್ದರಾಮಯ್ಯ ಆರೋಪ

ಪ್ರಜಾವಾಣಿ ವಾರ್ತೆ

ಮೈಸೂರು: 'ಲಲಿತಾದ್ರಿಪುರ ಗುಡ್ಡದಲ್ಲಿ ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಸರ್ಕಾರ ಮುಚ್ಚಿ ಹಾಕಲು ಪ್ರಯತ್ನಿಸಿತ್ತು. ಗೃಹಸಚಿವರು ಕೂಡಲೇ ರಾಜೀನಾಮೆ ನೀಡಬೇಕು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

'ಘಟನೆ ಕುರಿತು ರಾತ್ರಿ 9.30ಕ್ಕೆ ಮಾಹಿತಿ ದೊರಕಿದ್ದರೂ ಸುಮಾರು 15 ಗಂಟೆಗಳಷ್ಟು ತಡವಾಗಿ ಪ್ರಕರಣ ದಾಖಲಿಸಲಾಗಿದೆ. ಹೇಳಿಕೆ ಪಡೆಯದೇ ಸಂತ್ರಸ್ತೆಯನ್ನು ಕಳುಹಿಸಿದ್ದು ಅನುಮಾನಗಳನ್ನು ಮೂಡಿಸುತ್ತದೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

'ಹೇಳಿಕೆ ನೀಡುವಂತೆ ಸಂತ್ರಸ್ತೆಯ ಮನವೊಲಿಸಲು ಪ್ರಯತ್ನಿಸಲಿಲ್ಲ. ಮ್ಯಾಜಿಸ್ಟ್ರೇಟ್ ಮುಂದೆ ಹೇಳಿಕೆ ದಾಖಲಿಸುವ ಅವಕಾಶವನ್ನೂ ನಿರ್ಲಕ್ಷ್ಯಿಸಿದರು. ಹೇಳಿಕೆ ಪಡೆಯಬೇಡಿ ಎಂದು ಸರ್ಕಾರವೇ ಹೇಳಿರಬಹುದು' ಎಂದು ಶಂಕೆ ವ್ಯಕ್ತಪಡಿಸಿದರು.

'ಘಟನೆಯ ಕುರಿತು ಮಾಹಿತಿ ಪಡೆಯಲು ಮೈಸೂರಿಗೆ ಬಂದಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ ಸುತ್ತಾಟದಲ್ಲೇ ಕಾಲ ಕಳೆದರು. ಮಧ್ಯರಾತ್ರಿಯಲ್ಲೂ ಮಹಿಳೆಯರು ಏಕಾಂಗಿಯಾಗಿ ನಿರ್ಭಯವಾಗಿ ನಡೆದಾಡುವಂತಿರಬೇಕು ಎಂದು ಮಹಾತ್ಮ ಗಾಂಧೀಜಿ ಹೇಳಿದ್ದರೆ, ಗೃಹಸಚಿವರು ಹುಡುಗಿ ಅಲ್ಲಿಗೆ ಹೋಗಿದ್ದೇ ತಪ್ಪು ಎಂಬ ಬಾಲಿಶ ಹೇಳಿಕೆ ನೀಡಿದರು' ಎಂದು ವಿಷಾದಿಸಿದರು.


ಮೈಸೂರಿನಲ್ಲಿ ಸಾಮೂಹಿಕ ಅತ್ಯಾಚಾರ ನಡೆದ ಸ್ಥಳಕ್ಕೆ ಬುಧವಾರ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭೇಟಿ ನೀಡಿದರು

ಪೊಲೀಸರಿಗೆ ಬಹುಮಾನ; ಆಕ್ಷೇಪ

'ಸಾಮೂಹಿಕ ಅತ್ಯಾಚಾರ ನಡೆದಿದ್ದರೂ ಪೊಲೀಸರಿಗೆ ಬಹುಮಾನ ಘೋಷಿಸಿದ್ದು ಸರಿಯಲ್ಲ' ಎಂದು ಸಿದ್ದರಾಮಯ್ಯ ಆಕ್ಷೇಪಿಸಿದರು.

'ಆರೋಪಿಗಳನ್ನು ಬಂಧಿಸುವುದು ಪೊಲೀಸರ ಕರ್ತವ್ಯ. ಅವರೇನಾದರೂ ಅತ್ಯಾಚಾರವನ್ನು ತಡೆದಿದ್ದರೆ ಬಹುಮಾನ ನೀಡಬಹುದಿತ್ತು. ಪೊಲೀಸರಿಗೆ ಅಂತಹದ್ದೊಂದು ಜಾಗವಿದೆ ಎಂದೇ ಗೊತ್ತಿರಲಿಲ್ಲ. ಆ ಸ್ಥಳ ಯಾರದ್ದು ಎಂಬ ವಿವರವನ್ನು ಇನ್ನೂ ಸಂಗ್ರಹಿಸಿಲ್ಲ. ಹಣ ಕೊಟ್ಟು ವರ್ಗಾವಣೆ ಮಾಡಿಸಿಕೊಂಡು ಬಂದ ಪೊಲೀಸರಿಂದ ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವಿಲ್ಲ' ಎಂದರು.

ಮಾತಿನ ನಡುವೆ, ಸಂತ್ರಸ್ತೆಯ ಸ್ನೇಹಿತನ ಹೆಸರನ್ನು ಅಪ್ರಜ್ಞಾಪೂರ್ವಕವಾಗಿ ಹೇಳಲೆತ್ನಿಸಿದ ಅವರನ್ನು ಕೆಪಿಸಿಸಿ ವಕ್ತಾರೆ ಮಂಜುಳಾ ಮಾನಸ ಹಾಗೂ ಶಾಸಕ ತನ್ವೀರ್‌ಸೇಠ್ ತಡೆದರು.

ಇನ್‌ಸ್ಪೆಕ್ಟರ್‌ಗೆ ತರಾಟೆ: ಸುದ್ದಿಗೋಷ್ಠಿಗೂ ಮುನ್ನ, ಅತ್ಯಾಚಾರ ನಡೆದ ಸ್ಥಳಕ್ಕೆ ಭೇಟಿ ನೀಡಿದ ಸಿದ್ದರಾಮಯ್ಯ, ಆಲನಹಳ್ಳಿ ಇನ್‌ಸ್ಪೆಕ್ಟರ್ ರವಿಶಂಕರ್ ಅವರನ್ನು ತರಾಟೆಗೆ ತೆಗೆದುಕೊಂಡರು.

'ರಿಂಗ್‌ರಸ್ತೆಗೂ ಘಟನಾ ಸ್ಥಳಕ್ಕೂ ಎಷ್ಟು ದೂರವಿದೆ ಎಂದು ನ್ಯಾಯಾಲಯದಲ್ಲಿ ಕೇಳಿದರೆ ಏನು ಹೇಳುತ್ತೀರಿ' ಎಂದು ಏರುಧ್ವನಿಯಲ್ಲಿ ಪ್ರಶ್ನಿಸಿದ ಅವರು, 'ನಿರಂತರವಾದ ಗಸ್ತು ನಡೆದಿದ್ದರೆ ಅಪರಾಧ ನಡೆಯುತ್ತಿರಲಿಲ್ಲ. ಗಸ್ತು ವಾಹನ ಕೊಟ್ಟರೋದೂ ಪೂಜೆ ಮಾಡಕ್ಕಲ್ಲ' ಎಂದೂ ಬೈಯ್ದರು.

ಸೆಪ್ಟೆಂಬರ್‌ನಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಸಾಧ್ಯತೆ

ನವದೆಹಲಿ (ಪಿಟಿಐ): ಈ ತಿಂಗಳಲ್ಲಿ ದೇಶದ ಮಧ್ಯಭಾಗದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ನಿರೀಕ್ಷೆ ಇದೆ ಎಂದು ಹವಾಮಾನ ಇಲಾಖೆ ಪ್ರಧಾನ ನಿರ್ದೇಶಕ ಮೃತ್ಯುಂಜಯ್ ಮಹಾಪಾತ್ರ ಬುಧವಾರ ಹೇಳಿದ್ದಾರೆ.

ಸದ್ಯ ಮುಂಗಾರು ಕೊರತೆ ಶೇ 9ರಷ್ಟು ಇದೆ. ಸೆಪ್ಟೆಂಬರ್‌ನಲ್ಲಿ ಉತ್ತಮ ಮಳೆಯಾಗುವ ಕಾರಣ ಈ ಕೊರತೆ ಪ್ರಮಾಣ ಸಾಕಷ್ಟು ಕಡಿಮೆ ಆಗುವ ನಿರೀಕ್ಷೆ ಇದೆ ಎಂದು ಅವರು ಹೇಳಿದ್ದಾರೆ.

ಹವಾಮಾನ ಇಲಾಖೆ ಪ್ರಕಾರ ದೇಶದಲ್ಲಿ, ಜುಲೈನಲ್ಲಿ ವಾಡಿಕೆಗಿಂತ ಶೇ 7ರಷ್ಟು ಕಡಿಮೆ ಮಳೆಯಾಗಿದೆ. ಜೂನ್‌ನಲ್ಲಿ ಶೇ 10ರಷ್ಟು ಮಳೆ ಹೆಚ್ಚಾಗಿದೆ. ಆಗಸ್ಟ್‌ನಲ್ಲಿ ವಾಡಿಕೆಗಿಂತ ಶೇ 24ರಷ್ಟು ಕಡಿಮೆ ಮಳೆಯಾಗಿದೆ. ಆದರೆ ಸೆಪ್ಟೆಂಬರ್‌ನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ. ದೇಶದ ಉತ್ತರ, ಈಶಾನ್ಯ ಭಾಗಗಳಲ್ಲಿ ಮತ್ತು ದಕ್ಷಿಣ ಭಾರತದ ದಕ್ಷಿಣ ಭಾಗಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಆಗುವ ಮುನ್ಸೂಚನೆ ನೀಡಲಾಗಿದೆ.

ಬ್ಯಾಡಗಿ ಮೆಣಸಿನಕಾಯಿ ಚಿತ್ರದ ಅಂಚೆ ಲಕೋಟೆ ಬಿಡುಗಡೆ ಸೆ.6ಕ್ಕೆ

ಪ್ರಜಾವಾಣಿ ವಾರ್ತೆ

ಬ್ಯಾಡಗಿ: ಮೆಣಸಿನಕಾಯಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಹೆಚ್ಚಿನ ಪ್ರಚಾರ ದೊರಕಿಸಿಕೊಡುವ ನಿಟ್ಟಿನಲ್ಲಿ 'ಬ್ಯಾಡಗಿ ಮೆಣಸಿನಕಾಯಿ' ಚಿತ್ರವಿರುವ ಅಂಚೆ ಲಕೋಟೆಯನ್ನು ಸೆ.6ರಂದು ಅಂಚೆ ಇಲಾಖೆ ಬಿಡುಗಡೆ ಮಾಡಲಿದೆ.

ಮಾದರಿ ಅಂಚೆ ಲಕೋಟೆ ಮಂಗಳವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅಂಚೆ ಲಕೋಟೆಯ ವಿನ್ಯಾಸವನ್ನು ಗುರುವಾರ ಅಂತಿಮಗೊಳಿಸಲಾಗುತ್ತದೆ ಎಂದು ಅಂಚೆ ಇಲಾಖೆ ತಿಳಿಸಿದೆ.

ಈಚೆಗೆ ಅಂಚೆ ಇಲಾಖೆ ಎಪಿಎಂಸಿ ಸಭಾಭವನದಲ್ಲಿ ವರ್ತಕರ ಹಾಗೂ ಎಪಿಎಂಸಿ ಸದಸ್ಯರ ಪೂರ್ವಭಾವಿ ಸಭೆ ನಡೆಸಿ, ಮೆಣಸಿನಕಾಯಿ ಸೇರಿದಂತೆ ಸುಮಾರು 41 ಭೌಗೋಳಿಕ ಹೆಗ್ಗುರುತುಗಳು ಅಂಚೆ ಲಕೋಟೆಯ ಮೇಲೆ ಮುದ್ರಿಸುವ ಕುರಿತು ಮಾಹಿತಿ ನೀಡಲಾಗಿತ್ತು.


ಬ್ಯಾಡಗಿ ಮೆಣಸಿನಕಾಯಿ ಚಿತ್ರ ಮುದ್ರಿಸಿರುವ ಅಂಚೆ ಲಕೋಟೆ

ಕೇಂದ್ರ ಸರ್ಕಾರದ ಜಿಐ ಮಾನ್ಯತೆಗೆ ಒಳಪಟ್ಟ ಉತ್ಪನ್ನಗಳನ್ನು ಚಿತ್ರ ಸಹಿತವಾಗಿ ದೇಶ ವಿದೇಶಗಳಿಗೆ ಪರಿಚಯಿಸುವ ಉದ್ದೇಶದಿಂದ ಅಂಚೆ ಇಲಾಖೆ ಅಂಚೆ ಲಕೋಟೆಯನ್ನು ಹೊರತರಲು ನಿರ್ಧರಿಸಿದೆ.

ಪ್ರಧಾನ ಮಂತ್ರಿ ಕಚೇರಿಯಲ್ಲಿ ರಾಜತಾಂತ್ರಿಕ ಪತ್ರ ವ್ಯವಹಾರಗಳಿಗೆ ಕೆಲ ಅಂಚೆ ಕವರ್‌ಗಳನ್ನು ಬಳಸಲಾಗುತ್ತದೆ ಎನ್ನಲಾಗಿದೆ. ಅಂಚೆ ಲಕೋಟೆಯ ಮುಂಬದಿ ಹಾಗೂ ಹಿಂಬದಿಯಲ್ಲಿ ಮೆಣಸಿನಕಾಯಿ ತಲಾ ಎರಡು ಚಿತ್ರಗಳು, ಅವುಗಳ ಕಿರು ಮಾಹಿತಿ ಹಾಗೂ ಮಹತ್ವ ಒಳಗೊಂಡ ಟಿಪ್ಪಣಿ ಇರುತ್ತದೆ ಎಂದು ಅಂಚೆ ಇಲಾಖೆಯ ಮೂಲಗಳು ತಿಳಿಸಿವೆ.

ಸಿಬಿಐ ತನಿಖೆ ವಿರುದ್ಧ 'ಸುಪ್ರೀಂ'ಗೆ ಅರ್ಜಿ

ನವದೆಹಲಿ: ಚುನಾವಣೋತ್ತರ ಹಿಂಸಾಚಾರಗಳ ಬಗ್ಗೆ ಸಿಬಿಐ ತನಿಖೆ ನಡೆಸುವಂತೆ ಕಲ್ಕತ್ತಾ ಹೈಕೋರ್ಟ್ ನೀಡಿರುವ ಆದೇಶದ ವಿರುದ್ಧ ಪಶ್ಚಿಮ ಬಂಗಾಳ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಕೇಂದ್ರ ಸರ್ಕಾರದ ನಿರ್ದೇಶನ ಮೇರೆಗೆ ಸಿಬಿಐ ಕ್ರಮಕೈಗೊಳ್ಳುವುದರಿಂದ ಪಾರದರ್ಶಕ ತನಿಖೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ದುರುದ್ದೇಶಪೂರ್ವಕವಾಗಿ ತೃಣಮೂಲ ಕಾಂಗ್ರೆಸ್ ಪದಾಧಿಕಾರಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಬಹುದು ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ಮೇ 2ರಂದು ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ರಾಜ್ಯದಲ್ಲಿ ನಡೆದ ಕೊಲೆ ಮತ್ತು ಅತ್ಯಾಚಾರದಂತಹ ಭೀಕರ ಕೃತ್ಯಗಳ ಬಗ್ಗೆ ತನಿಖೆ ನಡೆಸುವಂತೆ ಕಲ್ಕತ್ತಾ ಹೈಕೋರ್ಟ್ ಆಗಸ್ಟ್ 19ರಂದು ಸಿಬಿಐಗೆ ಆದೇಶ ನೀಡಿತ್ತು.

ನಿಧನ ವಾರ್ತೆ

ಬಿಬಿಸಿ ಮೊದಲ ಹಿಂದಿ ಸುದ್ದಿವಾಚಕಿ ರಜನಿ ಕೌಲ್

ನವದೆಹಲಿ: ಬಿಬಿಸಿಯಲ್ಲಿ ಮೊದಲ ಬಾರಿಗೆ ಹಿಂದಿಯಲ್ಲಿ ಸುದ್ದಿ ವಾಚಿಸಿದ ಮೊದಲ ಮಹಿಳೆ ಎನ್ನುವ ಖ್ಯಾತಿಗೆ ಪಾತ್ರರಾಗಿದ್ದ ಖ್ಯಾತ ಸುದ್ದಿವಾಚಕಿ ರಜನಿ ಕೌಲ್ (93) ಫರಿದಾಬಾದ್‌ನಲ್ಲಿ ಮಂಗಳವಾರ ನಿಧನ ಹೊಂದಿದರು.

'ರಜನಿ ಅವರ ಅಂತ್ಯಕ್ರಿಯೆ ಬುಧವಾರ ನಡೆಯಿತು' ಎಂದು ಕುಟುಂಬದ ಮೂಲಗಳು ತಿಳಿಸಿವೆ. ಈಗಿನ ಪಾಕಿಸ್ತಾನದ ಪೇಶಾವರದಲ್ಲಿ ಜನಿಸಿದ ರಜನಿ ಅವರು ಆರಂಭದಲ್ಲಿ ನವದೆಹಲಿಯ ಆಲ್ ಇಂಡಿಯಾ ರೇಡಿಯೊದಲ್ಲಿ (ಎಐಆರ್) ವೃತ್ತಿ ನಿರ್ವಹಿಸಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	405
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-50500
ಕುಮಟ	
ಚಿಪ್ಪು	33099-36019
ಕೋಕ	22809-34509
ಫ್ಯಾಕ್ಟರಿ	16869-21929
ಹಳೆಚಾಲಿ	42189-43209
ಹೊಸಚಾಲಿ	39869-41449
ಪುತ್ತೂರು	
ಕೋಕ	10500-26000
ಹೊಸತು	31500-46000
ಸಿದ್ದಾಪುರ	
ಬಿಳೆಗೋಟು	30199-35909
ಚಾಲಿ	38899-41799
ಕೋಕ	27699-35712
ಕೆಂಪುಗೋಟು	28099-32099
ರಾಶಿ	40199-47909
ತಟ್ಟಿಬೆಟ್ಟೆ	37366-39649
ಶಿರಸಿ	
ಬೆಟ್ಟೆ	33600-43809
ಬಿಳೆಗೋಟು	28111-37600
ಚಾಲಿ	39109-41899
ರಾಶಿ	44999-47429
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	51309-54110
ಗೊರಬಲು	17085-40019
ರಾಶಿ	47009-54399
ಸರಕು	55100-79999
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	251-423
ದ್ವಿತಳಿ (ಬಿ.ವಿ)	289-546

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13000	13100	195.90 ಸೆಂಟ್ಸ್
ಎಸಿ	---	4800	5275	
ಆರ್‌ಪಿ	---	6000	6200	ಲಂಡನ್
ಆರ್‌ಸಿ	---	3500	3600	2026 ಡಾಲರ್ಸ್

'ಅಂಗಾಂಗ ದಾನ ಕಾಯ್ದೆ ಕೋಮು ಸೌಹಾರ್ದಕ್ಕೆ ಹೊಸ ಮಾರ್ಗವಾಗಲಿ'

ಕೊಚ್ಚಿ (ಪಿಟಿಐ): 'ಮಾನವ ಅಂಗಾಂಗ ಮತ್ತು ಅಂಗಾಂಶ ಕಸಿ ಕಾಯ್ದೆ–1994 ಕೋಮು ಸೌಹಾರ್ದ ಹಾಗೂ ಜಾತ್ಯತೀತತೆಗೆ ಹೊಸ ಮಾರ್ಗ ತೋರಲಿ. ವಿವಿಧ ಧರ್ಮ ಹಾಗೂ ಅಪರಾಧ ಹಿನ್ನೆಲೆಯುಳ್ಳವರು ಕೂಡ ಜಾತಿ, ಮತ ಭೇದ ಎಣಿಸದೇ ಅಗತ್ಯವಿರುವವರಿಗೆ ತಮ್ಮ ಅಂಗಾಂಗಗಳನ್ನು ದಾನ ಮಾಡಲಿ' ಎಂದು ಕೇರಳ ಹೈಕೋರ್ಟ್ ಹೇಳಿದೆ.

'ಮಾನವನ ದೇಹದಲ್ಲಿ ಕ್ರಿಮಿನಲ್ ಮೂತ್ರಕೋಶ ಅಥವಾ ಕ್ರಿಮಿನಲ್ ಯಕೃತ್ತು ಇಲ್ಲವೇ ಕ್ರಿಮಿನಲ್ ಹೃದಯ ಎಂಬುದಿಲ್ಲ. ಅಪರಾಧ ಹಿನ್ನೆಲೆ ಇರದ ಹಾಗೂ ಅಪರಾಧಗಳನ್ನು ಎಸಗಿರುವ ವ್ಯಕ್ತಿಯ ಅಂಗಾಂಗದಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ' ಎಂದೂ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅರ್ಜಿಯೊಂದರ ವಿಚಾರಣೆ ವೇಳೆ ನ್ಯಾಯಮೂರ್ತಿ ಪಿ.ವಿ.ಕುನ್ಹಿಕೃಷ್ಣನ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು.

ಅಂಗಾಂಗ ದಾನಕ್ಕೆ ಅನುಮತಿ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯೊಂದರ ವಿಚಾರಣೆ ನಡೆಸಿದ್ದ ಎರ್ನಾಕುಲಂ ಜಿಲ್ಲಾ ಮಟ್ಟದ ದೃಢೀಕರಣ ಸಮಿತಿ, ದಾನಿಗೆ ಅಪರಾಧ ಹಿನ್ನೆಲೆ ಇತ್ತು ಎಂಬ ಕಾರಣ ನೀಡಿ ಅರ್ಜಿಯನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು.

ಸಮಿತಿಯ ನಿರ್ಧಾರಕ್ಕೆ ಸಹಮತ ವ್ಯಕ್ತಪಡಿಸದ ನ್ಯಾಯಮೂರ್ತಿ ಕುನ್ಹಿಕೃಷ್ಣನ್, 'ಅಂಗಾಂಗ ದಾನಕ್ಕೆ ಅನುಮತಿ ನೀಡಲು ದಾನಿಯ ಅಪರಾಧ ಹಿನ್ನೆಲೆಯೇ ಮಾನದಂಡವಾಗಬಾರದು' ಎಂದು ಹೇಳಿದರು.

'ದಾನಿ ಒಬ್ಬ ಹಿಂದೂ, ಕ್ರೈಸ್ತ, ಮುಸ್ಲಿಂ, ಸಿಖ್ ಅಥವಾ ಕೆಳಜಾತಿಗೆ ಸೇರಿದ ವ್ಯಕ್ತಿ ಎಂಬ ಕಾರಣ ನೀಡಿ ಸಮಿತಿ ಇಂಥ ಅರ್ಜಿಗಳನ್ನು ತಿರಸ್ಕರಿಸುವುದಿಲ್ಲ ಎಂಬ ವಿಶ್ವಾಸ ಇದೆ' ಎಂದೂ ಹೇಳಿದರು.

ಟೋಕಿಯೊ ಪ್ಯಾರಾಲಿಂಪಿಕ್ಸ್: ಚೆರ್ನೋಬಿಲ್ ದುರಂತದ ಸಂತ್ರಸ್ತೆ

ಒಕ್ಸಾನಾಗೆ ಎರಡನೇ ಚಿನ್ನ

ಟೋಕಿಯೊ (ಎಪಿ/ಪಿಟಿಐ): ಉಕ್ರೇನ್‌ನ ಚೆರ್ನೋಬಿಲ್‌ನಲ್ಲಿ 1986ರಲ್ಲಿ ನಡೆದ ಅಣು ಸ್ಥಾವರ ಸ್ಫೋಟದ ನಂತರ ಪರಿಣಾಮದಿಂದಾಗಿ ಹುಟ್ಟಿನಿಂದಲೇ ಕಾಲುಗಳ ಬಲ ಕಳೆದುಕೊಂಡಿದ್ದ ಅಮೆರಿಕದ ಒಕ್ಸಾನಾ ಮಾಸ್ಟರ್ಸ್, ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡನೇ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಮಂಗಳವಾರ ರಾತ್ರಿ ನಡೆದ ಮಹಿಳೆಯರ ಹ್ಯಾಂಡ್‌ಸೈಕಲ್ ರಸ್ತೆ ರೇಸ್‌ನ ಟೈಮ್ ಟ್ರಯಲ್‌ನಲ್ಲಿ ಅವರು ಅಗ್ರಸ್ಥಾನ ಗಳಿಸಿದರು. ಈ ಪದಕದೊಂದಿಗೆ ಅವರು ಬೇಸಿಗೆ ಮತ್ತು ಚಳಿಗಾಲದ ಒಲಿಂಪಿಕ್ಸ್‌ಗಳಲ್ಲಿ ಗೆದ್ದ ಪದಕಗಳ ಸಂಖ್ಯೆ 10ಕ್ಕೇರಿತು.

ಇದಕ್ಕೂ ಮೊದಲು ಅವರು ಕೂಟದ ಮಹಿಳೆಯರ ರಸ್ತೆ ರೇಸ್ ಎಚ್‌5 ವಿಭಾಗದಲ್ಲಿ ಚಿನ್ನ ಗಳಿಸಿದ್ದರು.

1989ರಲ್ಲಿ ಉಕ್ರೇನ್‌ನಲ್ಲಿ ಜನಿಸಿದ್ದ ಒಕ್ಸಾನಾ ಮೊದಲು ಸ್ಕೈಯಿಂಗ್, ರೋಯಿಂಗ್ ಮತ್ತು ಸೈಕ್ಲಿಂಗ್‌ಗಳಲ್ಲಿ ಸ್ಪರ್ಧಿಸಿದವರು.

ಒಕ್ಸಾನಾ ಬಾಲಕಿಯಾಗಿದ್ದಾಗಲೇ ಅಮೆರಿಕದ ಮಹಿಳೆಯೊಬ್ಬರು ದತ್ತು ಪಡೆದು ಅವರನ್ನು ಸಾಕಿದರು.

ಶೂಟಿಂಗ್‌ನಲ್ಲಿ ಲೇಖರ ವಿಫಲ: ಎರಡು ದಿನಗಳ ಹಿಂದೆ, ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಮಹಿಳೆ ಎನಿಸಿಕೊಂಡಿದ್ದ ಶೂಟರ್ ಅವನಿ ಲೇಖರಾ ಬುಧವಾರ ಅದೇ ಸಾಮರ್ಥ್ಯ ತೋರುವಲ್ಲಿ ವಿಫಲರಾದರು. ದೇಶದ ಇತರ ಸ್ಪರ್ಧಿಗಳೂ ನಿರಾಸೆ ಮೂಡಿಸಿದರು.

10 ಮೀಟರ್ಸ್ ಏರ್ ರೈಫಲ್ ಮಿಶ್ರ ಪ್ರೋನ್ ಎಸ್‌ಎಚ್‌1 ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು 27ನೇ ಸ್ಥಾನ ಗಳಿಸಿದರು. ಅರ್ಹತಾ ಸುತ್ತಿನಲ್ಲಿ ಒಟ್ಟು 629.7 ಪಾಯಿಂಟ್ಸ್ ಕಲೆಹಾಕಿದರು.

ಎಸ್‌ಎಚ್‌1 ವಿಭಾಗದಲ್ಲಿ ಕೈಗಳು ಊನ ಇರದೇ, ಕಾಲುಗಳಲ್ಲಿ ನ್ಯೂನತೆಯಿದ್ದವರು ಮಾತ್ರ ಸ್ಪರ್ಧಿಸಬಹುದಾಗಿದೆ.

ಪುರುಷರ ವಿಭಾಗದಲ್ಲಿ ಸ್ಪರ್ಧಿಸಿದ್ದ ಸಿದ್ಧಾರ್ಥ್ ಬಾಬು ಮತ್ತು ದೀಪಕ್ ಕುಮಾರ್ ಕ್ರಮವಾಗಿ 40 ಮತ್ತು 43ನೇ ಸ್ಥಾನ ಗಳಿಸಿದರು. ಈ ವಿಭಾಗದಲ್ಲಿ ಜರ್ಮನಿಯ ನತಾಶಾ ಹಿಲ್‌ಟ್ರಾಪ್ ಚಿನ್ನ, ದಕ್ಷಿಣ ಕೊರಿಯಾದ ಪಾರ್ಕ್ ಜಿನ್ಹೊ ಬೆಳ್ಳಿ ಮತ್ತು ಉಕ್ರೇನ್‌ನ ಇರಿಯಾನಾ ಶೆಟ್ನಿಕ್ ಕಂಚು ಗೆದ್ದುಕೊಂಡರು.

ನಿಯಮ ಉಲ್ಲಂಘನೆ; ಈಜುಪಟು ಸುಯಶ್ ಜಾಧವ್ ಅನರ್ಹ: ಪುರುಷರ 100 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್ ಎಸ್‌ಬಿ7 ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಸುಯಶ್ ಜಾಧವ್ ಅವರನ್ನು ನಿಯಮ ಉಲ್ಲಂಘಿಸಿದ ಕಾರಣಕ್ಕಾಗಿ ಅನರ್ಹಗೊಳಿಸಲಾಯಿತು.

ವಿಶ್ವ ಪ್ಯಾರಾ ಈಜು ನಿಯಮ ಸಂಖ್ಯೆ11.4.1ರ ಪ್ರಕಾರ 'ಸ್ಪರ್ಧೆ ಆರಂಭದ ನಂತರ ಮೊದಲ ಬ್ರೆಸ್ಟ್‌ಸ್ಟ್ರೋಕ್ ಕಿಕ್‌ಗೆ ಮುಂಚಿತವಾಗಿ ಮತ್ತು ಪ್ರತಿ ತಿರುವಿನ ನಂತರ, ಒಂದೇ ಬಟರ್‌ಫ್ಲೈ ಕಿಕ್‌ಗೆ ಅವಕಾಶ ಇರುತ್ತದೆ. ಅದರೆ ಸುಯಶ್ ಅವರು ತಿರುವಿನ ನಂತರ ಒಂದಕ್ಕಿಂತ ಹೆಚ್ಚು ಫ್ಲೈ ಕಿಕ್ ಮಾಡಿದರೆಂದು ಹೇಳಲಾಗಿದೆ.

27 ವರ್ಷದ ಸುಯಶ್, 2018ರ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಒಂದು ಚಿನ್ನ, ಎರಡು ಕಂಚು ಗೆದ್ದಿದ್ದರು.

ಕ್ಲಬ್ ಥ್ರೊ; ಅಮಿತ್‌ಗೆ ಐದನೇ ಸ್ಥಾನ: ಪುರುಷರ ಎಫ್‌51 ಕ್ಲಬ್ ಥ್ರೊ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಅಮಿತ್ ಕುಮಾರ್ ಮತ್ತು ಧರಮ್‌ವೀರ್ ಅವರು ಕ್ರಮವಾಗಿ ಐದು ಮತ್ತು ಎಂಟನೇ ಸ್ಥಾನ ಗಳಿಸಿದರು.

ಕುಮಾರ್ ಅವರು ಏಷ್ಯನ್ ಪ್ಯಾರಾ ಗೇಮ್ಸ್ ಹಾಲಿ ಚಾಂಪಿಯನ್ ಆಗಿದ್ದಾರೆ.






ಮಹಿಳೆಯರ 100 ಮೀಟರ್ಸ್ ಟಿ36 ವಿಭಾಗದಲ್ಲಿ ವಿಶ್ವದಾಖಲೆಯೊಂದಿಗೆ (13.61 ಸೆಕೆಂಡು) ಚಿನ್ನ ಗೆದ್ದ ಚೀನಾದ ಯಿಟಿಂಗ್ ಶಿ ಗುರಿಯತ್ತ ಮುನ್ನುಗ್ಗಿದರು – ರಾಯಿಟರ್ಸ್ ಚಿತ್ರ

ಬ್ಯಾಡ್ಮಿಂಟನ್: ಪ್ರಮೋದ್‌ಗೆ ಜಯ

ವಿಶ್ವದ ಅಗ್ರಕ್ರಮಾಂಕದ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ ಭಾರತದ ಪ್ರಮೋದ್ ಭಗತ್ ಪ್ಯಾರಾಲಿಂಪಿಕ್ಸ್ ಸಿಂಗಲ್ಸ್ ವಿಭಾಗದಲ್ಲಿ ಗೆಲುವಿನ ಆರಂಭ ಮಾಡಿದರು. ಆದರೆ ಮಿಶ್ರ ಡಬಲ್ಸ್ ವಿಭಾಗದಲ್ಲಿ ನಿರಾಸೆ ಅನುಭವಿಸಿದರು.



ಪ್ರಮೋದ್ ಭಗತ್

ಸಿಂಗಲ್ಸ್ 'ಎ' ಕ್ಲಾಸ್ ಎಸ್‌ಎಸಲ್‌3 ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು 21-10, 21-23, 21-9ರಿಂದ ಭಾರತದವರೇ ಆದ ಮನೋಜ್ ಸರ್ಕಾರ್ ಎದುರು ಗೆದ್ದರು.

ಮುಂದಿನ ಪಂದ್ಯದಲ್ಲಿ ಅವರು ಉಕ್ರೇನ್‌ನ ಅಲೆಕ್ಸಾಂಡರ್ ಚಿರ್ಕೋವ್ ಅವರನ್ನು ಎದುರಿಸುವರು. ಮಹಿಳಾ ಸಿಂಗಲ್ಸ್ ಕ್ಲಾಸ್ ಎಸ್‌ಯು5 ವಿಭಾಗದಲ್ಲಿ ಪಲಕ್ ಕೊಹ್ಲಿ ಅವರು 4-21 7-21ರಿಂದ ಜಪಾನ್‌ನ ಆಯಾಕೊ ಸುಜುಕಿ ಎದುರು ಎಡವಿದರು.

ಮಿಶ್ರ ತಂಡ ವಿಭಾಗದಲ್ಲಿ ಸ್ಪರ್ಧಿಸಿದ್ದ ಪ್ರಮೋದ್ ಭಗತ್ ಮತ್ತು ಪಲಕ್ ಕೊಹ್ಲಿ ಮೊದಲ ಸುತ್ತಿನ ಪಂದ್ಯದಲ್ಲಿ ಸೋಲು ಅನುಭವಿಸಿದರು.

ಎಸ್‌ಎಲ್‌3 –ಎಸ್‌ಯು5 ಕ್ಲಾಸ್ ವಿಭಾಗದ ಪಂದ್ಯದಲ್ಲಿ 9-21 21-15 19-21ರಿಂದ ಫ್ರಾನ್ಸ್‌ನ ಎರಡನೇ ಶ್ರೇಯಾಂಕದ ಲೂಕಾಸ್ ಮಜುರ್ ಮತ್ತು ಫಾಸ್ಟಿನ್ ನೋಯಲ್ ಎದುರು ಭಾರತದ ಜೋಡಿ ಮಣಿಯಿತು.



ಒಕ್ಸಾನಾ ಮಾಸ್ಟರ್ಸ್ ಸಂತಸ– ರಾಯಿಟರ್ಸ್ ಚಿತ್ರ

ಸರಣಿ ಮುನ್ನಡೆಗೆ ವಿರಾಟ್ ಪಡೆ ಚಿತ್ತ

ಭಾರತ–ಇಂಗ್ಲೆಂಡ್ ನಾಲ್ಕನೇ ಟೆಸ್ಟ್ ಇಂದಿನಿಂದ: ಅಶ್ವಿನ್‌ಗೆ ಅವಕಾಶ ಸಾಧ್ಯತೆ

ಲಂಡನ್ (ಪಿಟಿಐ): ಇಂಗ್ಲೆಂಡ್ ನೆಲದಲ್ಲಿ ಟೆಸ್ಟ್ ಕ್ರಿಕೆಟ್ ಸರಣಿ ಜಯದ ಸಾಧನೆ ಮಾಡಬೇಕಾದರೆ ಭಾರತ ತಂಡವು ಗುರುವಾರ ಆರಂಭವಾಗಲಿರುವ ನಾಲ್ಕನೇ ಟೆಸ್ಟ್‌ನಲ್ಲಿ ಗೆಲ್ಲುವ ಒತ್ತಡದಲ್ಲಿದೆ.

ಅದಕ್ಕಾಗಿ ತಂಡದಲ್ಲಿ ಕೆಲವು ಪ್ರಮುಖ ಬದಲಾವಣೆಗಳೊಂದಿಗೆ ವಿರಾಟ್ ಕೊಹ್ಲಿ ಬಳಗವು ಕಣಕ್ಕಿಳಿಯುವ ಸಾಧ್ಯತೆ ಇದೆ. ಅದರಲ್ಲೂ ಬ್ಯಾಟಿಂಗ್ ವೈಫಲ್ಯಕ್ಕೆ ಪರಿಹಾರ ಕಂಡುಕೊಳ್ಳುವತ್ತ ಚಿತ್ತ ನೆಟ್ಟಿದೆ. ಮಧ್ಯಮ ಕ್ರಮಾಂಕದಲ್ಲಿ ವಿಫಲರಾಗುತ್ತಿರುವ ಉಪನಾಯಕ ಅಜಿಂಕ್ಯ ರಹಾನೆ ಅವರನ್ನು ಕಣಕ್ಕಿಳಿಸುವುದು ಅನುಮಾನವಾಗಿದೆ.



ಆರ್‌.ಅಶ್ವಿನ್

ಲಾರ್ಡ್ಸ್‌ನಲ್ಲಿ ನಡೆದಿದ್ದ ಎರಡನೇ ಟೆಸ್ಟ್‌ನಲ್ಲಿ ಅಮೋಘ ಜಯ ಸಾಧಿಸಿದ್ದ ಭಾರತ ತಂಡವು ನಂತರ ಹೆಡಿಂಗ್ಲೆಯಲ್ಲಿ ನಡೆದ ಟೆಸ್ಟ್‌ನಲ್ಲಿ ಸೋಲಿನ ಆಘಾತಕ್ಕೊಳಗಾಗಿತ್ತು. ಅದರಿಂದಾಗಿ ಸರಣಿಯು 1–1ರಿಂದ ಸಮಸ್ಥಿತಿಯಲ್ಲಿದೆ. ಇನ್ನೆರಡು ಪಂದ್ಯಗಳು ಬಾಕಿ ಇವೆ.

ಹೆಡಿಂಗ್ಲೆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ವಿರಾಟ್ ಬಳಗವು 78 ರನ್‌ಗಳಿಸಿ ಆಲೌಟ್ ಆಗಿತ್ತು. ಎರಡನೇ ಇನಿಂಗ್ಸ್‌ನಲ್ಲಿ ರೋಹಿತ್ ಶರ್ಮಾ ಅರ್ಧಶತಕ ಗಳಿಸಿದ್ದರು. ಚೇತೇಶ್ವರ್ ಪೂಜಾರ ಶತಕದಂಚಿನಲ್ಲಿ ಎಡವಿದ್ದರೂ ಲಯಕ್ಕೆ ಮರಳಿದ್ದು ಸಮಾಧಾನದ ಸಂಗತಿ. ವಿರಾಟ್ ಕೂಡ ಅರ್ಧಶತಕ ಗಳಿಸಿದ್ದರು. ಆದರೆ ಇತ್ತೀಚಿನ ಪಂದ್ಯಗಳಲ್ಲಿ ಅವರ ಬ್ಯಾಟಿಂಗ್ ಫಾರ್ಮ್ ಸ್ಥಿರವಾಗಿಲ್ಲ. ಅಲ್ಲದೇ ಸುಮಾರು ಒಂದೂವರೆ ವರ್ಷದಿಂದ ಅವರು ಒಂದೂ ಶತಕ ದಾಖಲಿಸಿಲ್ಲ.

ಆದರೆ, ಅಜಿಂಕ್ಯ ಲಯಕ್ಕೆ ಮರಳುವಲ್ಲಿ ವಿಫಲರಾಗಿದ್ದರು. ಕಳೆದ ಐದು ಇನಿಂಗ್ಸ್‌ನಲ್ಲಿ ಅವರು ಕೇವಲ 95 ರನ್‌ಗಳನ್ನು ಗಳಿಸಿದ್ದಾರೆ. ಒಂದೊಮ್ಮೆ ಅವರನ್ನು ಕೈಬಿಟ್ಟರೆ, ಹನುಮವಿಹಾರಿ ಕಣಕ್ಕಿಳಿಯಬಹುದು. ಅವರು ಆಫ್‌ಸ್ಪಿನ್ ಬೌಲಿಂಗ್ ಮಾಡುವುದು ಕೂಡ ತಂಡಕ್ಕೆ ಅನುಕೂಲವಾಗಬಹುದು. ಸೂರ್ಯಕುಮಾರ್ ಯಾದವ್ ಅವರಿಗೆ ಪದಾರ್ಪಣೆ ಮಾಡುವ ಅವಕಾಶ ಸಿಕ್ಕರೂ ಅಚ್ಚರಿಯಿಲ್ಲ.

ಆರಂಭಿಕ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ಈ ಸರಣಿಯಲ್ಲಿ ಶತಕ ಹೊಡೆದಿರುವ ಏಕೈಕ ಭಾರತೀಯ ಆಟಗಾರ. ಅವರಿಗೆ ಇಲ್ಲಿ ಮತ್ತೊಂದು ಅವಕಾಶ ಸಿಗುವುದು ಬಹುತೇಕ ಖಚಿತ. ಏಳನೇ ಕ್ರಮಾಂಕದಲ್ಲಿ ಒಂದಿಷ್ಟು ರನ್‌ಗಳ ಕಾಣಿಕೆ ನೀಡುತ್ತಿರುವ ರವೀಂದ್ರ ಜಡೇಜ, ಸರಣಿಯಲ್ಲಿ ಕೇವಲ ಎರಡು ವಿಕೆಟ್ ಗಳಿಸಿದ್ದಾರೆ. ಓವಲ್ ಕ್ರೀಡಾಂಗಣದ ಪಿಚ್ ಸ್ಪಿನ್ನರ್‌ಗಳಿಗೆ ಬೆಂಬಲ ನೀಡುವುದೇ ಹೆಚ್ಚು. ಆದ್ದರಿಂದ ಜಡೇಜ ಅವರನ್ನು ಉಳಿಸಿಕೊಳ್ಳಲು ತಂಡದ ವ್ಯವಸ್ಥಾಪನ ಮಂಡಳಿ ಮನಸ್ಸು ಮಾಡಬಹುದು. ಅಲ್ಲದೇ ಆಫ್ ಸ್ಪಿನ್ನರ್ ಆರ್. ಅಶ್ವಿನ್ ಅವರಿಗೂ ಅವಕಾಶ ನೀಡಬಹುದು.

ಆದರೆ, ನಾಲ್ವರು ಮಧ್ಯಮವೇಗಿಗಳನ್ನು ಕಣಕ್ಕಿಳಿಸಿದರೆ, ಇಬ್ಬರು ಸ್ಪಿನ್ನರ್‌ಗಳಲ್ಲಿ ಒಬ್ಬರಿಗಷ್ಟೇ ಅವಕಾಶ ಸಿಗಬಹುದು. ಈ ಪಂದ್ಯದಲ್ಲಿ ಇಶಾಂತ್ ಶರ್ಮಾಗೆ ವಿಶ್ರಾಂತಿ ನೀಡಿ, ಶಾರ್ದೂಲ್ ಠಾಕೂರ್‌ಗೆ ಮಣೆ ಹಾಕಬಹುದು.

ಆತಿಥೇಯ ಇಂಗ್ಲೆಂಡ್ ತಂಡದ ಬೌಲಿಂಗ್ ಅಮೋಘವಾಗಿದೆ. ಜಿಮ್ಮಿ ಆ್ಯಂಡರ್ಸನ್, ಒಲಿ ರಾಬಿನ್ಸನ್, ಕ್ರಿಸ್ ವೋಕ್ಸ್ ಮತ್ತು ಮಾರ್ಕ್ ವುಡ್ ಈಗಾಗಲೇ ತಮ್ಮ ಸ್ವಿಂಗ್ ಅಸ್ತ್ರಗಳ ಪ್ರಭಾವವನ್ನು ಭಾರತ ತಂಡಕ್ಕೆ ತೋರಿಸಿದ್ದಾರೆ. ಆದರ, ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯ ತಂಡಕ್ಕೆ ಚಿಂತೆಯ ವಿಷಯವಾಗಿದೆ. ಜೋ ರೂಟ್ ಕಳೆದ ಮೂರು ಪಂದ್ಯಗಳಲ್ಲಿ ಶತಕ ಬಾರಿಸಿ ಆ ಕೊರತೆಯನ್ನು ತುಂಬಿಕೊಟ್ಟಿದ್ದರೆ.

ಪಂದ್ಯ ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)

ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್



ವಿರಾಟ್ ಕೊಹ್ಲಿ

ಮುಖ್ಯಾಂಶಗಳು


- ಅಜಿಂಕ್ಯ ರಹಾನೆಗೆ ಸ್ಥಾನ ಸಿಗುವುದು ಅನುಮಾನ
- ಅಶ್ವಿನ್, ಹನುಮವಿಹಾರಿ ಕಣಕ್ಕಿಳಿಯುವ ಸಾಧ್ಯತೆ
- ಕಳೆದ ಮೂರು ಟೆಸ್ಟ್‌ಗಳಲ್ಲಿಯೂ ಶತಕ ಗಳಿಸಿದ್ದ ಜೋ ರೂಟ್

ಮೋಯಿನ್ ಅಲಿ ಉಪನಾಯಕ

ಆಲ್‌ರೌಂಡರ್ ಮೋಯಿನ್ ಅಲಿ ಅವರನ್ನು ಇಂಗ್ಲೆಂಡ್ ತಂಡದ ಉಪನಾಯಕರನ್ನಾಗಿ ನೇಮಕ ಮಾಡಲಾಗಿದೆ. ಜೋಸ್ ಬಟ್ಲರ್ ಅವರು ನಾಲ್ಕನೇ ಟೆಸ್ಟ್‌ನಲ್ಲಿ ಆಡುತ್ತಿಲ್ಲ. ಅದ್ದರಿಂದ ಅವರ ಬದಲಿಗೆ ಅಲಿಗೆ ಹೊಣೆ ನೀಡಲಾಗಿದೆ.

ಭಾರತ ತಂಡಕ್ಕೆ ಕನ್ನಡಿಗ ಪ್ರಸಿದ್ಧ ಕೃಷ್ಣ

ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವ ಟೆಸ್ಟ್ ಸರಣಿಯಲ್ಲಿ ಆಡುತ್ತಿರುವ ಭಾರತದ ಬಳಗಕ್ಕೆ ಕನ್ನಡಿಗ, ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ಅವರನ್ನು ಸೇರ್ಪಡೆ ಮಾಡಲಾಗಿದೆ.



ಪ್ರಸಿದ್ಧ ಕೃಷ್ಣ

ಗುರುವಾರ ಆರಂಭವಾಗುವ ನಾಲ್ಕನೇ ಟೆಸ್ಟ್ ಅಥವಾ ಮ್ಯಾಂಚೆಸ್ಟರ್‌ನಲ್ಲಿ ನಡೆಯಲಿರುವ ಐದನೇ ಟೆಸ್ಟ್‌ನಲ್ಲಿ ಅವರು ಆಡುವ ಸಾಧ್ಯತೆ ಇದೆ ಎನ್ನಲಾಗಿದೆ. ಬೆಂಗಳೂರಿನ 25 ವರ್ಷದ ಪ್ರಸಿದ್ಧ ಈಚೆಗೆ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಭಾರತದಲ್ಲಿ ನಡೆದಿದ್ದ ಸರಣಿಯಲ್ಲಿ ಮೂರು ಪಂದ್ಯಗಳಿಂದ ಆರು ವಿಕೆಟ್ ಗಳಿಸಿದ್ದರು. ಒಂಬತ್ತು ಪ್ರಥಮ ದರ್ಜೆ ಪಂದ್ಯಗಳನ್ನು ಆಡಿರುವ ಅವರು 34 ವಿಕೆಟ್ ಪಡೆದಿದ್ದಾರೆ.

'ತಂಡದ ವ್ಯವಸ್ಥಾಪಕ ಮಂಡಳಿಯ ಮನವಿಯ ಮೇರೆಗೆ ಪ್ರಸಿದ್ಧಕೃಷ್ಣ ಅವರನ್ನು ಬಳಗಕ್ಕೆ ಸೇರ್ಪಡೆ ಮಾಡಲಾಗಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ. ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಮತ್ತು ಮೊಹಮ್ಮದ್ ಶಮಿ ಅವರ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ ಪ್ರಸಿದ್ಧ ಕೃಷ್ಣಗೆ ಸ್ಥಾನ ನೀಡಲಾಗಿದೆ ಎಂದು ತಿಳಿದುಬಂದಿದೆ. ಅವರು ಕಾಯ್ದಿಟ್ಟ ಆಟಗಾರರ ಪಟ್ಟಿಯಲ್ಲಿದ್ದಾರೆ.

ಐಸಿಸಿ ಟೆಸ್ಟ್ ರ‍್ಯಾಂಕಿಂಗ್: ಐದನೇ ಸ್ಥಾನಕ್ಕೆ ರೋಹಿತ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಅವರು ನಾಯಕ ವಿರಾಟ್ ಕೊಹ್ಲಿ ಅವರನ್ನು ಹಿಂದಿಕ್ಕಿ ಐಸಿಸಿ ಟೆಸ್ಟ್ ಬ್ಯಾಟ್ಸ್‌ಮನ್‌ಗಳ ರ‍್ಯಾಂಕಿಂಗ್‌ನಲ್ಲಿ ಐದನೇ ಸ್ಥಾನಕ್ಕೇರಿದ್ದಾರೆ.

ಇಂಗ್ಲೆಂಡ್ ಎದುರಿನ ಮೂರನೇ ಟೆಸ್ಟ್ ಪಂದ್ಯದ ಎರಡು ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 19 ಮತ್ತು 59 ರನ್ ಗಳಿಸಿದ ರೋಹಿತ್ ರ‍್ಯಾಂಕಿಂಗ್‌ನಲ್ಲಿ ಒಂದು ಸ್ಥಾನ ಬಡ್ತಿ ಪಡೆದಿದ್ದಾರೆ. ಇದು ಅವರ ಜೀವನಶ್ರೇಷ್ಠ ಕ್ರಮಾಂಕವಾಗಿದೆ. ಕೊಹ್ಲಿ ಆರನೇ ಸ್ಥಾನದಲ್ಲಿದ್ದಾರೆ. ಟೆಸ್ಟ್ ಪರಿಣತ ಚೇತೇಶ್ವರ್ ಪೂಜಾರ ಮೂರು ಸ್ಥಾನ ಏರಿಕೆ ದಾಖಲಿಸಿ 15ನೇ ಸ್ಥಾನಕ್ಕೆ ತಲುಪಿದ್ದಾರೆ. ಅವರಿಗಿಂತ ವಿಕೆಟ್ ಕೀಪರ್ ರಿಷಭ್ ಪಂತ್ (12ನೇ ಸ್ಥಾನ) ಮುಂದೆ ಇದ್ದಾರೆ.

ಜಸ್‌ಪ್ರೀತ್ ಬೂಮ್ರಾ ಅವರು ಬೌಲರ್‌ಗಳ ಕ್ರಮಾಂಕದಲ್ಲಿ ಒಂದು ಸ್ಥಾನ ಏರಿಕೆಯೊಂದಿಗೆ ಒಂಬತ್ತನೇ ಸ್ಥಾನದಲ್ಲಿದ್ದಾರೆ. ಆರ್.ಅಶ್ವಿನ್ ಎರಡನೇ ಸ್ಥಾನದಲ್ಲಿ ಸ್ಥಿರವಾಗಿದ್ದಾರೆ. ಆಸ್ಟ್ರೇಲಿಯಾ ವೇಗಿ ಪ್ಯಾಟ್ ಕಮಿನ್ಸ್ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.



ರೋಹಿತ್

ರೂಟ್ ಸಾಧನೆ: ಅದ್ಭುತ ಲಯದಲ್ಲಿರುವ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಆರು ವರ್ಷಗಳ ಬಳಿಕ ಬ್ಯಾಟ್ಸ್‌ಮನ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಭಾರತದ ಎದುರಿನ ಮೂರು ಟೆಸ್ಟ್ ಪಂದ್ಯಗಳಲ್ಲಿ 507 ರನ್ ಗಳಿಸಿದ ಹಿನ್ನೆಲೆಯಲ್ಲಿ ಅವರ ರ‍್ಯಾಂಕಿಂಗ್‌ನಲ್ಲಿ ಏರಿಕೆ ಕಂಡುಬಂದಿದೆ.





ಪಿಕೆಎಲ್ ಹರಾಜು ಪ್ರಕ್ರಿಯೆ: 190 ಆಟಗಾರರಿಗೆ ₹ 48 ಕೋಟಿ ಖರ್ಚು

ನವದೆಹಲಿ (ಪಿಟಿಐ): ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಎಂಟನೇ ಆವೃತ್ತಿಗೆ ಹರಾಜು ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಒಟ್ಟು 190 ಆಟಗಾರರು 12 ಫ್ರಾಂಚೈಸ್‌ಗಳ ಪಾಲಾಗಿದ್ದಾರೆ. ಎಲ್ಲ ಆಟಗಾರರಿಗೆ ಸೇರಿ ಫ್ರಾಂಚೈಸ್‌ಗಳು ಒಟ್ಟು ₹ 48.22 ಕೋಟಿ ಖರ್ಚು ಮಾಡಿವೆ ಎಂದು ಆಯೋಜಕರು ಬುಧವಾರ ತಿಳಿಸಿದ್ದಾರೆ.

ರೈಡರ್ ಪ್ರದೀಪ್ ನರ್ವಾಲ್ ಅವರನ್ನು ಅತಿಹೆಚ್ಚು ಬೆಲೆಗೆ(1.65 ಕೋಟಿ) ಯುಪಿ ಯೋಧಾ ತನ್ನದಾಗಿಸಿಕೊಂಡಿತ್ತು. ಬೆಂಗಳೂರು ಬುಲ್ಸ್ ತಂಡವು ಚಂದ್ರನ್ ರಂಜೀತ್ ಅವರನ್ನು ₹ 84 ಲಕ್ಷ ಮೊತ್ತಕ್ಕೆ ಪಡೆದುಕೊಂಡಿತು. ಅರ್ಜುನ್ ದೇಸ್ವಾಲ್ ₹ 96 ಲಕ್ಷಕ್ಕೆ ಜೈಪುರ ಪಿಂಕ್ ಪ್ಯಾಂಥರ್ಸ್ ಪಾಲಾದರು. ಪುಣೇರಿ ಪಲ್ಟನ್ ತಂಡವು ನಿತಿನ್ ತೋಮರ್ (₹ 61 ಲಕ್ಷ) ಅವರನ್ನು ತನ್ನಲ್ಲೇ ಉಳಿಸಿಕೊಂಡಿತು.

ಅಮೆರಿಕ ಓಪನ್ ಟೆನಿಸ್ ಟೂರ್ನಿ: ಬಾರ್ಟಿ ಮುನ್ನಡೆ

ಜೊಕೊವಿಚ್ ಜಯದ ಆರಂಭ

ನ್ಯೂಯಾರ್ಕ್ (ಎಎಫ್‌ಪಿ): ದಾಖಲೆಯ 21ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯದತ್ತ ಚಿತ್ತ ನೆಟ್ಟಿರುವ ವಿಶ್ವದ ಅಗ್ರ ರ‍್ಯಾಂಕಿನ ಆಟಗಾರ ನೊವಾಕ್ ಜೊಕೊವಿಚ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ಅರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ ಸರ್ಬಿಯಾದ ಆಟಗಾರ 6-1, 6-7 (5/7), 6-2, 6-1ರಿಂದ ಡೆನ್ಮಾರ್ಕ್‌ನ ಹೋಲ್ಗರ್ ರ‍್ಯೂನ್ ಅವರನ್ನು ಮಣಿಸಿದರು. ಎರಡು ತಾಸು 15 ನಿಮಿಷಗಳ ಕಾಲ ಈ ಪಂದ್ಯ ನಡೆಯಿತು.

'ನನಗೆ ಈ ಪಂದ್ಯದಲ್ಲಿ ಶ್ರೇಷ್ಠ ನಿರ್ವಹಣೆ ನೀಡಲು ಸಾಧ್ಯವಾಗಲಿಲ್ಲ. ಅದೇ ಹೊತ್ತಿಗೆ ಎದುರಾಳಿ ದ್ವಿತೀಯ ಸೆಟ್‌ನಲ್ಲಿ ಅತ್ಯುತ್ತಮವಾಗಿ ಆಡಿದರು' ಎಂದು ಪಂದ್ಯದ ಬಳಿಕ ಜೊಕೊವಿಚ್ ಪ್ರತಿಕ್ರಿಯಿಸಿದ್ದಾರೆ.

ಜೊಕೊವಿಚ್ ಎರಡನೇ ಸುತ್ತಿನಲ್ಲಿ 121ನೇ ರ‍್ಯಾಂಕ್‌ನ ನೆದರ್ಲೆಂಡ್ಸ್‌ನ ಟ್ಯಾಲನ್ ಗ್ರಿಕ್ಸ್‌ಪೂರ್ ಸವಾಲನ್ನು ಎದುರಿಸಲಿದ್ದಾರೆ.ಇನ್ನೊಂದು ಪಂದ್ಯದಲ್ಲಿ ಟ್ಯಾಲನ್ ಗ್ರಿಕ್ಸ್‌ಪೂರ್ 2-6, 7-6 (7/3), 4-6, 6-4, 7-5ರಿಂದ ಜರ್ಮನಿಯ ಜಾನ್ ಲೆನಾರ್ಡ್ ಸ್ಟ್ರಫ್‌ಗೆ ಆಘಾತ ನೀಡಿದರು.



ಚೆಂಡು ಹಿಂದಿರುಗಿಸಿದ ನೊವಾಕ್ ಜೊಕೊವಿಚ್– ಎಎಫ್‌ಪಿ ಚಿತ್ರ

ಎರಡನೇ ಸುತ್ತಿಗೆ ಬಾರ್ಟಿ: ಮಹಿಳಾ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರಕ್ರಮಾಂಕದ ಆಟಗಾರ್ತಿ ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಕೂಡ ಟೂರ್ನಿಯಲ್ಲಿ ಜಯದ ಆರಂಭ ಮಾಡಿದರು. ಮೊದಲ ಸುತ್ತಿನ ಪಂದ್ಯದಲ್ಲಿ ಅವರು 6-1, 7-6 (9/7) ರಿಂದ ರಷ್ಯಾದ ವೆರಾ ಜ್ವೊನಾರೆವಾ ಎದುರು ಗೆದ್ದರು.ಮುಂದಿನ ಪಂದ್ಯದಲ್ಲಿ ಅವರಿಗೆ ಡೆನ್ಮಾರ್ಕ್‌ನ ಕ್ಲಾರಾ ತಾಸನ್ ಸವಾಲು ಎದುರಾಗಿದೆ.

ಮಂಗಳವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿ ಪಂದ್ಯಗಳಲ್ಲಿ ಜಪಾನ್‌ನ ಕಿ ನಿಶಿಕೋರಿ 6-1, 6-1, 5-7, 6-3ರಿಂದ ಇಟಲಿಯ ಸ್ಯಾಲ್ವಟೊರ್ ಕ್ಯಾರೊಸೊ ಎದುರು, ಇಟಲಿಯ ಮ್ಯಾಟಿಯೊ ಬೆರೆಟಿನಿ 7-6 (7/5), 7-6 (9/7), 6-3ರಿಂದ ಫ್ರಾನ್ಸ್‌ನ ಜೆರೆಮಿ ಚಾರ್ಡಿ ವಿರುದ್ಧ ಜಯದ ನಗೆ ಬೀರಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಗಳಲ್ಲಿ ಪೋಲೆಂಡ್ ಇಗಾ ಸ್ವೆಟೆಕ್ 6-3, 6-4ರಿಂದ ಅಮೆರಿಕದ ಜೆಮಿ ಲೋಯಿಬ್ ಎದುರು ಜಯಿಸಿದರು.

ರಾಜ್ಯ ಅಥ್ಲೆಟಿಕ್ ಕೂಟ ಮುಂದಕ್ಕೆ

ಬೆಂಗಳೂರು: ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆ (ಕೆಎಎ) ಹಮ್ಮಿಕೊಂಡಿರುವ ಸೀನಿಯರ್ ಮತ್ತು 23 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಸೆಪ್ಟೆಂಬರ್ ಆರು ಮತ್ತು ಏಳರಂದು ಉಡುಪಿಯಲ್ಲಿ ನಡೆಯಲಿದೆ.

ಎರಡೂ ವಿಭಾಗಗಳ ಪುರುಷ ಮತ್ತು ಮಹಿಳೆಯರಿಗಾಗಿ ಸ್ಪರ್ಧೆಗಳು ನಡೆಯಲಿದ್ದು ಅಜ್ಜರಕಾಡು ಮಹಾತ್ಮ ಗಾಂಧಿ ಕ್ರೀಡಾಂಗಣವು ಕೂಟಕ್ಕೆ ಆತಿಥ್ಯ ವಹಿಸಲಿದೆ.ಈ ಮೊದಲು ಚಾಂಪಿಯನ್‌ಷಿಪ್‌ಅನ್ನು ಇದೇ ನಾಲ್ಕು ಮತ್ತು ಐದರಂದು ನಡೆಸಲು ಉದ್ದೇಶಿಸಲಾಗಿತ್ತು. ಈ ದಿನಗಳಂದು ಉಡುಪಿಯಲ್ಲಿ ವಾರಾಂತ್ಯದ ಕರ್ಫ್ಯೂ ಇರುವುದರಿಂದ ಚಾಂಪಿಯನ್‌ಷಿಪ್‌ಅನ್ನು ಮುಂದೂಡಲಾಯಿತು ಎಂದು ಕೆಎಎ ಗೌರವ ಕಾರ್ಯದರ್ಶಿ ಎ.ರಾಜವೇಲು ತಿಳಿಸಿದ್ದಾರೆ.

3ರಿಂದ ಉಚಿತ ಚೆಸ್ ತರಬೇತಿ

ಬೆಂಗಳೂರು: ಶಿವಮೊಗ್ಗದ 'ಯಾದವ ಸ್ಕೂಲ್ ಆಫ್ ಚೆಸ್' ಸಂಸ್ಥೆಯು ಇದೇ 3ರಿಂದ ಮಕ್ಕಳಿಗಾಗಿ ರಾಜ್ಯ ಮಟ್ಟದ ಉಚಿತ ಆನ್‌ಲೈನ್ ಚೆಸ್ ತರಬೇತಿಯನ್ನು ಆಯೋಜಿಸಿದೆ.

ಝೂಮ್ ಆ್ಯಪ್ ಮೂಲಕದ ತರಬೇತಿ ನಡೆಯಲಿದೆ. ಹೆಸರು ನೋಂದಾಯಿಸಲು ಪ್ರಾಣೇಶ್ ಯಾದವ್ (ಮೊ. ಸಂ. 9242401702, 8618108601) ಅವರನ್ನು ಸಂಪರ್ಕಿಸಬೇಕು.

ಮಯಂಕ್ ಕಾರ್ತಿಕ್ ಹ್ಯಾಟ್ರಿಕ್

ಬೆಂಗಳೂರು: ಮಯಂಕ್ ಕಾರ್ತಿಕ್ ಬುಧವಾರ ರಾಜ್ಯ ರ‍್ಯಾಂಕಿಂಗ್ ಜೂನಿಯರ್ ಬಿಲಿಯರ್ಡ್ಸ್ ಪ್ರಶಸ್ತಿ ಜಯಿಸಿದರು. ಇದು ಅವರ ಮೂರನೇ ಪ್ರಶಸ್ತಿ. ಮಂಗಳವಾರ ಅವರು ಸ್ನೂಕರ್ ಪ್ರಶಸ್ತಿ ಗೆದ್ದರು. ಅದಕ್ಕೂ ಮುನ್ನ ಅವರು ಸಬ್ ಜೂನಿಯರ್ ಬಿಲಿಯರ್ಡ್ಸ್‌ನಲ್ಲಿ ಜಯಿಸಿದ್ದರು.

ಪಿ. ಕೀರ್ತನಾ ಜೂನಿಯರ್ ಬಾಲಕಿಯರ ಸ್ನೂಕರ್ ವಿಭಾಗದಲ್ಲಿ ಪ್ರಶಸ್ತಿ ಡಬಲ್ ಸಾಧನೆ ಮಾಡಿದರು. ಕೀರ್ತನಾ 54–05, 48–1ರಿಂದ ಹರ್ಷಿತಾ ಭಾವಿ ಎದುರು ಮತ್ತು 41–46, 54–02, 75–11ರಿಂದ ನತಾಶಾ ವಿರುದ್ಧ ಜಯಿಸಿದರು.



ಮಯಂಕ್ ಕಾರ್ತಿಕ್

ಅಟ್ಲೆಟಿಕೊಗೆ ಮರಳಿದ ಅಂಟೊನಿಯೊ

ಬೆಂಗಳೂರು: ಎರಡು ವರ್ಷಗಳ ಹಿಂದೆ ಬಾರ್ಸಿಲೋನಾ ತಂಡ ಸೇರಿದ್ದ ಅಂಟೊನಿಯೊ ಗ್ರಿಜ್‌ಮನ್ ಈಗ ಮತ್ತೆ ಅಟ್ಲೆಟಿಕೊ ಮ್ಯಾಡ್ರಿಡ್ ಫುಟ್‌ಬಾಲ್ ಕ್ಲಬ್‌ಗೆ ಮರಳಿದ್ದಾರೆ. ಯೂರೋಪಿಯನ್ ಆಟಗಾರರ ವರ್ಗಾವಣೆ ಪ್ರಕ್ರಿಯೆಯಲ್ಲಿ ಫ್ರಾನ್ಸ್‌ನ ಎಡ್ವರ್ಡೊ ಕ್ಯಾಮವಿಂಗಾ, ರೆನ್ನೆಸ್ ತಂಡದಿಂದ ರಿಯಲ್ ಮ್ಯಾಡ್ರಿಡ್‌ಗೆ ಸೇರ್ಪಡೆಗೊಂಡರೆ, ಪ್ಯಾರಿಸ್ ಸೇಂಟ್ ಜರ್ಮನ್‌ನ ಕಿಲಿಯನ್ ಬಾಪೆ ತಂಡದಲ್ಲಿಯೇ ಉಳಿದುಕೊಂಡಿದ್ದಾರೆ.

ಲಯೊನೆಲ್ ಮೆಸ್ಸಿ ಬಾರ್ಸಿಲೋನಾ ತೊರೆದು ಪಿಎಸ್‌ಜಿಗೆ (ಫ್ರೀ ಟ್ರಾನ್ಸ್‌ಫರ್) ಸೇರ್ಪಡೆಗೊಂಡಿದ್ದರು. ಕ್ರಿಸ್ಟಿಯಾನೊ ರೊನಾಲ್ಡೊ ಕೂಡ ಯುವೆಂಟಸ್‌ನಿಂದ ಮ್ಯಾಂಚೆಸ್ಟರ್ ಯುನೈಟೆಡ್ ಸೇರಿದ್ದರು.

ಉದಕಮಂಡಲ ರೇಸ್

ಬೇಬಿ ಬಜೂಕ 1000 ಗಿನ್ನೀಸ್ ಗೆಲ್ಲುವ ನಿರೀಕ್ಷೆ

ಚೆನ್ನೈನಲ್ಲಿ ಏರ್ಪಡಿಸಿರುವ ಉದಕಮಂಡಲ ರೇಸ್‌ಗಳ ಗುರುವಾರದ ಪ್ರಧಾನ ಆಕರ್ಷಣೆ ಚೆಟ್ಟಿನಾಡ್ ಸಿಮೆಂಟ್ ನೀಲ್‌ಗಿರೀಸ್ 1000 ಗಿನ್ನೀಸ್‌ನಲ್ಲಿ ಬೇಬಿ ಬಜೂಕ ನಿರಾಯಾಸ ಗೆಲುವು ಪಡೆಯುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಏಷ್ಯನ್ ಎಂಪ್ರೆಸ್ 5, ಸ್ಟ್ರೀಟ್ ಕ್ಯಾಟ್ 4, ಕಿಂಗ್ಸ್ ಪ್ರೈಡ್ 6
2ನೇ ರೇಸ್: ಫುಲ್ ಆಫ್ ಸರ್ಪ್ರೈಸ್ 1, ಮೇಫ್ಲವರ್ 6, ಸರ್ ಬ್ಯಾಫರ್ಟ್ 2
3ನೇ ರೇಸ್: ಸಬ್‌ಜುಕೇಟ್ 8, ಫ್ಯಾಶನ್ ಆಫ್ ಸ್ಟಾರ್ಸ್ 6, ರೋಜರ್ ಓ'ಮೋರ್ 4
4ನೇ ರೇಸ್: ಓಟಸ್ 8, ಮ್ಯಾಜಿಕಲ್ ವಿಶ್ 6, ರಾಯಲ್ ರೂಲ್ಸ್ 4,
5ನೇ ರೇಸ್: ಕವೆಲೊ ವೆಲೋಸ್ 4, ಮಲ್ಟಿಫೆಸೆಟೆಡ್ 3, ವಿಕ್ಟೋರಿಯಸ್ ಸೆರ್ಮನ್ 5
6ನೇ ರೇಸ್: ಬೇಬಿ ಬಝೂಕ 3, ಬ್ರನ್‌ಹಿಲ್ಡ್ 4, ಕೀ ಸ್ಟೋನ್ 8
7ನೇ ರೇಸ್: ಆಫ್ ಶೋರ್ ಬ್ರೀಝ್ 3, ಈಗಲ್ ಬ್ಲಫ್ 2, ರಾಯಲ್ ಪರ್ಲ್ 6

ಉತ್ತಮ ಬೆಟ್: ಓಟಸ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	4,5,6,7	2,3,4	5,6,7

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕೋವಿಡ್ ಆತಂಕದ ನಡುವೆ ಸಾರ್ವಜನಿಕ ಗಣೇಶೋತ್ಸವಕ್ಕೆ ಸರ್ಕಾರ ಅನುಮತಿ ನೀಡಬೇಕೇ?

ಜನಾಭಿಪ್ರಾಯ:

ಹೌದು	ಇಲ್ಲ
65%	35%

